ಶ್ರೀರಾಮಕಥಾವೈಭವಮ್

ಶ್ರೀರಾಮೋತ್ಸವದ ಸುವರ್ಣ ಮಹೋತ್ಸವ 1988

SRI NARASIMHARAJA COLONY ASSOCIATION REGD

BANGALORE-19.

ಶ್ರೀರಾಮಮಂದಿರ

ಪ್ರಕಾಶಕರು

ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್ (ರಿ.)

ಶ್ರೀರಾಮಮಂದಿರ, ನರಸಿಂಹರಾಜ ಕಾಲೋನಿ

ಬೆಂಗಳೂರು-19

ಶ್ರೀ ರಾ ಮ ಕ ಥಾ ವೈ ಭ ವ ಮ್

ಪ್ರಕಾಶಕರು

ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್ (ರಿ.)

ಶ್ರೀರಾಮಮಂದಿರ, ನರಸಿಂಹರಾಜ ಕಾಲೋನಿ

ಬೆಂಗಳೂರು-19

ಮೊದಲನೆಯ ಮುದ್ರಣ : ೧೯೮೭
೨,೦೦೦ ಪ್ರತಿಗಳು

ಇದರ ಹಕ್ಕುಗಳೆಲ್ಲವೂ
ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್ನಿನವು
All rights reserved

ಬೆಲೆ
ಸಾದಾ ಪ್ರತಿ 22 ರೂ.
ಉತ್ತಮ ಪ್ರತಿ 25 ರೂ.

ಮುದ್ರಣಕಾರರು :
ಪ್ರಭಾ ಮುದ್ರಣಾಲಯ
ಬಸವನಗುಡಿ, ಬೆಂಗಳೂರು–೪

ಬಿನ್ನಹ

ಬೆಂಗಳೂರು ನಗರದ ದಕ್ಷಿಣಭಾಗದಲ್ಲಿರುವ ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್ ಸಂಸ್ಥೆಯು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸತತವಾಗಿ ನಡೆಸುತ್ತ ಸಾರ್ವಜನಿಕ ಸೇವೆಯಲ್ಲಿ ನಿರತವಾಗಿದೆ.

1939 ರಿಂದ ಪ್ರತಿ ಚೈತ್ರಮಾಸದಲ್ಲಿ ಶ್ರೀರಾಮೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಡುತ್ತಿದೆ. ಕ್ರೋಧಿನಾಮ ಸಂ|| ನಿಜಚೈತ್ರ ಶುದ್ಧ ನವಮಿ 20-4-1964 ರಿಂದ 4-5-1964 ರ ವರೆಗೆ **ಶ್ರೀ ರಾಮೋತ್ಸವದ ರಜತ ಮಹೋತ್ಸವವನ್ನು** ಆಚರಿಸಲಾಯಿತು. ಈ ಉತ್ಸವದ ಸವಿನೆನಪಿಗಾಗಿ ಶ್ರೀಮದ್ವಾಲ್ಮೀಕಿ ರಾಮಾಯಣದ ಪ್ರಕಟನೆಯನ್ನು ಕೈಗೊಳ್ಳಲಾಯಿತು.

ಡಾ|| ಡಿ. ವಿ. ಗುಂಡಪ್ಪನವರು ಈ ಮಹತ್ಕಾರ್ಯಕ್ಕೆ ತಮ್ಮ ಮಾರ್ಗದರ್ಶನವಿತ್ತು, ಎಲ್ಲಾ ಕಾಂಡಗಳಿಗೂ ವಿದ್ವತ್ಪೂರ್ಣವಾದ ಮುನ್ನುಡಿಗಳನ್ನು ಕೃಪೆಮಾಡಿ ಬರೆದುಕೊಟ್ಟಿರುತ್ತಾರೆ.

ಪ್ರಸಿದ್ಧ ವಿದ್ವಾಂಸರಾದ ಶ್ರೀ ಎನ್. ರಂಗನಾಥಶರ್ಮಾ ಅವರು ಕನ್ನಡದಲ್ಲಿ ಭಾವಾನುವಾದವನ್ನು ಬರೆದುಕೊಟ್ಟಿರುತ್ತಾರೆ. ಪಠನ ಪಾರಾಯಣಗಳಿಗೆ ಅನುಕೂಲವಾಗುವಂತೆ ಮೂಲ ಸಂಸ್ಕೃತ ಶ್ಲೋಕಗಳನ್ನು ಕನ್ನಡ ಲಿಪಿಯಲ್ಲಿ ಕೊಡಲಾಗಿದೆ.

ಸುಂದರಕಾಂಡವನ್ನು ಪ್ರಾರಂಭಿಸಿ ಅನಂತರ ಮಹಾಜನರ ಪ್ರೋತ್ಸಾಹದಿಂದ ಬಾಲಕಾಂಡದಿಂದ ಉತ್ತರಕಾಂಡವೂ ಸೇರಿ ಎಲ್ಲಾ ಕಾಂಡಗಳ ಮುದ್ರಣ ನಡೆದಿರುತ್ತೆ. ಈ ಸಂಪುಟಗಳ ಬೇಡಿಕೆಯು ಹೆಚ್ಚುತ್ತಿದ್ದು, ಈಗ ಮೂರನೇ ಆವೃತ್ತಿಯ ಎಲ್ಲಾ ಕಾಂಡಗಳೂ ಮುದ್ರಣದಲ್ಲಿವೆ.

ನಮ್ಮ ಸಂಸ್ಥೆಯಿಂದ ಶ್ರೀಮದ್ಭಾಗವತದ ದಶಮಸ್ಕಂಧ ಮತ್ತು ಇತರ ಕೆಲವು ಗ್ರಂಥಗಳನ್ನು ಸಹ ಪ್ರಕಟಿಸಲಾಗಿದೆ.

ಮುಂದೆ ಬರಲಿರುವ ವಿಭವನಾಮ ಸಂವತ್ಸರ ಚೈತ್ರ ಶುದ್ಧ ನವಮಿ ತಾ|| 26-3-1988 ರಿಂದ 9-4-1988 ರ ವರೆಗೆ **ಶ್ರೀ ರಾಮೋತ್ಸವದ**

ಸುವರ್ಣ ಮಹೋತ್ಸವವನ್ನು ವೈಭವದಿಂದ ಆಚರಿಸಬೇಕೆಂದು ನಿರ್ಧರಿಸ ಲಾಗಿದೆ.

ಈ ಉತ್ಸವದ ಸವಿನೆನಪಿಗಾಗಿ ಒಂದು ಹೊಸ ಮಾದರಿಯ ಪುಸ್ತಕ 'ಶ್ರೀರಾಮಕಥಾವೈಭವಮ್' ಎಂಬ ಈ ಗ್ರಂಥ ಪ್ರಕಟನೆಯನ್ನು ಮಾಡಲಾಗಿದೆ. ಈ ಗ್ರಂಥದಲ್ಲಿ ಶ್ರೀಮದ್ವಾಲ್ಮೀಕಿ ರಾಮಾಯಣದ ಪ್ರಸಿದ್ಧವಾದ ಕೆಲವು ಪ್ರಕರಣ ಗಳನ್ನು ಅಳವಡಿಸಲಾಗಿದೆ. ಹಾಗೂ ಅನೇಕ ಬಗೆಯ ರಾಮಕಥೆಗಳನ್ನೊಳಗೊಂಡ ಸ್ತೋತ್ರಗಳನ್ನು ಸಹ ಸೇರಿಸಲಾಗಿದೆ. ಈ ಕಾರ್ಯದಲ್ಲಿ ವಿದ್ವಾನ್ ಶ್ರೀ ಎನ್. ರಂಗನಾಥಶರ್ಮಾ ಅವರು ಎಲ್ಲ ಬಗೆಯ ಸಲಹೆ ಸಹಕಾರಗಳನ್ನಿತ್ತು ಉಪಕರಿಸಿ ದ್ದಾರೆ. ಹಾಗೂ ಅವರು ವಿದ್ವತ್ಪೂರ್ಣವಾದ ಅನೇಕ ವಿಷಯಗಳನ್ನೊಳಗೊಂಡ ಪ್ರಸ್ತಾವನೆಯನ್ನು ಬರೆದುಕೊಟ್ಟಿರುತ್ತಾರೆ. ಅವರಿಗೆ ನಮ್ಮ ಕೃತಜ್ಞತಾಪೂರ್ವಕ ವಾದ ವಂದನೆಗಳು.

ಡಾ|| ಡಿ. ವಿ. ಜಿ. ಅವರು ಚಿತ್ರಿಸಿರುವ 'ಶ್ರೀಮದಾಂಜನೇಯ ಸ್ವಾಮಿ' ಗ್ರಂಥದಿಂದ **ಮಾರುತಿ ಮಹಿಮೆ** ಭಾಗವನ್ನು ನಮ್ಮ ಗ್ರಂಥದಲ್ಲಿ ಪ್ರಕಟಿಸಲು ಅನುಮತಿ ಕೊಟ್ಟಿದ್ದಕ್ಕೆ ಶ್ರೀ ಡಿ. ಆರ್. ವೆಂಕಟರಮಣನ್ ಅವರಿಗೆ ನಮ್ಮ ವಂದನೆಗಳು.

ಪ್ರಭಾ ಪ್ರೆಸ್ಸಿನ ಮಾಲೀಕರಾದ ಶ್ರೀ ಡಿ. ಎಸ್. ಕೃಷ್ಣಾಚಾರ್ಯರು ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟಿರುತ್ತಾರೆ. ಇವರಿಗೆ ನಮ್ಮ ವಂದನೆಗಳು.

ಈ ಗ್ರಂಥ ಪ್ರಕಟನೆಯಲ್ಲಿ ಉತ್ತಮವಾದ ಕಾಗದವನ್ನು ಉಪಯೋಗಿಸ ಲಾಗಿದೆ. ಈ ಗ್ರಂಥಕ್ಕೆ ಮಹಾಜನಗಳು ಪ್ರೋತ್ಸಾಹ ಕೊಟ್ಟು, ಶ್ರೀರಾಮ ಕಾರ್ಯಕ್ಕೆ ನೆರವಾಗಿ ಭಗವತ್ಕೃಪೆಗೆ ಪಾತ್ರರಾಗಬೇಕೆಂದು ನಿವೇದಿಸಿಕೊಳ್ಳುತ್ತೇವೆ.

ಎಸ್. ಎನ್. ಮೂರ್ತಿ
ಕಾರ್ಯದರ್ಶಿ

ಡಿ. ಸಿ. ಅನಂತರಾಮಯ್ಯ
ಅಧ್ಯಕ್ಷ

ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್ (ರಿ.)
ಶ್ರೀರಾಮ ಮಂದಿರ

5–10–1987

ಪ್ರಸ್ತಾವನೆ

ವಾಲ್ಮೀಕಿಮುನಿ ಪ್ರಣೀತವಾದ ಶ್ರೀಮದ್ರಾಮಾಯಣವು ನಮ್ಮ ಭಾರತೀಯರ ಹೃದಯವನ್ನು ಗೆದ್ದು ಹೃದಯಾಂತರಾಳದಲ್ಲಿ ಸ್ಥಿರವಾಗಿ ನಿಂತುಬಿಟ್ಟಿದೆ. ಇದು ನಮಗೆ ಪೂಜ್ಯವೂ ಪವಿತ್ರವೂ ಆಗಿರುವುದಲ್ಲದೆ ಮಂತ್ರಸದೃಶವಾಗಿ ಪಾರಾಯಣ ಗ್ರಂಥವಾಗಿರುತ್ತದೆ. ಎಷ್ಟೋಜನ ಭಕ್ತರು ನಿತ್ಯಪಾರಾಯಣದಲ್ಲಿಯೂ ಶ್ರೀಮದ್ರಾ-ಮಾಯಣವನ್ನು ಅಳವಡಿಸಿಕೊಂಡಿರುತ್ತಾರೆ. ಶ್ರೀಮದ್ರಾಮಾಯಣವನ್ನನುಸರಿಸಿ ಕಾವ್ಯ, ಚಂಪೂ, ನಾಟಕಗಳ ವಿವಿಧ ಸಾಹಿತ್ಯ ಪ್ರಕಾರಗಳು ಸಂಸ್ಕೃತಭಾಷೆಯಲ್ಲಿ ಲೆಕ್ಕವಿಲ್ಲದಷ್ಟು ಆಗಿಹೋಗಿವೆ. ದೇಶಭಾಷೆಗಳಲ್ಲಿಯೂ ಇದರ ಪ್ರಸರಣ ವಿಪುಲವಾಗಿದೆ. ಇದನ್ನು ಅನುಲಕ್ಷಿಸಿ 'ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ' ಎಂದು ಕುಮಾರವ್ಯಾಸನು ಹೇಳಿದ್ದು ಸಹಜವಾಗಿಯೇ ಇದೆ. ಇಂತಹ ಕೀರ್ತಿವೈಭವವನ್ನು ಗಳಿಸಿಕೊಂಡಿರುವ ರಾಮಾಯಣವು ಸ್ವತಃ ಇತಿಹಾಸವಾಗಿದ್ದು ಮಹಾಕಾವ್ಯವೂ ಆಗಿದೆ. 'ಪರಂ ಕವೀನಾಂ ಆಧಾರಂ' ಆಗಿ ಆದಿಕಾವ್ಯವೆಂದು ವಿಖ್ಯಾತವಾದ ಈ ಗ್ರಂಥವು ಭರತಖಂಡದಲ್ಲಿ ಮಾತ್ರವಲ್ಲ, ಪಾಶ್ಚಾತ್ಯದೇಶಗಳಲ್ಲಿಯೂ ಸಹ ವಾಲ್ಮೀಕಿಮುನಿಗಳ ವಿಜಯ ಧ್ವಜವಾಗಿ ಶೋಭಿಸುತ್ತಿದೆ.

ಶ್ರೀಮದ್ರಾಮಾಯಣದ ಎಲ್ಲ ಕಾಂಡಗಳೂ ಎಲ್ಲ ಸರ್ಗಗಳೂ ಎಲ್ಲ ಶ್ಲೋಕಗಳೂ ಶ್ರದ್ಧಾಳುಗಳಿಗೆ ಮುಖ್ಯವಾದವುಗಳೇ ಆದರೂ ಅದರಲ್ಲಿ ಕೆಲವು ಪ್ರಸಂಗಗಳು ವಿಶೇಷವಾಗಿ ಜನರ ಆದರಕ್ಕೆ ಪಾತ್ರವಾಗಿವೆ. ಅಂತಹವುಗಳನ್ನು ಆರಿಸಿ ಒಂದೆಡೆಯಲ್ಲಿ ಸಂಪಾದಿಸಿಕೊಡುವ ಒಂದು ನೂತನ ಪ್ರಯತ್ನ ಈ ಗ್ರಂಥದಲ್ಲಿದೆ. ರಾಮಾಯಣದಲ್ಲಿ ಶ್ರೀರಾಮನೇ ಕೇಂದ್ರಬಿಂದು. ಆತನೇ ಕಥಾನಾಯಕ. ಅಂತರಿಕ್ಷದಲ್ಲಿ ಸೂರ್ಯನಂತೆ ದೇದೀಪ್ಯಮಾನನಾಗಿರುವ ಶ್ರೀರಾಮನ ಸುತ್ತಲೂ ಲಕ್ಷ್ಮಣಭರತಾದಿಗಳ ಪರ್ಯಟನ. ಅವರ ಸ್ವತಂತ್ರವಾದ ತೇಜೋಮಹಿಮೆಯೇನಿದ್ದರೂ ಸುವರ್ಣರತ್ನಾದಿಗಳ ತೇಜಸ್ಸಿನಂತೆ ಸೂರ್ಯನ ಬೆಳಕಿನಲ್ಲಿ ಮಾತ್ರ. ಸೀತಾದೇವಿ ಸೂರ್ಯನ ಪ್ರಭೆಯೇ ಆಗಿದ್ದಾಳೆ. 'ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾ ಯಥಾ' (ಸುಂದರ. ೨೧-೧೬) ಎಂದು ದೇವಿಯೇ ಹೇಳಿಕೊಂಡಿದ್ದಾಳೆ. ಶ್ರೀರಾಮನೂ ಸಹ 'ಅನನ್ಯಾಹಿ ಮಯಾ ಸೀತಾ ಭಾಸ್ಕರೇಣ

ಪ್ರಭಾ ಯಥಾ' (ಯುದ್ಧ. ೧೨೧-೧೯) ಎಂದು ಅದೇ ಮಾತನ್ನು ಹೇಳಿದ್ದಾನೆ. ಹನುಮಂತನು ರಾಮಾಯಣ ಮಹಾಮಾಲಾರತ್ನವಾಗಿದ್ದಾನೆ. ರಾಮಾಯಣ ವೆಲ್ಲವೂ ಶ್ರೀರಾಮವೈಭವವೇ.

ಶ್ರೀರಾಮ

ರಾಮ ಎಂಬ ಶಬ್ದವು 'ರಮು-ಕ್ರೀಡಾಯಾಂ' ಎಂಬ ಧಾತುವಿನಿಂದ ಹುಟ್ಟಿದೆ. 'ರಮಂತೇ ಯೋಗಿನಃ ಅಸ್ಮಿನ್ನಿತಿ ರಾಮಃ—ಯೋಗಿಗಳು ಈತನಲ್ಲಿ ರಮಿಸುತ್ತಾರೆ-ಧ್ಯಾನಸ್ಥರಾಗಿ ಆನಂದಿಸುತ್ತಾರೆ. ಆದ್ದರಿಂದ ರಾಮ' ಎಂದು ವ್ಯುತ್ಪತ್ತಿಯನ್ನು ಹೇಳಿದ್ದಾರೆ. 'ರಮಯತಿ ಲೋಕಾನಿತಿ ರಾಮಃ—ಜನರನ್ನು ಆನಂದಪಡಿಸತಕ್ಕವನಾದ್ದರಿಂದ ರಾಮ' ಎಂದೂ ವ್ಯುತ್ಪತ್ತಿಯುಂಟು. 'ರಾಮೋ ರಮಯತಾಂ ವರಃ' 'ರಾಮಸ್ಯ ಲೋಕರಾಮಸ್ಯ' ಇತ್ಯಾದಿ ಋಷಿವಚನಗಳೂ ಈ ಅರ್ಥಕ್ಕೆ ಪೋಷಕವಾಗಿವೆ. ತನ್ನ ಸದ್ಗುಣಗಳಿಂದಲೂ ಪ್ರಜಾಹಿತ ಕಾರ್ಯ ಗಳಿಂದಲೂ ಆತನು ಲೋಕಾಭಿರಾಮನಾಗಿದ್ದನೆಂಬುದು ಸರ್ವವಿದಿತ. ಈ ಸಂದರ್ಭದಲ್ಲಿ ಮಹಾಕವಿ ಕಾಳಿದಾಸನ ಶ್ಲೋಕವೊಂದು ಸ್ಮರಣೀಯವಾಗಿದೆ—

ರಾಮ ಇತ್ಯಭಿರಾಮೇಣ ವಪುಷಾ ತಸ್ಯ ಚೋದಿತಃ ।
ನಾಮಧೇಯಂ ಗುರುಶ್ಚಕ್ರೇ ಜಗತ್ಪ್ರಥಮಮಂಗಲಮ್ ॥

(ರಘುವಂಶ, ೧೦-೬೭)

"ಅತಿಮನೋಹರವಾದ ಮಗುವಿನ ದೇಹಾಕೃತಿಯಿಂದ ಪ್ರೇರಿತನಾದ ಗುರುವು ಆ ಮಗುವಿಗೆ 'ರಾಮ' ಎಂಬ ಜಗತ್ ಪ್ರಥಮ ಮಂಗಲವಾದ ನಾಮಧೇಯವನ್ನಿಟ್ಟನು".

ಇಲ್ಲಿ ಗುರುವೆಂದರೆ ತಂದೆಯಾದ ದಶರಥನೆಂದು ಮಲ್ಲಿನಾಥ ವ್ಯಾಖ್ಯಾನದಲ್ಲಿ ಬರೆದಿದೆ. ಗುರುವೆಂದರೆ ದಶರಥನ ಗುರುಗಳಾದ ವಸಿಷ್ಠರೆಂದೂ ಅರ್ಥ ಹೇಳ ಬಹುದು. ಈ ನಾಮಕರಣ ಸಂದರ್ಭದಲ್ಲಿ ರಾಮಾಯಣದ ವ್ಯಾಖ್ಯಾತೃಗಳಾದ ಗೋವಿಂದರಾಜರು ಕ್ಷತ್ರಿಯನಿಗೆ ಸ್ವತಃ ನಾಮಕರಣಮಾಡುವ ಅಧಿಕಾರವಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಗುರುವೆಂದರೆ ವಸಿಷ್ಠರೆಂದು ಅರ್ಥಮಾಡುವುದೇ ಯುಕ್ತ ವೆಂದು ತೋರುತ್ತದೆ. ರಾಮನಾಮವೇ 'ಜಗತ್ ಪ್ರಥಮ ಮಂಗಲಂ' ಎಂದಿ ದ್ದಾನೆ ಕಾಳಿದಾಸ. ಇಷ್ಟು ಪ್ರಶಸ್ತವಾದ ಅರ್ಥಗರ್ಭಿತ ವಿಶೇಷಣವನ್ನು ಕೊಡುವುದು

ಆ ಮಹಾಕವಿಗೆ ಮಾತ್ರ ಸಾಧ್ಯ. ಭೋಜರಾಜನು ತಾನು ಮೆಚ್ಚಿದ ಕವಿತೆಗೆ ಅಕ್ಷರ ಲಕ್ಷ ವರಹಗಳನ್ನು ಬಹುಮಾನವಾಗಿ ಕೊಡುತ್ತಿದ್ದನಂತೆ. ಅದು ನಿಜವಾದರೆ 'ಜಗತ್ ಪ್ರಥಮ ಮಂಗಲಂ' ಎಂಬ ಶಬ್ದ ರಚನೆಗೆ ಆ ಬಹುಮಾನ ಸಲ್ಲಲೇ ಬೇಕು.

ಶ್ರೀ ಎಂಬ ಶಬ್ದಕ್ಕೆ ಲಕ್ಷ್ಮೀ, ಸಂಪತ್ತು, ಶೋಭೆ, ಕೀರ್ತಿ, ವೈಭವ—ಎಂಬ ಅರ್ಥಗಳುಂಟು. ಶ್ರೀಕೃಷ್ಣ, ಶ್ರೀಶಂಕರ-ಮುಂತಾದೆಡೆಗಳಲ್ಲಿ ಶ್ರೀ ಸಹಿತನಾದ ಕೃಷ್ಣ, ಶ್ರೀಯುಕ್ತನಾದ ಶಂಕರ ಎಂದು ಸಹಜವಾದ ಅರ್ಥ. ಆದರೆ ಶ್ರೀರಾಮ ಎಂಬ ಶಬ್ದದಲ್ಲಿ ಇನ್ನೊಂದು ವಿಶೇಷ ಉಂಟು. 'ರಾಘವತ್ವೇಽಭವತ್ ಸೀತಾ ರುಕ್ಮಿಣೀ ಕೃಷ್ಣಜನ್ಮನಿ' ಇತ್ಯಾದಿ ಪ್ರಮಾಣಾನುಸಾರವಾಗಿ ಸೀತಾದೇವಿಯು ಸಾಕ್ಷಾಲ್ಲಕ್ಷ್ಮಿಯೇ ಆಗಿದ್ದಾಳೆ. ಶ್ರೀರಾಮನು ವಿಷ್ಣುವಿನ ಅವತಾರವೆಂಬುದು ಸರ್ವವಿದಿತ. ಆದ್ದರಿಂದ 'ಶ್ರಿಯಃ ರಾಮಃ ಶ್ರೀರಾಮಃ — ಲಕ್ಷ್ಮಿಯ ಆನಂದಕ್ಕೆ ನೆಲೆಯಾದವನು' 'ಶ್ರಿಯಂ ರಮಯತೀತಿ ಶ್ರೀರಾಮಃ — ಲಕ್ಷ್ಮಿಯನ್ನು ಆನಂದ ಪಡಿಸುವವನು' ಎಂಬ ವಿಶಿಷ್ಟಾರ್ಥಗಳೂ ಸಹ ಈ ಶಬ್ದಕ್ಕೆ ಉಂಟು.

ರಾಮಾಯಣವೆಂಬ ಶಬ್ದದ ವ್ಯುತ್ಪತ್ತಿ ಹೇಗೆ? 'ಇಣ್ ಗತೌ' ಅಥವಾ 'ಅಯ ಗತೌ' ಎಂಬ ಧಾತುವಿನ ಮೇಲೆ ಲ್ಯುಟ್ ಪ್ರತ್ಯಯವನ್ನು ಸೇರಿಸಿದರೆ ಅಯನವೆಂದಾಗುತ್ತದೆ. ಸಂಚಾರ, ಚರಿತ—ಎಂದು ಅದರ ಅರ್ಥ. ಉತ್ತರಾಯಣ, ದಕ್ಷಿಣಾಯನ-ಎಂಬ ಶಬ್ದಗಳಲ್ಲಿ ಇದನ್ನು ಗಮನಿಸಬಹುದು. ರಾಮನ ಅಯನ ಯಾವ ಗ್ರಂಥದಲ್ಲಿದೆಯೋ ಅದು ರಾಮಾಯಣ. ಅಥವಾ ರಾಮನ ಅಯನವನ್ನು ಅಧಿಕರಿಸಿ ಬರೆದ ಗ್ರಂಥ ರಾಮಾಯಣ. 'ಪೂರ್ವಪದಾತ್ ಸಂಜ್ಞಾಯಮಗಃ' ಎಂಬ ಪಾಣಿನಿ ಸೂತ್ರದಿಂದ (೮-೪-೩) ನಕಾರಕ್ಕೆ ಣಕಾರಾದೇಶ ಬಂದಿದೆ. ಇದಕ್ಕೆ ಪೂರ್ವಪದದಲ್ಲಿರುವ ರೇಫವೇ (ರಕಾರವೇ) ನಿಮಿತ್ತ. ರಾಮಚರಿತೆಯೆಂದು ರಾಮಾಯಣ ಶಬ್ದಾರ್ಥವಾಗುತ್ತದೆ. ಕೆಲವರು 'ರಾಮಃ ಅಯ್ಯತೇ ಅನೇನೇತಿ' ರಾಮಾಯಣಂ—ಈ ಗ್ರಂಥದಿಂದ ಶ್ರೀರಾಮನು ಪ್ರತಿಪಾದಿತನಾಗಿದ್ದಾನೆ. ಈ ಗ್ರಂಥದಿಂದ ಶ್ರೀರಾಮನ ಪ್ರಾಪ್ತಿಯಾಗುತ್ತದೆ—ಆದ್ದರಿಂದ ರಾಮಾಯಣವೆಂದೂ ವ್ಯುತ್ಪತ್ತಿಯನ್ನು ಹೇಳಿದ್ದಾರೆ. 'ಯಃ ಪಠೇದ್ರಾಮಚರಿತಂ ಸರ್ವ ಪಾಪೈಃ ಪ್ರಮುಚ್ಯತೇ' 'ರಘುವರಚರಿತಂ ಮುನಿಪ್ರಣೀತಂ' ಎಂದು ವಾಲ್ಮೀಕಿ ಮುನಿಗಳೇ

ಹೇಳಿರುವುದನ್ನು ನೋಡಿದರೆ, ರಾಮಚರಿತವೆಂದು ಅರ್ಥಮಾಡುವುದೇ ಸ್ವರಸವಾಗಿದೆ.

ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ ।
ಪೌಲಸ್ತ್ಯವಧಮಿತ್ಯೇವ ಚಕಾರ ಚರಿತವ್ರತಃ ॥
ದಶಶಿರಸಶ್ಚ ವಧಂ ನಿಶಾಮಯಧ್ವಮ್ ॥

ಸಮಸ್ತ ರಾಮಾಯಣ ಕಾವ್ಯವೂ ಸೀತಾದೇವಿಯ ಮಹತ್ತರವಾದ ಚರಿತೆಯೇ. ಇದರಲ್ಲಿ ಶ್ರೀರಾಮಚರಿತೆ ಅಪ್ರಧಾನವೆಂದೂ ಸೀತಾಚರಿತೆಯೇ ಪ್ರಧಾನವೆಂದೂ ವ್ಯಾಖ್ಯಾನಕಾರರಾದ ಗೋವಿಂದರಾಜರು ಬರೆದಿದ್ದಾರೆ. ಇದಕ್ಕೆ ಸುಂದರವಾದ ಒಂದು ಉಪಪತ್ತಿಯನ್ನೂ ಅವರು ತೋರಿಸುತ್ತಾರೆ. ಶ್ರೀರಾಮನು ಸಭಾಮಧ್ಯದಲ್ಲಿ ಲವಕುಶರು ಹಾಡಿದ ರಾಮಾಯಣವನ್ನು ಆಸಕ್ತಿಯಿಂದ ಆಲಿಸುತ್ತಿದ್ದನಷ್ಟೆ. ರಾಮಾಯಣವು ಮುಖ್ಯವಾಗಿ ತನ್ನ ಕಥೆಯೇ ಆಗಿದ್ದರೆ, ಅದನ್ನು ಸಭೆಯಲ್ಲಿ ಕೇಳುತ್ತ ಕುಳಿತುಕೊಳ್ಳುವುದು ಆ ಧೀರೋದಾತ್ತ ಪುರುಷನಿಗೆ ಯೋಗ್ಯವಾಗಲಾರದು. ಸೀತಾಚರಿತ ಪ್ರಧಾನವಾದ್ದರಿಂದಲೇ ಅದನ್ನು ಶ್ರೀರಾಮನು ಆಲಿಸತೊಡಗಿದನು. ವಿರಹಿಯಾದವನಿಗೆ ಕಾಂತಾವೃತ್ತಾಂತಶ್ರವಣವು ಸಹಜವಾದದ್ದು–ಎಂದು. ಇವರಿಬ್ಬರ ಚರಿತೆಯ ಫಲ ರಾವಣವಧೆ. ಹೀಗೆ ರಾಮಾಯಣ, ಸೀತಾಚರಿತ, ಪೌಲಸ್ತ್ಯ ವಧೆ—ಎಂಬ ಮೂರು ಹೆಸರುಗಳು ಈ ಮಹಾಕಾವ್ಯಕ್ಕೆ ಯೋಗ್ಯವೆನಿಸಿದರೂ ವಾಲ್ಮೀಕಿಮುನಿಗಳು ಆರಿಸಿಕೊಂಡದ್ದು ರಾಮಾಯಣ.

ಗ್ರಂಥ ಪ್ರಮಾಣ

ಚತುರ್ವಿಂಶತ್‌ಸಹಸ್ರಾಣಿ ಶ್ಲೋಕಾನಾಮುಕ್ತವಾನ್ ಋಷಿಃ ।
ತಥಾ ಸರ್ಗಶತಾನ್ ಪಂಚ ಷಟ್‌ಕಾಂಡಾನಿ ತಥೋತ್ತರಮ್ ॥

—ಬಾಲ. ೪–೨

ಇದರ ಪ್ರಕಾರ ಉತ್ತರಕಾಂಡಸಹಿತವಾಗಿ ಒಟ್ಟು ಏಳು ಕಾಂಡಗಳು, ಐದು ನೂರು ಸರ್ಗಗಳು, ಇಪ್ಪತ್ತುನಾಲ್ಕುಸಾವಿರ ಶ್ಲೋಕಗಳು ಎಂದಾಗುತ್ತದೆ. ಈಗ ಉಪಲಬ್ಧವಾಗಿರುವ ರಾಮಾಯಣದ ಪ್ರತಿಗಳಲ್ಲಿ ಸರ್ಗಸಂಖ್ಯೆಗಳೂ ಶ್ಲೋಕಸಂಖ್ಯೆಗಳೂ ಅಧಿಕವಾಗಿಯೇ ಇವೆ. ವ್ಯಾಖ್ಯಾನಕಾರರಾದ ಗೋವಿಂದರಾಜರು ಈಗ ಒಟ್ಟು 647 ಸರ್ಗಗಳೂ 24,253 ಶ್ಲೋಕಗಳೂ ದೊರಕುತ್ತವೆಯೆಂದು

ಹೇಳಿದ್ದಾರೆ. ರಾಮಾಯಣದ ರಚನೆಯಾಗಿ ಬಹಳ ದೀರ್ಘಕಾಲ ಸಂದುಹೋಗಿರುವುದರಿಂದ ಆವಾಪೋದ್ವಾಪಗಳು ಸಂಭವಿಸಿ ಈ ಸಂಖ್ಯೆ ವ್ಯತ್ಯಾಸಗೊಂಡಿರಬಹುದು. ಕತಕಾದಿ ವ್ಯಾಖ್ಯಾನಕಾರರು ರಾಮಾಯಣದಲ್ಲಿ ಹಲವಾರು ಪ್ರಕ್ಷೇಪಗಳಾಗಿವೆಯೆಂಬುದನ್ನು ಅಲ್ಲಲ್ಲಿ ಎತ್ತಿ ಹೇಳಿದ್ದಾರೆ. ಹಾಗೆಯೇ ವಾಲ್ಮೀಕಿ ರಚಿತ ಶ್ಲೋಕಗಳಲ್ಲಿ ಕೆಲವು ಬಿಟ್ಟುಹೋಗಿರುವುದೂ ಅಸಂಭವವಲ್ಲ. ಹೊಸದಾಗಿ ಸೇರಿಸಿರುವ ಪ್ರಸಂಗವೂ ಇರಬಹುದು.

ಉತ್ತರಕಾಂಡ

ಉತ್ತರಕಾಂಡವು ವಾಲ್ಮೀಕಿ ಪ್ರಣೀತವಲ್ಲವೆಂದು ಕೆಲವು ಆಧುನಿಕ ವಿದ್ವಾಂಸರ ಹೇಳಿಕೆ ಇದೆ. ಪ್ರಾಚೀನರು ಯಾರೂ ಈ ಮಾತನ್ನು ಹೇಳಿಲ್ಲ. ಅದು ಅನ್ಯರಿಂದ ಪ್ರಕ್ಷಿಪ್ತವಾಗಿದೆಯೆಂದು ವಾದಿಸುವ ಆಧುನಿಕರ ವಾದವು ಸಮಂಜಸವಾದ್ದಲ್ಲ. ಇದನ್ನು ವಿವರವಾಗಿ ಪರಿಶೀಲಿಸಲು ಇದು ಸ್ಥಳವಲ್ಲ. ಉತ್ತರಕಾಂಡವು ವಾಲ್ಮೀಕಿ ಪ್ರಣೀತವೆಂದು ನಮ್ಮ ನಿರ್ಣಯ.

ಇದೇ ರೀತಿಯಲ್ಲಿ ಬಾಲಕಾಂಡವೂ ಪ್ರಕ್ಷಿಪ್ತ, ಹನುಮಂತನು ಲಂಕಾದಹನವನ್ನು ಮಾಡಲಿಲ್ಲ, ಭರತನು ಲಕ್ಷ್ಮಣನ ತಮ್ಮ—ಎಂಬ ವಾದಗಳೂ ಇವೆ. ಇವೆಲ್ಲ ವಿಚಾರಸಹವಲ್ಲದ ಕಲ್ಪನಾವಿಜೃಂಭಣೆಗಳು.

ಉತ್ತರಕಾಂಡವು ಪಾರಾಯಣ ಯೋಗ್ಯವೆ ?

ಕೆಲವರು ಈ ಪ್ರಶ್ನೆಯನ್ನು ಆಗಾಗ ಕೇಳುತ್ತಲಿದ್ದಾರೆ. ಉತ್ತರಕಾಂಡವು ಮಂಗಳಾಂತವಾಗಿಲ್ಲವೆಂಬ ಅಭಿಪ್ರಾಯವೇ ಇದಕ್ಕೆ ಕಾರಣವಾಗಿರಬೇಕು. ನಮ್ಮ ಪ್ರಾಂತದಲ್ಲಿ ಪಟ್ಟಾಭಿಷೇಕಾಂತದವರೆಗೆ ಮಾತ್ರ ಪಾರಾಯಣಮಾಡುವ ಪದ್ಧತಿಯುಂಟು. ಉತ್ತರಕಾಂಡವನ್ನು ಮನೆಗಳಲ್ಲಿ ಓದಬಾರದು, ಕೇಳಬಾರದು—ಎಂಬಲ್ಲಿಯವರೆಗೆ ಸಹ ಜನರು ಆಡಿಕೊಳ್ಳುವುದುಂಟು. ಇದು ನಿರಾಧಾರವಾದ ಊಹೆಯೇ ಹೊರತು ಯಥಾರ್ಥವಲ್ಲ. ಋಷಿಪ್ರಣೀತವಾದ ಗ್ರಂಥದಲ್ಲಿ ಒಂದು ಭಾಗ ಮಾತ್ರ ಪಾರಾಯಣಾರ್ಹವಲ್ಲ, ಪಠನಯೋಗ್ಯವಲ್ಲ, ಶ್ರವಣಯೋಗ್ಯವಲ್ಲ—ಎಂಬುದು ಅಸಂಗತ. ಉತ್ತರಕಾಂಡದ ಸಮಾಪ್ತಿಯಲ್ಲಿ ವಿಸ್ತಾರವಾದ ಫಲಶ್ರುತಿ ಇದೆ. ಅದರಲ್ಲಿರುವ ಕೆಲವು ಮಾತುಗಳು ಇವು—

ಏತದಾಖ್ಯಾನಮಾಯುಷ್ಯಂ ಸಭವಿಷ್ಯಂ ಸಹೋತ್ತರಮ್ ।
ಕೃತವಾನ್ ಪ್ರಚೇತಸಃ ಪುತ್ರಃ ತದ್‌ಬ್ರಹ್ಮಾಪ್ಯನ್ವಮನ್ಯತ ॥
ಅಶ್ವಮೇಧಸಹಸ್ರಸ್ಯ ವಾಜಪೇಯಾಯುತಸ್ಯ ಚ ।
ಲಭತೇ ಶ್ರವಣಾದೇವ ಸರ್ಗಸ್ಯೈಕಸ್ಯ ಮಾನವಃ ॥
ಯಸ್ತ್ವಿದಂ ರಘುನಾಥಸ್ಯ **ಚರಿತಂ ಸಕಲಂ** ಪಠೇತ್ ।
ಸೋಽಸುಕ್ಷಯೇ ವಿಷ್ಣುಲೋಕಂ ಗಚ್ಛತ್ಯೇವ ನ ಸಂಶಯಃ ॥

ಈ ಫಲಶ್ರುತಿಗಳು ಉತ್ತರಕಾಂಡಕ್ಕೆ ಸಂಬಂಧಿಸುವುದಿಲ್ಲ–ಎಂದು ಹೇಳಲಾದೀತೆ? ' ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮನುತ್ತಮಮ್ ' ಎಂದು ಈ ಫಲಶ್ರುತಿಯಲ್ಲಿಯೇ ಇದೆ. ಗಾಯತ್ರೀಮಂತ್ರದ ' ಪ್ರಚೋದಯಾತ್' ಎಂಬ ಕಡೆಯ ಬೀಜಾಕ್ಷರಗಳು ಉತ್ತರಕಾಂಡದಲ್ಲಿವೆಯೆಂದು ವ್ಯಾಖ್ಯಾನಕಾರರು ತೋರಿಸಿಕೊಟ್ಟಿದ್ದಾರೆ. ಉತ್ತರಕಾಂಡವಿಲ್ಲದೆ ಗಾಯತ್ರೀ ಮಂತ್ರಾಕ್ಷರನ್ಯಾಸವು ಪೂರ್ಣವಾಗುವುದೇ ಇಲ್ಲ. ಹೀಗಿರುವಾಗ ಉತ್ತರಕಾಂಡದ ಪಾರಾಯಣವನ್ನು ಮಾಡದಿದ್ದರೆ ರಾಮಾಯಣದ ' ಕೃತ್ಸ್ನಪಾರಾಯಣ 'ವಾಗುವುದಿಲ್ಲವೆಂದೇ ನಮಗೆ ತೋರುತ್ತದೆ. ಯಾವನೇ ಒಬ್ಬ ವ್ಯಾಖ್ಯಾನಕಾರನೂ ಉತ್ತರಕಾಂಡವನ್ನು ನಿಷೇಧಿಸಿಲ್ಲ. ಅದನ್ನು ವರ್ಜಿಸುವ ಪದ್ಧತಿ ಹಿಂದೆ ಇದ್ದಿದ್ದರೆ ಒಬ್ಬರಾದರೂ ಅದನ್ನು ಸೂಚಿಸುತ್ತಿದ್ದರು. ಗ್ರಂಥಾರಂಭದಲ್ಲಿರುವ ಸಂಕ್ಷೇಪರಾಮಾಯಣದಲ್ಲಿ ' ರಾಮೋ ರಾಜ್ಯಮುಪಾಸಿತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ ' ಎಂದು ಉತ್ತರಕಾಂಡದ ಕಥೆಯನ್ನು ಸೂಚಿಸಿದ ಮೇಲೆಯೇ ' ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಂ । ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ ' ಎಂದು ಫಲಶ್ರುತಿ ಇದೆ.

ಗೋರಖಪುರದ ಗೀತಾಪ್ರೆಸ್ಸಿನಲ್ಲಿ ಮುದ್ರಿತವಾದ ರಾಮಾಯಣಗ್ರಂಥದಲ್ಲಿ ಉತ್ತರಕಾಂಡದ ಪಾರಾಯಣ ಪದ್ಧತಿಯನ್ನು ಸಪ್ರಮಾಣವಾಗಿ ಉದಾಹರಿಸಿದ್ದಾರೆ—

ಶ್ರೀಮದ್ರಾಮಾಯಣದ ಪಾರಾಯಣವನ್ನು ಒಂಬತ್ತು ದಿನಗಳಲ್ಲಿ ಕೆಳಗೆ ಕಂಡಂತೆ ಮಾಡತಕ್ಕದ್ದು.

ಪ್ರಥಮ ದಿನ (ಆರಂಭದಿಂದ) ಅಯೋಧ್ಯಾಕಾಂಡದ ೬ನೆಯ ಸರ್ಗ ಪೂರ್ತಿ
ದ್ವಿತೀಯ ದಿನ ಅಯೋಧ್ಯಾಕಾಂಡದ ೮೦ ನೆಯ ಸರ್ಗ ಪೂರ್ತಿ
ತೃತೀಯದಿನ ಅರಣ್ಯಕಾಂಡದ ೨೦ — ,, —
ಚತುರ್ಥದಿನ ಕಿಷ್ಕಿಂಧಾಕಾಂಡದ ೪೬ — ,, —
ಪಂಚಮದಿನ ಸುಂದರಕಾಂಡದ ೪೭ — ,, —
ಷಷ್ಠದಿನ ಯುದ್ಧಕಾಂಡದ ೫೦ — ,, —
ಸಪ್ತಮದಿನ ಯುದ್ಧಕಾಂಡದ ೯೯ — ,, —
ಅಷ್ಟಮದಿನ ಉತ್ತರಕಾಂಡದ ೩೬ — ,, —
ನವಮದಿನ ಉತ್ತರಕಾಂಡದ ಉಳಿದ ಎಲ್ಲ ಸರ್ಗಗಳನ್ನೂ ಪಾರಾಯಣ ಮಾಡಿದ ಮೇಲೆ ಯುದ್ಧಕಾಂಡದ ಕಡೆಯಲ್ಲಿರುವ ಪಟ್ಟಾಭಿಷೇಕದ ಸರ್ಗವನ್ನೂ ಪಾರಾಯಣಮಾಡಿ ವಿಶ್ರಮಿಸಬೇಕು.

ಉತ್ತರಕಾಂಡದ ಪಠನವಾದಮೇಲೆ ಮತ್ತೆ ಪಟ್ಟಾಭಿಷೇಕ ಘಟ್ಟದ ಪಠನದಿಂದಲೇ ಪಾರಾಯಣ ಸಮಾಪ್ತಿಯೆಂಬುದು ಇಲ್ಲಿ ಗಮನಿಸಬೇಕಾದ ವಿಷಯ.

ತಥಾ ಚೋತ್ತರಕಾಂಡಸ್ಯ ಷಟ್ ತ್ರಿಂಶತ್ ಸರ್ಗಪೂರಣಂ ।
ಅಷ್ಟಮೇ ದಿವಸೇ ಕೃತ್ವಾ ಸ್ಥಿತಂ ಚ ನವಮೇ ದಿನೇ ॥
ಶೇಷಂ ಸಮಾಪ್ಯ **ಯುದ್ಧಸ್ಯ ಚಾಂತ್ಯಂ ಸರ್ಗಂ ಪುನಃ ಪಠೇತ್** ।
ರಾಮರಾಜ್ಯಕಥಾ ಯಸ್ಮಿನ್ ಸರ್ವವಾಂಛಿತದಾಯಿನೀ ॥
ಏವಂ ಪಾಠಕ್ರಮಃ ಪೂರ್ವೈರಾಚಾರ್ಯೈಶ್ಚ ವಿನಿರ್ಮಿತಃ ॥

—ಅನುಷ್ಠಾನ ಪ್ರಕಾಶ

ಬೃಹದ್ಧರ್ಮಪುರಾಣದಲ್ಲಿ ಉತ್ತರಕಾಂಡ ಪಠನದ ಫಲವನ್ನು ಹೀಗೆ ಹೇಳಲಾಗಿದೆ.

ಯಃ ಪಠೇತ್ ಶೃಣುಯಾದ್ವಾಪಿ **ಕಾಂಡಮಭ್ಯುದಯೋತ್ತರಮ್** ।
ಆನಂದಕಾರ್ಯೇ ಯಾತ್ರಾಯಾಂ ಸ ಜಯೀ ಪರತೋಽತ್ರ ಚ ॥
ಮೋಕ್ಷಾರ್ಥೀ ಲಭತೇ ಮೋಕ್ಷಂ ಭಕ್ತ್ಯರ್ಥೀ ಭಕ್ತಿಮೇವ ಚ ।
ಜ್ಞಾನಾರ್ಥೀ ಲಭತೇ ಜ್ಞಾನಂ ಬ್ರಹ್ಮತತ್ತ್ವೋಪಲಂಭಕಮ್ ॥

—ಪೂರ್ವಖಂಡ, ಅಧ್ಯಾಯ ೨೬

*

ಆನಂದಕಾರ್ಯದಲ್ಲಿ-ಶುಭಕಾರ್ಯದ ಸಮಯದಲ್ಲಿ ಉತ್ತರಕಾಂಡದ ಪಠನ ಶ್ರವಣಗಳು ವಿಹಿತವಾಗಿವೆಯೆಂಬುದೂ ಇಲ್ಲಿ ಗಮನಾರ್ಹ. ಭಕ್ತಿ, ಜ್ಞಾನ, ಮೋಕ್ಷ-ಎಂಬ ಶ್ರೇಷ್ಠಫಲಗಳು ಉತ್ತರಕಾಂಡದ ಪಠನಶ್ರವಣಗಳಿಂದ ಲಭಿಸುತ್ತವೆ. ಇಂತಹ ಶ್ರೇಷ್ಠ ಫಲಗಳನ್ನು ಇನ್ನಿತರ ಕಾಂಡಗಳಿಗೆ ಹೇಳಿಲ್ಲ. ಅತ್ಯಂತ ಅಭ್ಯುದಯ ವನ್ನುಂಟುಮಾಡುವುದರಿಂದ ಈ ಕಾಂಡವು ಅಭ್ಯುದಯೋತ್ತರಕಾಂಡವೆನಿಸಿದೆ. ಆದ್ದರಿಂದಲೇ—

ತಥಾ ಸರ್ಗಶತಾನ್ ಪಂಚ ಷಟ್‌ಕಾಂಡಾನಿ ತಥೋತ್ತರಮ್ ||

(ಬಾಲ. ೪-೨)

ಎಂಬಲ್ಲಿ ಶ್ರೀ ಗೋವಿಂದರಾಜರು "ಪರತ್ವಮೋಕ್ಷಪ್ರದತ್ವಾದೀನಾಂ ವ್ಯಕ್ತತಯಾ ಪ್ರತಿಪಾದನೇನ ಸರ್ವೋತ್ತರತ್ವಾತ್ ಉತ್ತರಮಿತಿ ಪೃಥಗುಕ್ತಿಃ" ಎಂದು ಬರೆದಿದ್ದಾರೆ. ಉತ್ತರಕಾಂಡದ ವಿಷಯವಾಗಿ ಜನರಿಗಿರುವ ಒಂದು ತಪ್ಪು ಕಲ್ಪನೆಯ ನಿವಾರಣೆಯಾದೀತೆಂದು ಇಷ್ಟನ್ನು ಬರೆಯಬೇಕಾಯಿತು. ಪಟ್ಟಾಭಿಷೇಕಾಂತವಾದ ಪಾರಾಯಣವು ಸುಪ್ರಸಿದ್ಧವಾಗಿರುವುದರಿಂದ ಇಲ್ಲಿ ಹೊಸದಾಗಿ ಹೇಳಬೇಕಾದ್ದೇನೂ ಇಲ್ಲ.

ವೇದಸಂಮಿತ

ವಾಲ್ಮೀಕಿರಾಮಾಯಣವು ವೇದಸಂಮಿತ (ವೇದಸದೃಶ) ಎಂದು ಹೇಳಲಾಗಿದೆ. ವೇದಾರ್ಥದ ಉಪಬೃಂಹಣಕ್ಕಾಗಿ ಈ ಗ್ರಂಥವನ್ನು ವಾಲ್ಮೀಕಿಗಳು ರಚಿಸಿದರು.

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಮ್ ||

—ಬಾಲ. ೧-೯೮

ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ ||

—ಬಾಲ. ೪-೬

ವೇದೋಪಬೃಂಹಣವೆಂದರೆ ವೇದಪ್ರತಿಪಾದ್ಯವಾದ ವಿಷಯದ ವಿವರಣೆ. ಇದು ಧರ್ಮಶಾಸ್ತ್ರದಂತೆ ವಿಧಿರೂಪವಾಗಿರುವುದಿಲ್ಲ. ರಾಮಾಯಣವು ಮಹಾಕಾವ್ಯವಾದ್ದರಿಂದ ಕಾಂತಾಸಂಮಿತೆಯನ್ನಾಶ್ರಯಿಸಿ ವ್ಯಂಜನಾವೃತ್ತಿಯಿಂದ ಬಹಳ ನವಿರಾಗಿ ವೈದಿಕಧರ್ಮಸೂಕ್ಷ್ಮತೆಯನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ಅಹರಹಃ ಸಂಧ್ಯಾಮುಪಾಸೀತ' ಎಂಬುದು ವಿಧಿ. ಇದನ್ನು ರಾಮಾಯಣವು ವಿವರಿಸುವ ವಿಧಾನವೇ ಚಮತ್ಕಾರಿಯಾದದ್ದು. ವಿಶ್ವಾಮಿತ್ರರು ಶ್ರೀರಾಮನಿಗೆ ಹೇಳುತ್ತಾರೆ—

ಕೌಸಲ್ಯಾ ಸುಪ್ರಜಾರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ ॥

—ಬಾಲ. ೨೩–೨

ಹೀಗೆಯೇ ಶ್ರೀರಾಮಾದಿಗಳ ಮಾತೃಭಕ್ತಿ, ಪಿತೃವಾಕ್ಯಪರಿಪಾಲನೆ, ಗುರುವಿನಲ್ಲಿ ವಿಧೇಯತೆ–ಮೊದಲಾದ ವೃತ್ತಾಂತಗಳಲ್ಲಿ 'ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ' ಮುಂತಾದ ಶ್ರುತಿವಾಕ್ಯಗಳ ಉಪ-ಬೃಂಹಣವನ್ನು ಕಾಣಬಹುದು. ಇದು ಗಾಯತ್ರಿಯಂತೆ ಪವಿತ್ರವೆಂದೂ ಗಾಯತ್ರೀ ಮಂತ್ರಸ್ವರೂಪವೇ ಎಂದೂ ಹೇಳಿದ್ದಾರೆ.

ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮನುತ್ತಮಮ್ ॥

ಉತ್ತರ ೧೧೧–೧೮

ಆದಿಸರ್ಗವು 'ತಪಃಸ್ವಾಧ್ಯಾಯನಿರತಂ' ಎಂಬಲ್ಲಿ ತಕಾರದಿಂದ ಆರಂಭ ವಾಗಿ 'ಮಹತ್ತ್ವಮೀಯಾತ್' ಎಂಬಲ್ಲಿ 'ಯಾತ್' ಎಂದು ಮುಗಿಯು ವುದೇ ಇದಕ್ಕೆ ಗಮಕವೆನ್ನುತ್ತಾರೆ. ಅಲ್ಲದೆ ರಾಮಾಯಣದ ಇಪ್ಪತ್ತು-ನಾಲ್ಕು ಸಾವಿರ ಶ್ಲೋಕಗಳಲ್ಲಿ ಒಂದೊಂದು ಸಾವಿರ ಶ್ಲೋಕ ಸಮಾಪ್ತಿಯಾ ದೊಡನೆ ಮುಂದಿನ ಶ್ಲೋಕದಲ್ಲಿ ಗಾಯತ್ರೀ ಮಂತ್ರದ ಪ್ರಥಮಾದ್ಯಕ್ಷರಗಳ ವಿನ್ಯಾಸವನ್ನು ತೋರಿಸುತ್ತಾರೆ. ಇದನ್ನು ಈ ಪ್ರಸ್ತಾವನೆಯ ಕಡೆಯಲ್ಲಿ ತೋರಿಸ ಲಾಗಿದೆ.

ರಾಮರಹಸ್ಯೋಪನಿಷತ್ತು ಮತ್ತು ರಾಮಪೂರ್ವತಾಪಿನೀ, ರಾಮೋತ್ತರ ತಾಪಿನೀ–ಎಂಬ ಉಪನಿಷತ್ತುಗಳು ಶ್ರೀರಾಮನ ತಾತ್ತ್ವಿಕ ಸ್ವರೂಪವನ್ನೂ ಶ್ರೀರಾಮಮಂತ್ರ, ಉಪಾಸನಾಕ್ರಮ ಮೊದಲಾದವನ್ನು ವಿವರಿಸುತ್ತವೆ. 'ಶ್ರೀರಾಮ ಜಯರಾಮ ಜಯ ಜಯ ರಾಮ' ಎಂಬ ತ್ರಯೋದಶಾಕ್ಷರ ಮಂತ್ರವು ರಾಮರಹಸ್ಯೋಪನಿಷತ್ತಿನಲ್ಲಿ ಉಕ್ತವಾಗಿದೆ. ರಾಮಪೂರ್ವತಾಪಿನಿಯಲ್ಲಿ

रಮಂತೇ ಯೋಗಿನೋಽನಂತೇ ನಿತ್ಯಾನಂದೇ ಚಿದಾತ್ಮನಿ ।
ಇತಿ ರಾಮಪದೇನಾಸೌ ಪರಂ ಬ್ರಹ್ಮಾಭಿಧೀಯತೇ ॥

ಎಂಬುದಾಗಿ ಶ್ರೀರಾಮನೆಂದರೆ ಪರಬ್ರಹ್ಮವೆಂದು ನಿರೂಪಿಸಲಾಗಿದೆ. ರಾಮಮಂತ್ರವೇ ತಾರಕ ಮಂತ್ರವೆಂದೂ ಇದು 'ಮಂತ್ರರಾಜ' ಎಂದೂ ಸಕಲಮಂತ್ರಗಳಲ್ಲಿ ಇದೇ ಅಧಿಕ ಫಲದಾಯಕವೆಂದೂ ರಾಮೋತ್ತರತಾಪಿನ್ಯುಪನಿಷತ್ತಿನಲ್ಲಿದೆ—

ಗಾಣಪತ್ಯೇಷು ಶೈವೇಷು ಶಾಕ್ತಸೌರೇಷ್ವಭೀಷ್ಟದಃ ।
ವೈಷ್ಣವೇಷ್ವಪಿ ಮಂತ್ರೇಷು ರಾಮಮಂತ್ರಃ ಫಲಾಧಿಕಃ ॥

'ಓಂ ರಾಮಾಯ ನಮಃ' ಎಂಬುದು ಷಡಕ್ಷರ ಮಹಾಮಂತ್ರವೆಂದೂ ಅದರಲ್ಲಿ ಹೇಳಿದೆ.

ಸೀತೋಪನಿಷತ್ತಿನಲ್ಲಿ ಸೀತೆಯು ಮಾಯಾಮಯಿಯಾದ ಪ್ರಕೃತಿಯೆಂದು ಉಕ್ತವಾಗಿದೆ—

ಮೂಲಪ್ರಕೃತಿರೂಪತ್ವಾತ್ ಸಾ ಸೀತಾ ಪ್ರಕೃತಿಃ ಸ್ಮೃತಾ ।
ಪ್ರಣವಪ್ರಕೃತಿರೂಪತ್ವಾತ್ ಸೀತಾ ಪ್ರಕೃತಿರುಚ್ಯತೇ ।
ಶ್ರೀಸೀತೇತಿ ತ್ರಿವರ್ಣಾತ್ಮಾ ಸಾಕ್ಷಾನ್ಮಾಯಾಮಯೀ ಭವೇತ್ ॥

ಪ್ರಕೃತಿರೂಪಳಾದ ಸೀತಾದೇವಿ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಸಾಕ್ಷಾಚ್ಛಕ್ತಿ ಎಂದು ತ್ರಿವಿಧಳಾಗಿದ್ದಾಳೆ. ಶ್ರೀ, ಭೂಮಿ, ನೀಲಾ—ಎಂಬಿವು ಇಚ್ಛಾಶಕ್ತಿಯ ಪ್ರಭೇದಗಳು. ಶ್ರೀಯೆಂದರೆ ಲಕ್ಷ್ಮೀ–ಸಂಪತ್ತು, ಭೂಮಿಯೇ ಈ ವಸುಂಧರೆ, ನೀಲಾ ಎಂದರೆ ಮೇಘ ಪಂಕ್ತಿ. ವೇದಗಳೇ ಮೊದಲಾದ ಸಕಲವಾಙ್ಮಯಗಳೂ ಕ್ರಿಯಾಶಕ್ತಿಯೆನಿಸುತ್ತವೆ. ಭಗವಂತನಲ್ಲಿರುವ ಅಣಿಮಾದಿಸಿದ್ಧಿಗಳೂ ನಿಗ್ರಹಾನುಗ್ರಹಾದಿ ಶಕ್ತಿಗಳೂ ಸಾಕ್ಷಾಚ್ಛಕ್ತಿಯೆನಿಸುತ್ತವೆ. ರಾಮನೆಂದರೆ ಪರಬ್ರಹ್ಮ, ಸೀತೆಯೆಂದರೆ ಮಾಯಾಶಕ್ತಿ ಎಂದು ತಾತ್ಪರ್ಯ. 'ಓಂ' ಎಂಬುದು ತಾರಕ ಮಂತ್ರವೆಂದೂ ಹೇಳಿದೆ. 'ರಾಮಾಯ ನಮಃ' ಎಂಬ ಮಂತ್ರದಲ್ಲಿ 'ತತ್ತ್ವಮಸಿ' ಎಂಬ ಮಹಾವಾಕ್ಯದ ಅರ್ಥವು ಅಡಕವಾಗಿದೆಯೆಂದು ನಿರೂಪಿಸಲಾಗಿದೆ. 'ಸೋಽಹಮೋಂ ತದ್ರಾಮಭದ್ರಪರಂ ಜ್ಯೋತೀರಸೋಽಹಮೋಮ್' ಎಂಬ ಮಂತ್ರದ ಜಪಪ್ರಕಾರವನ್ನೂ ಹೇಳಲಾಗಿದೆ. ಇವೆಲ್ಲವನ್ನು ಗುರುಮುಖದಿಂದ ತಿಳಿಯಬೇಕಾದ್ದರಿಂದ ಗೂಢವಾದದ್ದು. ರಾಮಪೂರ್ವತಾಪಿನೀ ಮತ್ತು ರಾಮೋತ್ತರ

ತಾಪಿನೀ ಎಂಬ ಎರಡು ಉಪನಿಷತ್ತುಗಳಲ್ಲಿಯೂ ಬರುವ ಈ ಮಂತ್ರ ಗಮನಾರ್ಹವಾದದ್ದು—

ಸದಾ ರಾಮೋಽಹಮಸ್ಮೀತಿ ತತ್ತ್ವತಃ ಪ್ರವದಂತಿ ಯೇ ।
ನ ತೇ ಸಂಸಾರಿಣೋ ನೂನಂ ರಾಮ ಏವ ನ ಸಂಶಯಃ ॥

ಸಂಕ್ಷೇಪರಾಮಾಯಣ

ಬ್ರಹ್ಮದೇವನು ಶತಕೋಟಿ ವಿಸ್ತೃತವಾದ ರಾಮಾಯಣವನ್ನು ರಚಿಸಿ ನಾರದಾದಿಗಳಿಗೆ ಬೋಧಿಸಿದನೆಂದೂ ಅದನ್ನು ಸಂಕ್ಷೇಪವಾಗಿ ಭೂಲೋಕದಲ್ಲಿ ಪ್ರಸಾರಮಾಡುವ ಉದ್ದೇಶದಿಂದ ನಾರದಮುನಿಗಳನ್ನು ವಾಲ್ಮೀಕಿಮುನಿಗಳ ಬಳಿಗೆ ಕಳಿಸಿದನೆಂದೂ ಮತ್ಸ್ಯಪುರಾಣದಲ್ಲಿ ಹೇಳಿದೆ. ವಾಲ್ಮೀಕಿಮುನಿಗಳು ಬಹುಕಾಲ ರಾಮಜಪವನ್ನು ಮಾಡಿದ ಪುಣ್ಯಬಲದಿಂದ ರಾಮಾಯಣವನ್ನು ರಚಿಸುವ ಸಾಮರ್ಥ್ಯವನ್ನು ಗಳಿಸಿದ್ದರು. ಆ ಸಮಯದಲ್ಲಿ ವಾಲ್ಮೀಕಿಗಳಿಗೆ ಶ್ರೀರಾಮಚರಿತೆ ತಿಳಿದೇ ಇತ್ತು. ಆದರೂ ಗುರೂಪದೇಶದಿಂದಲೇ ವಿದ್ಯೆಯನ್ನು ಪಡೆಯಬೇಕೆಂದೂ ಪ್ರಚಾರಮಾಡಬೇಕೆಂದೂ ಸೂಚಿಸುವುದಕ್ಕಾಗಿ ಆದಿಯಲ್ಲಿ ನಾರದ–ವಾಲ್ಮೀಕಿಗಳ ಸಂವಾದ ಬಂದಿದೆ. ಒಬ್ಬನಲ್ಲಿ ದುರ್ಲಭವಾದ ಸಕಲಸದ್ಗುಣಗಳೂ ಶ್ರೀರಾಮನಲ್ಲಿದ್ದವೆಂದು ಈ ಪ್ರಸಂಗದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. 'ರಾಮೋ ವಿಗ್ರಹವಾನ್ ಧರ್ಮಃ' ಎಂದು ವಾಲ್ಮೀಕಿಮುನಿಗಳೇ ಆತನನ್ನು ಹೊಗಳಿದ್ದಾರೆ. 'ಸಾಧುರೇಕೋ ವಿನಿರ್ಮಿತಃ' ಎಂದು ಪ್ರಶಂಸೆ ಮಾಡಿದ್ದಾರೆ. ಆದ್ದರಿಂದ ವಾಲಿವಧೆ, ಸೀತಾ ಪರಿತ್ಯಾಗಾದಿ ಸಂದರ್ಭಗಳಲ್ಲಿ ಶ್ರೀರಾಮನು ತಪ್ಪು ಮಾಡಿದನೆಂದು ಆಧುನಿಕರಲ್ಲಿ ಕೆಲವರು ಹೇಳುತ್ತಿರುವುದು ಅಸಂಗತವೇ ಸರಿ. ಒಂದಾನೊಂದು ಧರ್ಮಸೂಕ್ಷ್ಮವನ್ನು ತಿಳಿಸುವುದಕ್ಕಾಗಿಯೇ ಅಂತಹ ಪ್ರಸಂಗಗಳನ್ನು ವಾಲ್ಮೀಕಿಗಳು ರಾಮಾಯಣದಲ್ಲಿ ವಿವರಿಸಿದ್ದಾರೆಂದು ತಿಳಿಯಬೇಕು.

ಈ ಸಂಕ್ಷೇಪರಾಮಾಯಣವೂ ಸಹ ಪಾರಾಯಣ ಯೋಗ್ಯವಾದದ್ದು—

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಮ್ ।
ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ ॥

ಎಂದು ಫಲಶ್ರುತಿಯನ್ನು ಹೇಳಿದ್ದಾರೆ. 'ಜನಶ್ಚ ಶೂದ್ರೋಽಪಿ ಮಹತ್ತ್ವಮೀಯಾತ್' ಎಂದು ಕಡೆಯಲ್ಲಿ ಹೇಳಿರುವುದರಿಂದ ನಾಲ್ಕು ವರ್ಣದವರೂ ರಾಮಾಯಣವನ್ನು ಪಠಿಸಬಹುದೆಂದು ಸಿದ್ಧವಾಗುತ್ತದೆ.

ಮುಂದಿನ ರಾಮಾಯಣ ಗ್ರಂಥವು ಬಹಳ ವಿಸ್ತಾರವಾಗಿದೆ. ಒಂದೊಂದು ವಿಷಯವನ್ನು ದೀರ್ಘವಾಗಿ ವರ್ಣಿಸಲಾಗಿದೆ. ವ್ಯಾಸಂಗಮಾಡತಕ್ಕವನಿಗೆ ಸಂಕ್ಷಿಪ್ತವಾಗಿ ಪೂರ್ಣಕಥೆಯು ತಿಳಿದಿದ್ದರೆ ಆ ದೀರ್ಘ ವರ್ಣನೆಗಳನ್ನು ಕೇಳಲು ಚಿತ್ತಸಮಾಧಾನವಿರುತ್ತದೆ. ಮತ್ತು ಅದರ ಸೌಂದರ್ಯವನ್ನನುಭವಿಸಲು ಪಾಠಕನು ಸಿದ್ಧನಾಗಿರುತ್ತಾನೆ. ಕಥೆಯು ಮೊದಲೇ ತಿಳಿಯದಿದ್ದಲ್ಲಿ ಆ ವರ್ಣನೆಗಳನ್ನೋದುವಾಗ ಕಥಾಪ್ರಸಂಗವು ಮುಂದೆ ಏನಾಗುವುದೋ ಎಂಬ ಗೊಂದಲವೂ ಕಳವಳವೂ ಉಂಟಾಗುವುದರಿಂದ ದೀರ್ಘವರ್ಣನೆಯನ್ನೋದಲು ಚಿತ್ತಶಾಂತಿ ಇರುವುದಿಲ್ಲ. ಮಾನವರ ಈ ಮನೋವಿಜ್ಞಾನವನ್ನರಿತೇ ನೂರು ಶ್ಲೋಕಗಳಲ್ಲಿ ಸಮಗ್ರ ರಾಮಾಯಣದ ವರ್ಣನೆ ಸಂಕ್ಷಿಪ್ತವಾದರೂ ಮನೋಜ್ಞವಾಗಿ ಚಿತ್ರಿತವಾಗಿದೆ.

ಶ್ರೀರಾಮ ಜನನ

ಶ್ರೀರಾಮನ ಜನ್ಮಕುಂಡಲಿಯನ್ನೂ ತಾತ್ಕಾಲಿಕ ಗ್ರಹಸ್ಥಿತಿಯನ್ನೂ ಈ ಗ್ರಂಥದ ೩೦ ನೆಯ ಪುಟದಲ್ಲಿ ಬರೆದಿದೆ. ಅದರ ಪ್ರಕಾರ ರವಿ, ಕುಜ, ಗುರು, ಶುಕ್ರ, ಶನಿ—ಈ ಪಂಚಗ್ರಹಗಳು ತಮ್ಮ ಉಚ್ಚಸ್ಥಾನದಲ್ಲಿದ್ದರೆಂದು ಗೊತ್ತಾಗುತ್ತದೆ. ಚೈತ್ರಮಾಸದಲ್ಲಿ ಪುನರ್ವಸು ನಕ್ಷತ್ರಯೋಗವು ಶುಕ್ಲಪಕ್ಷದಲ್ಲಿ ಮಾತ್ರ ಸಂಭವಿಸುವುದರಿಂದ ಚೈತ್ರಶುಕ್ಲ ನವಮಿಯಂದು ಶ್ರೀರಾಮನ ಜನನವೆಂದು ಸಿದ್ಧವಾಗಿದೆ. ಇಲ್ಲಿ ಜ್ಯೋತಿಃಶಾಸ್ತ್ರಜ್ಞರು ಒಂದು ತಕರಾರನ್ನು ಎತ್ತಿದ್ದಾರೆ. ಏನೆಂದರೆ, ರವಿಯು ಉಚ್ಚನಾಗಬೇಕಾದರೆ ಅವನು ಮೇಷರಾಶಿಗೆ ಬಂದಿರಬೇಕು. ಚೈತ್ರಶುಕ್ಲ ನವಮಿಯ ದಿನ ಜ್ಯೋತಿಃಶಾಸ್ತ್ರದ ಪ್ರಕಾರ ಮೇಷಮಾಸ ಬಂದಿರುವುದಿಲ್ಲ. ಆದ್ದರಿಂದ ರವಿಯು ಉಚ್ಚನಾಗಿರಲು ಶಕ್ಯವಿಲ್ಲ—ಎಂದು. ರಾಮಾಯಣದಲ್ಲಿ 'ಸ್ವೋಚ್ಚಸಂಸ್ಥೇಷು ಪಂಚಸು' ಎಂದು ಐದು ಗ್ರಹಗಳ ಉಚ್ಚಸ್ಥಿತಿಯನ್ನು ಹೇಳಿದೆಯೇ ಹೊರತು ಉಚ್ಚಸ್ಥಿತರಾದ ಎಲ್ಲ ಗ್ರಹಗಳ ಹೆಸರನ್ನು ಹೇಳಿಲ್ಲ. ಗುರುವು ಚಂದ್ರನ ಜೊತೆಗೆ ಕರ್ಕಾಟಕದಲ್ಲಿದ್ದನೆಂದು ಹೇಳಿದೆ. ಗುರುವಿಗೆ ಕರ್ಕಾಟಕ ಉಚ್ಚಸ್ಥಾನ, ಚಂದ್ರನಿಗೆ ಅಲ್ಲ. ಚಂದ್ರನು ಉಚ್ಚನಾಗಿರಲಿಲ್ಲವೆಂಬುದು ಸ್ಪಷ್ಟವಾಗಿದೆ. ಚೈತ್ರಮಾಸದಲ್ಲಿ ರವಿಯು ಮೀನ ಮತ್ತು ಮೇಷಗಳಲ್ಲಿರುತ್ತಾನೆ. ಬುಧನು ರವಿಯ ಸಮೀಪದಲ್ಲಿಯೇ ಸಂಚರಿಸತಕ್ಕವನಾದ್ದರಿಂದ ಬುಧನೂ ಉಚ್ಚನಲ್ಲ. ಆತನಿಗೆ ಕನ್ಯಾರಾಶಿ ಉಚ್ಚಸ್ಥಾನ. ಚೈತ್ರಮಾಸದಲ್ಲಿ ಬುಧನು ಎಂದಿಗೂ ಕನ್ಯೆಯಲ್ಲಿರುವುದು ಅಸಂಭವ. ಆದ್ದರಿಂದ ಚಂದ್ರಬುಧರನ್ನು ಬಿಟ್ಟು ರವಿ ಮುಂತಾದ

ಪಂಚಗ್ರಹಗಳಿಗೆ ಮಾತ್ರ ಉಚ್ಚಸ್ಥಿತಿಯನ್ನು ಹೇಳಬೇಕಾಗುತ್ತದೆ. ಚೈತ್ರಶುಕ್ಲ ನವಮಿಯ ದಿನ ರವಿಯು ಮೀನರಾಶಿಯ ನಾಲ್ಕನೆಯ ಪಾದದಲ್ಲಿರುತ್ತಾನೆಯೇ ಹೊರತು ಮೇಷಕ್ಕೆ ಬಂದಿರುವುದಿಲ್ಲ. ಆದ್ದರಿಂದ ರವಿಯು ಉಚ್ಚನಾಗಿದ್ದನೆಂದು ಹೇಳುವುದು ಹೇಗೆ? ಇದಕ್ಕೆ ಮೂರು ಬಗೆಯಲ್ಲಿ ಸಮಾಧಾನವನ್ನು ಹೇಳುತ್ತಾರೆ–

೧. ಚೈತ್ರಶುಕ್ಲ ಹುಣ್ಣಿಮೆಯ ಹೊತ್ತಿಗೆ ರವಿಯು ಮೇಷರಾಶಿಯನ್ನು ಈಗ ಪ್ರವೇಶಿಸುತ್ತಿದ್ದಾನೆ. ೫–೬ ದಿನ ಮೊದಲೇ ಪ್ರವೇಶಿಸುವುದು ಗಣಿತಶಾಸ್ತ್ರಕ್ಕೆ ವಿರುದ್ಧವಾಗುತ್ತದೆ ಎಂಬುದು ಆಕ್ಷೇಪದ ತಿರುಳು. ಶ್ರೀರಾಮಜನನವಾದದ್ದು ತ್ರೇತಾಯುಗದಲ್ಲಿ. ಲಕ್ಷಾಂತರ ವರ್ಷಗಳ ಹಿಂದೆ ಗ್ರಹಸಂಚಲನೆಯಲ್ಲಿ ವ್ಯತ್ಯಾಸ ವಿದ್ದಿರಬಹುದು. ಗ್ರಹಗತಿಯಲ್ಲೇ ಮಾರ್ಪಾಡು ಅಸಂಭವವಲ್ಲ. ಈ ಕಾಲದ ಜ್ಯೋತಿರ್ಗಣಿತಕ್ಕೆ ವಿರುದ್ಧವಾದರೂ ತ್ರೇತಾಯುಗದ ಗ್ರಹಗತಿಯಂತೆ ಸರಿಯಾಗಿಯೇ ಇದ್ದಿರಬೇಕು.

೨. ಮಹಾಪುರುಷರ ಜನ್ಮಕುಲದಲ್ಲಿ ಗ್ರಹಗತಿಯು ಅಕ್ರಮವೂ ವ್ಯುತ್ಕ್ರಮವೂ ಆಗುವುದುಂಟು. ಶ್ರೀರಾಮಚಂದ್ರನ ಅವತಾರ ಸಮಯದಲ್ಲಿ ರವಿಯು ತನ್ನ ಸ್ವಾಭಾವಿಕಗತಿಯನ್ನು ಉಲ್ಲಂಘಿಸಿ ಮೇಷರಾಶಿಯನ್ನು ಪ್ರವೇಶಿಸಿರಬಹುದು.

೩. ಆಧುನಿಕ ಜ್ಯೋತಿಷವಿದ್ವಾಂಸರು ಹೇಳುವ ಸಮಾಧಾನ ಹೀಗೆ— ಶ್ರೀರಾಮಜನನಕಾಲದಲ್ಲಿ ರವಿಯು ಉಚ್ಚನಾಗಿರಲಿಲ್ಲ. ಅವನು ಮೀನರಾಶಿಯ ಕಡೆಯ ಪಾದದಲ್ಲಿ - ರೇವತೀನಕ್ಷತ್ರದಲ್ಲಿ – ಇದ್ದಿರಬೇಕು. ಉಚ್ಚಸ್ಥಾನದಲ್ಲಿದ್ದ ಗ್ರಹಗಳು ಕುಜ, ಗುರು, ಶುಕ್ರ, ಶನಿಗಳು ನಾಲ್ವರು ಮಾತ್ರ. 'ಸ್ವೋಚ್ಚ ಸಂಸ್ಥೇಷು ಪಂಚಸು' ಎಂಬ ರಾಮಾಯಣದ ವಾಕ್ಯಖಂಡಕ್ಕೆ ಹೀಗೆ ಅರ್ಥ ಮಾಡಬೇಕು–ಸ್ವ ಎಂದರೆ ಆತ್ಮೀಯ–ಸ್ವಕೀಯ ಎಂದರ್ಥ. 'ಸ್ವೋ ಜ್ಞಾತಾ-ವಾತ್ಮನಿ ಸ್ವಂ ತಿಷ್ವಾತ್ಮೀಯೇ ಸ್ವೋಽಸ್ತ್ರಿಯಾಂ ಧನೇ' ಎಂದು ಅಮರಕೋಶ ದಲ್ಲಿದೆ. ಆತ್ಮೀಯ ಎಂದರೆ ತನ್ನವನಾದ, ಮಿತ್ರನೆಂದರ್ಥ. ಸ್ವ ಮತ್ತು ಉಚ್ಚ ಸ್ವೋಚ್ಚ. ಮಿತ್ರಕ್ಷೇತ್ರದಲ್ಲಿಯೂ ಮತ್ತು ಉಚ್ಚಕ್ಷೇತ್ರಗಳಲ್ಲಿಯೂ ಪಂಚಗ್ರಹ ಗಳಿದ್ದಾಗ ಎಂದು ಆ ವಾಕ್ಯಖಂಡದ ಅರ್ಥ. ರವಿಯು ತನ್ನ ಮಿತ್ರನಾದ ಗುರುವಿನ ಕ್ಷೇತ್ರವಾದ ಮೀನದಲ್ಲಿಯೂ ಉಳಿದ ನಾಲ್ಕು ಗ್ರಹಗಳು ತಮ್ಮ ಉಚ್ಚಕ್ಷೇತ್ರ ಗಳಲ್ಲಿಯೂ ಇದ್ದಾಗ ಶ್ರೀರಾಮಜನನ ಎಂದು ತಾತ್ಪರ್ಯ.

ಇದರಮೇಲೆ ಇನ್ನೊಂದು ಪ್ರಶ್ನೆ ಹುಟ್ಟುತ್ತದೆ. ಭೋಜರಾಜನು ತನ್ನ ಚಂಪೂರಾಮಾಯಣದಲ್ಲಿ ಶ್ರೀರಾಮಜನನದ ಸಮಯವನ್ನು ವರ್ಣಿಸುತ್ತ—

ಉಚ್ಚಸ್ಥೇ ಗ್ರಹಪಂಚಕೇ ಸುರಗುರೌ ಸೇಂದೌ ನವಮ್ಯಾಂ ತಿಥೌ ।
ಲಗ್ನೇ ಕರ್ಕಟಕೇ ಪುನರ್ವಸುಯುತೇ ಮೇಷಂ ಗತೇ ಪೂಷಣಿ ॥

ಎಂದಿದ್ದಾನೆ. ಮೇಷಂ ಗತೇ ಪೂಷಣಿ=ಸೂರ್ಯನು ಮೇಷರಾಶಿಯಲ್ಲಿ ಪ್ರವಿಷ್ಟನಾದಾಗ. ಇಲ್ಲಿ 'ಗತೇ' ಎಂದು ಭೂತಕಾಲದ ರೂಪವಿದೆ. ಆದ್ದರಿಂದ ರವಿಯು ಮೀನದಲ್ಲಿದ್ದನೆಂದು ಹೇಳಿದರೆ ಈ ವಾಕ್ಯಕ್ಕೆ ವಿರೋಧ ಬರುತ್ತದೆಯಲ್ಲವೆ?

ಇದಕ್ಕೆ ವಿದ್ವಾಂಸರು ಸಮಾಧಾನವನ್ನು ಹೀಗೆ ಹೇಳುತ್ತಾರೆ—ಇಲ್ಲಿ 'ಗತೇ' ಎಂಬ ಭೂತಕಾಲದ ರೂಪವು ಭವಿಷ್ಯದರ್ಥದಲ್ಲಿ ಬಂದಿದೆ. 'ಆಶಂಸಾಯಾಂ ಭೂತವಚ್ಚ' (೩–೩–೧೩೨) ಎಂಬ ಪಾಣಿನಿಸೂತ್ರವು ಇದಕ್ಕೆ ಆಧಾರ. 'ಸೂರ್ಯನು ಮೇಷರಾಶಿಗೆ ಹೋಗಲು ಆಶಿಸಿದಾಗ' ಎಂಬುದು 'ಮೇಷಂ ಗತೇ ಪೂಷಣಿ' ಎಂಬ ವಾಕ್ಯಖಂಡದ ಅರ್ಥ. ಸೂರ್ಯನು ಮೀನರಾಶಿಯ ಅಂತ್ಯಭಾಗದಲ್ಲಿಯೇ ಇದ್ದನೆಂದೂ ಸದ್ಯದಲ್ಲಿ ಮೇಷವನ್ನು ಪ್ರವೇಶಿಸುವನೆಂದೂ ತಾತ್ಪರ್ಯ. 'ಮುಂದಿನ ತಿಂಗಳು ಮಳೆ ಬಂದರೆ ಬೀಜವನ್ನು ಬಿತ್ತುತ್ತಿದ್ದೆವು' ಎಂಬಲ್ಲಿ ಭವಿಷ್ಯದರ್ಥದಲ್ಲಿ ಭೂತಕಾಲರೂಪದ ಪ್ರಯೋಗ ಉಂಟು. 'ಕೂಡಲೇ ಬರುವೆನು' ಎಂಬ ಅರ್ಥದಲ್ಲಿ 'ಇದೋ ಬಂದೆನು' ಎಂದು ಹೇಳುವುದುಂಟು. ಹಾಗೆಯೇ ಇದು. ಆದ್ದರಿಂದ ಚಂಪೂರಾಮಾಯಣದ ವಿರೋಧವಿಲ್ಲ.

ಸೀತಾವಿವಾಹ

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ।
ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ ॥

ಜನಕರಾಜನು ಸೀತಾವಿವಾಹಸಮಯದಲ್ಲಿ ಶ್ರೀರಾಮನಿಗೆ ಈ ರೀತಿ ನುಡಿದಿದ್ದಾನೆ. ಮೊದಲನೆಯ ಎರಡು ಸಾಲುಗಳಲ್ಲಿ ಪ್ರತಿಯೊಂದು ಪದಕ್ಕೂ ವ್ಯಾಖ್ಯಾನಕಾರರಾದ ಗೋವಿಂದರಾಜರು ನಾನಾಭಾವಾರ್ಥಗಳನ್ನು ವರ್ಣಿಸಿದ್ದಾರೆ. ಉದಾಹರಣೆಗೆ 'ಇಯಂ ಸೀತಾ' ಎಂಬೆರಡು ಪದಗಳನ್ನು ತೆಗೆದುಕೊಳ್ಳಬಹುದು :—

೧. ಇಯಂ=ಇವಳು ; ಎದುರಿಗೆ ಹತ್ತಿರದಲ್ಲಿ ನಿಂತಿರುವ ಇವಳು. ಈಕೆಯ ನಿರತಿಶಯವಾದ ಸೌಂದರ್ಯ ಸೌಕುಮಾರ್ಯ ಲಾವಣ್ಯಾದಿಗಳನ್ನು ಪ್ರತ್ಯಕ್ಷವಾಗಿ ನೋಡಬಹುದು. ಇದನ್ನು ಅನುಮಾನದಿಂದಲೂ ಊಹಿಸಿ ದೃಢಪಡಿಸಿಕೊಳ್ಳ ಬಹುದು ಎನ್ನುವುದಕ್ಕಾಗಿ 'ಸೀತಾ' ಪದ. 'ಸೀತಾ ಲಾಂಗಲಪದ್ಧತಿಃ' ಉಳು ವಾಗ ನೇಗಿಲಿನಿಂದಾದ ಗೀರು ಸೀತಾ. ಜನಕರಾಜನು ಯಜ್ಞಕ್ಕಾಗಿ ನೆಲವನ್ನು ಉಳುವಾಗ ಗೀರಿನಲ್ಲಿ ಆವಿರ್ಭವಿಸಿದಳಾದ್ದರಿಂದ ಸೀತಾ ಎಂದು ಹೆಸರಾಯಿತು. ಇವಳು ಅಯೋನಿಜೆಯೆಂದು ತಾತ್ಪರ್ಯ. ಅಯೋನಿಜೆಯ ಸೌಂದರ್ಯಾದಿಗಳು ಹೇಗಿದ್ದಿರಬಹುದೆಂದು ಊಹಿಸಿಕೊಳ್ಳಬಹುದು.

೨. ರಾಮ, ಸಿದ್ಧಾಶ್ರಮದಿಂದ ಹಿಡಿದು ಶಿವಧನುರ್ಭಂಗದವರೆಗೆ ನಿನ್ನ ಕುತೂಹಲವನ್ನು ಕೆರಳಿಸಿದವಳೇ–ಇಯಂ ಸೀತಾ.

೩. ಸೀತಾದರ್ಶನವಾದಾಗ ಮಿಂಚು ಹೊಳೆದಂತಾಗಿ ಏನೂ ಕಾಣದೆ ಶ್ರೀರಾಮನು ಸಂಭ್ರಾಂತನಾಗಿದ್ದ. ಅವನಿಗೆ ಸೀತೆ ಎಲ್ಲಿದ್ದಾಳೆಂದು ಜನಕರಾಜನು ತೋರಿಸುತ್ತ ಹೇಳುತ್ತಾನೆ—ಇಯಂ ಸೀತಾ=ಇವಳು ಸೀತೆ.

೪. ಸೀತೆಯ ಹಂಬಲದಿಂದಾದ ಭಾವನಾಪ್ರಕರ್ಷದಿಂದ ಶ್ರೀರಾಮನಿಗೆ ಎಲ್ಲೆಲ್ಲಿಯೂ ಸೀತೆ ಕಾಣಿಸುತ್ತಿದ್ದಳು. ನಿಜವಾದ ಸೀತೆ ಯಾರೆಂಬುದನ್ನು ಜನಕನು ತೋರಿಸುತ್ತಿದ್ದಾನೆ—ಇಯಂ ಸೀತಾ.

೫. ಶ್ರೀರಾಮನು ವಿಷ್ಣುವಾಗಿದ್ದರೂ 'ಆತ್ಮಾನಂ ಮಾನುಷಂ ಮನ್ಯೇ' ಎಂದು ಹೇಳಿದ್ದಾನೆ. ಹಾಗೆಯೇ ಇವಳು ಲಕ್ಷ್ಮಿಯಾಗಿದ್ದರೂ ತಾನು ಮಾನುಷಿ ಯಾದ ಸೀತೆಯೆಂದುಕೊಂಡಿದ್ದಾಳೆ. 'ರಾಘವತ್ವೇಽಭವತ್ ಸೀತಾ' ಎಂಬ ವಚನಾನುಸಾರ ಈಗ ಇವಳು ಸೀತಾ ಎನಿಸಿಕೊಂಡಿದ್ದಾಳೆಂದು ಸೂಚಿಸುವುದ ಕ್ಕಾಗಿ—ಇಯಂ ಸೀತಾ.

ಈ ಬಗೆಯ ಭಾವಾರ್ಥಗಳು ಯಾವ ಓದುಗರಿಗಾದರೂ ಹೊಳೆದು ಸಂತೋಷಿಸುವುದಾದರೆ ಅವರು ಧನ್ಯರು. ಗೋವಿಂದರಾಜರ ಪಾಂಡಿತ್ಯಕ್ಕೆ ನಮಸ್ಕಾರ.

ರಾಮಾಯಣದಲ್ಲಿ ಮಂಗಳಕರವಾದ ಕಲ್ಯಾಣಘಟ್ಟಗಳು ಎರಡು–ಸೀತಾ ವಿವಾಹ ಮತ್ತು ಶ್ರೀರಾಮಪಟ್ಟಾಭಿಷೇಕ. ವಿವಾಹ ಪ್ರಕರಣದಲ್ಲಿ ಅಪೇಕ್ಷಣೀಯ

ವಾದ ಎಲ್ಲ ಲೌಕಿಕ–ವೈದಿಕ ವಿಧಾನಗಳು ಸಮಗ್ರವಾಗಿ ಸೇರಿಕೊಂಡವೆಂಬುದೇ ಇದರ ಮಹತ್ತ್ವ. ಮೊದಲನೆಯದಾಗಿ ದಶರಥರಾಜ–ಜನಕರಾಜರೆಂಬಿಬ್ಬರು ಬೀಗರ ಸಮಾವೇಶ. ದಶರಥನು ತನ್ನ ಕುಲಗೋತ್ರಗಳನ್ನು ಪುರೋಹಿತರಾದ ವಸಿಷ್ಠರಿಂದ ಹೇಳಿಸಿ ಕನ್ಯಾವರಣಮಾಡುವುದು. ಜನಕನು ಶತಾನಂದರಿಂದ ತನ್ನ ಕುಲಗೋತ್ರ ಗಳನ್ನು ತಿಳಿಸಿ ಕನ್ಯಾದಾನಕ್ಕೆ ಒಪ್ಪುವುದು. ಗೋದಾನವ್ರತ, ವಿವಾಹಮಂಟಪಕ್ಕೆ ಆಗಮನ, ವಿವಾಹಾಂಗವಾದ ಹೋಮ, ಪಾಣಿಗ್ರಹಣ, ಜಲಧಾರಾಸೇಚನ, ಅಗ್ನಿ ಪರಿಕ್ರಮಣ–ಮೊದಲಾದವು ಸಾಂಗವಾಗಿ ನೆರವೇರಿವೆ. ಅಲ್ಪಕಾಲಾವಧಿಯಲ್ಲಿ ಜನಿಸಿದ ಭರತಾದಿಗಳ ಮದುವೆಯೂ ಆಗಲೇ ನಡೆದಿದೆ. ಮದುವೆಯ ಕಾಲದಲ್ಲಿ ಸೋದರಮಾವನಿರಬೇಕೆಂಬ ಪದ್ಧತಿಯನ್ನೂ ಯುಧಾಜಿತನು ಆಗಮಿಸಿ ಪೂರೈಸಿ ದ್ದಾನೆ. ಕನ್ಯಾ-ವರರ ಪುರೋಹಿತರು ಉಪಸ್ಥಿತರಾಗಿದ್ದಾರೆ. ವಧೂಗೃಹದಲ್ಲಿ ವಿವಾಹವಾಗಬೇಕೆಂಬ ಆಚಾರವೂ ನಡೆದಿದೆ. ಈ ಪ್ರಕಾರವಾದ ಸಮಗ್ರತೆ ನಮ್ಮ ಪ್ರಾಚೀನ ಸಾಹಿತ್ಯದ ಯಾವ ವಿವಾಹ ಪ್ರಕರಣದಲ್ಲಿಯೂ ಕಂಡುಬರುವುದಿಲ್ಲ.

'ಸಹಧರ್ಮಚರೀ ತವ' ಎಂದು ಜನಕರಾಜನು ಹೇಳಿದ್ದಾನೆ. 'ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿಚರಾಮಿ' ಎಂಬ ವರಪ್ರತಿಜ್ಞೆಯು ಇದರಿಂದ ಸೂಚಿತ ವಾಗಿದೆ. 'ರಾಮೋ ದ್ವಿರ್ನಾಭಿಭಾಷತೇ'. ಮುಂದೆ ಪ್ರಬಲತರವಾದ ರಾಜಧರ್ಮ ವನ್ನು ಪಾಲಿಸುವುದಕ್ಕಾಗಿ ಸೀತಾಪರಿತ್ಯಾಗ ಮಾಡಬೇಕಾದ ಸಂದರ್ಭ ಬಂದರೂ ಶ್ರೀರಾಮನು ಮತ್ತೊಬ್ಬಳನ್ನು ಮದುವೆಯಾಗುವುದಿಲ್ಲ. ಅಶ್ವಮೇಧಯಾಗದಲ್ಲಿ ಪತ್ನೀಸಾಹಿತ್ಯ ಅಪೇಕ್ಷಿತವಾದಾಗ ಸೀತಾದೇವಿಯ ಕಾಂಚನಪ್ರತಿಮೆಯನ್ನು ನಿರ್ಮಿಸಿಕೊಳ್ಳುತ್ತಾನೆ. ಜಾನಕಿ ಸಹಧರ್ಮಚರಿಯಾದರೆ ದಾಶರಥಿ ಸಹಧರ್ಮ ಚರನಾದ. ಅವಳು ಪತಿವ್ರತಾಶಿರೋಮಣಿಯೆನಿಸಿದರೆ ಈತನು ಏಕಪತ್ನೀ ವ್ರತಧಾರಿ ಯಾದ. ವಧೂವರರು ಕೈಗೊಳ್ಳುವ ಪ್ರತಿಜ್ಞಾವಿಧಿ ಅರ್ಥವತ್ತಾಗಿರುವುದು ಮಂಗಳಕರವಾದ ಸೀತಾಪಾಣಿಗ್ರಹಣದಲ್ಲಿ.

ಹನುಮಂತ

ಸೀತಾರಾಮಗುಣಗ್ರಾಮಪುಣ್ಯಾರಣ್ಯವಿಹಾರಿಣೌ ।
ವಂದೇ ವಿಶುದ್ಧವಿಜ್ಞಾನೌ ಕವೀಶ್ವರಕಪೀಶ್ವರೌ ॥

ಎಂದು ಶ್ರೀ ತುಳಸೀದಾಸರು ವಾಲ್ಮೀಕಿಮುನಿಗಳನ್ನೂ ಹನುಮಂತನನ್ನೂ ಸಮಕಕ್ಷೆ ಯಲ್ಲಿ ಸ್ತುತಿಸಿದ್ದಾರೆ. ಇಬ್ಬರೂ ಸೀತಾರಾಮರ ಗುಣಗಳನ್ನೂ ಪುಣ್ಯಾನಾವ

ಗಳನ್ನೂ ಮತ್ತೆಮತ್ತೆ ಜಪಿಸಿ ಆನಂದಿಸತಕ್ಕವರು. ಇವರಿಬ್ಬರೂ ಪರಿಶುದ್ಧ ಜ್ಞಾನಸಂಪನ್ನರು. ಒಬ್ಬ ಕವೀಶ್ವರನಾದರೆ ಇನ್ನೊಬ್ಬ ಕಪೀಶ್ವರ! ವಕಾರ ಪಕಾರ ಗಳಲ್ಲಿ ಮಾತ್ರ ಭೇದ. ಅದೂ ಹೆಚ್ಚು ಗಮನಾರ್ಹವಲ್ಲ. ವಕಾರ ಪಕಾರಗಳೆರಡೂ ಓಷ್ಠ್ಯವರ್ಣಗಳು. ವಕಾರವು ದಂತ್ಯವೂ ಹೌದೆಂಬುದಷ್ಟೇ ವಿಶೇಷ. ಆದ್ದರಿಂದ ಕವೀಶ್ವರನು ಕಾವ್ಯವನ್ನು ರಚಿಸಿದನಾದರೆ ಕಪೀಶ್ವರನು ಕಾವ್ಯವನ್ನು ನಡೆಸಿದ. ಇಬ್ಬರೂ ರಾಮನಾಮಜಪದಿಂದ ಸಿದ್ಧಿಯನ್ನು ಪಡೆದವರು.

ಹನುಮಂತನು ಅಸಮಸಾಹಸದಿಂದ ಸಮುದ್ರವನ್ನು ಲಂಘಿಸಿ ಸೀತಾ ವೃತ್ತಾಂತವನ್ನು ತರದಿದ್ದರೆ ರಾಮಾಯಣದ ಕಥೆ ಹೇಗೆ ಪರ್ಯವಸಾನಗೊಳ್ಳುತ್ತಿತ್ತೋ ಹೇಳಲಾಗದು. ಶ್ರೀರಾಮನಿಗೆ ಸುಗ್ರೀವಸಖ್ಯವನ್ನುಂಟುಮಾಡಿ ಸೀತಾಪ್ರಾಪ್ತಿಗೆ ತಳಹದಿಯನ್ನು ಹಾಕಿದವನೂ ಆತನೇ. ಮುಂದೆ ಆತನು ನಡೆಸಿದ ಕಾರ್ಯಗಳು ಅಸಾಧಾರಣವಾದವು. ಅನ್ಯರಿಗೆ ಅಸಾಧ್ಯವಾದವು. ಹನುಮಂತನ ದೇಹಬಲದಂತೆ ಬುದ್ಧಿಬಲವೂ ಅಸಾಮಾನ್ಯವಾದದ್ದು. ಅವನ ಕಾರ್ಯಸಿದ್ಧಿ ಈ ಎರಡು ಬಲ ಗಳನ್ನೂ ಆಶ್ರಯಿಸಿ ಬಂದದ್ದು. ಅವನಿದ್ದಲ್ಲಿ ಕಾರ್ಯಸಾಧನೆಯ ಯಶಸ್ಸು ನಿಶ್ಚಿತ.

ನಿಷ್ಕಾಮಕರ್ಮಯೋಗಕ್ಕೆ ಪ್ರಥಮೋದಾಹರಣೆ ಆಂಜನೇಯನೇ. ಲಕ್ಷ್ಮಣ, ಭರತ, ಸುಗ್ರೀವ, ವಿಭೀಷಣ, ಹಾಗೆಯೇ ಶ್ರೀರಾಮನೂ ಸಹ ಒಂದಲ್ಲ ಒಂದು ಬಗೆಯ ಸ್ನೇಹ, ವಾತ್ಸಲ್ಯ, ಮಮತೆಗಳಿಗೆ ಕಟ್ಟುಬಿದ್ದವರೇ. ಅವರ ಸಿದ್ಧಿಯಲ್ಲಿ ಕಾಮನೆ ಪರಿಶುದ್ಧವಾಗಿದ್ದರೂ ಬಾಂಧವ್ಯದ ಅಥವಾ ಉಪಕಾರ ಪ್ರತ್ಯುಪಕಾರ ಗಳಿಂದಾದ ಬಂಧನಕ್ಕೆ ಒಳಪಟ್ಟಿದೆ. ಆಂಜನೇಯನು ಅಂತಹ ಯಾವ ಬಂಧನಕ್ಕೂ ಒಳಪಟ್ಟವನಲ್ಲ. ಯಾವ ಕಾಮನೆಯೂ ಇಲ್ಲದೆ 'ಧರ್ಮಕ್ಕೆ ಜಯವಾಗಲಿ' ಎಂಬ ಒಂದೇ ಉದ್ದೇಶದಿಂದ ಲೋಕಸಂಗ್ರಹಕ್ಕಾಗಿ ತನ್ನನ್ನು ಅರ್ಪಿಸಿಕೊಂಡ ನಿಷ್ಕಾಮ ಕರ್ಮಯೋಗಿ ಹನುಮಂತ. ಆತನು 'ರಾಮಾಯಣ ಮಹಾ ಮಾಲಾರತ್ನ' ಎಂಬ ಪ್ರಶಂಸೆಗೆ ಪಾತ್ರನಾದದ್ದು ಸಹಜವೇ. ವಿಶ್ವದ ಇನ್ನಾವ ಇತಿಹಾಸ ಪುರಾಣಗಳಲ್ಲಿಯೂ ಅವನನ್ನು ಸರಿಗಟ್ಟುವ ಇನ್ನೊಬ್ಬ ಕರ್ಮಯೋಗಿ ದುರ್ಲಭ.

ಹನುಮಂತನ ಕರ್ಮಯೋಗ ಕ್ರಮವಾಗಿ ಭಕ್ತಿಯೋಗಕ್ಕೆ ತಿರುಗುತ್ತದೆ. ಕಡೆಯಲ್ಲಿ ಅವನು ಶ್ರೀರಾಮನಿಂದ ಪಡೆದುಕೊಂಡ ವರ ಯಾವುದು? "ಎಲ್ಲಿಯ

ವರೆಗೆ ನಿನ್ನ ಪಾವನಕಥೆ ಲೋಕದಲ್ಲಿ ನಿಂತಿರುತ್ತದೆಯೋ ಅಲ್ಲಿಯವರೆಗೆ ನನ್ನ ದೇಹದಲ್ಲಿ ಪ್ರಾಣವೂ ನಿಂತಿರಲಿ. ಸದಾ ನನ್ನ ನಾಲಗೆ ನಿನ್ನ ನಾಮವನ್ನು ಜಪಿಸುತ್ತಿರಲಿ" ಎಂಬುದಿಷ್ಟೇ. "ಯತ್ರ ಯತ್ರ ರಘುನಾಥಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಂ" ರಾಮಕಥೆ ಲೋಕ ಇರುವವರೆಗೂ ಇರುತ್ತದೆ. ಆದ್ದರಿಂದ ಹನುಮಂತ ಚಿರಂಜೀವಿ. ಶರೀರದಿಂದ ಮಾತ್ರವಲ್ಲ, ಯಶಸ್ಸಿನಿಂದಲೂ ಅವನು ಚಿರಂಜೀವಿ. 'ವಿಶುದ್ಧವಿಜ್ಞಾನೌ' ಎಂಬ ಮಾತಿನಿಂದ ಶ್ರೀ ತುಳಸೀದಾಸರು ಮುಂದೆ ಹನುಮಂತನು ಜ್ಞಾನಯೋಗಿಯಾದನೆಂದು ಸೂಚಿಸಿದ್ದಾರೆ.

ಶ್ರೀರಾಮನ ಅಂಗುಲೀಯಕವನ್ನು ಹನುಮಂತನು ಸೀತಾದೇವಿಗೆ ತಲುಪಿಸಿ ಅವಳ ಚೂಡಾಮಣಿಯನ್ನು ತಂದು ಶ್ರೀರಾಮನಿಗೆ ಒಪ್ಪಿಸಿದನಷ್ಟೆ. ಈ ಪ್ರಕರಣ ದಲ್ಲಿ ಒಂದು ಆಧ್ಯಾತ್ಮಿಕ ಸಂಕೇತವೂ ಸಂದೇಶವೂ ಉಂಟೆಂದು ಹೇಳುತ್ತಾರೆ. ಶ್ರೀರಾಮನೇ ಪರಮಾತ್ಮ. ಸೂರ್ಯನಿಗೆ ಪ್ರಭೆಯಂತೆ (ಭಾಸ್ಕರಸ್ಯ ಪ್ರಭಾ ಯಥಾ) ಆತನ ಅಂಶವೇ ಆದ ಸೀತಾದೇವಿ ಜೀವಾತ್ಮ. ಸುವರ್ಣಮೃಗದ ತೃಷ್ಣೆ ಹುಟ್ಟಿ ದೊಡನೆ ಅವಳು ದಶಾನನನ ಬಂಧನದಲ್ಲಿ ಸಿಕ್ಕಿಕೊಂಡಳು. ಪಂಚಜ್ಞಾನೇಂದ್ರಿಯ ಗಳಿಂದಲೂ ಪಂಚಕರ್ಮೇಂದ್ರಿಯಗಳಿಂದಲೂ ಕೂಡಿದ ಈ ದೇಹವೇ ದಶಾನನ. ರಾಗ, ದ್ವೇಷ, ಕಾಮಕ್ರೋಧಾದಿಗಳೇ ನಿತ್ಯಯಾತನೆಯನ್ನೀಯುವ ರಾಕ್ಷಸರು. ರಾಕ್ಷಸರ ಮಾಯೆಯಲ್ಲಿ ಜೀವಾತ್ಮನೆಂಬ ಸೀತೆ ಪರಿತಪಿಸುತ್ತಿದ್ದಾಳೆ. ಸಂಸಾರ ಸಾಗರ ಸುತ್ತುಗಟ್ಟಿದೆ. ಅದರಿಂದ ಪಾರಾಗಲು ಬೇರೆ ಗತಿಕಾಣದೆ ಜೀವಾತ್ಮ ಸದಾ ರಾಮನಾಮವನ್ನು ಜಪಿಸುತ್ತದೆ.

'ಭಕ್ತ್ಯಾ ತ್ವನನ್ಯಯಾ ಲಭ್ಯಃ' ಎಂದಿದೆ ಭಗವದ್ವಚನ. 'ಅನನ್ಯಾ ರಾಘವೇಣಾಹಂ' ಎನ್ನುತ್ತದೆ ಸೀತಾರೂಪಿಯಾದ ಜೀವಾತ್ಮ. ಆಗ ಭಗವಂತನು ಕಾರುಣ್ಯದಿಂದ ಜೀವಾತ್ಮನ ಉದ್ಧಾರಕ್ಕಾಗಿ ಹನುಮಂತನೆಂಬ ಆಚಾರ್ಯನನ್ನು ಕಳಿಸುತ್ತಾನೆ. ಈ ಆಚಾರ್ಯನು ಅಂಗುಲೀಯಕದ ರೂಪದಲ್ಲಿ ಭಗವಂತನ ಸಂದೇಶ ವನ್ನು ಸೀತೆಗೆ ಮುಟ್ಟಿಸುತ್ತಾನೆ. ಅಂಗುಲೀಯಕ ಕೈಬೆರಳಿನ ಭೂಷಣ. ಅದು ಅಭಯಹಸ್ತದ ಸಂಕೇತ. ಹನುಮಂತನೆಂಬ ಆಚಾರ್ಯನು ಸಂಸಾರಸಾಗರವನ್ನು ದಾಟಿ ಬಂದವನು. ಸೀತೆಯೆಂಬ ಜೀವಾತ್ಮನನ್ನು ನೇರವಾಗಿ ಪರಮಾತ್ಮನ ಸಾಯುಜ್ಯಕ್ಕೆ ಕರೆದೊಯ್ಯುತ್ತೇನೆ ಎನ್ನುತ್ತಾನೆ. ಈ ಜೀವಾತ್ಮನಿಗೆ ಪೂರ್ಣವಾಗಿ ಆಚಾರ್ಯನಲ್ಲಿ ವಿಶ್ವಾಸ ಬಲಿತಿರಲಿಲ್ಲ. ಸಾಯುಜ್ಯಕ್ಕೆ ಕಾಲಲಬ್ಧಿ ಬಂದಿರಲಿಲ್ಲ.

ಅಶೋಕವನ ಇನ್ನೂ ಶೋಕವನವಾಗಿಯೇ ಇತ್ತು. ತನ್ನ ಚೂಡಾಮಣಿಯನ್ನು ಶ್ರೀರಾಮನಿಗೆ ತಲುಪಿಸಬೇಕೆಂದು ಸೀತೆ ಕೊಡುತ್ತಾಳೆ. ಚೂಡಾಮಣಿ ಶಿರೋಭೂಷಣ. ತನ್ನ ಮನಸ್ಸನ್ನು ಭಗವಂತನಿಗೆ ಪೂರ್ಣವಾಗಿ ಒಪ್ಪಿಸುವುದರ ಸಂಕೇತ ಇದು. 'ಮನ್ಮನಾ ಭವ ಮದ್ಭಕ್ತಃ'. ಪರಮಾತ್ಮನ ಕೃಪೆಯಿಂದ ಜೀವಾತ್ಮನ ಬಂಧ ಹರಿಯುತ್ತದೆ. ಅದನ್ನು ತಿಳಿಸುವುದಕ್ಕೆ ಮತ್ತೆ ಹನುಮಂತನೆಂಬ ಗುರುವೇ ಬರುತ್ತಾನೆ! 'ಗುರುವಿನ ಕರುಣೆ ಹರಿಯುವತನಕ ದೊರೆಯದಣ್ಣ ಮುಕುತಿ' 'ಸೀತೇ ಸ್ವಸ್ಥಾ ಭವ ಗತವ್ಯಥಾ । ರಾವಣಶ್ಚ ಹತಃ ಶತ್ರುಃ' ಎಂದು ಹನುಮಂತನು ಹೇಳಿದಾಗ ಅವಳು ಪರಮಾನಂದವನ್ನು ಹೊಂದುತ್ತಾಳೆ. 'ಸ್ವಸ್ಥಾ ಭವ–ಸ್ವಸ್ವರೂಪದಲ್ಲಿ ನಿಲ್ಲು' ಎಂದರ್ಥ. 'ಸ್ವಸ್ವರೂಪೇಣ ಅವಸ್ಥಾನಂ ಮೋಕ್ಷಃ' ತಾನು ಅನುಭವಿಸುವ ಮಹಾನಂದಕ್ಕೆ ಪ್ರತಿಯಾಗಿ ಮೂರು ಲೋಕಗಳನ್ನು ಹನುಮಂತನಿಗೆ ಕೊಟ್ಟರೂ ಸಾಲದೆಂದು ಸೀತೆ ಹೇಳುತ್ತಾಳೆ. ಬ್ರಹ್ಮಾನಂದಕ್ಕೆ ಸಾಟಿಯಾವುದು? 'ಸ ಏಷ ಬ್ರಹ್ಮಣ ಆನಂದಃ, ಆನಂದಸ್ಯ ಮಾತ್ರಾಮುಪ-ಜೀವಂತಿ' ಪಟ್ಟಾಭಿಷೇಕಕಾಲದಲ್ಲಿ ಮುಕ್ತಾಹಾರದ ರೂಪದಿಂದ ಹನುಮಂತನಿಗೆ ಗುರುಕಾಣಿಕೆ ಸಲ್ಲುತ್ತದೆ. ಇದು ಮಹಾಕಾವ್ಯದ ಧ್ವನಿ, ವಾಚ್ಯಾರ್ಥವಲ್ಲ.

ಬಹಳ ವರ್ಷಗಳ ಹಿಂದೆ ಜಯಕರ್ನಾಟಕವೆಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನೋದಿದ ನೆನಪಿದೆ. ಅದರಲ್ಲಿ ಹನುಮಂತನು ಕರ್ನಾಟಕ ದೇಶದ ದ್ರಾವಿಡನೆಂದೂ ಅವನ ನಿಜವಾದ ಹೆಸರು 'ಹಣಮಪ್ಪ'ನೆಂದೂ ಲೇಖಕರು ಬರೆದಿದ್ದರು. ಉತ್ತರ ದೇಶದ ವಾಲ್ಮೀಕಿ ಅಸಹನೆಯಿಂದ 'ಹಣಮಪ್ಪ'ನನ್ನು ಮಂಗನೆಂದೂ ರಾಮನ ದಾಸನೆಂದೂ ವರ್ಣಿಸಿ ದ್ರೋಹವೆಸಗಿದ್ದಾನೆಂದೂ ಈ ವಾಲ್ಮೀಕಿ ಭರತಖಂಡದ ಮಿಸ್ ಮೇಯೊ ಎಂದೂ ವಾದಿಸಿದ್ದರು. ಆದರೆ ವಾಲ್ಮೀಕಿಮುನಿಗಳಿಂದಲೇ ಹನುಮಂತನು ದೇವತೆಯಾಗಿ ಅಮರನಾದನೆಂದೂ ಭರತಖಂಡದ ಹಳ್ಳಿಹಳ್ಳಿಗಳಲ್ಲಿ ಮಾರುತಿಯ ದೇವಸ್ಥಾನಗಳು ಇರುವುದಕ್ಕೆ ವಾಲ್ಮೀಕಿಮುನಿಗಳೇ ಕಾರಣಪುರುಷರೆಂದೂ ಆ ಲೇಖಕರ ಬುದ್ಧಿಗೆ ಹೊಳೆಯಲಿಲ್ಲ. ಆರ್ಯಜನಾಂಗದವರೇ ಶ್ರೀರಾಮನಿಗೆ ಹನುಮಂತನಿಂದ ಹೇಳಿಸಿದ ಮಾತು ಇದು—

ದೇಹಬುದ್ಧ್ಯಾ ತು ದಾಸೋಽಹಂ ಜೀವಬುದ್ಧ್ಯಾ ತ್ವದಂಶಕಃ ।
ಆತ್ಮಬುದ್ಧ್ಯಾ ತ್ವಮೇವಾಹಮಿತಿ ಮೇ ನಿಶ್ಚಿತಾ ಮತಿಃ ॥

ಆದಿತ್ಯಹೃದಯ

ಆದಿತ್ಯಹೃದಯವೆಂದರೆ, ಆದಿತ್ಯನ ಹೃದಯವನ್ನು–ಮನಸ್ಸನ್ನು ಪ್ರಸಾದ ಗೊಳಿಸುವ ಸ್ತೋತ್ರವೆಂದರ್ಥ. ಅಥವಾ ' ಅಸಾವಾದಿತ್ಯೋ ಬ್ರಹ್ಮ ' ಎಂಬುದಾಗಿ ಶ್ರುತಿಯು ಆದಿತ್ಯನನ್ನು ಬ್ರಹ್ಮವೆಂದು ಹೇಳಿದೆ. ಆದಿತ್ಯಮಂಡಲವು ಬ್ರಹ್ಮದ ಪ್ರತೀಕವೆಂದು ತಾತ್ಪರ್ಯ. ' ಯ ಏಷೋಽಂತರಾದಿತ್ಯೇ ಹಿರಣ್ಮಯಃ ' ಇತ್ಯಾದಿ ಶ್ರುತಿಗಳಿಂದ ಆದಿತ್ಯಮಂಡಲದಲ್ಲಿ ಉಪಾಸ್ಯವಾಗಿದ್ದು ಸಾರಭೂತವಾದ ಬ್ರಹ್ಮವೇ ಆದಿತ್ಯಹೃದಯ. ಆದಿತ್ಯಹೃದಯವೆನಿಸಿದ ಬ್ರಹ್ಮವೇ ದೇವತೆಯಾಗಿರುವುದರಿಂದ ಈ ಸ್ತೋತ್ರವೂ ಆದಿತ್ಯಹೃದಯವೆನಿಸಿದೆ. ಈ ಸ್ತೋತ್ರದ ಜಪಪ್ರಕಾರವನ್ನು ಹೀಗೆ ಹೇಳಿದ್ದಾರೆ—

ಅಸ್ಯ ಆದಿತ್ಯಹೃದಯ ಸ್ತೋತ್ರಸ್ಯ । ಅಗಸ್ತ್ಯಋಷಿಃ । ಅನುಷ್ಟುಪ್ ಛಂದಃ । ಆದಿತ್ಯಹೃದಯಭೂತೋ ಭಗವಾನ್ ಬ್ರಹ್ಮಾ ದೇವತಾ । ನಿರಸ್ತಾಶೇಷವಿಘ್ನತಯಾ ಬ್ರಹ್ಮವಿದ್ಯಾಸಿದ್ಧೌ ಸರ್ವತ್ರ ಜಯಸಿದ್ಧೌ ಚ ವಿನಿಯೋಗಃ ॥ ಅನಂತರ ಗಾಯತ್ರೀ ಮಂತ್ರದಿಂದ ಷಡಂಗನ್ಯಾಸ. ಆಮೇಲೆ ' ತತೋ ಯುದ್ಧಪರಿಶ್ರಾಂತಂ....'ಎಂದು ಆರಂಭಿಸಿ ' ಸುರಗಣ ಮಧ್ಯಗತೋ ವಚಸ್ತ್ವರೇತಿ ' ಎಂಬಲ್ಲಿಯವರೆಗೆ ಸ್ತೋತ್ರ ವನ್ನು ಜಪಿಸಬೇಕು. ಶ್ರೀರಾಮನು ಅಗಸ್ತ್ಯರಿಂದ ಇದರ ಉಪದೇಶವನ್ನು ಪಡೆದದ್ದು, ಜಯಾಪೇಕ್ಷಿಗಳಾದ ಜನರಿಗೆ ಆದಿತ್ಯಹೃದಯವೆಂಬ ಸ್ತೋತ್ರವನ್ನು ಪ್ರಕಾಶಪಡಿಸಿ ಲೋಕಾನುಗ್ರಹಮಾಡುವುದಕ್ಕಾಗಿ—ಎಂದು ತಿಳಿಯಬೇಕು. ಜಪದ ವಿಶೇಷ ಫಲಗಳನ್ನು ಆದಿತ್ಯಹೃದಯದ ಫಲಶ್ರುತಿಯಲ್ಲಿ ಹೇಳಿದೆ.

ಶ್ರೀರಾಮಪಟ್ಟಾಭಿಷೇಕ

ಪಟ್ಟವೆಂದರೆ ರೇಶ್ಮೆಯ ವಸ್ತ್ರ; ರೇಶ್ಮೆಯ ಮುಂಡಾಸು. ಅದನ್ನು ತಲೆಗೆ ಸುತ್ತಿ ಅಭಿಷೇಕ ಮಾಡುವುದು ಪಟ್ಟಾಭಿಷೇಕ. ಸಿಂಹಾಸನವೆಂದೂ ಪಟ್ಟಶಬ್ದಕ್ಕೆ ಅರ್ಥವಿದೆ. ಸಿಂಹಾಸನದಲ್ಲಿ ಕುಳ್ಳಿರಿಸಿ ಮಾಡುವ ಅಭಿಷೇಕ ಪಟ್ಟಾಭಿಷೇಕ.

ಹದಿನಾಲ್ಕು ವರ್ಷಗಳಿಂದ ಯಾವುದಕ್ಕಾಗಿ ಸಮಸ್ತಜನತೆ ಹಂಬಲಿಸು ತ್ತಿತ್ತೋ ಆ ಶ್ರೀರಾಮಪಟ್ಟಾಭಿಷೇಕ ಮಹೋತ್ಸವ ನಡೆದಾಗ ಸರ್ವರೂ ಆನಂದ ದಿಂದ ನಲಿದಾಡಿದರು. ಅವರಲ್ಲಿ ಸರ್ವಾಧಿಕವಾದ ಆನಂದ ಯಾರಿಗಾಗಿರಬಹುದು? ಶ್ರೀರಾಮನಿಗೊ, ಸೀತಾದೇವಿಗೊ, ಕೌಸಲ್ಯೆಗೊ ಅಥವಾ ಲಕ್ಷ್ಮಣನಿಗೊ?

ಸರ್ವಾಧಿಕವಾದ ಆನಂದವಾದದ್ದು ಕೈಕೇಯಿಗೆ—ಎಂದು ತರ್ಕಿಸಬಹುದು. ಎರಡನೆಯ ಮಹಾನಂದ ಭರತನಿಗೆ.

ಶಿರಸ್ಯಂಜಲಿಮಾಧಾಯ ಕೈಕೇಯ್ಯಾನಂದವರ್ಧನಃ ।
ಬಭಾಷೇ ಭರತೋ ಜ್ಯೇಷ್ಠಂ ರಾಮಂ ಸತ್ಯಪರಾಕ್ರಮಮ್ ॥
ಪೂಜಿತಾ ಮಾಮಿಕಾ ಮಾತಾ....॥

ಕೈಕೇಯ್ಯಾನಂದವರ್ಧನಃ—ಎಂಬ ಮಾತನ್ನು ಋಷಿಕವಿಯು ಪಾದ ಪೂರಣಕ್ಕಾಗಿ ಸೇರಿಸಿದ್ದಲ್ಲ. ಕೈಕೇಯಿಗೆ ಶ್ರೀರಾಮನ ಮೇಲಿದ್ದ ಪ್ರೀತಿ ಭರತನ ಮೇಲಿದ್ದ ಪ್ರೀತಿಗಿಂತ ಒಂದು ತೂಕ ಹೆಚ್ಚು.

ಯಥಾ ಮೇ ಭರತೋ ಮಾನ್ಯಸ್ತಥಾ ಭೂಯೋಽಪಿ ರಾಘವಃ ।
ಕೌಸಲ್ಯಾತೋಽತಿರಿಕ್ತಂ ಚ ಸ ತು ಶುಶ್ರೂಷತೇ ಹಿ ಮಾಮ್ ॥

—ಅಯೋ. ೮–೧೮

ಎಂದು ಅವಳೇ ಹೇಳಿದ್ದಾಳೆ. ಆವಳಿಗೆ ಯುವರಾಜಪದವಿಯ ಸಂನಾಹ ನಡೆದಿದೆ ಯೆಂದು ಮಂಥರೆ ಹೇಳಿದಾಗ—

ಉತ್ತಸ್ಥೌ ಹರ್ಷಸಂಪೂರ್ಣಾ ಚಂದ್ರಲೇಖೇವ ಶಾರದೀ ।
ಅತೀವ ಸಾ ತು ಸಂಹೃಷ್ಟಾ ಕೈಕೇಯೀ ವಿಸ್ಮಯಾನ್ವಿತಾ ।
ಏಕಮಾಭರಣಂ ತಸ್ಯೈ ಕುಬ್ಜಾಯೈ ಪ್ರದದೌ ಶುಭಮ್ ॥

ಅಯೋ. ೭–೩೧, ೩೨

ಮಂಥರೆಯ ಪ್ರಚೋದನೆಯಿಂದ ಅವಳಿಗೆ ಸ್ವಲ್ಪಕಾಲ ಬುದ್ಧಿವಿಕಲ್ಪ ವಾಯಿತು. ಅದೊಂದು ದೈವಸಂಕಲ್ಪವೆನ್ನೋಣ. ಬುದ್ಧಿಯು ವಶಕ್ಕೆ ಬಂದಾಗ ಕಾರ್ಯ ಮಿಂಚಿಹೋಗಿತ್ತು. ತನ್ನ ಉದ್ದೇಶಕ್ಕೆ ವ್ಯತಿರಿಕ್ತವಾಗಿ ಅನರ್ಥಗಳೇ ಒದಗಿದಾಗ ಅವಳು ಪಶ್ಚಾತ್ತಾಪದಿಂದ ಬೆಂದುಹೋದಳು. ಶ್ರೀರಾಮನನ್ನು ಹಿಂದಿರುಗಿಸು ವುದಕ್ಕಾಗಿ ತಾನೂ ಭರತನೊಡನೆ ವನಕ್ಕೆ ಹೋದಳು. ಕಣ್ಣೀರು ಸುರಿಸುತ್ತ ಬರಿಗೈಯಿಂದ ವಾಪಸು ಬಂದಳು. ಹದಿನಾಲ್ಕು ವರ್ಷ ಕೈಕೇಯಿ ಅನುಭವಿಸಿದ ಮನೋಯಾತನೆ ಕೌಸಲ್ಯೆಯದಕ್ಕಿಂತ ಅಧಿಕವಾಗಿರಬೇಕು. ಯಾವಾಗ ಶ್ರೀರಾಮನು ಕ್ಷೇಮವಾಗಿ ಅಯೋಧ್ಯೆಗೆ ಬರುವನೋ, ಯಾವಾಗ ಪಟ್ಟಾಭಿಷೇಕ

ವಾದೀತೋ, ತನ್ನ ಅವಿವೇಕದ ಮಾರ್ಜನವಾದೀತೋ ಎಂದು ಉತ್ಕಂಠೆಯಿಂದ ಅವಳು ಕಾದುಕೊಂಡಿದ್ದಳು.

ಲೋಕದಲ್ಲಿ ನಾವು ಒಂದು ತಪ್ಪು ಮಾಡಿದೆವೆನ್ನೋಣ. ಅದರಿಂದ ಅನರ್ಥಕರವಾದ ಪರಿಣಾಮವಾಗಿ ಪಶ್ಚಾತ್ತಾಪವಾಗುತ್ತದೆ. ಮುಂದೆ ಅದು ಮಂಗಳಕರವಾಗಿ ಸಮಾಪ್ತವಾದರೆ ನಮಗಾಗುವ ಆನಂದ ಅನ್ಯರ ಆನಂದಕ್ಕಿಂತ ಮಿಗಿಲಾಗಿರುತ್ತದೆ. ಭರತನ ಸಂದರ್ಭವೂ ಅಷ್ಟೆ. ಅವನು ಯಾವ ತಪ್ಪನ್ನೂ ಎಸಗಲಿಲ್ಲ. ಆದರೂ ಪರ್ಯಾಯವಾಗಿ ತನ್ನ ಹೆಸರು ಅನರ್ಥಕ್ಕೆ ನಿಮಿತ್ತವಾಯಿತೆಂಬ ಕೊರಗೂ ಹಡೆದ ತಾಯಿ ಇದಕ್ಕೆ ಕಾರಣಳಾದಳೆಂಬ ವ್ಯಥೆಯೂ ಇದ್ದೇ ಇತ್ತು.

ಅಭ್ಯಷಿಂಚನ್ನರವ್ಯಾಘ್ರಂ ಪ್ರಸನ್ನೇನ ಸುಗಂಧಿನಾ ।
ಸಲಿಲೇನ ಸಹಸ್ರಾಕ್ಷಂ ವಸವೋ ವಾಸವಂ ಯಥಾ ॥

ಈ ಶ್ಲೋಕದಲ್ಲಿ ಪರ್ಯವಸಾನಗೊಂಡಿತು ಎಲ್ಲರ ಶೋಕಪ್ರಸಂಗ.

ನಮ್ಮಲ್ಲಿ ನೂರಾರು ಸಲ ಶ್ರೀಮದ್ರಾಮಾಯಣವನ್ನು ಸಮಗ್ರವಾಗಿ ಪಾರಾಯಣ ಮಾಡಿದವರೂ ಪಟ್ಟಾಭಿಷೇಕೋತ್ಸವಗಳನ್ನು ನಡೆಸಿದವರೂ ಇದ್ದಾರೆ. ಅವರೆಲ್ಲರೂ ಪುಣ್ಯಾತ್ಮರು. ಮಣೆಯ ಮೇಲೆ ಪಟವನ್ನಿಟ್ಟು ಪೂಜಿಸುವುದೂ ಇರಲಿ. ಸೀತಾರಾಮರನ್ನು ಹೃದಯದಲ್ಲಿಟ್ಟು ಪಟ್ಟಾಭಿಷೇಕ ಮಾಡಬೇಕು. ಅದರಿಂದಾಗುವ ಆನಂದ ಸರ್ವಾಧಿಕ.

ಪ್ರಜಾಕೋಟಿಯು ಶ್ರೀರಾಮನ ಪಟ್ಟಾಭಿಷೇಕಕ್ಕಾಗಿ ಹಾರೈಸುತ್ತ ಇದ್ದುದೇಕೆ? ರಾಜನಿಗೆ ರಾಜ್ಯವಾದರೆ ಪ್ರಜೆಗಳಿಗಾದದ್ದೇನು? ಧರ್ಮದ ರಕ್ಷಣೆ ವ್ಯವಸ್ಥಿತವಾಗಿ ನಡೆಯುವುದೆಂದೂ ಅದರಿಂದ ಪ್ರಜಾಸಮುದಾಯದ ಕ್ಷೇಮಾಭ್ಯುದಯಗಳು ಸಿದ್ಧಿಸುತ್ತವೆಯೆಂದೂ ಶ್ರೀರಾಮನು ಪ್ರಜಾರಂಜನೆಯಲ್ಲಿ ದಕ್ಷನೆಂದೂ ಆ ಜನರು ನಂಬಿದ್ದರು. ಅವರ ನಿರೀಕ್ಷಣೆ ರಾಮರಾಜ್ಯದಲ್ಲಿ ಸಂಪೂರ್ಣವಾಗಿ ಫಲಿಸಿತು—

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ ।
ರಾಮಭೂತಂ ಜಗದಭೂತ್ ರಾಮೇ ರಾಜ್ಯಂ ಪ್ರಶಾಸತಿ ॥

ರಾಜನ ಕರ್ಮ-ಕ್ರಿಯೆ ರಾಜ್ಯವೆನಿಸುತ್ತದೆ (ಪಾಣಿನಿಸೂತ್ರ ೫-೧-೧೨೮). ಅದೇ ಸರ್ಕಾರ. ವೇದವು ಹಾರೈಸಿದ್ದು ಸ್ವಾರಾಜ್ಯವನ್ನು (ಸ್ವರ್+ರಾಜ್ಯ).

ಸ್ವಾರಾಜ್ಯವು ಧರೆಗಿಳಿದು ಬರುವಾಗ ಹ್ರಸ್ವವಾದರೆ ಸ್ವರಾಜ್ಯವಾಗುತ್ತದೆ. ಧರ್ಮದಲ್ಲಿ ಶ್ರದ್ಧೆಯಿದ್ದರೆ ಸ್ವರಾಜ್ಯವು ಸುರಾಜ್ಯವಾಗಿರುತ್ತದೆ. ಇಲ್ಲದಿದ್ದರೆ ಶ್ವರಾಜ್ಯವಾಗುತ್ತದೆ. ಪ್ರಜೆಗಳ ಅರ್ಹತೆಗೆ ತಕ್ಕ ರಾಜ್ಯ. ರಾಮಭಕ್ತಿಯಿದ್ದರೆ ರಾಮರಾಜ್ಯ. ಇಲ್ಲದಿದ್ದರೆ ಕಾಮರಾಜ್ಯ.

ಶ್ರೀಮದ್ರಾಮಾಯಣದ ವಿಭಿನ್ನಕಾಂಡಗಳ ಪಾರಾಯಣದಿಂದಾಗುವ ಫಲಗಳನ್ನು ಬೃಹದ್ಧರ್ಮಪುರಾಣದಲ್ಲಿ (ಪೂರ್ವಖಂಡ, ಅಧ್ಯಾಯ ೨೬) ತಿಳಿಸಲಾಗಿದೆ. ಅನುವಾದ ಸಹಿತವಾಗಿ ಆ ಶ್ಲೋಕಗಳನ್ನೂ ಬೇರೆಬೇರೆ ಕಡೆಗಳಲ್ಲಿ ಹೇಳಿರುವ ಇತರ ಫಲಗಳನ್ನೂ ಕೆಳಗೆ ಉದಾಹರಿಸಿದೆ—

೧. ಬಾಲಕಾಂಡ

ಅನಾವೃಷ್ಟಿ ಮಹಾಪೀಡಾ ಗ್ರಹಪೀಡಾ ಪ್ರಪೀಡಿತಾಃ ।
ಆದಿಕಾಂಡಂ ಪಠೇಯುರ್ಯೇ ತೇ ಮುಚ್ಯಂತೇ ತತೋ ಭಯಾತ್ ॥ ೧ ॥

ಅನಾವೃಷ್ಟಿ, ಈತಿಬಾಧೆ, ಗ್ರಹಬಾಧೆಗಳಿಂದ ಪೀಡಿತರಾದವರು ಬಾಲಕಾಂಡವನ್ನು ಪಠಿಸುತ್ತಿದ್ದರೆ ಆ ಬಾಧೆಗಳಿಂದ ಬಿಡುಗಡೆ ಹೊಂದುತ್ತಾರೆ.

ಅತಿವೃಷ್ಟಿ, ಬಾಲಗ್ರಹಪೀಡೆಗಳ ಪರಿಹಾರವೂ ಯಾವುದೇ ಭಯದ ನಿವಾರಣೆಯೂ ಪುತ್ರಸಂತಾನಪ್ರಾಪ್ತಿಯೂ ಬಾಲಕಾಂಡಪಾರಾಯಣದ ಫಲ.

೨. ಅಯೋಧ್ಯಾಕಾಂಡ

ಪುತ್ರಜನ್ಮವಿವಾಹಾದೌ ಗುರುದರ್ಶನ ಏವ ಚ ।
ಪಠೇಚ್ಚ ಶೃಣುಯಾಚ್ಚೈವ ದ್ವಿತೀಯಂ ಕಾಂಡಮುತ್ತಮಮ್ ॥ ೨ ॥

ಪುತ್ರಜನ್ಮ, ವಿವಾಹ—ಮುಂತಾದ ಶುಭಕಾರ್ಯಗಳಲ್ಲಿಯೂ ಗುರುಹಿರಿಯರ ದರ್ಶನವಾದಾಗಲೂ ಅಯೋಧ್ಯಾಕಾಂಡವನ್ನು ಪಠಿಸಬೇಕು ಮತ್ತು ಕೇಳಬೇಕು.

ಐಶ್ವರ್ಯಪ್ರಾಪ್ತಿಯೂ ಅಯೋಧ್ಯಾಕಾಂಡಪಾರಾಯಣದ ಫಲ. ಅದರ ಪ್ರತಿಯೊಂದು ಶ್ಲೋಕಕ್ಕೂ ಕೆಳಗಿನ ಮಂತ್ರವನ್ನು ಸೇರಿಸಿ ಸಂಪುಟೀಕರಣದಿಂದ ಜಪಿಸಿದರೆ ವಿಶೇಷಫಲ ಉಂಟು—

ಭರತಾಯ ನಮಸ್ತಸ್ಮೈ ಸಾರಜ್ಞಾಯ ಮಹಾತ್ಮನೇ ।
ತಾಪಸಾಯಾತಿಶಾಂತಾಯ ಶತ್ರುಘ್ನಸಹಿತಾಯ ಚ ॥

*

೩. ಅರಣ್ಯಕಾಂಡ

ವನೇ ರಾಜಕುಲೇ ವಹ್ನಿಜಲಪೀಡಾಯುತೋ ನರಃ ।
ಪಠೇದಾರಣ್ಯಕಂ ಕಾಂಡಂ ಶೃಣುಯಾದ್ವಾ ಸ ಮಂಗಲೀ ॥ ೩ ॥

ಕಾಡಿನಲ್ಲಿ ಕಷ್ಟಕ್ಕೆ ಸಿಕ್ಕಿದಾಗ, ರಾಜರಿಂದ ಪೀಡೆಯಾದಾಗ, ಅಗ್ನಿಜಲಗಳ ನಿಮಿತ್ತದಿಂದ ಬಾಧೆಯಾದಾಗ ಅರಣ್ಯಕಾಂಡವನ್ನು ಪಠಿಸತಕ್ಕವನು ಶುಭಯೋಗ ವನ್ನು ಪಡೆಯುತ್ತಾನೆ.

೪. ಕಿಷ್ಕಿಂಧಾಕಾಂಡ

ಮಿತ್ರಲಾಭೇ ತಥಾ ನಷ್ಟದ್ರವ್ಯಸ್ಯ ಚ ಗವೇಷಣೇ ।
ಶ್ರುತ್ವಾ ಪಠಿತ್ವಾ ಕೈಷ್ಕಿಂಧ್ಯಂ ಕಾಂಡಂ ತತ್ತತ್‌ಫಲಂ ಲಭೇತ್ ॥ ೪ ॥

ಮಿತ್ರಲಾಭವನ್ನು ಬಯಸಿದಾಗಲೂ ನಷ್ಟದ್ರವ್ಯವನ್ನು ಹುಡುಕುವ ಪ್ರಸಂಗ ದಲ್ಲಿಯೂ ಕಿಷ್ಕಿಂಧಾಕಾಂಡವನ್ನು ಶ್ರವಣಮಾಡಿದರೆ, ಪಠಿಸಿದರೆ, ಅಪೇಕ್ಷಿತ ಫಲವು ದೊರಕುವುದು.

೫. ಸುಂದರಕಾಂಡ

ಶ್ರಾದ್ಧೇಷು ದೇವಕಾರ್ಯೇಷು ಪಠೇತ್ ಸುಂದರಕಾಂಡಕಮ್ ।
ಶತ್ರೋರ್ಜಯೇ ಸಮುತ್ಸಾಹೇ ಜನವಾದೇ ವಿಗರ್ಹಿತೇ ॥ ೫ ॥

ಶ್ರಾದ್ಧಕಾಲದಲ್ಲಿಯೂ ದೇವಕಾರ್ಯಗಳು ನಡೆಯುವಾಗಲೂ ಸುಂದರ ಕಾಂಡವನ್ನು ಪಠಿಸಬೇಕು. ಶತ್ರು ಜಯಕ್ಕಾಗಿಯೂ ಉತ್ಸಾಹವೃದ್ಧಿಗಾಗಿಯೂ ನಿಂದಿತವಾದ ಜನಾಪವಾದದ ಪರಿಹಾರಕ್ಕಾಗಿಯೂ ಇದರ ಪಾರಾಯಣ ಮಾಡಬೇಕು.

ನಷ್ಟ ದ್ರವ್ಯ ಪ್ರಾಪ್ತಿಯು ಸುಂದರಕಾಂಡಪಾರಾಯಣದ ವಿಶಿಷ್ಟ ಫಲ. ಅಪಸ್ಮಾರ, ಕುಷ್ಠಾದಿರೋಗಗಳೂ ಭೂತಪೀಡೆಯೂ ಇದರಿಂದ ನಾಶವಾಗುತ್ತದೆ. ಎಲ್ಲ ಬಗೆಯ ಶ್ರೇಯಸ್ಸುಗಳಿಗಾಗಿಯೂ ಇದನ್ನು ಪಾರಾಯಣಮಾಡುತ್ತಾರೆ. ಸಂಪುಟೀಕರಣಪಾರಾಯಣದಿಂದ ಅತಿಶಯವಾದ ಫಲವುಂಟು. ಸಂಪುಟೀಕರಣ ಕ್ಕಾಗಿ ಬಳಸುವ ಮಂತ್ರಗಳು ಕೆಳಗಿನ ಮೂರರಲ್ಲೊಂದು—

೧. ಸೀತಾಯೈನಮಃ ।

೨. ರಾಮಭದ್ರ ಮಹೇಷ್ವಾಸ ರಘುವೀರ ನೃಪೋತ್ತಮ ।
ಭೋ ದಶಾಸ್ಯಾಂತಕಾಸ್ಮಾಕಂ ರಕ್ಷಾಂ ದೇಹಿ ಶ್ರಿಯಂ ಚ ತೇ ॥

೩. ತ್ರಿಯಂಬಕಂ ಯಜಾಮಹೇ...........ಮಾಮೃತಾತ್ ॥

೬. ಯುದ್ಧಕಾಂಡ

ಶತ್ರೋರ್ಜಯೇ ಸಮುತ್ಸಾಹೇ ಜನವಾದೇ ವಿಗರ್ಹಿತೇ ।
ಲಂಕಾಕಾಂಡಂ ಪಠೇತ್ ಕಿಂ ವಾ ಶೃಣುಯಾತ್ ಸ ಸುಖೀ ಭವೇತ್ ॥ ೬ ॥

ಶತ್ರುಜಯಕ್ಕಾಗಿಯೂ ಉತ್ಸಾಹವೃದ್ಧಿಗಾಗಿಯೂ ನಿಂದಿತವಾದ ಜನಾಪವಾದದ ಪರಿಹಾರಕ್ಕಾಗಿಯೂ ಯುದ್ಧಕಾಂಡವನ್ನು ಪಠಿಸಿದರೆ ಅಥವಾ ಶ್ರವಣ ಮಾಡಿದರೆ, ಆತನಿಗೆ ಸುಖವಾಗುವುದು.

ಉತ್ತರಕಾಂಡದ ಪಾರಾಯಣದ ಫಲವನ್ನು ಪ್ರಸಂಗವಶದಿಂದ ಹಿಂದೆಯೇ ನಿರೂಪಿಸಲಾಗಿದೆ. ಎಲ್ಲ ಕಾಂಡಗಳ ಎಲ್ಲ ಶ್ಲೋಕಗಳನ್ನೂ ಕೆಳಗಿನ ಮಂತ್ರದಿಂದ ಸಂಪುಟೀಕರಿಸಿ ಪಾರಾಯಣಮಾಡುವ ವಿಧಿಯೂ ಉಂಟು—

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ ।
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್ ॥

ಸಮಗ್ರರಾಮಾಯಣದ ಪಾರಾಯಣಕ್ಕೆ ವಸಂತನವರಾತ್ರ ಮತ್ತು ಶರನ್ನವರಾತ್ರಗಳು ಪ್ರಶಸ್ತಗಳೆಂದು ಹೇಳಿದ್ದಾರೆ. ಸುಂದರಕಾಂಡಕ್ಕೆ ಸಪ್ತಸರ್ಗೀಪಾರಾಯಣ ಮುಂತಾದ ಕ್ರಮವಿಶೇಷಗಳೂ ಉಂಟು. ನಿತ್ಯಪಾರಾಯಣವೂ ಇದೆ. ಒಟ್ಟಿನಲ್ಲಿ ಯಾವುದಾದರೊಂದು ಶುಭದಿನದಲ್ಲಿ ರಾಮಾಯಣದ ಪಾರಾಯಣವನ್ನಾರಂಭಿಸಬಹುದು. ಯಾವುದೇ ಸರ್ಗದ ಮಧ್ಯದಲ್ಲಿ ನಿಲ್ಲಿಸಬಾರದು—ಎಂಬುದು ಮುಖ್ಯ ತಾತ್ಪರ್ಯ. ಶ್ರೀರಾಮಸಾಯುಜ್ಯವು ಸಮಗ್ರರಾಮಾಯಣದ ಫಲ.

ಪ್ರಕೃತ, ಈ ಪುಸ್ತಕದಲ್ಲಿ ಸೇರಿಸಿದ ಶ್ರೀಮದ್ರಾಮಾಯಣ ಕಥಾಸರ್ಗಗಳು ಅತ್ಯಂತ ಪ್ರಶಸ್ತವಾದವು. ರಾಮಾಯಣದ ಸಾರಭೂತ ಪುಣ್ಯ ಕಥಾಂಶಗಳಿವು. ರಾಮಾಯಣವೆಂಬ ರತ್ನದ ಗಣಿಯಿಂದ ಎತ್ತಿಕೊಂಡಿರುವ ಶ್ರೇಷ್ಠರತ್ನಗಳು. ಆ ರತ್ನಗಳ ಸಂಪುಟ ಈ ಪುಸ್ತಕ. ಈ ಸರ್ಗಗಳನ್ನು ನಿತ್ಯಪಾರಾಯಣಕ್ಕೆ ಇಟ್ಟು

ಕೊಳ್ಳಬಹುದು. ಇವನ್ನು ಕಂಠಸ್ಥವಾಗಿ ಮಾಡಿಕೊಂಡರೆ ಅತಿಶಯವಾದ ಮನಃ-ಶಾಂತಿಯೂ ಪುಣ್ಯವೂ ಲಭಿಸುತ್ತವೆ.

ಈ ಬಗೆಯ ಒಂದು ಗ್ರಂಥ ಇದುವರೆಗೆ ಎಲ್ಲಿಯೂ ಪ್ರಕಟವಾದಂತೆ ಕಂಡು ಬರುವುದಿಲ್ಲ. ಇಂತಹ ಒಂದು ಹೊಸತನದ ಗ್ರಂಥವನ್ನು ಪ್ರಕಾಶಗೊಳಿಸಬೇಕೆಂಬ ಇಚ್ಛೆ ಮೊದಲು ಮೂಡಿದ್ದು ಶ್ರೀ ಎಸ್. ಎನ್. ಮೂರ್ತಿಯವರಿಗೆ. ಅವರು ಬೆಂಗಳೂರು ನರಸಿಂಹರಾಜ ಕಾಲೊನಿ ಶ್ರೀರಾಮಮಂದಿರದ ಗೌ|| ಕಾರ್ಯದರ್ಶಿಗಳಾಗಿದ್ದು 27 ವರ್ಷಗಳಿಂದ ಶ್ರೀರಾಮಸೇವೆಯನ್ನು ಶ್ರದ್ಧೆಯಿಂದ ನೆರವೇರಿಸುತ್ತ ಬಂದಿದ್ದಾರೆ. ಅವರ ಬಹುದಿನಗಳ ಅಪೇಕ್ಷೆ ಇಂದು ಫಲಿಸಿದೆ. ಶ್ರೀ ನರಸಿಂಹರಾಜ ಕಾಲೊನಿ ಅಸೋಸಿಯೇಷನ್ (ರಿ.) ಈಗ ಶ್ರೀರಾಮೋತ್ಸವದ ಸುವರ್ಣ ಮಹೋತ್ಸವವನ್ನಾಚರಿಸುತ್ತಿದೆ. ಧಾರ್ಮಿಕ ಸಾಂಸ್ಕೃತಿಕ ಸಾಮಾಜಿಕ ಕಾರ್ಯಗಳನ್ನು ಪ್ರಶಂಸನೀಯವಾದ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರುವ ಈ ಸಂಸ್ಥೆಗೆ ಈ ಉತ್ಸವ ಹೆಮ್ಮೆಯನ್ನು ತರುವ ಭೂಷಣವೇ ಸರಿ. ಇದುವರೆಗೆ ಈ ಸಂಸ್ಥೆ ನಡೆಸಿರುವ ಹಲವಾರು ಶ್ರೇಷ್ಠ ಕಾರ್ಯಗಳಲ್ಲಿ ಸಮಗ್ರ ವಾಲ್ಮೀಕಿ ರಾಮಾಯಣದ ಪ್ರಕಟನೆ ಶೇಖರಪ್ರಾಯವಾದುದು. ವಿದ್ವನ್ಮಣಿಗಳೂ ಸ್ಮಾತಃಸ್ಮರಣೀಯರೂ ಆಗಿದ್ದ ಡಾ|| ಡಿ. ವಿ. ಗುಂಡಪ್ಪನವರ ಪ್ರೇರಣೆ ಮಾರ್ಗದರ್ಶನಗಳಿಂದ ಪ್ರಕಾಶನಗೊಂಡ ಈ ರಾಮಾಯಣ ಗ್ರಂಥಗಳು ಅಖಿಲ ಕರ್ಣಾಟಕದಲ್ಲಿ ಅಪಾರವಾದ ಜನಪ್ರಿಯತೆಯನ್ನು ಗಳಿಸಿ ಈಗ ಎಲ್ಲಾ ಕಾಂಡಗಳು ಮೂರನೆಯ ಮುದ್ರಣದಲ್ಲಿ ಇರುತ್ತವೆ. ಹೀಗೆ ಅನೇಕ ಪ್ರಕಾರವಾಗಿ ಭಗವತ್ಸೇವೆಯನ್ನೂ ಜನಸೇವೆಯನ್ನೂ ನಡೆಸುತ್ತಿರುವ ಈ ಸಂಸ್ಥೆ ಈಗ ಆಚರಿಸಲಿರುವ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಈ ಗ್ರಂಥವು ಚಿಕ್ಕದಾದರೂ ಚೊಕ್ಕಟವಾದ ಸುವರ್ಣಕಲಶದಂತೆ ಸ್ಮಾರಕವಾಗಿ ಶೋಭಿಸುತ್ತ ಇರುವುದು.

ಮೇಲ್ಕಂಡ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ಡಿ. ಸಿ. ಅನಂತರಾಮಯ್ಯನವರೂ ಕಾರ್ಯದರ್ಶಿಗಳಾದ ಶ್ರೀ ಎಸ್. ಎನ್. ಮೂರ್ತಿಗಳೂ ತುಂಬ ಆದರವನ್ನು ವಹಿಸಿ, ಈ ಗ್ರಂಥಕ್ಕೆ ಒಂದು ರೂಪರೇಖೆಯನ್ನಿತ್ತು ಸಂಪಾದಿಸಿ ಕೊಡಬೇಕೆಂದು ನನ್ನನ್ನು ಕೇಳಿದರು. ಅದರಂತೆ ಯಥಾಮತಿಯಾಗಿ ನನ್ನ ಕಿರು ಸೇವೆಯನ್ನು ಸಲ್ಲಿಸಿದ್ದೇನೆ. ಭಕ್ತಜನರ ಸೌಕರ್ಯಕ್ಕಾಗಿ ರಾಮಾಯಣ

ಪಾರಾಯಣಕ್ಕೆ ಸಂಬಂಧಿಸಿದ ಶ್ಲೋಕಗಳನ್ನೂ ಕಡೆಯಲ್ಲಿ ಕೆಲವು ಸ್ತೋತ್ರಗಳನ್ನೂ ಸೇರಿಸಲಾಗಿದೆ. ನನ್ನಲ್ಲಿರಿಸಿದ ವಿಶ್ವಾಸಕ್ಕಾಗಿ ಶ್ರೀರಾಮಮಂದಿರದ ಎಲ್ಲ ಕಾರ್ಯಕರ್ತರಿಗೂ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತೇನೆ.

ಸೀತಾಮಾನಸಹಂಸಾಯ ಪ್ರಭವೇ ಧರ್ಮಸೇತವೇ ।
ಪ್ರಾಚೇತಸೈಕವೇದ್ಯಾಯ ಶ್ರೀರಾಮಾಯ ನಮೋಽಸ್ತು ತೇ ॥

ಪ್ರಭವ ಸಂವತ್ಸರದ ವಿಜಯದಶಮೀ
ತಾ॥ ೨-೧೦-೧೯೮೭

ಎನ್. ರಂಗನಾಥಶರ್ಮಾ

ಗಾಯತ್ರೀರಾಮಾಯಣ

ಶ್ರೀಮದ್ರಾಮಾಯಣದಲ್ಲಿ ಗಾಯತ್ರೀ ಮಂತ್ರಾಕ್ಷರಗಳ ನ್ಯಾಸವಿದೆಯೆಂದು ಹೇಳುತ್ತಾರೆ. ಪ್ರಥಮಸರ್ಗದ ಆದಿಯಲ್ಲಿರುವ 'ತಪಃಸ್ವಾಧ್ಯಾಯನಿರತಂ' ಎಂಬ ಶಬ್ದದ ತಕಾರವೂ ಆ ಸರ್ಗದ ಕಡೆಯ ಶಬ್ದವಾದ 'ಈಯಾತ್' ಎಂಬಲ್ಲಿರುವ ಯಾತ್ ಎಂಬುದೂ ಇದಕ್ಕೆ ಸೂಚಕ. ಈ ಗ್ರಂಥದಲ್ಲಿ ಒಟ್ಟು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಿರುವುದು ಈ ಅಭಿಪ್ರಾಯಕ್ಕೆ ಪೋಷಕವಾಗಿದೆ. ಪ್ರತಿಯೊಂದು ಸಾವಿರ ಶ್ಲೋಕಗಳ ಮೊದಲನೆಯ ಶ್ಲೋಕದಲ್ಲಿ ಗಾಯತ್ರಿಯ ಒಂದೊಂದು ಅಕ್ಷರವೂ ಕ್ರಮವಾಗಿ ಸಂನಿವಿಷ್ಟವಾಗಿದೆಯೆಂದು ಹೇಳುತ್ತಾರೆ. ಈ ವಿಧದಲ್ಲಿ ಇಪ್ಪತ್ತುನಾಲ್ಕು ಶ್ಲೋಕಗಳು ಕೆಳಗೆ ಕಂಡಂತಿವೆ. ಗಾಯತ್ರಿಯ ಅಕ್ಷರಗಳೊಡನೆ ಎಲ್ಲ ವಿಧದಲ್ಲಿ ಹೋಲಿಕೆಯಿಲ್ಲದಿದ್ದರೂ ಬಹ್ವಂಶದಲ್ಲಿ ಏಕರೂಪತೆ ಇದೆ—

ತ — ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥
(ಬಾಲ. ೧–೧)

ಸ — ಸ ತೇನ ಪರಮಾಸ್ತ್ರೇಣ ಮಾನವೇನ ಸಮಾಹತಃ ।
ಸಂಪೂರ್ಣಂ ಯೋಜನಶತಂ ಕ್ಷಿಪ್ತಃ ಸಾಗರಸಂಪ್ಲವೇ ॥
(ಬಾಲ. ೩೦–೧೮)

ವಿ — ವಿಶ್ವಾಮಿತ್ರೋ ಮಹಾತೇಜಾ ಭೂಯಸ್ತೇಪೇ ಮಹತ್ತಪಃ ।
ತತಃ ಕಾಲೇನ ಮಹತಾ ಮೇನಕಾ ಪರಮಾಪ್ಸರಾಃ ॥
(ಬಾಲ. ೬೩–೩)

ತು — ಚತುರಶ್ವೋ ರಥಃ ಶ್ರೀಮಾನ್ ನಿಸ್ತ್ರಿಂಶೋ ಧನುರುತ್ತಮಮ್ ।
ವಾಹನಂ ನರಸಂಯುಕ್ತಂ ಛತ್ರಂ ಚ ಶಶಿಸಂನಿಭಮ್ ॥
(ಅಯೋ. ೧೪–೩೭)

ವ — ವರ್ತತೇ ಚೋತ್ತಮಾಂ ವೃತ್ತಿಂ ಲಕ್ಷ್ಮಣೋಽಸ್ಮಿನ್ ಸದಾನಘಃ ।
ದಯಾವಾನ್ ಸರ್ವಭೂತೇಷು ಲಾಭಸ್ತಸ್ಯ ಮಹಾತ್ಮನಃ ॥
(ಅಯೋ. ೪೪–೫)

ರೇ ದ್ವಾರೇಣ ವೈಜಯಂತೇನ ಪ್ರಾವಿಶತ್ ಶ್ರಾಂತವಾಹನಃ ।
ದ್ವಾಃಸ್ಥೈರುತ್ಥಾಯ ವಿಜಯಂ ಪೃಷ್ಟಸ್ತೈಃಸಹಿತೋ ಯಯೌ ॥
(ಅಯೋ. ೭೧–೩೩)

ಣ ನಿರೀಕ್ಷ್ಯ ಸ ಮುಹೂರ್ತಂ ತು ದದರ್ಶ ಭರತೋ ಗುರುಮ್ ।
ಉಟಜೇ ರಾಮಮಾಸೀನಂ ಜಟಾಮಂಡಲಧಾರಿಣಮ್ ॥
(ಅಯೋ. ೯೯–೨೫)

ಯಂ ತೇ ವಯಂ ವನಮತ್ಯುಗ್ರಂ ಪ್ರವಿಷ್ಟಾಃ ಪಿತೃಶಾಸನಾತ್ ।
ದ್ರಷ್ಟುಮಿಚ್ಛಾಮಹೇ ಸರ್ವೇ ಭಗವಂತಂ ನಿವೇದ್ಯತಾಮ್ ॥
(ಅರ. ೧೨–೪)

ಭ ಮಮ ಭರ್ತಾ ಮಹಾತೇಜಾ ವಯಸಾ ಪಂಚವಿಂಶಕಃ ।
ಅಷ್ಟಾದಶ ಹಿ ವರ್ಷಾಣಿ ಮಮ ಜನ್ಮನಿ ಗಣ್ಯತೇ ॥
(ಅರ. ೪೭–೧೦)

ಗ ತತಃ ಪರಮಸಂಹೃಷ್ಟೋ ಹನುಮಾನ್ ಪ್ಲವಗರ್ಷಭಃ ।
ಪ್ರತ್ಯುವಾಚ ತತೋ ವಾಕ್ಯಂ ರಾಮಂ ವಾಕ್ಯವಿಶಾರದಃ ॥
(ಕಿಷ್ಕಿ. ೩–೧೪)

ಸ ಕಾಮಿನಂ ದೀನಮದೀನಸತ್ತ್ವಂ
ದೇ ಶೋಕಾಭಿಪನ್ನಂ ಸಮುದೀರ್ಣಕೋಪಮ್ ।
ನರೇಂದ್ರ ಸೂನುರ್ನರದೇವಪುತ್ರಂ
ರಾಮಾನುಜಃ ಪೂರ್ವಜಮಿತ್ಯುವಾಚ ॥
(ಕಿಷ್ಕಿ. ೩೧–೧)

ವ ತತೋ ರಾವಣನೀತಾಯಾಃ ಸೀತಾಯಾಃ ಶತ್ರುಕರ್ಶನಃ ।
ಇಯೇಷ ಪದಮನ್ವೇಷ್ಟುಂ ಚಾರಣಾಚರಿತೇ ಪಥಿ ॥
(ಸುಂ. ೧–೧)

ಸ್ಯ ತತಸ್ತಸ್ಯ ನಗಸ್ಯಾಗ್ರೇ ಹ್ಯಾಕಾಶಸ್ಥಸ್ಯ ದಂತಿನಃ ।
ಭರ್ತ್ರಾ ಪರಿಗೃಹೀತಸ್ಯ ಜಾನಕೀ ಸ್ಕಂಧಮಾಶ್ರಿತಾ ॥
(ಸುಂ. ೨೭–೧೪)

ಧೀ ನಾವಮನ್ಯೇಶ್ಚ ಯುಷ್ಮಾಭಿರ್ಹರಿಃ ಧೀರಪರಾಕ್ರಮಃ ।
ದೃಷ್ಟಾ ಹಿ ಹರಯಃ ಪೂರ್ವಂ ಮಯಾ ವಿಪುಲವಿಕ್ರಮಾಃ ॥
(ಸುಂ. ೪೬-೯)

ಮ ಶ್ರುತ್ವಾ ಹನುಮತೋವಾಕ್ಯಂ ಯಥಾವದಭಿಭಾಷಿತಮ್ ।
ರಾಮಃ ಪ್ರೀತಿಸಮಾಯುಕ್ತೋ ವಾಕ್ಯಮುತ್ತರಮಬ್ರವೀತ್ ॥
(ಯುದ್ಧ. ೧-೧)

ಹಿ ಯಸ್ತು ಸವ್ಯಮಸೌ ಪಕ್ಷಂ ರಾಮಸ್ಯಾಶ್ರಿತ್ಯ ತಿಷ್ಠತಿ ।
ರಕ್ಷೋಗಣಪರಿಕ್ಷಿಪ್ತೋ ರಾಜಾ ಹಿ ಏಷ ವಿಭೀಷಣಃ ॥
(ಯುದ್ಧ. ೨೮-೨೭)

ಧಿ ತೇಜೋ ವೀರ್ಯಂ ಬಲಂ ಚೌಜ ಉತ್ಸಾಹಶ್ಚ ಮಹಾಗುಣಃ ।
ಪ್ರದರ್ಶನಂ ಚ ಬುದ್ಧಿಶ್ಚ ಸ್ಮೃತಿಶ್ಚ ದ್ವಿಗುಣಂ ತಯೋಃ ॥
(ಯುದ್ಧ. ೫೦-೪೦)

ಯ ಕುಂಭಕರ್ಣಂ ಹತಂ ದೃಷ್ಟ್ವಾ ರಾಘವೇಣ ಮಹಾತ್ಮನಾ ।
ರಾಕ್ಷಸಾ ರಾಕ್ಷಸೇಂದ್ರಾಯ ರಾವಣಾಯ ನ್ಯವೇದಯನ್
(ಯುದ್ಧ. ೬೮-೧)

ಯ ವಿಜ್ಞಾಯ ತು ಮನಸ್ತಸ್ಯ ರಾಘವಸ್ಯ ಮಹಾತ್ಮನಃ ।
ಸಂನಿವೃತ್ಯಾಹವಾತ್ತಸ್ಮಾತ್ ಸಂವಿವೇಶ ಪುರೀಂ ತತಃ ॥
(ಯುದ್ಧ. ೮೧-೧)

ನಃ ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥
(ಯುದ್ಧ. ೧೧೨-೨೬)

ಪ್ರ ಪ್ರಾಪ್ತರಾಜ್ಯಸ್ಯ ರಾಮಸ್ಯ ರಾಕ್ಷಸಾನಾಂ ವಧೇ ಕೃತೇ ।
ಆಜಗ್ಮುರ್ಮುನಯಃ ಸರ್ವೇ ರಾಘವಂ ಪ್ರತಿನಂದಿತುಮ್ ॥
(ಉತ್ತರ. ೧-೧)

ಚೋ	ತತಃ ಪ್ರ**ಚೋ**ದಯನ್ ಸೂತಸ್ತಾನಶ್ವಾನ್ ರುಧಿರಪ್ರಭಾನ್ । ಪ್ರಯಯೌ ಭೀಮಸಂನಾದೋ ಯತ್ರ ರಕ್ಷಃಪತಿಃ ಸ್ಥಿತಃ ॥ (ಉತ್ತರ. ೨೨–೮)
ದ	ವಿಸೃಜ್ಯ ಚ ಮಹಾಬಾಹುರ್ಋಕ್ಷವಾನರರಾಕ್ಷಸಾನ್ । ಭ್ರಾತೃಭಿಃ ಸಹಿತೋ ರಾಮಃ ಪ್ರಮುಮೋ**ದ** ಸುಖಂ ಸುಖೀ ॥ (ಉತ್ತರ. ೪೧–೧)
ಯಾ	ಸುರಾ ಹಿ ಕಥಯಂತಿ ತ್ವಾಮಾಗತಂ ಶೂದ್ರಘಾತಿನಮ್ । ಬ್ರಾಹ್ಮಣಸ್ಯ ತು ಧರ್ಮೇಣ ತ್ವ**ಯಾ** ಜೀವಾಪಿತಃ ಸುತಃ ॥ (ಉತ್ತರ. ೭೬–೨೭)

ಧ್ಯಾನಶ್ಲೋಕಗಳು

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥ ೧

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಮ್ ॥ ೨

ದೋರ್ಭಿರ್ಯುಕ್ತಾ ಚತುರ್ಭಿಃ ಸ್ಫಟಿಕಮಣಿಮಯೀಮಕ್ಷಮಾಲಾಂ ದಧಾನಾ
ಹಸ್ತೇನೈಕೇನ ಪದ್ಮಂ ಸಿತಮಪಿ ಚ ಶುಕಂ ಪುಸ್ತಕಂ ಚಾಪರೇಣ ।
ಭಾಸಾ ಕುಂದೇಂದುಶಂಖಸ್ಫಟಿಕಮಣಿನಿಭಾ ಭಾಸಮಾನಾऽಸಮಾನಾ
ಸಾ ಮೇ ವಾಗ್ದೇವತೇಯಂ ನಿವಸತು ವದನೇ ಸರ್ವದಾ ಸುಪ್ರಸನ್ನಾ ॥ ೩

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಮ್ ॥ ೪

ವಾಲ್ಮೀಕೇರ್ಮುನಿಸಿಂಹಸ್ಯ ಕವಿತಾವನಚಾರಿಣಃ ।
ಶೃಣ್ವನ್ ರಾಮಕಥಾನಾದಂ ಕೋ ನ ಯಾತಿ ಪರಾಂ ಗತಿಮ್ ॥ ೫

ಯಃ ಪಿಬನ್ ಸತತಂ ರಾಮಚರಿತಾಮೃತಸಾಗರಮ್ ।
ಅತೃಪ್ತಸ್ತಂ ಮುನಿಂ ವಂದೇ ಪ್ರಾಚೇತಸಮಕಲ್ಮಷಮ್ ॥ ೬

ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಮ್ ।
ರಾಮಾಯಣಮಹಾಮಾಲಾರತ್ನಂ ವಂದೇऽನಿಲಾತ್ಮಜಮ್ ॥ ೭

ಅಂಜನಾನಂದನಂ ವೀರಂ ಜಾನಕೀಶೋಕನಾಶನಮ್ ।
ಕಪೀಶಮಕ್ಷಹಂತಾರಂ ವಂದೇ ಲಂಕಾಭಯಂಕರಮ್ ॥ ೮

ಉಲ್ಲಂಘ್ಯ ಸಿಂಧೋಃ ಸಲಿಲಂ ಸಲೀಲಂ
ಯಃ ಶೋಕವಹ್ನಿಂ ಜನಕಾತ್ಮಜಾಯಾಃ ।
ಆದಾಯ ತೇನೈವ ದದಾಹ ಲಂಕಾಂ
ನಮಾಮಿ ತಂ ಪ್ರಾಂಜಲಿರಾಂಜನೇಯಮ್ ॥ ೯

ಆಂಜನೇಯಮತಿಪಾಟಲಾನನಂ
ಕಾಂಚನಾದ್ರಿಕಮನೀಯವಿಗ್ರಹಮ್ ।
ಪಾರಿಜಾತತರುಮೂಲವಾಸಿನಂ
ಭಾವಯಾಮಿ ಪವಮಾನನಂದನಮ್ ॥ ೧೦

ಯತ್ರ ಯತ್ರ ರಘುನಾಥಕೀರ್ತನಂ
ತತ್ರ ತತ್ರ ಕೃತಮಸ್ತಕಾಂಜಲಿಮ್ ।
ಬಾಷ್ಪವಾರಿಪರಿಪೂರ್ಣಲೋಚನಂ
ಮಾರುತಿಂ ನಮತ ರಾಕ್ಷಸಾಂತಕಮ್ ॥ ೧೧

ಮನೋಜವಂ ಮಾರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಶಿರಸಾ ನಮಾಮಿ ॥ ೧೨

ಯಃ ಕರ್ಣಾಂಜಲಿಸಂಪುಟೈರಹರಹಃ ಸಮ್ಯಕ್ ಪಿಬತ್ಯಾದರಾ-
ದ್ವಾಲ್ಮೀಕೇರ್ವದನಾರವಿಂದಗಲಿತಂ ರಾಮಾಯಣಾಖ್ಯಂ ಮಧು ।
ಜನ್ಮವ್ಯಾಧಿಜರಾವಿಪತ್ತಿಮರಣೈರತ್ಯಂತಸೋಪದ್ರವಂ
ಸಂಸಾರಂ ಸ ವಿಹಾಯ ಗಚ್ಛತಿ ಪುಮಾನ್ ವಿಷ್ಣೋಃ ಪದಂ
ಶಾಶ್ವತಮ್ ॥ ೧೩

ತದುಪಗತಸಮಾಸಸಂಧಿಯೋಗಂ
ಸಮಮಧುರೋಪನತಾರ್ಥವಾಕ್ಯಬದ್ಧಮ್ ।
ರಘುವರಚರಿತಂ ಮುನಿಪ್ರಣೀತಂ
ದಶಶಿರಸಶ್ಚ ವಧಂ ನಿಶಾಮಯಧ್ವಮ್ ॥ ೧೪

ವಾಲ್ಮೀಕಿಗಿರಿಸಂಭೂತಾ ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ ರಾಮಾಯಣಮಹಾನದೀ ॥ ೧೫

ಶ್ಲೋಕಸಾರಸಮಾಕೀರ್ಣಂ ಸರ್ಗಕಲ್ಲೋಲಸಂಕುಲಮ್ ।
ಕಾಂಡಗ್ರಾಹಮಹಾಮೀನಂ ವಂದೇ ರಾಮಾಯಣಾರ್ಣವಮ್ ॥ ೧೬

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ಸಾಕ್ಷಾದ್ರಾಮಾಯಣಾತ್ಮನಾ ॥ ೧೭

ವೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಟಪೇ
ಮಧ್ಯೇಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಮ್ ।
ಅಗ್ರೇ ವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃ ಪರಂ
ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಮ್ ॥ ೧೮

ವಾಮೇ ಭೂಮಿಸುತಾ ಪುರಶ್ಚ ಹನುಮಾನ್ ಪಶ್ಚಾತ್ ಸುಮಿತ್ರಾಸುತಃ
ಶತ್ರುಘ್ನೋ ಭರತಶ್ಚ ವಾಮದಲಯೋರ್ವಾಯ್ವಾದಿಕೋಣೇಷು ಚ ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ ಶ್ಯಾಮಲಮ್ ॥ ೧೯

ನಮೋಽಸ್ತು ರಾಮಾಯ ಸಲಕ್ಷ್ಮಣಾಯ
ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ ।
ನಮೋಽಸ್ತು ರುದ್ರೇಂದ್ರಯಮಾನಿಲೇಭ್ಯೋ
ನಮೋಽಸ್ತು ಚಂದ್ರಾರ್ಕಮರುದ್ಗಣೇಭ್ಯಃ ॥ ೨೦

ವಿಷಯಾನುಕ್ರಮಣಿಕೆ

ಸಂಖ್ಯೆ	ವಿಷಯ	ಪುಟ
೧	ಬಿನ್ನಹ	iii
೨	ಪ್ರಸ್ತಾವನೆ	v
೩	ಗಾಯತ್ರೀರಾಮಾಯಣ	xxxii
೪	ಧ್ಯಾನಶ್ಲೋಕಗಳು	xxxvi
೫	ಸಂಕ್ಷೇಪರಾಮಾಯಣ	೧
೬	ಶ್ರೀರಾಮಾವತಾರ	೨೦
೭	ಸೀತಾಪರಿಣಯ	೩೧
೮	ಸೀತೋಪಲಂಭ (ಹನುಮಂತನು ಸೀತೆಯನ್ನು ಕಂಡದ್ದು)	೩೮
೯	ಅಂಗುಲೀಯಕಪ್ರದಾನ	೪೭
೧೦	ಚೂಡಾಮಣಿಪ್ರದಾನ	೫೬
೧೧	ಆದಿತ್ಯಹೃದಯ	೬೨
೧೨	ಬ್ರಹ್ಮಕೃತರಾಮಸ್ತವ	೭೦
೧೩	ಸೀತಾಪ್ರತಿಗ್ರಹ	೭೭
೧೪	ಶ್ರೀರಾಮಪಟ್ಟಾಭಿಷೇಕ	೮೨
೧೫	ಶ್ರೀರಾಮಚಂದ್ರದಂಡಕ	೧೦೭
೧೬	ಶ್ರೀರಾಮಚಂದ್ರ ಸುಪ್ರಭಾತ	೧೧೧

ಸಂಖ್ಯೆ	ವಿಷಯ	ಪುಟ
೧೭	ಸಂಕ್ಷೇಪರಾಮಾಯಣ (ಜೈಮಿನಿ ಭಾರತ)	೧೧೫
೧೮	ಶ್ರೀರಾಮನಾಮಸ್ಮರಣೆ	೧೧೮
೧೯	ಶ್ರೀರಾಮಮಂತ್ರಮಹಿಮೆ	೧೧೯
೨೦	ಶ್ರೀರಾಮನಾಮ ಲೇಖನಮಹಿಮೆ	೧೨೦
೨೧	ಶ್ರೀರಾಮಚಂದ್ರ ಸ್ತೋತ್ರ	೧೨೧
೨೨	ಸಪ್ತರ್ಷಿರಾಮಾಯಣ	೧೨೩
೨೩	ಮಾರುತಿಮಹಿಮೆ	೧೩೧
೨೪	ಲವಕುಶರು ರಾಮಾಯಣವನ್ನು ಹಾಡಿದುದು	೧೩೭
೨೫	ಶ್ರೀರಾಮಕಥಾ ನಾಮಾವಲಿ	೧೪೦
೨೬	ಶ್ರೀರಾಮ ಮಂಗಲಾಶಾಸನ	೧೪೩

|| ಶ್ರೀಃ ||

|| ಶ್ರೀಮದ್ವಾಲ್ಮೀಕಿರಾಮಾಯಣಮ್ ||

ಬಾಲಕಾಂಡಃ

ಪ್ರಥಮಃ ಸರ್ಗಃ

ಸಂಕ್ಷೇಪರಾಮಾಯಣಮ್

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥ ೧

ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ ೨

ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ ।
ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥ ೩

ಬಾಲಕಾಂಡ

ಸರ್ಗ ೧

ಸಂಕ್ಷೇಪರಾಮಾಯಣ

ನಾರದರು ವಾಲ್ಮೀಕಿಮುನಿಗಳಿಗೆ ಶ್ರೀರಾಮನ ಚರಿತ್ರೆಯನ್ನು
ಸಂಕ್ಷೇಪವಾಗಿ ತಿಳಿಸುವುದು

ತಪಸ್ಸು ಮತ್ತು ವೇದಾಧ್ಯಯನದಲ್ಲಿ ನಿರತರೂ ವಾಗ್ವಿಶಾರದರೂ ಆದ ನಾರದಮಹರ್ಷಿಗಳನ್ನು ಕುರಿತು ಒಂದು ದಿನ ವಾಲ್ಮೀಕಿಮುನಿಗಳು ಹೀಗೆ ಪ್ರಶ್ನೆ ಮಾಡಿದರು (೧) : "ಪೂಜ್ಯರಾದ ನಾರದಮಹರ್ಷಿಗಳೆ, ಈಗ ಈ ಲೋಕದಲ್ಲಿ ಯಾವ ಪುರುಷನು ಗುಣವಂತನೂ ವೀರನೂ ಧರ್ಮಜ್ಞನೂ ಕೃತಜ್ಞನೂ ಸತ್ಯವಾದಿಯೂ ದೃಢಸಂಕಲ್ಪನೂ ಆಗಿದ್ದಾನೆ? (೨). ಯಾವಾತನು ಸದಾಚಾರ ನಿಷ್ಠನೂ ಸಕಲ ಪ್ರಾಣಿಗಳಿಗೂ ಹಿತವನ್ನು ಬಯಸತಕ್ಕವನೂ ವಿದ್ವಾಂಸನೂ

ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋಽನಸೂಯಕಃ |
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ || ೪

ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ |
ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂವಿಧಂ ನರಮ್ || ೫

ಶ್ರುತ್ವಾ ಚೈತತ್ ತ್ರಿಲೋಕಜ್ಞೋ ವಾಲ್ಮೀಕೇರ್ನಾರದೋ ವಚಃ |
ಶ್ರೂಯತಾಮಿತಿ ಚಾಮಂತ್ರ್ಯ ಪ್ರಹೃಷ್ಟೋ ವಾಕ್ಯಮಬ್ರವೀತ್ || ೬

ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕೀರ್ತಿತಾ ಗುಣಾಃ |
ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತಃ ಶ್ರೂಯತಾಂ ನರಃ ||

ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ |
ನಿಯತಾತ್ಮಾ ಮಹಾವೀರ್ಯೋ ದ್ಯುತಿಮಾನ್ ಧೃತಿಮಾನ್ ವಶೀ || ೮

ಕಾರ್ಯದಕ್ಷನೂ ಜನರಿಗೆ ನೋಡುವುದಕ್ಕೆ ಆನಂದವನ್ನುಂಟುಮಾಡತಕ್ಕವನೂ ಆಗಿದ್ದಾನೆ? (೩). ಮತ್ತು ಯಾವ ಪುರುಷನು ಧೈರ್ಯಶಾಲಿಯೂ ಕ್ರೋಧವನ್ನು ಜಯಿಸಿದವನೂ ಕಾಂತಿಯುಕ್ತನೂ ಅಸೂಯೆಪಡದವನೂ ಆಗಿದ್ದಾನೆ? ಯುದ್ಧದಲ್ಲಿ ಮುನಿದುನಿಂತರೆ ಯಾರಿಗೆ ದೇವತೆಗಳು ಕೂಡ ಹೆದರುತ್ತಾರೆ? ಮಹರ್ಷಿಗಳೆ, ಈ ವಿಷಯವನ್ನು ಕೇಳಿ ತಿಳಿದುಕೊಳ್ಳಬೇಕೆಂದು ನನಗೆ ಬಹಳ ಆಸೆಯಾಗಿದೆ. ಇಂಥ ಯಾವ ಪುರುಷನಿದ್ದಾನೆಂದು ತಿಳಿಯಲು ನೀವು ಸಮರ್ಥರು" (೪–೫). ವಾಲ್ಮೀಕಿಮುನಿಗಳ ಈ ಮಾತನ್ನು ಕೇಳಿ ತ್ರಿಲೋಕಜ್ಞರಾದ ನಾರದರು ಆನಂದದಿಂದ ಉಬ್ಬಿದರು. ಅವರು "ವಾಲ್ಮೀಕಿಮುನಿಗಳೆ, ಕೇಳಿರಿ" ಎಂದು ನುಡಿದು, ಹೀಗೆ ಹೇಳತೊಡಗಿದರು: "ನೀವು ಹೇಳಿದ ಗುಣಗಳು ಬಹಳ. ಅವು ಒಬ್ಬನಲ್ಲಿ ದುರ್ಲಭ. ಆದರೂ ಮುನಿಗಳೆ, ಅಂಥ ಗುಣವಂತನಾದ ಪುರುಷನೊಬ್ಬನಿದ್ದಾನೆ. ಅವನ ವಿಷಯವನ್ನು ಹೇಳುತ್ತೇನೆ, ಕೇಳೋಣವಾಗಲಿ (೬–೭). ಇಕ್ಷ್ವಾಕುವಂಶದಲ್ಲಿ ಜನಿಸಿದ ಒಬ್ಬ ಪ್ರಸಿದ್ಧಪುರುಷನಿದ್ದಾನೆ. ಅವನ ಹೆಸರು ಶ್ರೀರಾಮ. ಅವನು ಮನೋಜಯವುಳ್ಳವನೂ ಮಹಾಪರಾಕ್ರಮಿಯೂ ಕಾಂತಿಯುಕ್ತನೂ ಧೀರನೂ ಜಿತೇಂದ್ರಿಯನೂ ಆಗಿದ್ದಾನೆ. ಅವನು ಬುದ್ಧಿವಂತ, ನೀತಿವಂತ, ವಾಗ್ಮಿ, ಐಶ್ವರ್ಯಶಾಲಿ, ಶತ್ರುವಿನಾಶಕ; ಅವನ ಹೆಗಲುಗಳೆರಡೂ

ಬುದ್ಧಿಮಾನ್ ನೀತಿಮಾನ್ ವಾಗ್ಮೀ ಶ್ರೀಮಾನ್ ಶತ್ರುನಿಬರ್ಹಣಃ ।
ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವೋ ಮಹಾಹನುಃ ॥ ೯

ಮಹೋರಸ್ಕೋ ಮಹೇಷ್ವಾಸೋ ಗೂಢಜತ್ರುರರಿಂದಮಃ ।
ಆಜಾನುಬಾಹುಃ ಸುಶಿರಾಃ ಸುಲಲಾಟಃ ಸುವಿಕ್ರಮಃ ॥ ೧೦

ಸಮಃ ಸಮವಿಭಕ್ತಾಂಗಃ ಸ್ನಿಗ್ಧವರ್ಣಃ ಪ್ರತಾಪವಾನ್ ।
ಪೀನವಕ್ಷಾ ವಿಶಾಲಾಕ್ಷೋ ಲಕ್ಷ್ಮೀವಾನ್ ಶುಭಲಕ್ಷಣಃ ॥ ೧೧

ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ ।
ಯಶಸ್ವೀ ಜ್ಞಾನಸಂಪನ್ನಃ ಶುಚಿರ್ವಶ್ಯಃ ಸಮಾಧಿಮಾನ್ ॥ ೧೨

ಪ್ರಜಾಪತಿಸಮಃ ಶ್ರೀಮಾನ್ ಧಾತಾ ರಿಪುನಿಷೂದನಃ ।
ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಪರಿರಕ್ಷಿತಾ ॥ ೧೩

ವಿಶಾಲವಾದವು. ಆ ಶ್ರೀರಾಮನಿಗೆ ಬಲಿಷ್ಠವಾದ ಬಾಹುಗಳು; ಶಂಖದಂತೆ ರೇಖಾತ್ರಯವಿರುವ ಕಂಠ; ಪುಷ್ಟವಾದ ಗಂಡಸ್ಥಲಗಳು (೮–೯). ಅವನ ಎದೆ ವಿಶಾಲವಾದದ್ದು; ಮಹತ್ತರವಾದ ಧನುಸ್ಸನ್ನು ಹಿಡಿಯತಕ್ಕವನು; ಆಜಾನು-ಬಾಹು. ಆತನ (ಭುಜಗಳು ತುಂಬಿಕೊಂಡಿರುವುದರಿಂದ) ಭುಜದ ಕೀಲುಗಳು ಕಾಣಿಸುವುದಿಲ್ಲ. ಲಕ್ಷಣಯುಕ್ತವಾದ ಶಿರಸ್ಸು; ಸುಂದರವಾದ ಹಣೆ; ಗಂಭೀರ ವಾದ ನಡಿಗೆ (೧೦). ಶ್ರೀರಾಮನ ಆಕೃತಿ ಬಹಳ ಎತ್ತರವೂ ಅಲ್ಲದೆ ಹ್ರಸ್ವವೂ ಅಲ್ಲದೆ ಸಮಕಟ್ಟಾಗಿದೆ. ಅವಯವಗಳೆಲ್ಲವೂ ದೇಹಕ್ಕೆ ತಕ್ಕ ಅಳತೆಯಲ್ಲಿ ಹೊಂದಿ ಕೊಂಡಿವೆ. ಮಿಂಚುವ ಮೈಬಣ್ಣ, ಅವನು ಮಹಾಪ್ರತಾಪಶಾಲಿ. ವಕ್ಷಸ್ಥಲವು ಅಗಲವಾಗಿದೆ. ಅವನು ಸರ್ವಾಂಗಸುಂದರ. ಒಳ್ಳೆಯ ಲಕ್ಷಣವಂತ (೧೧). ಶ್ರೀರಾಮನು ಧರ್ಮಜ್ಞನೂ ಸತ್ಯಸಂಧನೂ ಪ್ರಜೆಗಳ ಹಿತದಲ್ಲಿ ಸದಾ ನಿರತನೂ ಆಗಿದ್ದಾನೆ. ಅವನು ಕೀರ್ತಿಶಾಲಿಯೂ ವಿವೇಕಿಯೂ ಪರಿಶುದ್ಧನೂ ಗುರು-ಹಿರಿಯರಿಗೆ ವಿಧೇಯನೂ ಪರತತ್ತ್ವದಲ್ಲಿ ಸಮಾಹಿತನೂ ಆಗಿದ್ದಾನೆ (೧೨). ಆತನು ಬ್ರಹ್ಮನಂತೆ ತೇಜಸ್ವಿ; ಪ್ರಜಾಪೋಷಕ; ಶತ್ರುಧ್ವಂಸಕ; ಜಗತ್ತಿನಲ್ಲಿರುವ ಸಕಲ ಜೀವರಾಶಿಗಳನ್ನು ರಕ್ಷಿಸುವ ಸಾಮರ್ಥ್ಯ ಅವನಿಗಿದೆ. ಧರ್ಮವನ್ನು ಪಾಲಿಸ ತಕ್ಕವನು. ಅವನು ಸ್ವಧರ್ಮವನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡುತ್ತಾನೆ.

*

ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ ।
ವೇದವೇದಾಂಗತತ್ತ್ವಜ್ಞೋ ಧನುರ್ವೇದೇ ಚ ನಿಷ್ಠಿತಃ ॥ ೧೪

ಸರ್ವಶಾಸ್ತ್ರಾರ್ಥತತ್ತ್ವಜ್ಞಃ ಸ್ಮೃತಿಮಾನ್ ಪ್ರತಿಭಾನವಾನ್ ।
ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ ॥ ೧೫

ಸರ್ವದಾಭಿಗತಃ ಸದ್ಭಿಃ ಸಮುದ್ರ ಇವ ಸಿಂಧುಭಿಃ ।
ಆರ್ಯಃ ಸರ್ವಸಮಶ್ಚೈವ ಸದೈವ ಪ್ರಿಯದರ್ಶನಃ ॥ ೧೬

ಸ ಚ ಸರ್ವಗುಣೋಪೇತಃ ಕೌಸಲ್ಯಾನಂದವರ್ಧನಃ ।
ಸಮುದ್ರ ಇವ ಗಾಂಭೀರ್ಯೇ ಧೈರ್ಯೇಣ ಹಿಮವಾನಿವ ॥ ೧೭

ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ ಪ್ರಿಯದರ್ಶನಃ ।
ಕಾಲಾಗ್ನಿಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ ॥ ೧೮

ಶರಣಾಗತರಕ್ಷಕ. ಆತನು ವೇದವೇದಾಂಗಗಳ ರಹಸ್ಯವನ್ನು ಬಲ್ಲವನು. ಧನುರ್ವೇದದಲ್ಲಿ ಪಂಡಿತ (೧೩–೧೪). ಸಕಲ ಶಾಸ್ತ್ರಗಳ ತತ್ತ್ವವನ್ನು ತಿಳಿದಿದ್ದಾನೆ. ಶ್ರೀರಾಮನ ಸ್ಮರಣಶಕ್ತಿ ಅಸದೃಶವಾದದ್ದು. ಅವನು ಒಳ್ಳೆಯ ಪ್ರತಿಭಾಶಾಲಿ. ಸಕಲರಿಗೂ ಅವನನ್ನು ಕಂಡರೆ ಪ್ರೀತಿ. ಜನರಲ್ಲಿ ಮೃದುವಾಗಿ ನಡೆದುಕೊಳ್ಳುತ್ತಾನೆ. ಆದರೆ ಅತ್ಯಂತ ಗಂಭೀರ ಸ್ವಭಾವ. ಅವನು ಕಾರ್ಯದಕ್ಷ (೧೫). ನದಿಗಳು ಸಮುದ್ರದ ಬಳಿಗೆ ಹೋಗುವಂತೆ ಸಜ್ಜನರು ಯಾವಾಗಲೂ ರಾಮನ ಸನ್ನಿಧಿಗೆ ಹೋಗುತ್ತಿರುವರು. ಅವನು ಪೂಜ್ಯನೂ ಪಕ್ಷಪಾತವಿಲ್ಲದೆ ಎಲ್ಲರಲ್ಲಿಯೂ ವರ್ತಿಸತಕ್ಕವನೂ ಆಗಿದ್ದಾನೆ. ಯಾವಾಗ ಅವನನ್ನು ನೋಡಿದರೂ ಜನರಿಗೆ ಆನಂದವಾಗುವುದು (೧೬). ಸರ್ವಸದ್ಗುಣಗಳಿಂದ ಕೂಡಿದ ಶ್ರೀರಾಮನು ಕೌಸಲ್ಯಾದೇವಿಯ ನಲ್ಮೆಯ ಪುತ್ರ. ಗಾಂಭೀರ್ಯದಲ್ಲಿ ಸಮುದ್ರದಂತೆಯೂ ಧೈರ್ಯದಲ್ಲಿ ಹಿಮವಂತನಂತೆಯೂ ಇದ್ದಾನೆ. ವಿಷ್ಣುವಿನಂತೆ ಪರಾಕ್ರಮಶಾಲಿಯೂ ಚಂದ್ರನಂತೆ ಆನಂದಕಾರಿಯೂ ಆಗಿದ್ದಾನೆ. ಕೋಪ ಬಂದರೆ ಮಾತ್ರ ಅವನು ಕಾಲಾಗ್ನಿಯಂತೆಯೇ. ತಾಳ್ಮೆಯಲ್ಲಿ ಭೂದೇವಿಯಂತೆ (೧೭–೧೮).

ಧನದೇನ ಸಮಸ್ತ್ಯಾಗೇ ಸತ್ಯೇ ಧರ್ಮ ಇವಾಪರಃ ।
ತಮೇವಂ ಗುಣಸಂಪನ್ನಂ ರಾಮಂ ಸತ್ಯಪರಾಕ್ರಮಮ್ ॥ ೧೯

ಜ್ಯೇಷ್ಠಂ ಶ್ರೇಷ್ಠಗುಣೈರ್ಯುಕ್ತಂ ಪ್ರಿಯಂ ದಶರಥಃ ಸುತಮ್ ।
ಪ್ರಕೃತೀನಾಂ ಹಿತೈರ್ಯುಕ್ತಂ ಪ್ರಕೃತಿಪ್ರಿಯಕಾಮ್ಯಯಾ ॥ ೨೦

ಯೌವರಾಜ್ಯೇನ ಸಂಯೋಕ್ತುಮೈಚ್ಛತ್ ಪ್ರೀತ್ಯಾ ಮಹೀಪತಿಃ ।
ತಸ್ಯಾಭಿಷೇಕಸಂಭಾರಾನ್ ದೃಷ್ಟ್ವಾ ಭಾರ್ಯಾಥ ಕೈಕಯೀ ॥ ೨೧

ಪೂರ್ವಂ ದತ್ತವರಾ ದೇವೀ ವರಮೇನಮಯಾಚತ ।
ವಿವಾಸನಂ ಚ ರಾಮಸ್ಯ ಭರತಸ್ಯಾಭಿಷೇಚನಮ್ ॥ ೨೨

ಸ ಸತ್ಯವಚನಾದ್ರಾಜಾ ಧರ್ಮಪಾಶೇನ ಸಂಯತಃ ।
ವಿವಾಸಯಾಮಾಸ ಸುತಂ ರಾಮಂ ದಶರಥಃ ಪ್ರಿಯಮ್ ॥ ೨೩

ದಾನದಲ್ಲಿ ಕುಬೇರನ ಹಾಗೆ. ಸತ್ಯದಲ್ಲಿ ಸಾಕ್ಷಾತ್ ಧರ್ಮದೇವತೆಯ ಹಾಗೆ. ಇಂಥ ಗುಣಶಾಲಿಯೂ ಸತ್ಯನಿಷ್ಠನೂ ಆದ ರಾಮನು ದಶರಥ ಮಹಾರಾಜನ ಜ್ಯೇಷ್ಠಪುತ್ರ. ದಶರಥನಿಗೆ ರಾಮನ ಮೇಲೆ ಪ್ರೀತಿ. ರಾಮನು ಪ್ರಜೆಗಳಿಗೆ ಅತ್ಯಂತ ಪ್ರಿಯನಾದ್ದರಿಂದ ಅವರಿಗೆ ಆನಂದವಾಗುತ್ತದೆಯೆಂದು ದಶರಥನು ಶ್ರೀರಾಮನಿಗೆ ಯುವರಾಜಪದವಿಯನ್ನು* ಕೊಟ್ಟು ಪಟ್ಟಾಭಿಷೇಕ ಮಾಡಲು ಅಪೇಕ್ಷಿಸಿದನು (೧೯–೨೧). ಪಟ್ಟಾಭಿಷೇಕಕ್ಕೆ ಸಿದ್ಧತೆಗಳಾಗುತ್ತಿರುವುದು ದಶರಥನ ಕಿರಿಯ ಹೆಂಡತಿಯಾದ ಕೈಕೇಯಿಗೆ ತಿಳಿಯಿತು. ಅವಳಿಗೆ ದಶರಥರಾಜನು ಹಿಂದೆ ಎರಡು ವರಗಳನ್ನು ಕೊಟ್ಟಿದ್ದನು. (ಇದೇ ಸಮಯವೆಂದರಿತು) ಅವಳು ಹೀಗೆ ವರವನ್ನು ಬೇಡಿದಳು : ಏನೆಂದರೆ, 'ರಾಮನನ್ನು ರಾಜ್ಯದಿಂದ ಹೊರಕ್ಕೆ ಕಳಿಸಬೇಕು ಮತ್ತು ತನ್ನ ಮಗನಾದ ಭರತನಿಗೆ ಪಟ್ಟಾಭಿಷೇಕ ಮಾಡಬೇಕು' (೨೨). ರಾಜನು ಸತ್ಯಪರಾಯಣನಾದ್ದರಿಂದ ಧರ್ಮಪಾಶಕ್ಕೆ ಕಟ್ಟುಬಿದ್ದು ತನ್ನ ಪ್ರಿಯಪುತ್ರನಾದ ರಾಮನನ್ನು ರಾಜ್ಯದಿಂದ ಹೊರಕ್ಕೆ ಕಳಿಸಿದನು. ವೀರನಾದ ಶ್ರೀರಾಮನು ತಂದೆಯ ಮಾತನ್ನು ಮೀರುವುದಿಲ್ಲವೆಂಬ ತನ್ನ ಪ್ರತಿಜ್ಞೆಯನ್ನು ಪಾಲಿಸುವುದ

* ತಂದೆಯು ಜೀವಿಸಿರುವಾಗಲೇ ಮಗನು ರಾಜ್ಯದ ಸರ್ವಾಧಿಕಾರವನ್ನು ವಹಿಸಿಕೊಳ್ಳುವುದು ಯುವರಾಜಪದವಿ.

ಸ ಜಗಾಮ ವನಂ ವೀರಃ ಪ್ರತಿಜ್ಞಾಮನುಪಾಲಯನ್ ।
ಪಿತುರ್ವಚನನಿರ್ದೇಶಾತ್ ಕೈಕೇಯ್ಯಾಃ ಪ್ರಿಯಕಾರಣಾತ್ ॥ ೨೪

ತಂ ವ್ರಜಂತಂ ಪ್ರಿಯೋ ಭ್ರಾತಾ ಲಕ್ಷ್ಮಣೋಽನುಜಗಾಮ ಹ ।
ಸ್ನೇಹಾದ್ವಿನಯಸಂಪನ್ನಃ ಸುಮಿತ್ರಾನಂದವರ್ಧನಃ ॥ ೨೫

ಭ್ರಾತರಂ ದಯಿತೋ ಭ್ರಾತುಃ ಸೌಭ್ರಾತ್ರಮನುದರ್ಶಯನ್ ।
ರಾಮಸ್ಯ ದಯಿತಾ ಭಾರ್ಯಾ ನಿತ್ಯಂ ಪ್ರಾಣಸಮಾ ಹಿತಾ ॥ ೨೬

ಜನಕಸ್ಯ ಕುಲೇ ಜಾತಾ ದೇವಮಾಯೇವ ನಿರ್ಮಿತಾ ।
ಸರ್ವಲಕ್ಷಣಸಂಪನ್ನಾ ನಾರೀಣಾಮುತ್ತಮಾ ವಧೂಃ ॥ ೨೭

ಸೀತಾಪ್ಯನುಗತಾ ರಾಮಂ ಶಶಿನಂ ರೋಹಿಣೀ ಯಥಾ ।
ಪೌರೈರನುಗತೋ ದೂರಂ ಪಿತ್ರಾ ದಶರಥೇನ ಚ ॥ ೨೮

ಶೃಂಗವೇರಪುರೇ ಸೂತಂ ಗಂಗಾಕೂಲೇ ವ್ಯಸರ್ಜಯತ್ ।
ಗುಹಮಾಸಾದ್ಯ ಧರ್ಮಾತ್ಮಾ ನಿಷಾದಾಧಿಪತಿಂ ಪ್ರಿಯಮ್ ॥ ೨೯

ಕ್ಕಾಗಿಯೂ ತಾನು ಹೊರಟುಹೋದರೆ ಕೈಕೇಯಿಗೆ ಸಂತೋಷವಾಗುವುದೆಂಬ ನಂಬಿಕೆಯಿಂದಲೂ ತಂದೆಯ ಆಜ್ಞೆಯಂತೆ ಅರಣ್ಯಕ್ಕೆ ಹೋದನು (೨೩–೨೪). ಆಗ ಸುಮಿತ್ರಾದೇವಿಯ ನಲ್ಮೆಯ ಪುತ್ರನೂ ರಾಮನ ಪ್ರೀತಿಯ ತಮ್ಮನೂ ವಿನೀತನೂ ಆದ ಲಕ್ಷ್ಮಣನು ಅಣ್ಣನಮೇಲಿನ ಸ್ನೇಹದಿಂದ ಅವನನ್ನು ಹಿಂಬಾಲಿಸಿ ತಾನೂ ಅರಣ್ಯಕ್ಕೆ ಹೊರಟುಬಿಟ್ಟನು. ಅಣ್ಣತಮ್ಮಂದಿರಲ್ಲಿ ಇರಬೇಕಾದ ಸೌಭ್ರಾತ್ರಕ್ಕೆ ಲಕ್ಷ್ಮಣನು ನಿದರ್ಶನ (೨೫–೨೬). ಶ್ರೀರಾಮನಿಗೆ ಪ್ರಾಣದಂತೆ ಪ್ರಿಯಳಾದ ಪತ್ನಿ ಸೀತೆ. ಗಂಡನ ಹಿತವನ್ನೇ ಬಯಸತಕ್ಕವಳು. ಜನಕರಾಜನ ಪರಿಶುದ್ಧವಾದ ಕುಲದಲ್ಲಿ ಜನಿಸಿದವಳು. ದೇವಮಾಯೆಯೋ ಎಂಬಂತೆ ಪರಮಸುಂದರಿ. ಸರ್ವಲಕ್ಷಣ ಸಂಪನ್ನೆ. ಸ್ತ್ರೀಯರಲ್ಲಿ ಶ್ರೇಷ್ಠಳು. ಚಂದ್ರನನ್ನು ರೋಹಿಣಿಯು ಹಿಂಬಾಲಿಸುವಂತೆ ಅವಳೂ ಕೂಡ ರಾಮಚಂದ್ರನನ್ನು ಹಿಂಬಾಲಿಸಿ ಅರಣ್ಯಕ್ಕೆ ನಡೆದಳು (೨೬–೨೮). (ವಿಯೋಗವನ್ನು ಸಹಿಸಲಾರದೆ) ರಾಮನನ್ನು ಬಹುದೂರದವರೆಗೆ ಪೌರರೂ ದಶರಥನೂ ಅನುಸರಿಸಿ ಹೋದರು. ಧರ್ಮಾತ್ಮನಾದ ರಾಮನು ಶೃಂಗವೇರಪುರಕ್ಕೆ ಹೋಗಿ, ಸೂತನಾಗಿ ಬಂದಿದ್ದ ಸುಮಂತ್ರನನ್ನು ಗಂಗಾತೀರದಲ್ಲಿ ಹಿಂದಕ್ಕೆ ಕಳಿಸಿ

ಗುಹೇನ ಸಹಿತೋ ರಾಮೋ ಲಕ್ಷ್ಮಣೇನ ಚ ಸೀತಯಾ ।
ತೇ ವನೇನ ವನಂ ಗತ್ವಾ ನದೀಸ್ತೀರ್ತ್ವಾ ಬಹೂದಕಾಃ ॥ ೩೦

ಚಿತ್ರಕೂಟಮನುಪ್ರಾಪ್ಯ ಭರದ್ವಾಜಸ್ಯ ಶಾಸನಾತ್ ।
ರಮ್ಯಮಾವಸಥಂ ಕೃತ್ವಾ ರಮಮಾಣಾ ವನೇ ತ್ರಯಃ ॥ ೩೧

ದೇವಗಂಧರ್ವಸಂಕಾಶಾಸ್ತತ್ರ ತೇ ನ್ಯವಸನ್ ಸುಖಮ್ ।
ಚಿತ್ರಕೂಟಂ ಗತೇ ರಾಮೇ ಪುತ್ರಶೋಕಾತುರಸ್ತಥಾ ॥ ೩೨

ರಾಜಾ ದಶರಥಃ ಸ್ವರ್ಗಂ ಜಗಾಮ ವಿಲಪನ್ ಸುತಮ್ ।
ಮೃತೇ ತು ತಸ್ಮಿನ್ ಭರತೋ ವಸಿಷ್ಠಪ್ರಮುಖೈರ್ದ್ವಿಜೈಃ ॥ ೩೩

ನಿಯುಜ್ಯಮಾನೋ ರಾಜ್ಯಾಯ ನೈಚ್ಛದ್ರಾಜ್ಯಂ ಮಹಾಬಲಃ ।
ಸ ಜಗಾಮ ವನಂ ವೀರೋ ರಾಮಪಾದಪ್ರಸಾದಕಃ ॥ ೩೪

ಗತ್ವಾ ತು ಸ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ಅಯಾಚದ್ಭ್ರಾತರಂ ರಾಮಮಾರ್ಯಭಾವಪುರಸ್ಕೃತಃ ॥ ೩೫

ದನು. ಅಲ್ಲಿ ರಾಮಲಕ್ಷ್ಮಣಸೀತೆಯರಿಗೆ ರಾಮನ ಮಿತ್ರನೂ ನಿಷಾದರಾಜನೂ ಆದ ಗುಹನ ದರ್ಶನವಾಯಿತು (೨೯). ಶ್ರೀರಾಮ, ಸೀತೆ, ಲಕ್ಷ್ಮಣ—ಈ ಮೂವರೂ ಅನಂತರ ಅನೇಕ ಅಡವಿಗಳನ್ನೂ ನೀರಿನಿಂದ ತುಂಬಿ ಹರಿಯುತ್ತಿದ್ದ ನದಿಗಳನ್ನೂ ದಾಟುತ್ತ ಭರದ್ವಾಜಮುನಿಗಳ ಸೂಚನೆಯಂತೆ ಚಿತ್ರಕೂಟಕ್ಕೆ ಹೋದರು. ಅಲ್ಲಿ ಒಂದು ಪರ್ಣಶಾಲೆಯನ್ನು ರಚಿಸಿಕೊಂಡು ದೇವಗಂಧರ್ವರಂತೆ ಸುಖವಾಗಿದ್ದರು (೩೦–೩೨). ಇತ್ತ ದಶರಥಮಹಾರಾಜನು ಪುತ್ರಶೋಕದಿಂದ ಕೊರಗುತ್ತ ರಾಮನನ್ನೇ ಹಂಬಲಿಸುತ್ತ ಸ್ವರ್ಗಸ್ಥನಾದನು. ಆಗ ವಸಿಷ್ಠರೇ ಮೊದಲಾದ ಬ್ರಾಹ್ಮಣರು ಭರತನಿಗೆ ರಾಜನಾಗುವಂತೆ ಸೂಚಿಸಿದರು. ಆದರೆ ಮಹಾಬಲಶಾಲಿಯಾದ ಭರತನು ರಾಜನಾಗಲು ಒಪ್ಪಲೇ ಇಲ್ಲ. ಅವನು ಶ್ರೀರಾಮನ ಚರಣಾನುಗ್ರಹವನ್ನು ಸಂಪಾದಿಸಬೇಕೆಂದು ಅರಣ್ಯಕ್ಕೆ ಹೋಗಿ, ರಾಜ್ಯಕ್ಕೆ ಹಿಂದಿರುಗಬೇಕೆಂದು ಅಣ್ಣನನ್ನು ವಿನಯದಿಂದ ಬೇಡಿಕೊಂಡನು.

ತ್ವಮೇವ ರಾಜಾ ಧರ್ಮಜ್ಞ ಇತಿ ರಾಮಂ ವಚೋಽಬ್ರವೀತ್ ।
ರಾಮೋಽಪಿ ಪರಮೋದಾರಃ ಸುಮುಖಃ ಸುಮಹಾಯಶಾಃ ॥ ೩೬

ನ ಚೈಚ್ಛತ್ ಪಿತುರಾದೇಶಾದ್ರಾಜ್ಯಂ ರಾಮೋ ಮಹಾಬಲಃ ।
ಪಾದುಕೇ ಚಾಸ್ಯ ರಾಜ್ಯಾಯ ನ್ಯಾಸಂ ದತ್ತ್ವಾ ಪುನಃ ಪುನಃ ॥ ೩೭

ನಿವರ್ತಯಾಮಾಸ ತತೋ ಭರತಂ ಭರತಾಗ್ರಜಃ ।
ಸ ಕಾಮಮನವಾಪ್ಯೈವ ರಾಮಪಾದಾವುಪಸ್ಪೃಶನ್ ॥ ೩೮

ನಂದಿಗ್ರಾಮೇಽಕರೋದ್ರಾಜ್ಯಂ ರಾಮಾಗಮನಕಾಂಕ್ಷಯಾ ।
ಗತೇ ತು ಭರತೇ ಶ್ರೀಮಾನ್ ಸತ್ಯಸಂಧೋ ಜಿತೇಂದ್ರಿಯಃ ॥ ೩೯

ರಾಮಸ್ತು ಪುನರಾಲಕ್ಷ್ಯ ನಾಗರಸ್ಯ ಜನಸ್ಯ ಚ ।
ತತ್ರಾಗಮನಮೇಕಾಗ್ರೋ ದಂಡಕಾನ್ ಪ್ರವಿವೇಶ ಹ ॥ ೪೦

ಪ್ರವಿಶ್ಯ ತು ಮಹಾರಣ್ಯಂ ರಾಮೋ ರಾಜೀವಲೋಚನಃ ।
ವಿರಾಧಂ ರಾಕ್ಷಸಂ ಹತ್ವಾ ಶರಭಂಗಂ ದದರ್ಶ ಹ ॥ ೪೧

ರಾಮನಾದರೋ ಸತ್ಯನಿಷ್ಠ, ಮಹಾತ್ಮ (೩೩–೩೫). ಭರತನು "ಅಣ್ಣ, ನೀನು ಧರ್ಮಜ್ಞ. (ಜ್ಯೇಷ್ಠನಾದ) ನೀನೇ ರಾಜ್ಯಕ್ಕೆ ಅರ್ಹನು" ಎಂದನು. ಉದಾರ ಸ್ವಭಾವದವನೂ ಕೀರ್ತಿವಂತನೂ ಆದ ರಾಮನು ಭರತನ ಮಾತಿಗೆ ಪ್ರಸನ್ನನಾದರೂ ತಂದೆಯ ಮಾತಿಗೆ ವಿಧೇಯನಾಗಿ ರಾಜ್ಯವನ್ನು ಬಯಸಲಿಲ್ಲ. ಭರತನಿಗೆ ತನ್ನ ಪಾದುಕೆಗಳನ್ನು ಪ್ರತಿನಿಧಿಯಾಗಿ ಕೊಟ್ಟು ಬಹುವಿಧದಿಂದ ಸಮಾಧಾನ ಹೇಳಿ ಅವನನ್ನು ಹಿಂದಕ್ಕೆ ಕಳಿಸಿದನು (೩೬–೩೮). ಭರತನ ಇಷ್ಟವು ನೆರವೇರಲಿಲ್ಲ. ಅವನು ರಾಮನ ಪಾದಗಳಿಗೆ ವಂದಿಸಿ ಹಿಂದಿರುಗಿ ಬಂದು, ನಂದಿಗ್ರಾಮದಲ್ಲಿ ರಾಮನ ಆಗಮನವನ್ನು ಪ್ರತೀಕ್ಷೆ ಮಾಡುತ್ತ ರಾಜ್ಯಭಾರವನ್ನು ಮಾಡುತ್ತಿದ್ದನು (೩೯). ಭರತನು ಹೋದಮೇಲೆ ರಾಜ್ಯಲೋಭವಿಲ್ಲದೆ ಸತ್ಯಸಂಧನಾಗಿದ್ದ ಶ್ರೀರಾಮನು, ಮತ್ತೆ ಪುರಜನರು ಅಲ್ಲಿಗೆ ಬಂದಾರೆಂದು ಆಲೋಚಿಸಿ ಒಂದೇ ಮನಸ್ಸಿನಿಂದ ದಂಡಕಾರಣ್ಯವನ್ನು ಪ್ರವೇಶಿಸಿದನು (೪೦). ಆ ಮಹಾರಣ್ಯವನ್ನು ಪ್ರವೇಶಿಸಿ ಪದ್ಮನೇತ್ರನಾದ ಶ್ರೀರಾಮನು ವಿರಾಧನೆಂಬ ರಾಕ್ಷಸನನ್ನು ಸಂಹರಿಸಿ

ಸುತೀಕ್ಷ್ಣಂ ಚಾಪ್ಯಗಸ್ತ್ಯಂ ಚ ಅಗಸ್ತ್ಯಭ್ರಾತರಂ ತಥಾ ।
ಅಗಸ್ತ್ಯವಚನಾಚ್ಚೈವ ಜಗ್ರಾಹೈಂದ್ರಂ ಶರಾಸನಮ್ ॥ ೪೨

ಖಡ್ಗಂ ಚ ಪರಮಪ್ರೀತಸ್ತೂಣೀ ಚಾಕ್ಷಯಸಾಯಕೌ ।
ವಸತಸ್ತಸ್ಯ ರಾಮಸ್ಯ ವನೇ ವನಚರೈಃ ಸಹ ॥ ೪೩

ಋಷಯೋಽಭ್ಯಾಗಮನ್ ಸರ್ವೇ ವಧಾಯಾಸುರರಕ್ಷಸಾಮ್ ।
ಸ ತೇಷಾಂ ಪ್ರತಿಶುಶ್ರಾವ ರಾಕ್ಷಸಾನಾಂ ತಥಾ ವನೇ ॥ ೪೪

ಪ್ರತಿಜ್ಞಾತಶ್ಚ ರಾಮೇಣ ವಧಃ ಸಂಯತಿ ರಕ್ಷಸಾಮ್ ।
ಋಷೀಣಾಮಗ್ನಿಕಲ್ಪಾನಾಂ ದಂಡಕಾರಣ್ಯವಾಸಿನಾಮ್ ॥ ೪೫

ತೇನ ತತ್ರೈವ ವಸತಾ ಜನಸ್ಥಾನನಿವಾಸಿನೀ ।
ವಿರೂಪಿತಾ ಶೂರ್ಪಣಖಾ ರಾಕ್ಷಸೀ ಕಾಮರೂಪಿಣೀ ॥ ೪೬

ತತಃ ಶೂರ್ಪಣಖಾವಾಕ್ಯಾದುದ್ಯುಕ್ತಾನ್ ಸರ್ವರಾಕ್ಷಸಾನ್ ।
ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಮ್ ॥ ೪೭

ನಿಜಘಾನ ರಣೇ ರಾಮಸ್ತೇಷಾಂ ಚೈವ ಪದಾನುಗಾನ್ ।
ವನೇ ತಸ್ಮಿನ್ ನಿವಸತಾ ಜನಸ್ಥಾನನಿವಾಸಿನಾಮ್ ॥ ೪೮

ಶರಭಂಗ, ಸುತೀಕ್ಷ್ಣ, ಅಗಸ್ತ್ಯ, ಅಗಸ್ತ್ಯರ ಸೋದರ*—ಈ ಋಷಿಗಳನ್ನು ದರ್ಶನ ಮಾಡಿದನು. ಅಗಸ್ತ್ಯರ ಮಾತಿನಂತೆ ಶ್ರೀರಾಮನು ಅವರು ಕೊಟ್ಟ ಐಂದ್ರ ಧನುಸ್ಸನ್ನೂ ಖಡ್ಗವನ್ನೂ ಅಕ್ಷಯಾಸ್ತ್ರಗಳಿರುವ ಎರಡು ಬತ್ತಳಿಕೆಗಳನ್ನೂ ಸ್ವೀಕರಿಸಿದನು (೪೧–೪೩). ಹೀಗೆ ರಾಮನು ಅರಣ್ಯದಲ್ಲಿ ವಾಸವಾಗಿರಲು ಅವನಿಂದ ರಾಕ್ಷಸರನ್ನು ಸಂಹಾರಮಾಡಿಸುವುದಕ್ಕಾಗಿ ಅನೇಕ ಮಂದಿ ಋಷಿಗಳು ವನಚರರೊಡನೆ ಬಂದರು. ಅಗ್ನಿಯಂತೆ ಪರಮತೇಜಸ್ವಿಗಳಾದ ಆ ಋಷಿಗಳ ಸನ್ನಿಧಿಯಲ್ಲಿ ಶ್ರೀರಾಮನು ರಾಕ್ಷಸರನ್ನು ಯುದ್ಧದಲ್ಲಿ ಸಂಹರಿಸುತ್ತೇನೆಂದು ಮಾತುಕೊಟ್ಟನು (೪೪–೪೫). ಅವನು ದಂಡಕಾರಣ್ಯದಲ್ಲಿದ್ದಾಗ ಜನಸ್ಥಾನ ನಿವಾಸಿನಿಯೂ ಕಾಮರೂಪಿಣಿಯೂ ಆದ ಶೂರ್ಪಣಖೆಯನ್ನು (ಕಿವಿಮೂಗು

---

* ಇವರ ಹೆಸರು ಮಾರ್ಕಾಂಡೇಯ ಪುರಾಣದಲ್ಲಿ ಇಧ್ಮವಾಹನ ಎಂದೂ ಸನತ್ಕುಮಾರಸಂಹಿತೆಯಲ್ಲಿ ಸುದರ್ಶನ ಎಂದೂ ಇದೆ.

ರಕ್ಷಸಾಂ ನಿಹತಾನ್ಯಾಸನ್ ಸಹಸ್ರಾಣಿ ಚತುರ್ದಶ ।
ತತೋ ಜ್ಞಾತಿವಧಂ ಶ್ರುತ್ವಾ ರಾವಣಃ ಕ್ರೋಧಮೂರ್ಛಿತಃ ॥ ೪೯

ಸಹಾಯಂ ವರಯಾಮಾಸ ಮಾರೀಚಂ ನಾಮ ರಾಕ್ಷಸಮ್ ।
ವಾರ್ಯಮಾಣಃ ಸುಬಹುಶೋ ಮಾರೀಚೇನ ಸ ರಾವಣಃ ॥ ೫೦

ನ ವಿರೋಧೋ ಬಲವತಾ ಕ್ಷಮೋ ರಾವಣ ತೇನ ತೇ ।
ಅನಾದೃತ್ಯ ತು ತದ್ವಾಕ್ಯಂ ರಾವಣಃ ಕಾಲಚೋದಿತಃ ॥ ೫೧

ಜಗಾಮ ಸಹಮಾರೀಚಸ್ತಸ್ಯಾಶ್ರಮಪದಂ ತದಾ ।
ತೇನ ಮಾಯಾವಿನಾ ದೂರಮಪವಾಹ್ಯ ನೃಪಾತ್ಮಜೌ ॥ ೫೨

ಜಹಾರ ಭಾರ್ಯಾಂ ರಾಮಸ್ಯ ಗೃಧ್ರಂ ಹತ್ವಾ ಜಟಾಯುಷಮ್ ।
ಗೃಧ್ರಂ ಚ ನಿಹತಂ ದೃಷ್ಟ್ವಾ ಹೃತಾಂ ಶ್ರುತ್ವಾ ಚ ಮೈಥಿಲೀಮ್ ॥

ರಾಘವಃ ಶೋಕಸಂತಪ್ತೋ ವಿಲಲಾಪಾಕುಲೇಂದ್ರಿಯಃ ।
ತತಸ್ತೇನೈವ ಶೋಕೇನ ಗೃಧ್ರಂ ದಗ್ಧ್ವಾ ಜಟಾಯುಷಮ್ ॥ ೫೪

ಗಳನ್ನು ಕತ್ತರಿಸಿ) ವಿರೂಪಗೊಳಿಸಿದನು. ಆಗ ಅವಳು ಎತ್ತಿಗಟ್ಟಿ ಕಳಿಸಿದ ಖರ, ದೂಷಣ, ತ್ರಿಶಿರ—ಎಂಬ ರಾಕ್ಷಸ ನಾಯಕರನ್ನೂ ಅವರೊಡನೆ ಬಂದ ಹದಿನಾಲ್ಕು ಸಾವಿರ ರಾಕ್ಷಸರ ಸೈನ್ಯವನ್ನೂ ರಾಮನು ಯುದ್ಧದಲ್ಲಿ ಸಂಹಾರ ಮಾಡಿದನು (೪೬–೪೯). ತನ್ನ ಬಂಧುಗಳ ವಧೆಯನ್ನು ಕೇಳಿ ರಾವಣನು ಕೋಪದಿಂದ ಸಿಡಿದೆದ್ದನು. ಅವನು ರಾಮನನ್ನು ವಂಚಿಸುವುದಕ್ಕಾಗಿ ಮಾರೀಚನ ಸಹಾಯವನ್ನು ಬೇಡಲು, ಮಾರೀಚನು "ರಾವಣ, ಬಲಿಷ್ಠನಾದ ರಾಮನೊಡನೆ ನಿನಗೆ ವಿರೋಧವು ಸಲ್ಲದು" ಎಂದು ಅನೇಕ ಬಗೆಯಲ್ಲಿ ಬುದ್ಧಿವಾದವನ್ನು ಹೇಳಿದನು. ಆದರೂ ರಾವಣನು ಕಾಲಗತಿಗೆ ಸಿಕ್ಕಿ ಮಾರೀಚನ ಹಿತೋಪದೇಶವನ್ನು ಧಿಕ್ಕರಿಸಿದನು (೫೦–೫೧) ಕೊನೆಗೆ ರಾವಣನು ಮಾರೀಚನೊಡನೆ ರಾಮನ ಆಶ್ರಮವಿದ್ದ ಸ್ಥಳಕ್ಕೆ ಹೋದನು. ಅಲ್ಲಿ ಮಾಯಾವಿಯಾದ ಮಾರೀಚನ ಮೂಲಕ ರಾಮಲಕ್ಷ್ಮಣರು ಆಶ್ರಮದಿಂದ ದೂರ ಹೋಗುವಂತೆ ಮಾಡಿಸಿ, ರಾವಣನು ರಾಮಪತ್ನಿಯಾದ ಸೀತೆಯನ್ನು ಅಪಹರಿಸಿದನು. ದಾರಿಯಲ್ಲಿ (ಅಡ್ಡಬಂದ) ಜಟಾಯುವೆಂಬ ಗೃಧ್ರರಾಜನನ್ನು ಸಾಯುವಂತೆ ಗಾಯಗೊಳಿಸಿದನು (೫೨–೫೩). ಇತ್ತ ಶ್ರೀರಾಮನು ಸೀತಾವಿರಹದಿಂದ ದುಃಖಿತ

ಮಾರ್ಗಮಾಣೋ ವನೇ ಸೀತಾಂ ರಾಕ್ಷಸಂ ಸಂದದರ್ಶ ಹ ।
ಕಬಂಧಂ ನಾಮ ರೂಪೇಣ ವಿಕೃತಂ ಘೋರದರ್ಶನಮ್ ॥ ೫೫

ತಂ ನಿಹತ್ಯ ಮಹಾಬಾಹುರ್ದದಾಹ ಸ್ವರ್ಗತಶ್ಚ ಸಃ ।
ಸ ಚಾಪಿ ಕಥಯಾಮಾಸ ಶಬರೀಂ ಧರ್ಮಚಾರಿಣೀಮ್ ॥ ೫೬

ಶ್ರಮಣೀಂ ಧರ್ಮನಿಪುಣಾಮಭಿಗಚ್ಛೇತಿ ರಾಘವಮ್ ।
ಸೋಽಭ್ಯಗಚ್ಛನ್ಮಹಾತೇಜಾಃ ಶಬರೀಂ ಶತ್ರುಸೂದನಃ ॥ ೫೭

ಶಬರ್ಯಾ ಪೂಜಿತಃ ಸಮ್ಯಗ್ರಾಮೋ ದಶರಥಾತ್ಮಜಃ ।
ಪಂಪಾತೀರೇ ಹನುಮತಾ ಸಂಗತೋ ವಾನರೇಣ ಹ ॥ ೫೮

ಹನುಮದ್ವಚನಾಚ್ಚೈವ ಸುಗ್ರೀವೇಣ ಸಮಾಗತಃ ।
ಸುಗ್ರೀವಾಯ ಚ ತತ್ಸರ್ವಂ ಶಂಸದ್ರಾಮೋ ಮಹಾಬಲಃ ॥ ೫೯

ನಾಗಿರಲು, ಮೈಥಿಲಿಯು ಅಪಹೃತಳಾದಳೆಂಬ ಸುದ್ದಿಯನ್ನು ಮರಣೋನ್ಮುಖನಾದ ಜಟಾಯುವಿನಿಂದ ಕೇಳಿದನು. ಆಗ ಶ್ರೀರಾಮನು ಶೋಕಪರವಶನಾಗಿ ಗಳಗಳನೆ ಅಳತೊಡಗಿದನು. ಅನಂತರ ಮೃತನಾದ ಜಟಾಯುವನ್ನು ಶೋಕಿಸುತ್ತಲೇ ದಹಿಸಿ, ಸೀತೆಯನ್ನು ಅರಸುತ್ತ ಹೋಗುತ್ತಿರಲು, ದಾರಿಯಲ್ಲಿ ಒಬ್ಬ ರಾಕ್ಷಸನು ಕಾಣಿಸಿಕೊಂಡನು. ಅವನ ಹೆಸರು ಕಬಂಧ; ನೋಡುವುದಕ್ಕೆ ವಿಕಾರಿ; ಭಯಂಕರ (೫೪-೫೫). ರಾಮನು ಆ ಕಬಂಧನನ್ನು ವಧಿಸಿ ಅಗ್ನಿಯಲ್ಲಿ ದಹಿಸಲು ಅವನು (ಗಂಧರ್ವನಾಗಿ) ಸ್ವರ್ಗಲೋಕಕ್ಕೆ ಹೋದನು. ಹೋಗುವಾಗ ಆತನು ರಾಮನನ್ನು ಉದ್ದೇಶಿಸಿ "ರಾಮ, (ಸ್ವಲ್ಪ ದೂರದಲ್ಲಿ) ಧರ್ಮನಿರತಳಾದ ಶಬರಿ ಎಂಬ ತಾಪಸಿ ಇದ್ದಾಳೆ. ಅವಳ ಬಳಿಗೆ ಹೋಗು" ಎಂದನು. ಆಮೇಲೆ ಶತ್ರುಸಂಹಾರಕನಾದ ರಾಮನು ಶಬರಿಯ ಬಳಿಗೆ ಹೋದನು (೫೬-೫೭). ಅಲ್ಲಿ ಶಬರಿಯು ಶ್ರೀರಾಮನನ್ನು ಭಕ್ತಿಯಿಂದ ಪೂಜಿಸಿ ಸತ್ಕರಿಸಿದಳು. ಅನಂತರ (ಲಕ್ಷ್ಮಣಸಹಿತನಾಗಿ ಸೀತಾನ್ವೇಷಣೆ ಮಾಡುತ್ತಾ ಮುಂದೆ ಹೋಗುತ್ತಿರಲು) ಪಂಪಾಸರೋವರದ ತೀರದಲ್ಲಿ ರಾಮನಿಗೆ ಹನುಮಂತನೆಂಬ ವಾನರನ ದರ್ಶನವಾಯಿತು (೫೮). ಮಹಾಬಲಶಾಲಿಯಾದ ರಾಮನು ಹನುಮಂತನ ಮಾತಿನಂತೆ ಸುಗ್ರೀವನನ್ನು ಕಂಡು, ಅವನಿಗೆ ತನ್ನ ವೃತ್ತಾಂತವನ್ನು

ಆದಿತಸ್ತದ್ಯಥಾವೃತ್ತಂ ಸೀತಾಯಾಶ್ಚ ವಿಶೇಷತಃ ।
ಸುಗ್ರೀವಶ್ಚಾಪಿ ತತ್ಸರ್ವಂ ಶ್ರುತ್ವಾ ರಾಮಸ್ಯ ವಾನರಃ ॥ ೬೦

ಚಕಾರ ಸಖ್ಯಂ ರಾಮೇಣ ಪ್ರೀತಶ್ಚೈವಾಗ್ನಿಸಾಕ್ಷಿಕಮ್ ।
ತತೋ ವಾನರರಾಜೇನ ವೈರಾನುಕಥನಂ ಪ್ರತಿ ॥ ೬೧

ರಾಮಾಯಾವೇದಿತಂ ಸರ್ವಂ ಪ್ರಣಯಾದ್ದುಃಖಿತೇನ ಚ ।
ಪ್ರತಿಜ್ಞಾತಂ ಚ ರಾಮೇಣ ತದಾ ವಾಲಿವಧಂ ಪ್ರತಿ ॥ ೬೨

ವಾಲಿನಶ್ಚ ಬಲಂ ತತ್ರ ಕಥಯಾಮಾಸ ವಾನರಃ ।
ಸುಗ್ರೀವಃ ಶಂಕಿತಶ್ಚಾಸೀನ್ನಿತ್ಯಂ ವೀರ್ಯೇಣ ರಾಘವೇ ॥ ೬೩

ರಾಘವಪ್ರತ್ಯಯಾರ್ಥಂ ತು ದುಂದುಭೇಃ ಕಾಯಮುತ್ತಮಮ್ ।
ದರ್ಶಯಾಮಾಸ ಸುಗ್ರೀವೋ ಮಹಾಪರ್ವತಸಂನಿಭಮ್ ॥ ೬೪

ಉತ್ಸ್ಮಯಿತ್ವಾ ಮಹಾಬಾಹುಃ ಪ್ರೇಕ್ಷ್ಯ ಚಾಸ್ಥಿ ಮಹಾಬಲಃ ।
ಪಾದಾಂಗುಷ್ಠೇನ ಚಿಕ್ಷೇಪ ಸಂಪೂರ್ಣಂ ದಶಯೋಜನಮ್ ॥ ೬೫

ಮೊದಲಿನಿಂದ ಹೇಳಿ ಸೀತಾಪಹರಣವನ್ನು ವಿವರಿಸಿ ತಿಳಿಸಿದನು. ಸುಗ್ರೀವನು ರಾಮನ ವೃತ್ತಾಂತವನ್ನು ಕೇಳಿದಮೇಲೆ ಅವನೊಡನೆ ಸಂತೋಷದಿಂದ ಅಗ್ನಿಸಾಕ್ಷಿಕವಾಗಿ ಸಖ್ಯವನ್ನು ಮಾಡಿಕೊಂಡನು (೫೯–೬೧). ಅನಂತರ ಕಪಿನಾಯಕನಾದ ಸುಗ್ರೀವನು ಶೋಕಸಂತಪ್ತನಾಗಿ ತನಗೂ ವಾಲಿಗೂ ವೈರವು ಹೇಗೆ ಉದ್ಭವಿಸಿತೆಂಬುದನ್ನು ರಾಮನಿಗೆ ಸ್ನೇಹದಿಂದ ನಿವೇದಿಸಿಕೊಂಡನು. ಆಗ ರಾಮನು "ನಾನು ವಾಲಿಯನ್ನು ವಧಿಸುತ್ತೇನೆ" ಎಂದು ಪ್ರತಿಜ್ಞೆಮಾಡಿದನು. ಸುಗ್ರೀವನು ವಾಲಿಯ ಪರಾಕ್ರಮವನ್ನು ರಾಮನಿಗೆ ವರ್ಣಿಸಿ ಹೇಳತೊಡಗಿದನು. ಏಕೆಂದರೆ, ರಾಮನ ಸಾಮರ್ಥ್ಯದ ವಿಷಯದಲ್ಲಿ ಸುಗ್ರೀವನಿಗೆ ಬಲವಾದ ಸಂಶಯವಿತ್ತು (೬೨–೬೩). ವಾಲಿಯ ಪರಾಕ್ರಮಕ್ಕೆ ನಿದರ್ಶನವಾಗಿ ಅವನು ಮಹಾಪರ್ವತಾಕಾರವಾಗಿದ್ದ ದುಂದುಭಿಯ ಕಳೇಬರವನ್ನು ತೋರಿಸಿದನು. ಆಗ ಮಹಾಬಲಶಾಲಿಯೂ ಆಜಾನುಬಾಹುವೂ ಆದ ಶ್ರೀರಾಮನು ದುಂದುಭಿಯ ಅಸ್ಥಿಪಂಜರವನ್ನು ನೋಡಿ ಅಸಡ್ಡೆಯಿಂದ ನಕ್ಕು, ಕಾಲಿನ ಹೆಬ್ಬೆರಳಿನಿಂದ ಅದನ್ನು ಹತ್ತುಯೋಜನ ದೂರ ಹೋಗಿ ಬೀಳುವಂತೆ ಮೀಟಿದನು (೬೪–೬೫).

ಬಿಭೇದ ಚ ಪುನಃ ಸಾಲಾನ್ ಸಪ್ತೈಕೇನ ಮಹೇಷುಣಾ ।
ಗಿರಿಂ ರಸಾತಲಂ ಚೈವ ಜನಯನ್ ಪ್ರತ್ಯಯಂ ತದಾ ॥ ೬೬

ತತಃ ಪ್ರೀತಮನಾಸ್ತೇನ ವಿಶ್ವಸ್ತಃ ಸ ಮಹಾಕಪಿಃ ।
ಕಿಷ್ಕಿಂಧಾಂ ರಾಮಸಹಿತೋ ಜಗಾಮ ಚ ಗುಹಾಂ ತದಾ ॥ ೬೭

ತತೋಽಗರ್ಜದ್ಧರಿವರಃ ಸುಗ್ರೀವೋ ಹೇಮಪಿಂಗಲಃ ।
ತೇನ ನಾದೇನ ಮಹತಾ ನಿರ್ಜಗಾಮ ಹರೀಶ್ವರಃ ॥ ೬೮

ಅನುಮಾನ್ಯ ತದಾ ತಾರಾಂ ಸುಗ್ರೀವೇಣ ಸಮಾಗತಃ ।
ನಿಜಘಾನ ಚ ತತ್ರೈನಂ ಶರೇಣೈಕೇನ ರಾಘವಃ ॥ ೬೯

ತತಃ ಸುಗ್ರೀವವಚನಾದ್ಧತ್ವಾ ವಾಲಿನಮಾಹವೇ ।
ಸುಗ್ರೀವಮೇವ ತದ್ರಾಜ್ಯೇ ರಾಘವಃ ಪ್ರತ್ಯಪಾದಯತ್ ॥ ೭೦

ಸ ಚ ಸರ್ವಾನ್ ಸಮಾನೀಯ ವಾನರಾನ್ ವಾನರರ್ಷಭಃ ।
ದಿಶಃ ಪ್ರಸ್ಥಾಪಯಾಮಾಸ ದಿದೃಕ್ಷುರ್ಜನಕಾತ್ಮಜಾಮ್ ॥ ೭೧

ಮತ್ತೆ ಒಂದು ಮಹಾಸ್ತ್ರವನ್ನು ಪ್ರಯೋಗಿಸಲು ಅದು ಏಳು ತಾಲವೃಕ್ಷಗಳನ್ನು ಕತ್ತರಿಸಿ ಸಮೀಪದಲ್ಲಿದ್ದ ಬೆಟ್ಟವನ್ನು ಭೇದಿಸಿ ರಸಾತಲಕ್ಕೆ* ನುಗ್ಗಿತು (೬೬). ಆಗ ಸುಗ್ರೀವನು ರಾಮನ ಸಾಮರ್ಥ್ಯದ ವಿಷಯದಲ್ಲಿ ಪೂರ್ಣ ವಿಶ್ವಾಸವನ್ನು ತಳೆದು ಸಂತುಷ್ಟನಾಗಿ ಅವನೊಡನೆ ಕಿಷ್ಕಿಂಧೆಯೆಂಬ ಗುಹಾಸದೃಶವಾದ ಪಟ್ಟಣಕ್ಕೆ ಹೋದನು. ಅಲ್ಲಿ ಹೊಂಬಣ್ಣದಿಂದ ವಿರಾಜಿಸುತ್ತಿದ್ದ ಆ ಕಪೀಶ್ವರನು ಗರ್ಜಿಸಲು, ಆ ಮಹಾಗರ್ಜನೆಯನ್ನು ಕೇಳಿ ವಾಲಿಯು ಕ್ರುದ್ಧನಾದನು. ಅವನು ತಾರೆಗೆ ಸಮಾಧಾನವನ್ನು ಹೇಳಿ ಹೊರಗೆ ಬಂದು ಸುಗ್ರೀವನೊಡನೆ ಯುದ್ಧಕ್ಕೆ ನಿಂತನು. ಆಗ ರಾಮನು ಒಂದು ಬಾಣವನ್ನು ಪ್ರಯೋಗಿಸಿ ವಾಲಿಯನ್ನು ಸಂಹರಿಸಿದನು (೬೭–೬೯). ಹೀಗೆ ಸುಗ್ರೀವನ ಮಾತಿನಂತೆ ಯುದ್ಧದಲ್ಲಿ ವಾಲಿಯನ್ನು ಶ್ರೀರಾಮನು ನಿಗ್ರಹಿಸಿ ಕಿಷ್ಕಿಂಧಾರಾಜ್ಯದಲ್ಲಿ ಸುಗ್ರೀವನನ್ನೇ ಸ್ಥಾಪಿಸಿದನು.

---

* ಭೂಲೋಕದ ಕೆಳಗೆ ಅತಲ, ವಿತಲ, ಸುತಲ, ತಲಾತಲ, ಮಹಾತಲ, ರಸಾತಲ, ಪಾತಾಲ—ಎಂದು ಏಳು ಲೋಕಗಳು. ರಸಾತಲವು ಆರನೆಯ ಲೋಕ

ತತೋ ಗೃಧ್ರಸ್ಯ ವಚನಾತ್ ಸಂಪಾತೇರ್ಹನುಮಾನ್ ಬಲೀ ।
ಶತಯೋಜನವಿಸ್ತೀರ್ಣಂ ಪುಪ್ಲುವೇ ಲವಣಾರ್ಣವಮ್ ॥ ೭೨

ತತ್ರ ಲಂಕಾಂ ಸಮಾಸಾದ್ಯ ಪುರೀಂ ರಾವಣಪಾಲಿತಾಮ್ ।
ದದರ್ಶ ಸೀತಾಂ ಧ್ಯಾಯಂತೀಮಶೋಕವನಿಕಾಂ ಗತಾಮ್ ॥ ೭೩

ನಿವೇದಯಿತ್ವಾಭಿಜ್ಞಾನಂ ಪ್ರವೃತ್ತಿಂ ಚ ನಿವೇದ್ಯ ಚ ।
ಸಮಾಶ್ವಾಸ್ಯ ಚ ವೈದೇಹೀಂ ಮರ್ದಯಾಮಾಸ ತೋರಣಮ್ ॥ ೭೪

ಪಂಚ ಸೇನಾಗ್ರಗಾನ್ ಹತ್ವಾ ಸಪ್ತ ಮಂತ್ರಿಸುತಾನಪಿ ।
ಶೂರಮಕ್ಷಂ ಚ ನಿಷ್ಪಿಷ್ಯ ಗ್ರಹಣಂ ಸಮುಪಾಗಮತ್ ॥ ೭೫

ಅಸ್ತ್ರೇಣೋನ್ಮುಕ್ತಮಾತ್ಮಾನಂ ಜ್ಞಾತ್ವಾ ಪೈತಾಮಹಾದ್ವರಾತ್ ।
ಮರ್ಷಯನ್ ರಾಕ್ಷಸಾನ್ ವೀರೋ ಯಂತ್ರಿಣಸ್ತಾನ್ ಯದೃಚ್ಛಯಾ ॥

ಅನಂತರ ಸುಗ್ರೀವನು ಸಕಲ ವಾನರಬಲವನ್ನು ಬರಮಾಡಿಕೊಂಡು ಜನಕಸುತೆಯನ್ನು ಹುಡುಕುವುದಕ್ಕಾಗಿ ಅವರೆಲ್ಲರನ್ನೂ ದಿಕ್ಕುದಿಕ್ಕಿಗೆ ಕಳಿಸಿದನು (೭೦–೭೧). ಕಡೆಗೆ ಬಲಶಾಲಿಯಾದ ಹನುಮಂತನು ಸಂಪಾತಿಯೆಂಬ ಗೃಧ್ರದ ಮಾತಿನಂತೆ (ಸೀತೆಯು ಲಂಕೆಯಲ್ಲಿರುವಳೆಂದು ತಿಳಿದು) ಶತಯೋಜನ ವಿಸ್ತಾರವಾದ ಮಹಾಸಾಗರವನ್ನು ಲಂಘಿಸಿದನು. ಅವನು ರಾವಣನ ರಕ್ಷಣೆಗೆ ಒಳಪಟ್ಟ ಲಂಕಾನಗರವನ್ನು ಸೇರಿ ಅಶೋಕವನದಲ್ಲಿ ಶ್ರೀರಾಮನನ್ನೇ ಧ್ಯಾನಿಸುತ್ತಿದ್ದ ಸೀತಾದೇವಿಯನ್ನು ಕಂಡನು (೭೨–೭೩). ಹನುಮಂತನು ಅವಳಿಗೆ ಶ್ರೀರಾಮನ ವೃತ್ತಾಂತವನ್ನು ನಿವೇದಿಸಿ, ರಾಮನ ಅಂಗುಲೀಯಕವನ್ನು ಗುರುತಾಗಿಕೊಟ್ಟು ಸಮಾಶ್ವಾಸನ ಮಾಡಿದನು. ಅನಂತರ ಹನುಮಂತನು ಅಶೋಕವನದ ಬಹಿರ್ದ್ವಾರವನ್ನು ಮುರಿದು ಹಾಕಿ, ಯುದ್ಧಕ್ಕೆ ಬಂದ ಐವರು ಸೇನಾಪತಿಗಳನ್ನೂ ಏಳ್ವರು ಮಂತ್ರಿಪುತ್ರರನ್ನೂ ವಧಿಸಿ, ಶೂರನಾದ ಅಕ್ಷಕುಮಾರನನ್ನು ಬಡಿದು ಕೊಂದು ಕೊನೆಯಲ್ಲಿ(ಇಂದ್ರಜಿತ್ತಿನ ಬ್ರಹ್ಮಾಸ್ತ್ರಕ್ಕೆ) ಸೆರೆಸಿಕ್ಕಿದನು (೭೪–೭೫). ಬ್ರಹ್ಮನ ವರಬಲದಿಂದ ತಾನು ಬ್ರಹ್ಮಾಸ್ತ್ರಕ್ಕೆ ಬದ್ಧನಾಗಿಲ್ಲವೆಂದು ತಿಳಿದರೂ ಆ ವೀರನು ತನ್ನನ್ನು ಎಳೆದೊಯ್ಯುತ್ತಿದ್ದ ರಾಕ್ಷಸರನ್ನು ಬೇಕೆಂತಲೇ ಕೊಲ್ಲದೆ ತಾಳ್ಮೆಯಿಂದಿದ್ದನು. ಕಡೆಯಲ್ಲಿ ವೈಥಿಲಿಯೋರ್ವಳನ್ನು ಬಿಟ್ಟು ಇಡೀ ಲಂಕಾನಗರವನ್ನೇ ಸುಟ್ಟುಹಾಕಿ, ರಾಮನಿಗೆ

ತತೋ ದಗ್ಧ್ವಾ ಪುರೀಂ ಲಂಕಾಮೃತೇ ಸೀತಾಂ ಚ ಮೈಥಿಲೀಮ್ ।
ರಾಮಾಯ ಪ್ರಿಯಮಾಖ್ಯಾತುಂ ಪುನರಾಯಾನ್ಮಹಾಕಪಿಃ ॥ ೭೭

ಸೋಽಭಿಗಮ್ಯ ಮಹಾತ್ಮಾನಂ ಕೃತ್ವಾ ರಾಮಂ ಪ್ರದಕ್ಷಿಣಮ್ ।
ನ್ಯವೇದಯದಮೇಯಾತ್ಮಾ ದೃಷ್ಟ್ವಾ ಸೀತೇತಿ ತತ್ತ್ವತಃ ॥ ೭೮

ತತಃ ಸುಗ್ರೀವಸಹಿತೋ ಗತ್ವಾ ತೀರಂ ಮಹೋದಧೇಃ ।
ಸಮುದ್ರಂ ಕ್ಷೋಭಯಾಮಾಸ ಶರೈರಾದಿತ್ಯಸಂನಿಭೈಃ ॥ ೭೯

ದರ್ಶಯಾಮಾಸ ಚಾತ್ಮಾನಂ ಸಮುದ್ರಃ ಸರಿತಾಂ ಪತಿಃ ।
ಸಮುದ್ರವಚನಾಚ್ಚೈವ ನಲಂ ಸೇತುಮಕಾರಯತ್ ॥ ೮೦

ತೇನ ಗತ್ವಾ ಪುರೀಂ ಲಂಕಾಂ ಹತ್ವಾ ರಾವಣಮಾಹವೇ ।
ರಾಮಃ ಸೀತಾಮನುಪ್ರಾಪ್ಯ ಪರಾಂ ವ್ರೀಡಾಮುಪಾಗಮತ್ ॥ ೮೧

ತಾಮುವಾಚ ತತೋ ರಾಮಃ ಪರುಷಂ ಜನಸಂಸದಿ ।
ಅಮೃಷ್ಯಮಾಣಾ ಸಾ ಸೀತಾ ವಿವೇಶ ಜ್ವಲನಂ ಸತೀ ॥ ೮೨

ಸಂತೋಷದ ಸುದ್ದಿಯನ್ನು ಹೇಳುವುದಕ್ಕೋಸ್ಕರ ಆ ಮಹಾಕಪಿಯು ಹಿಂದಿರುಗಿ ಬಂದನು (೭೬–೭೭). ಮಹಾಸಾಹಸಿಯಾದ ಹನುಮಂತನು ಮಹಾತ್ಮನಾದ ಶ್ರೀರಾಮನ ಬಳಿಗೆ ಹೋಗಿ ಪ್ರದಕ್ಷಿಣನಮಸ್ಕಾರವನ್ನು ಮಾಡಿ, “ಸೀತಾದೇವಿಯನ್ನು ನೋಡಿ ಬಂದೆನು” ಎಂದು ಸತ್ಯವನ್ನರುಹಿದನು (೭೮). ಅನಂತರ ಶ್ರೀರಾಮನು ಸುಗ್ರೀವಸಹಿತನಾಗಿ ಮಹಾಸಾಗರದ ತೀರವನ್ನು ಸೇರಿ, ಸೂರ್ಯನಂತೆ ಜ್ವಲಿಸುವ ತನ್ನ ಶರಗಳಿಂದ ಸಮುದ್ರವನ್ನು ಕಂಗೆಡಿಸಿದನು. ಆಗ ಸಮುದ್ರರಾಜನು ಪ್ರತ್ಯಕ್ಷನಾಗಿ ತನ್ನ ಮೇಲೆ ಸೇತುವೆಯನ್ನು ಕಟ್ಟುವಂತೆ ಹೇಳಲಾಗಿ, ಆದರಂತೆ ನಳನಿಂದ ರಾಮನು ಸೇತುವೆಯನ್ನು ಕಟ್ಟಿಸಿದನು (೭೯–೮೦). ಆಮೇಲೆ ಆ ಸೇತುವೆಯ ಮಾರ್ಗವಾಗಿ ಲಂಕೆಗೆ ಹೋಗಿ ಸಮರದಲ್ಲಿ ರಾವಣನನ್ನು ಸಂಹರಿಸಿದನು. ತರುವಾಯ ಸೀತಾದೇವಿಯನ್ನು ಪಡೆದರೂ ಶ್ರೀರಾಮನ ಮನಸ್ಸಿನಲ್ಲಿ (ರಾಕ್ಷಸಗೃಹದಲ್ಲಿದ್ದವಳನ್ನು ಸ್ವೀಕರಿಸಿದರೆ ಜನರು ಏನು ಆಡಿಕೊಳ್ಳುವರೋ ಎಂದು) ಒಂದು ಬಗೆಯ ಲಜ್ಜೆಯುಂಟಾಯಿತು (೮೧). ಆಗ ಅವನು

ತತೋಽಗ್ನಿವಚನಾತ್ ಸೀತಾಂ ಜ್ಞಾತ್ವಾ ವಿಗತಕಲ್ಮಷಾಮ್ ।
ಬಭೌ ರಾಮಃ ಸಂಪ್ರಹೃಷ್ಟಃ ಪೂಜಿತಃ ಸರ್ವದೈವತೈಃ ॥ ೮೩

ಕರ್ಮಣಾ ತೇನ ಮಹತಾ ತ್ರೈಲೋಕ್ಯಂ ಸಚರಾಚರಮ್ ।
ಸದೇವರ್ಷಿಗಣಂ ತುಷ್ಟಂ ರಾಘವಸ್ಯ ಮಹಾತ್ಮನಃ ॥ ೮೪

ಅಭಿಷಿಚ್ಯ ಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಮ್ ।
ಕೃತಕೃತ್ಯಸ್ತದಾ ರಾಮೋ ವಿಜ್ವರಃ ಪ್ರಮುಮೋದ ಹ ॥ ೮೫

ದೇವತಾಭ್ಯೋ ವರಂ ಪ್ರಾಪ್ಯ ಸಮುತ್ಥಾಪ್ಯ ಚ ವಾನರಾನ್ ।
ಅಯೋಧ್ಯಾಂ ಪ್ರಸ್ಥಿತೋ ರಾಮಃ ಪುಷ್ಪಕೇಣ ಸುಹೃದ್ವೃತಃ ॥ ೮೬

ಭರದ್ವಾಜಾಶ್ರಮಂ ಗತ್ವಾ ರಾಮಃ ಸತ್ಯಪರಾಕ್ರಮಃ ।
ಭರತಸ್ಯಾಂತಿಕಂ ರಾಮೋ ಹನುಮಂತಂ ವ್ಯಸರ್ಜಯತ್ ॥ ೮೭

ಪುನರಾಖ್ಯಾಯಿಕಾಂ ಜಲ್ಪನ್ ಸುಗ್ರೀವಸಹಿತಸ್ತದಾ ।
ಪುಷ್ಪಕಂ ತತ್ ಸಮಾರುಹ್ಯ ನಂದಿಗ್ರಾಮಂ ಯಯೌ ತದಾ ॥ ೮೮

ಜನಗಳೆದುರಿಗೆ ಸೀತೆಯನ್ನುದ್ದೇಶಿಸಿ ಕಠೋರವಾದ ಮಾತನ್ನಾಡಲು, ಅದನ್ನು ಸಹಿಸಲಾರದೆ ಆ ಪತಿವ್ರತೆಯು ಅಗ್ನಿಪ್ರವೇಶ ಮಾಡಿದಳು (೮೨). ಅನಂತರ ಅಗ್ನಿದೇವನ ನುಡಿಯಿಂದ ಸೀತೆಯು ಸರ್ವಥಾ ನಿರ್ದೋಷಳೆಂದರಿತು ಅವಳನ್ನು ರಾಮನು ಸ್ವೀಕರಿಸಿದನು. ಮಹಾಪುರುಷನಾದ ರಾಮನ ಆ ಅದ್ಭುತಕಾರ್ಯಗಳನ್ನು ನೋಡಿ ಚರಾಚರಾತ್ಮಕವಾದ ಮೂರು ಲೋಕವೂ ದೇವರ್ಷಿಗಳೂ ಆನಂದಿಸಿದರು. ಸಕಲ ದೇವತೆಗಳಿಂದಲೂ ಪೂಜಿತನಾಗಿ ಶ್ರೀರಾಮನು ಹರ್ಷದಿಂದ ವಿರಾಜಿಸುತ್ತಿದ್ದನು (೮೩–೮೪). ಅನಂತರ ಶ್ರೀರಾಮನು ವಿಭೀಷಣನನ್ನು ಲಂಕೆಯಲ್ಲಿ ರಾಕ್ಷಸೇಶ್ವರನೆಂದು ಪಟ್ಟಾಭಿಷೇಕ ಮಾಡಿಸಿ, ತನ್ನ ಕರ್ತವ್ಯವನ್ನು ಮಾಡಿದ್ದಾಯಿತೆಂದು ನಿಶ್ಚಿಂತನಾದನು. ಯುದ್ಧದಲ್ಲಿ ಹತರಾಗಿದ್ದ ವಾನರರೆಲ್ಲರನ್ನೂ ದೇವತೆಗಳ ವರದಿಂದ ಬದುಕಿಸಿ, ಮಿತ್ರವೃಂದಪರಿವೃತನಾಗಿ ಪುಷ್ಪಕವಿಮಾನದಲ್ಲಿ ಕುಳಿತು ರಾಮನು ಅಯೋಧ್ಯಾಭಿಮುಖನಾಗಿ ಪ್ರಯಾಣ ಮಾಡಿದನು (೮೫-೮೬). ಸತ್ಯನಿಷ್ಠನಾದ ಆತನು ಮಾರ್ಗದಲ್ಲಿ ಭರದ್ವಾಜಾಶ್ರಮದಲ್ಲಿಳಿದು ಅಲ್ಲಿಂದ ಹನುಮಂತನನ್ನು ಭರತನ ಬಳಿಗೆ ಕಳಿಸಿದನು. ಪುನಃ ಪುಷ್ಪಕವಿಮಾನವನ್ನೇರಿ

ನಂದಿಗ್ರಾಮೇ ಜಟಾಂ ಹಿತ್ವಾ ಭ್ರಾತೃಭಿಃ ಸಹಿತೋಽನಘಃ ।
ರಾಮಃ ಸೀತಾಮನುಪ್ರಾಪ್ಯ ರಾಜ್ಯಂ ಪುನರವಾಪ್ತವಾನ್ ॥ ೮೯

ಪ್ರಹೃಷ್ಟಮುದಿತೋ ಲೋಕಸ್ತುಷ್ಟಃ ಪುಷ್ಟಃ ಸುಧಾರ್ಮಿಕಃ ।
ನಿರಾಮಯೋ ಹ್ಯರೋಗಶ್ಚ ದುರ್ಭಿಕ್ಷಭಯವರ್ಜಿತಃ ॥ ೯೦

ನ ಪುತ್ರಮರಣಂ ಕೇಚಿದ್ದ್ರಕ್ಷ್ಯಂತಿ ಪುರುಷಾಃ ಕ್ವಚಿತ್ ।
ನಾರ್ಯಶ್ಚಾವಿಧವಾ ನಿತ್ಯಂ ಭವಿಷ್ಯಂತಿ ಪತಿವ್ರತಾಃ ॥ ೯೧

ನ ಚಾಗ್ನಿಜಂ ಭಯಂ ಕಿಂಚಿನ್ನಾಪ್ಸು ಮಜ್ಜಂತಿ ಜಂತವಃ ।
ನ ವಾತಜಂ ಭಯಂ ಕಿಂಚಿನ್ನಾಪಿ ಜ್ವರಕೃತಂ ತಥಾ ॥ ೯೨

ನ ಚಾಪಿ ಕ್ಷುದ್ಭಯಂ ತತ್ರ ನ ತಸ್ಕರಭಯಂ ತಥಾ ।
ನಗರಾಣಿ ಚ ರಾಷ್ಟ್ರಾಣಿ ಧನಧಾನ್ಯಯುತಾನಿ ಚ ॥ ೯೩

ನಿತ್ಯಂ ಪ್ರಮುದಿತಾಃ ಸರ್ವೇ ಯಥಾ ಕೃತಯುಗೇ ತಥಾ ।
ಅಶ್ವಮೇಧಶತೈರಿಷ್ಟ್ವಾ ತಥಾ ಬಹುಸುವರ್ಣಕೈಃ ॥ ೯೪

ಸುಗ್ರೀವಾದಿಗಳೊಡನೆ ಪೂರ್ವಕಥೆಯನ್ನು ಕುರಿತು ಸಂಭಾಷಿಸುತ್ತ ನಂದಿಗ್ರಾಮಕ್ಕೆ ತೆರಳಿದನು (೮೭–೮೮). ಅಲ್ಲಿ ತನ್ನ ತಮ್ಮಂದಿರೊಡನೆ ತಾನೂ ಜಟೆಯನ್ನು ತೆಗೆಯಿಸಿ, ಸೀತಾದೇವಿಯೊಡನೆ ಪಟ್ಟಾಭಿಷಿಕ್ತನಾಗಿ ರಾಜ್ಯವನ್ನು ಪುನಃ ಸ್ವೀಕರಿಸಿದನು (೮೯). ರಾಮರಾಜ್ಯದಲ್ಲಿ ಪ್ರಜೆಗಳು ಧನ ಧಾನ್ಯ ಸಮೃದ್ಧಿಯಿಂದ ಹೃಷ್ಟಚಿತ್ತರೂ ಮಾನಸಕ್ಷೋಭೆಯಿಲ್ಲದೆ ಆನಂದಿಸತಕ್ಕವರೂ ಇಷ್ಟಲಾಭದಿಂದ ಸಂತುಷ್ಟರೂ ದಾರಿದ್ರ್ಯವಿಲ್ಲದೆ ಪುಷ್ಟರೂ ಆಗಿದ್ದಾರೆ. ಅವರು ಧರ್ಮಾಚರಣೆಯಲ್ಲಿ ನಿರತರು. ಅವರಿಗೆ ಮಾನಸಿಕವಾದ ಮತ್ತು ದೈಹಿಕವಾದ ರೋಗಗಳಾವುವೂ ಇಲ್ಲ. ದುರ್ಭಿಕ್ಷದ ಭಯವಿಲ್ಲ (೯೦). ಅವರ ಕಣ್ಣೆದುರಿಗೆ ಮಕ್ಕಳು ಸಾಯುತ್ತಾರೆ-ಎಂಬುದೇ ಇಲ್ಲ. ಸ್ತ್ರೀಯರೆಲ್ಲರೂ ಪತಿವ್ರತೆಯರು. ಅವರು ಅಕಾಲದಲ್ಲಿ ಎಂದಿಗೂ ವಿಧವೆಯರಾಗುವುದಿಲ್ಲ. ರಾಮರಾಜ್ಯದಲ್ಲಿ ಬಿರುಗಾಳಿಯ ಭಯವಾಗಲಿ ಜ್ವರಾದಿ ರೋಗಗಳ ಭಯವಾಗಲಿ ಇಲ್ಲ. ಯಾವ ಪ್ರಜೆಯೂ ಹಸಿವಿನಿಂದ ಬಳಲುವ ಸಂದರ್ಭವಿಲ್ಲ. ಕಳ್ಳಕಾಕರ ಹೆದರಿಕೆ ಇಲ್ಲ. ಪಟ್ಟಣಗಳೂ ಗ್ರಾಮಾಂತರ ಪ್ರದೇಶಗಳೂ ಧನಧಾನ್ಯಗಳಿಂದ ತುಂಬಿರುತ್ತವೆ. ಕೃತಯುಗದಲ್ಲಿದ್ದಂತೆ ಸಕಲರೂ ಆನಂದದಿಂದ ಇದ್ದಾರೆ (೯೧–೯೪).

ಗವಾಂ ಕೋಟ್ಯಯುತಂ ದತ್ವಾ ವಿದ್ವದ್ಭ್ಯೋ ವಿಧಿಪೂರ್ವಕಮ್ ।
ಅಸಂಖ್ಯೇಯಂ ಧನಂ ದತ್ವಾ ಬ್ರಾಹ್ಮಣೇಭ್ಯೋ ಮಹಾಯಶಾಃ ೯೫

ರಾಜವಂಶಾನ್ ಶತಗುಣಾನ್ ಸ್ಥಾಪಯಿಷ್ಯತಿ ರಾಘವಃ ।
ಚಾತುರ್ವರ್ಣ್ಯಂ ಚ ಲೋಕೇಽಸ್ಮಿನ್ ಸ್ವೇಸ್ವೇ ಧರ್ಮೇ ನಿಯೋಕ್ಷ್ಯತಿ

ದಶ ವರ್ಷ ಸಹಸ್ರಾಣಿ ದಶ ವರ್ಷ ಶತಾನಿ ಚ ।
ರಾಮೋ ರಾಜ್ಯಮುಪಾಸಿತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ ॥ ೯೭

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಮ್ ।
ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ ॥ ೯೮

ಏತದಾಖ್ಯಾನಮಾಯುಷ್ಯಂ ಪಠನ್ ರಾಮಾಯಣಂ ನರಃ ।
ಸಪುತ್ರಪೌತ್ರಃ ಸಗಣಃ ಪ್ರೇತ್ಯ ಸ್ವರ್ಗೇ ಮಹೀಯತೇ ॥ ೯೯

ಆ ರಘುನಾಥನು ನೂರಾರು ಅಶ್ವಮೇಧಯಾಗಗಳನ್ನು ಅನಂತ ಸುವರ್ಣ ನಾಣ್ಯಗಳ ವ್ಯಯದಿಂದ ಮಾಡಿ, ವಿದ್ವಾಂಸರಾದ ಬ್ರಾಹ್ಮಣರಿಗೆ ವಿಧಿಪೂರ್ವಕವಾಗಿ ಕೋಟಿಗಟ್ಟಲೆ ಗೋವುಗಳನ್ನೂ ಲೆಕ್ಕವಿಲ್ಲದಷ್ಟು ಹಣವನ್ನೂ ದಾನ ಮಾಡುವನು. ನೂರಾರು ಮಂದಿ ಕ್ಷತ್ರಿಯ ವಂಶದ ರಾಜರನ್ನು (ಧರ್ಮಪಾಲನೆಗಾಗಿ) ಅಲ್ಲಲ್ಲಿ ಸ್ಥಾಪಿಸುವನು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರೂ ತಮ್ಮ ತಮ್ಮ ಧರ್ಮಗಳನ್ನು ಪಾಲಿಸುತ್ತ ಇರುವಂತೆ ನಿಯಮಿಸುವನು (೯೫–೯೬). ಶ್ರೀರಾಮನು ಹನ್ನೊಂದು ಸಾವಿರ ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿ ಬ್ರಹ್ಮಲೋಕವನ್ನೈದುವನು.* (೯೭). ಈ ರಾಮಚರಿತ್ರೆಯು ಚಿತ್ತಶುದ್ಧಿಕರವೂ ಪಾಪಹಾರಿಯೂ ಪುಣ್ಯಸಾಧನವೂ ಆಗಿದೆ. ಆದ್ದರಿಂದ ಇದು ವೇದಸಮಾನವಾದದ್ದು. ಇದನ್ನು ಪಠಿಸತಕ್ಕವನು ಸರ್ವಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಆಯುಷ್ಕರವಾದ ಈ ರಾಮಾಯಣವನ್ನು ಪಠಿಸತಕ್ಕ ಪುರುಷನು ಇಹಲೋಕದಲ್ಲಿ ಪುತ್ರಪೌತ್ರರೊಡನೆಯೂ ಭೃತ್ಯವರ್ಗದೊಡನೆಯೂ ಸುಖದಿಂದಿದ್ದು ಮರಣಾನಂತರ ಸ್ವರ್ಗಲೋಕದಲ್ಲಿ ದೇವತೆಗಳಿಂದ ಸತ್ಕೃತನಾಗಿ ಆನಂದದಿಂದಿರುವನು (೯೮–೯೯)

---

* ಬ್ರಹ್ಮಲೋಕ = ಸ್ವಸ್ಥಾನವಾದ ವೈಕುಂಠ.

ಪಠನ್ ದ್ವಿಜೋ ವಾಗೃಷಭತ್ವಮೀಯಾತ್
ಸ್ಯಾತ್ ಕ್ಷತ್ರಿಯೋ ಭೂಮಿಪತಿತ್ವಮೀಯಾತ್ ।
ವಣಿಗ್ಜನಃ ಪಣ್ಯಫಲತ್ವಮೀಯಾ-
ಜ್ಜನಶ್ಚ ಶೂದ್ರೋಽಪಿ ಮಹತ್ತ್ವಮೀಯಾತ್ * ॥೧೦೦

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಚತುರ್ವಿಂಶತಿ ಸಹಸ್ರಿಕಾಯಾಂ ಸಂಹಿತಾಯಾಂ
ಬಾಲಕಾಂಡೇ ಪ್ರಥಮಃ ಸರ್ಗಃ

ಇತಿ ಸಂಕ್ಷೇಪರಾಮಾಯಣಮ್

ಶ್ರೀಮದ್ರಾಮಾಯಣವನ್ನು ಪಠಿಸುವ ಬ್ರಾಹ್ಮಣನು ಶಬ್ದಬ್ರಹ್ಮದಲ್ಲಿ ಪಾರಂಗತನಾಗಿ ವಾಗ್ವಿಶಾರದನಾಗುವನು. ಕ್ಷತ್ರಿಯನು ಭೂಪಾಲನಾಗುವನು. ವೈಶ್ಯನು ವಾಣಿಜ್ಯದ ಫಲವಾಗಿ ಐಶ್ವರ್ಯವನ್ನು ಗಳಿಸುವನು. ಶೂದ್ರನು (ಸತ್ಯ, ಶೌಚ, ಸದಾಚಾರ ಮುಂತಾದ ಗುಣಗಳಿಂದ) ಜನರ ಗೌರವಕ್ಕೆ ಪಾತ್ರನಾಗುವನು (೧೦೦).

ಇಲ್ಲಿಗೆ ಶ್ರೀಮದ್ರಾಮಾಯಣದ ಬಾಲಕಾಂಡದಲ್ಲಿ ಒಂದನೆಯ ಸರ್ಗ
— ಸಂಕ್ಷೇಪರಾಮಾಯಣ —

* ಈ ನೂರು ಶ್ಲೋಕಗಳಿಗೆ ಬಾಲರಾಮಾಯಣವೆಂದೂ ಸಂಕ್ಷೇಪರಾಮಾಯಣವೆಂದೂ ಹೆಸರು. ಇದು ತಕಾರದಿಂದ ಆರಂಭವಾಗಿ 'ಯಾತ್' ಎಂದು ಮುಗಿಯುವುದರಿಂದ ಇದರಲ್ಲಿ ಗಾಯತ್ರೀಮಂತ್ರಾರ್ಥವು ಅಡಕವಾಗಿದೆಯೆಂದು ಹೇಳುತ್ತಾರೆ.

*

ಅಷ್ಟಾದಶಃ ಸರ್ಗಃ

ಶ್ರೀರಾಮಾವತಾರಃ

ನಿರ್ವೃತ್ತೇ ತು ಕ್ರತೌ ತಸ್ಮಿನ್ ಹಯಮೇಧೇ ಮಹಾತ್ಮನಃ ।
ಪ್ರತಿಗೃಹ್ಯ ಸುರಾ ಭಾಗಾನ್ ಪ್ರತಿಜಗ್ಮುರ್ಯಥಾಗತಮ್ ॥ ೧

ಸಮಾಪ್ತದೀಕ್ಷಾನಿಯಮಃ ಪತ್ನೀಗಣಸಮನ್ವಿತಃ ।
ಪ್ರವಿವೇಶ ಪುರೀಂ ರಾಜಾ ಸಭೃತ್ಯಬಲವಾಹನಃ ॥ ೨

ಯಥಾರ್ಹಂ ಪೂಜಿತಾಸ್ತೇನ ರಾಜ್ಞಾ ವೈ ಪೃಥಿವೀಶ್ವರಾಃ ।
ಮುದಿತಾಃ ಪ್ರಯಯುರ್ದೇಶಾನ್ ಪ್ರಣಮ್ಯ ಮುನಿಪುಂಗವಮ್ ॥ ೩

ಶ್ರೀಮತಾಂ ಗಚ್ಛತಾಂ ತೇಷಾಂ ಸ್ವಪುರಾಣಿ ಪುರಾತ್ತತಃ ।
ಬಲಾನಿ ರಾಜ್ಞಾಂ ಶುಭ್ರಾಣಿ ಪ್ರಹೃಷ್ಟಾನಿ ಚಕಾಶಿರೇ ॥ ೪

ಗತೇಷು ಪೃಥಿವೀಶೇಷು ರಾಜಾ ದಶರಥಸ್ತದಾ ।
ಪ್ರವಿವೇಶ ಪುರೀಂ ಶ್ರೀಮಾನ್ ಪುರಸ್ಕೃತ್ಯ ದ್ವಿಜೋತ್ತಮಾನ್ ॥ ೫

ಸರ್ಗ ೧೮

ಶ್ರೀರಾಮ, ಭರತ, ಲಕ್ಷ್ಮಣ, ಶತ್ರುಘ್ನರ ಜನನ

ಮಹಾತ್ಮನಾದ ದಶರಥನ ಅಶ್ವಮೇಧಯಾಗವು (ಪುತ್ರಕಾಮೇಷ್ಟಿಯೊಡನೆ) ಸಂಪೂರ್ಣವಾಗಿ ನೆರವೇರಿತು. ದೇವತೆಗಳು ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸಿ ಹೊರಟುಹೋದರು. ರಾಜನು ದೀಕ್ಷಾನಿಯಮವನ್ನು ಸಮಾಪ್ತಿಗೊಳಿಸಿ ಪತ್ನಿಯ ರೊಡನೆ ಪರಿವಾರಸಮೇತನಾಗಿ ಅಯೋಧ್ಯಾನಗರಕ್ಕೆ ಹೋಗಲು ಸನ್ನದ್ಧನಾದನು (೧–೨). ಬಂದಿದ್ದ ಭೂಪಾಲರು ಯಥಾಯೋಗ್ಯವಾಗಿ ದಶರಥನು ಮಾಡಿದ ಗೌರವಸತ್ಕಾರಗಳನ್ನು ಸ್ವೀಕರಿಸಿ, ಸಂತೋಷದಿಂದ ಮುನಿಶ್ರೇಷ್ಠರಾದ ವಸಿಷ್ಠ ಋಷ್ಯಶೃಂಗರಿಗೆ ಪ್ರಣಾಮಗಳನ್ನರ್ಪಿಸಿ, ತಮ್ಮ ದೇಶಗಳಿಗೆ ಪ್ರಯಾಣಮಾಡಿದರು. ಅವರ ಸೈನಿಕರೂ ಸಹ ದಶರಥನ ಸತ್ಕಾರದಿಂದ ಸಂಪ್ರೀತರಾಗಿ ಉಲ್ಲಾಸ ಗೊಂಡಿದ್ದರು (೩–೪). ಅನಂತರ ಶ್ರೀಮಾನ್ ದಶರಥನು ದ್ವಿಜೋತ್ತಮರನ್ನು ಮುಂದುಮಾಡಿಕೊಂಡು ರಾಜಧಾನಿಯನ್ನು ಪ್ರವೇಶಿಸಿದನು. ಅವನಿಂದ

ಶಾಂತಯಾ ಪ್ರಯಯೌ ಸಾರ್ಧಮೃಷ್ಯಶೃಂಗಃ ಸುಪೂಜಿತಃ ।
ಅನ್ವೀಯಮಾನೋ ರಾಜ್ಞಾಥ ಸಾನುಯಾತ್ರೇಣ ಧೀಮತಾ ॥ ೬

ಏವಂ ವಿಸೃಜ್ಯ ತಾನ್ ಸರ್ವಾನ್ ರಾಜಾ ಸಂಪೂರ್ಣಮಾನಸಃ ।
ಉವಾಸ ಸುಖಿತಸ್ತತ್ರ ಪುತ್ರೋತ್ಪತ್ತಿಂ ವಿಚಿಂತಯನ್ ॥ ೭

ತತೋ ಯಜ್ಞೇ ಸಮಾಪ್ತೇ ತು ಋತೂನಾಂ ಷಟ್ ಸಮತ್ಯಯುಃ ।
ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ ॥ ೮

ನಕ್ಷತ್ರೇಽದಿತಿದೈವತ್ಯೇ ಸ್ವೋಚ್ಚಸಂಸ್ಥೇಷು ಪಂಚಸು ।
ಗ್ರಹೇಷು ಕರ್ಕಟೇ ಲಗ್ನೇ ವಾಕ್ಪತಾವಿಂದುನಾ ಸಹ ॥ ೯

ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕನಮಸ್ಕೃತಮ್ ।
ಕೌಸಲ್ಯಾಜನಯದ್ರಾಮಂ ಸರ್ವಲಕ್ಷಣಸಂಯುತಮ್ ॥ ೧೦

ವಿಷ್ಣೋರರ್ಧಂ ಮಹಾಭಾಗಂ ಪುತ್ರಮೈಕ್ಷ್ವಾಕವರ್ಧನಮ್ ।
ಕೌಸಲ್ಯಾ ಶುಶುಭೇ ತೇನ ಪುತ್ರೇಣಾಮಿತತೇಜಸಾ ॥ ೧೧

ಸಂಪೂಜಿತನಾಗಿ ಋಷ್ಯಶೃಂಗನು ಶಾಂತಾದೇವಿಯೊಡನೆ ಹೊರಡಲು, ದಶರಥನು ತನ್ನ ಪರಿವಾರದೊಂದಿಗೆ ಬೀಳ್ಕೊಡುತ್ತ ಹೋಗಿ ಅವರೀರ್ವರನ್ನೂ ಕಳುಹಿಸಿ ಕೊಟ್ಟನು (೫–೬). ಹೀಗೆ ದಶರಥನು ತನ್ನ ಮನೋರಥವನ್ನು ಪೂರೈಸಿ ಪುತ್ರೋತ್ಪತ್ತಿಯನ್ನು ಪ್ರತೀಕ್ಷಿಸುತ್ತ ಉಲ್ಲಾಸದಿಂದಿದ್ದನು. ಯಜ್ಞವಾದಮೇಲೆ ಸುಮಾರು ಒಂದು ವರ್ಷ ಕಳೆಯುತ್ತ ಬಂದಿತು. ಹನ್ನೆರಡನೆಯ ತಿಂಗಳು ಚೈತ್ರ ಮಾಸ. (ಶುಕ್ಲಪಕ್ಷದ) ನವಮೀ ತಿಥಿ. ಪುನರ್ವಸು ನಕ್ಷತ್ರ. ರವಿ, ಕುಜ, ಶನಿ, ಗುರು, ಶುಕ್ರ—ಈ ಐದು ಗ್ರಹಗಳು ತಮ್ಮ ಉಚ್ಚರಾಶಿಗಳಲ್ಲಿದ್ದಾರೆ. ಕರ್ಕಾಟಕಲಗ್ನವು ಚಂದ್ರಬೃಹಸ್ಪತಿಗಳೊಡನೆ ಉದಯವನ್ನು ಹೊಂದುತ್ತಿದೆ. ಈ ಸುಮುಹೂರ್ತದಲ್ಲಿ ಕೌಸಲ್ಯಾದೇವಿಯ ಗರ್ಭದಿಂದ ಸರ್ವಲೋಕನಮಸ್ಕೃತನೂ ದಿವ್ಯಲಕ್ಷಣಸಂಯುತನೂ ಜಗನ್ನಾಥನೂ ಆದ ಶ್ರೀರಾಮಚಂದ್ರನು ಪುತ್ರನಾಗಿ ಅವತರಿಸಿದನು* (೭–೧೦). ಈ ಮಹಾನುಭಾವನು ಶ್ರೀಮನ್ನಾರಾಯಣನ ಅರ್ಧಾಂಶ. ಇಕ್ಷ್ವಾಕು ಕುಲವನ್ನು ಉದ್ಧರಿಸಿದವನು. ವಜ್ರಪಾಣಿಯಾದ

---

* ಅನುಬಂಧವನ್ನು ನೋಡಿ.

ಯಥಾ ವರೇಣ ದೇವಾನಾಮದಿತಿರ್ವಜ್ರಪಾಣಿನಾ ।
ಭರತೋ ನಾಮ ಕೈಕೇಯ್ಯಾಂ ಜಜ್ಞೇ ಸತ್ಯಪರಾಕ್ರಮಃ ॥ ೧೨

ಸಾಕ್ಷಾದ್ವಿಷ್ಣೋಶ್ಚತುರ್ಭಾಗಃ ಸರ್ವೈಃ ಸಮುದಿತೋ ಗುಣೈಃ ।
ಅಥ ಲಕ್ಷ್ಮಣಶತ್ರುಘ್ನೌ ಸುಮಿತ್ರಾಜನಯತ್ ಸುತೌ ॥ ೧೩

ಸರ್ವಾಸ್ತ್ರಕುಶಲೌ ವೀರೌ ವಿಷ್ಣೋರರ್ಧಸಮನ್ವಿತೌ ।
ಪುಷ್ಯೇ ಜಾತಸ್ತು ಭರತೋ ಮೀನಲಗ್ನೇ ಪ್ರಸನ್ನಧೀಃ ॥ ೧೪

ಸಾರ್ಪೇ ಜಾತೌ ಚ ಸೌಮಿತ್ರೀ ಕುಲೀರೇಽಭ್ಯುದಿತೇ ರವೌ ।
ರಾಜ್ಞಃ ಪುತ್ರಾ ಮಹಾತ್ಮಾನಶ್ಚತ್ವಾರೋ ಜಜ್ಞಿರೇ ಪೃಥಕ್ ॥ ೧೫

ಗುಣವಂತೋಽನುರೂಪಾಶ್ಚ ರುಚ್ಯಾ ಪ್ರೋಷ್ಠಪದೋಪಮಾಃ ।
ಜಗುಃ ಕಲಂ ಚ ಗಂಧರ್ವಾ ನನೃತುಶ್ಚಾಪ್ಸರೋಗಣಾಃ ॥ ೧೬

ದೇವೇಂದ್ರನಿಂದ ಅದಿತಿಯು ಶೋಭಿಸುವಂತೆ ಮಹಾತೇಜಸ್ವಿಯಾದ ಆ ಪುತ್ರನಿಂದ ಕೌಸಲ್ಯೆಯು ಶೋಭಿಸಿದಳು (೧೧–೧೨). ಅನಂತರ ಸತ್ಯಸಂಧನೂ ಸಕಲ ಸದ್ಗುಣಸಂಪನ್ನನೂ ಸಾಕ್ಷಾದ್ ವಿಷ್ಣುವಿನ ಒಂದು ಅಂಶವೂ ಆದ ಭರತನು ಕೈಕೇಯಿಯ ಗರ್ಭದಲ್ಲಿ ಜನಿಸಿದನು. ಆಮೇಲೆ ವೀರರೂ ಸರ್ವಾಸ್ತ್ರಕುಶಲರೂ ವಿಷ್ಣುವಿನ ಅಂಶಭೂತರೂ ಆದ ಲಕ್ಷ್ಮಣ ಶತ್ರುಘ್ನರು ಸುಮಿತ್ರೆಯ ಪುತ್ರರಾಗಿ ಹುಟ್ಟಿದರು (೧೩–೧೪). ಪುಷ್ಯನಕ್ಷತ್ರ ಮೀನಲಗ್ನದಲ್ಲಿ ಶಾಂತಸ್ವಭಾವದ ಭರತನು ಜನಿಸಿದನು. ಆಶ್ಲೇಷ ನಕ್ಷತ್ರ ಕರ್ಕಾಟಕ ಲಗ್ನದಲ್ಲಿ, ಸೂರ್ಯನು ಪ್ರವೃದ್ಧನಾಗಿರಲು (ಮಧ್ಯಾಹ್ನಕಾಲದಲ್ಲಿ) ಲಕ್ಷ್ಮಣ ಶತ್ರುಘ್ನರು ಹುಟ್ಟಿದರು* (೧೫). ಹೀಗೆ ದಶರಥಮಹಾರಾಜನಿಗೆ ಗುಣಶಾಲಿಗಳೂ ಅನುರೂಪರೂ ಪ್ರೋಷ್ಠಪದ ನಕ್ಷತ್ರದ ನಾಲ್ಕು ತಾರೆಗಳಂತೆ ಪ್ರಕಾಶಮಾನರೂ ಆದ ಪುತ್ರರು ಜನಿಸಿದರು. ಆಗ ಗಂಧರ್ವರು ಇಂಪಾಗಿ ಹಾಡಿದರು. ಅಪ್ಸರೆಯರು ಕುಣಿದರು.

---

* ಶ್ರೀರಾಮನು ಪುನರ್ವಸು ನಕ್ಷತ್ರ ನವಮೀ ಮಧ್ಯಾಹ್ನ ಕಾಲದಲ್ಲಿಯೂ, ಭರತನು ಪುಷ್ಯನಕ್ಷತ್ರ ದಶಮೀ ತಿಥಿಯಲ್ಲಿ ಸೂರ್ಯೋದಯಕ್ಕೆ ಪೂರ್ವದಲ್ಲಿಯೂ, ಲಕ್ಷ್ಮಣ ಶತ್ರುಘ್ನರು ದಶಮೀ ತಿಥಿಯಲ್ಲಿಯೇ ಆಶ್ಲೇಷನಕ್ಷತ್ರದಲ್ಲಿ ಮಧ್ಯಾಹ್ನಕಾಲದಲ್ಲಿಯೂ ಜನಿಸಿದರು.

ದೇವದುಂದುಭಯೋ ನೇದುಃ ಪುಷ್ಪವೃಷ್ಟಿಶ್ಚ ಖಾಚ್ಚ್ಯುತಾ ।
ಉತ್ಸವಶ್ಚ ಮಹಾನಾಸೀದಯೋಧ್ಯಾಯಾಂ ಜನಾಕುಲಃ ॥ ೧೭

ರಥ್ಯಾಶ್ಚ ಜನಸಂಬಾಧಾ ನಟನರ್ತಕಸಂಕುಲಾಃ ।
ಗಾಯನೈಶ್ಚ ವಿರಾವಿಣ್ಯೋ ವಾದನೈಶ್ಚ ತಥಾಪರೈಃ ॥ ೧೮

ವಿರೇಜುರ್ವಿಪುಲಾಸ್ತತ್ರ ಸರ್ವರತ್ನಸಮನ್ವಿತಾಃ ।
ಪ್ರದೇಯಾಂಶ್ಚ ದದೌ ರಾಜಾ ಸೂತಮಾಗಧವಂದಿನಾಮ್ ॥ ೧೯

ಬ್ರಾಹ್ಮಣೇಭ್ಯೋ ದದೌ ವಿತ್ತಂ ಗೋಧನಾನಿ ಸಹಸ್ರಶಃ ।
ಅತೀತ್ಯೈಕಾದಶಾಹಂ ತು ನಾಮಕರ್ಮ ತಥಾಕರೋತ್ ॥ ೨೦

ಜ್ಯೇಷ್ಠಂ ರಾಮಂ ಮಹಾತ್ಮಾನಂ ಭರತಂ ಕೈಕಯೀಸುತಮ್ ।
ಸೌಮಿತ್ರೀ ಲಕ್ಷ್ಮಣಮಿತಿ ಶತ್ರುಘ್ನಮಪರಂ ತಥಾ ॥ ೨೧

ದೇವದುಂದುಭಿಗಳು ಮೊಳಗಿದವು. ಆಕಾಶದಲ್ಲಿ ಪುಷ್ಪವೃಷ್ಟಿಯಾಯಿತು (೧೬–೧೭). ಅಯೋಧ್ಯೆಯಲ್ಲಿ ಭಾರಿ ಜನಸಂದಣಿಯು ಸೇರಿ ದೊಡ್ಡ ಉತ್ಸವ ನಡೆಯಿತು. ರಸ್ತೆಗಳಲ್ಲಿ ಎಲ್ಲಿ ನೋಡಿದರೂ ನಟನರ್ತಕರಿಂದ ಕಾರ್ಯಕ್ರಮಗಳು ಏರ್ಪಟ್ಟವು. ಸಂಗೀತಗಾರರು ಹಾಡಿದರು. ವಾದ್ಯಗಾರರು ವಾದ್ಯವನ್ನು ನುಡಿಸಿದರು. (ಪ್ರೇಕ್ಷಕರು ಅವರೆಲ್ಲರಿಗೆ ಸಂತೋಷದಿಂದ ಕೊಟ್ಟ) ರತ್ನಗಳು ರಸ್ತೆಗಳಲ್ಲಿ ತೂರಾಡಿದವು (೧೮–೧೯). ದಶರಥನು ಪೌರಾಣಿಕರಿಗೂ ವಂಶಾವಳಿಯನ್ನು ಪ್ರಶಂಸೆಮಾಡತಕ್ಕ ಮಾಗಧರಿಗೂ ಸ್ತುತಿಪಾಠಕರಾದ ಬಂದಿಗಳಿಗೂ ಪಾರಿತೋಷಕಗಳನ್ನು ಕೊಟ್ಟನು. ಬ್ರಾಹ್ಮಣರಿಗೆ ಧನವನ್ನೂ ಗೋವುಗಳನ್ನೂ ದಾನಮಾಡಿದನು. ಅನಂತರ ಹನ್ನೊಂದು ದಿನಗಳು ಕಳೆದಮೇಲೆ* (ಹದಿಮೂರನೆಯ ದಿನ) ಮಕ್ಕಳಿಗೆ ನಾಮಕರಣವನ್ನು ಮಾಡಿಸಿದನು. ಕೌಸಲ್ಯೆಯ ಗರ್ಭದಲ್ಲಿ ಜನಿಸಿದ ಜ್ಯೇಷ್ಠಪುತ್ರನಿಗೆ **ರಾಮ** ಎಂದೂ ಕೈಕೇಯೀ ಪುತ್ರನಿಗೆ **ಭರತ** ಎಂದೂ ಸುಮಿತ್ರೆಯ ಇಬ್ಬರು ಮಕ್ಕಳಿಗೆ **ಲಕ್ಷ್ಮಣ, ಶತ್ರುಘ್ನ** ಎಂದೂ

---

* ಲಕ್ಷ್ಮಣಶತ್ರುಘ್ನರು ಹುಟ್ಟಿ ಹನ್ನೊಂದು ದಿನಗಳೂ, ಶ್ರೀರಾಮನು ಹುಟ್ಟಿ ಹನ್ನೆರಡು ದಿನಗಳೂ ಕಳೆದವು. ಪ್ರಥಮ ಸೂತಕದೊಡನೆ ದ್ವಿತೀಯ ಸೂತಕವೂ ನಿವೃತ್ತವಾಯಿತು. ಕ್ಷತ್ರಿಯನಿಗೆ ಹನ್ನೆರಡು ದಿನ ಜನನಸೂತಕ. ಹದಿಮೂರನೆಯ ದಿನ ನಾಮಕರಣವೆಂದು ಧರ್ಮಶಾಸ್ತ್ರವು ಹೇಳುತ್ತದೆ.

ವಸಿಷ್ಠಃ ಪರಮಪ್ರೀತೋ ನಾಮಾನಿ ಕೃತವಾಂಸ್ತದಾ ।
ಬ್ರಾಹ್ಮಣಾನ್ ಭೋಜಯಾಮಾಸ ಪೌರಾನ್ ಜಾನಪದಾನಪಿ ॥ ೨೨

ಅದದಾದ್ಬ್ರಾಹ್ಮಣಾನಾಂ ಚ ರತ್ನೌಘಮಮಿತಂ ಬಹು ।
ತೇಷಾಂ ಜನ್ಮಕ್ರಿಯಾದೀನಿ ಸರ್ವಕರ್ಮಾಣ್ಯಕಾರಯತ್ ॥ ೨೩

ತೇಷಾಂ ಕೇತುರಿವ ಜ್ಯೇಷ್ಠೋ ರಾಮೋ ರತಿಕರಃ ಪಿತುಃ ।
ಬಭೂವ ಭೂಯೋ ಭೂತಾನಾಂ ಸ್ವಯಂಭೂರಿವ ಸಂಮತಃ ॥ ೨೪

ಸರ್ವೇ ವೇದವಿದಃ ಶೂರಾಃ ಸರ್ವೇ ಲೋಕಹಿತೇ ರತಾಃ ।
ಸರ್ವೇ ಜ್ಞಾನೋಪಸಂಪನ್ನಾಃ ಸರ್ವೇ ಸಮುದಿತಾ ಗುಣೈಃ ॥ ೨೫

ತೇಷಾಮಪಿ ಮಹಾತೇಜಾ ರಾಮಃ ಸತ್ಯಪರಾಕ್ರಮಃ ।
ಇಷ್ಟಃ ಸರ್ವಸ್ಯ ಲೋಕಸ್ಯ ಶಶಾಂಕ ಇವ ನಿರ್ಮಲಃ ॥ ೨೬

ಗಜಸ್ಕಂಧೇಽಶ್ವಪೃಷ್ಠೇ ಚ ರಥಚರ್ಯಾಸು ಸಂಮತಃ ।
ಧನುರ್ವೇದೇ ಚ ನಿರತಃ ಪಿತೃಶುಶ್ರೂಷಣೇ ರತಃ ॥ ೨೭

ಬಾಲ್ಯಾತ್ ಪ್ರಭೃತಿ ಸುಸ್ನಿಗ್ಧೋ ಲಕ್ಷ್ಮಣೋ ಲಕ್ಷ್ಮಿವರ್ಧನಃ ।
ರಾಮಸ್ಯ ಲೋಕರಾಮಸ್ಯ ಭ್ರಾತುರ್ಜ್ಯೇಷ್ಠಸ್ಯ ನಿತ್ಯಶಃ ॥ ೨೮

ವಸಿಷ್ಠರು ನಾಮಕರಣ ಮಾಡಿದರು (೨೦–೨೨). ದಶರಥನು ಬ್ರಾಹ್ಮಣರಿಗೂ ಇತರ ಪ್ರಜೆಗಳೆಲ್ಲರಿಗೂ ಸಂತರ್ಪಣೆಯನ್ನು ನಡೆಯಿಸಿ ಬೇಕಾದಷ್ಟು ಐಶ್ವರ್ಯವನ್ನು ದಾನಮಾಡಿದನು. ಕ್ರಮೇಣ ವಸಿಷ್ಠರಿಂದ ಆ ಬಾಲಕರಿಗೆ ಜಾತಕರ್ಮ ಮೊದಲ್ಗೊಂಡು ಉಪನಯನದವರೆಗೆ ಎಲ್ಲ ಸಂಸ್ಕಾರಗಳನ್ನೂ ನೆರವೇರಿಸಿದನು. ಆ ಬಾಲಕರಲ್ಲಿ ಹಿರಿಯನಾದ ಶ್ರೀರಾಮನು ತಂದೆಗೆ ಬಹಳ ಪ್ರೀತಿಪಾತ್ರನಾಗಿ ದಶರಥನ ಕೀರ್ತಿಧ್ವಜದಂತೆ ಇದ್ದನು. ಅವನು ಜನರಿಗೆ ಬ್ರಹ್ಮನಂತೆ ಪೂಜ್ಯನಾಗಿ ತೋರಿದನು (೨೩–೨೪). ಆ ಬಾಲಕರೆಲ್ಲರೂ ವೇದಾಧ್ಯಯನಮಾಡಿ ಧನುರ್ವೇದದಲ್ಲಿ ಶೂರರೆನಿಸಿ ಪ್ರಜೆಗಳ ಹಿತದಲ್ಲಿ ಆಸಕ್ತರಾದರು. ಅವರೆಲ್ಲರೂ ಶಾಸ್ತ್ರಜ್ಞಾನಸಂಪನ್ನರು; ಎಲ್ಲರೂ ಗುಣವಂತರು. ಅವರಲ್ಲಿಯೂ ಶ್ರೀರಾಮನು ಮಹಾತೇಜಸ್ವಿಯೂ ಸತ್ಯಸಂಧನೂ ಆಗಿದ್ದನು. ಸಕಲರಿಗೂ ಅವನನ್ನು ಕಂಡರೆ ನಿರ್ಮಲನಾದ ಚಂದ್ರನನ್ನು ಕಂಡಂತೆ ಹರ್ಷವಾಗುವುದು (೨೫–೨೬). ಶ್ರೀರಾಮನು ಆನೆ ಸವಾರಿ, ಕುದುರೆ ಸವಾರಿ, ರಥಸಂಚಾರಗಳಲ್ಲಿ ಪಳಗಿದ್ದನು. ಧನುರ್ವಿದ್ಯೆಯಲ್ಲಿ ನಿರತ. ಪಿತೃಸೇವೆಯಲ್ಲಿ ಆಸಕ್ತ (೨೭). ಲಕ್ಷ್ಮೀವರ್ಧನ

ಸರ್ವಪ್ರಿಯಕರಸ್ತಸ್ಯ ರಾಮಸ್ಯಾಪಿ ಶರೀರತಃ ।
ಲಕ್ಷ್ಮಣೋ ಲಕ್ಷ್ಮಿಸಂಪನ್ನೋ ಬಹಿಃಪ್ರಾಣ ಇವಾಪರಃ ॥ ೨೯
ನ ಚ ತೇನ ವಿನಾ ನಿದ್ರಾಂ ಲಭತೇ ಪುರುಷೋತ್ತಮಃ ।
ಮೃಷ್ಟಮನ್ನಮುಪಾನೀತಮಶ್ನಾತಿ ನ ಹಿ ತಂ ವಿನಾ ॥ ೩೦
ಯದಾ ಹಿ ಹಯಮಾರೂಢೋ ಮೃಗಯಾಂ ಯಾತಿ ರಾಘವಃ ।
ತದೈನಂ ಪೃಷ್ಠತೋಽಭ್ಯೇತಿ ಸಧನುಃ ಪರಿಪಾಲಯನ್ ॥ ೩೧
ಭರತಸ್ಯಾಪಿ ಶತ್ರುಘ್ನೋ ಲಕ್ಷ್ಮಣಾವರಜೋ ಹಿ ಸಃ ।
ಪ್ರಾಣೈಃ ಪ್ರಿಯತರೋ ನಿತ್ಯಂ ತಸ್ಯ ಚಾಸೀತ್ತಥಾ ಪ್ರಿಯಃ ॥ ೩೨
ಸ ಚತುರ್ಭಿರ್ಮಹಾಭಾಗೈಃ ಪುತ್ರೈರ್ದಶರಥಃ ಪ್ರಿಯೈಃ ।
ಬಭೂವ ಪರಮಪ್ರೀತೋ ದೇವೈರಿವ ಪಿತಾಮಹಃ ॥ ೩೩
ತೇ ಯದಾ ಜ್ಞಾನಸಂಪನ್ನಾಃ ಸರ್ವೇ ಸಮುದಿತಾ ಗುಣೈಃ ।
ಹ್ರೀಮಂತಃ ಕೀರ್ತಿಮಂತಶ್ಚ ಸರ್ವಜ್ಞಾ ದೀರ್ಘದರ್ಶಿನಃ ॥ ೩೪

ನೆನಿಸಿದ ಲಕ್ಷ್ಮಣನಾದರೊ ತನ್ನ ಅಣ್ಣನಾದ ಲೋಕಾಭಿರಾಮ ಶ್ರೀರಾಮನೊಡನೆ ಬಾಲ್ಯದಿಂದಲೂ ಅತ್ಯಂತ ಸ್ನೇಹದಿಂದಿದ್ದನು. ರಾಮನಿಗೂ ಲಕ್ಷ್ಮಣನನ್ನು ಕಂಡರೆ ತನ್ನ ಶರೀರಕ್ಕಿಂತಲೂ ಹೆಚ್ಚಿನ ಪ್ರೀತಿ. ಲಕ್ಷ್ಮಣನೆಂದರೆ ಹೊರಗಡೆ ಸಂಚರಿಸುವ ತನ್ನ ಪ್ರಾಣವೋ ಎಂದು ತಿಳಿದಿದ್ದನು (೨೮–೨೯). ಅವನು ಜೊತೆಯಲ್ಲಿ ಮಲಗಿಕೊಳ್ಳದಿದ್ದರೆ ಶ್ರೀರಾಮನಿಗೆ ನಿದ್ರೆಯೇ ಬರದು. ಮೃಷ್ಟಾನ್ನ ವನ್ನು ತಂದುಕೊಟ್ಟರೂ ಲಕ್ಷ್ಮಣನನ್ನು ಬಿಟ್ಟು ತಿನ್ನುತ್ತಿರಲಿಲ್ಲ. ರಾಮನು ಕುದುರೆಯನ್ನೇರಿ ಬೇಟೆಯಾಡುವುದಕ್ಕೆ ಯಾವಾಗಲಾದರೂ ಹೊರಟರೆ, ಕೂಡಲೇ ಲಕ್ಷ್ಮಣನು ಧನುಸ್ಸನ್ನು ಹಿಡಿದು ಅವನ ಮೈಗಾವಲಾಗಿ ಹಿಂದೆಯೇ ಹೊರಟು ಬಿಡುತ್ತಿದ್ದನು (೩೦–೩೧). ಹಾಗೆಯೇ ಭರತನಿಗೆ ಶತ್ರುಘ್ನನೆಂದರೆ ಪ್ರಾಣ ಕ್ಕಿಂತಲೂ ಹೆಚ್ಚು ಪ್ರೀತಿ. ಅದೇ ರೀತಿಯಲ್ಲಿ ಶತ್ರುಘ್ನನಿಗೆ ಭರತನಮೇಲೆ ಪ್ರೀತಿ. ಲಕ್ಷ್ಮಣನಂತೆಯೇ ಶತ್ರುಘ್ನ. ಎಷ್ಟಾದರೂ ಲಕ್ಷ್ಮಣನ ತಮ್ಮನಲ್ಲವೆ ಅವನು! ಪ್ರೀತಿಪಾತ್ರರಾದ ಈ ನಾಲ್ವರು ಪುತ್ರರೊಡನೆ ದಶರಥನು, ದೇವತೆ ಗಳಿಂದೊಡಗೂಡಿದ ಬ್ರಹ್ಮದೇವನಂತೆ ಆನಂದದಿಂದಿದ್ದನು (೩೨–೩೩). ಆ ಅಣ್ಣ ತಮ್ಮಂದಿರು ಮೇಧಾವಿಗಳೂ, ಗುಣಾಢ್ಯರೂ, ನಮ್ರಸ್ವಭಾವದವರೂ, ಕೀರ್ತಿ

ತೇಷಾಮೇವಂಪ್ರಭಾವಾಣಾಂ ಸರ್ವೇಷಾಂ ದೀಪ್ತತೇಜಸಾಮ್ ।
ಪಿತಾ ದಶರಥೋ ಹೃಷ್ಟೋ ಬ್ರಹ್ಮಾ ಲೋಕಾಧಿಪೋ ಯಥಾ ॥ ೩೫

ತೇ ಚಾಪಿ ಮನುಜವ್ಯಾಘ್ರಾ ವೈದಿಕಾಧ್ಯಯನೇ ರತಾಃ ।
ಪಿತೃಶುಶ್ರೂಷಣರತಾ ಧನುರ್ವೇದೇ ಚ ನಿಷ್ಠಿತಾಃ ॥ ೩೬

ಅಥ ರಾಜಾ ದಶರಥಸ್ತೇಷಾಂ ದಾರಕ್ರಿಯಾಂ ಪ್ರತಿ ।
ಚಿಂತಯಾಮಾಸ ಧರ್ಮಾತ್ಮಾ ಸೋಪಾಧ್ಯಾಯಃ ಸಬಾಂಧವಃ ॥ ೩೭

ತಸ್ಯ ಚಿಂತಯಮಾನಸ್ಯ ಮಂತ್ರಿಮಧ್ಯೇ ಮಹಾತ್ಮನಃ ।
ಅಭ್ಯಾಗಚ್ಛನ್ಮಹಾತೇಜಾ ವಿಶ್ವಾಮಿತ್ರೋ ಮಹಾಮುನಿಃ ॥ ೩೮

ಸ ರಾಜ್ಞೋ ದರ್ಶನಾಕಾಂಕ್ಷೀ ದ್ವಾರಾಧ್ಯಕ್ಷಾನುವಾಚ ಹ ।
ಶೀಘ್ರಮಾಖ್ಯಾತ ಮಾಂ ಪ್ರಾಪ್ತಂ ಕೌಶಿಕಂ ಗಾಧಿನಃ ಸುತಮ್ ॥ ೩೯

ತಚ್ಛ್ರುತ್ವಾ ವಚನಂ ತ್ರಾಸಾದ್ರಾಜ್ಞೋ ವೇಶ್ಮ ಪ್ರದುದ್ರುವುಃ ।
ಸಂಭ್ರಾಂತಮನಸಃ ಸರ್ವೇ ತೇನ ವಾಕ್ಯೇನ ಚೋದಿತಾಃ ॥ ೪೦

ತೇ ಗತ್ವಾ ರಾಜಭವನಂ ವಿಶ್ವಾಮಿತ್ರಮೃಷಿಂ ತದಾ ।
ಪ್ರಾಪ್ತಮಾವೇದಯಾಮಾಸುರ್ನೃಪಾಯೇಕ್ಷ್ವಾಕವೇ ತದಾ ॥ ೪೧

ಶಾಲಿಗಳೂ, ವಿವೇಕಿಗಳೂ, ದೂರದರ್ಶಿಗಳೂ ಆಗಿದ್ದರು. ಇಂಥ ಪ್ರಭಾವಶಾಲಿಗಳಾದ ಪುತ್ರರೊಡನೆ ದಶರಥನು ಲೋಕಾಧಿಪತಿಯಾದ ಬ್ರಹ್ಮನಂತೆ ಹರ್ಷದಿಂದಿದ್ದನು (೩೪–೩೫). ಆ ವೀರಪುತ್ರರು ಧನುರ್ವೇದದಲ್ಲಿ ಪಾರಂಗತರಾಗಿ ವೇದಾಧ್ಯಯನಮಾಡುತ್ತ ತಂದೆಯನ್ನು ಶುಶ್ರೂಷೆಮಾಡಿಕೊಂಡಿದ್ದರು (೩೬). (ಹೀಗೆ ಕೆಲವು ವರ್ಷಗಳಾದಮೇಲೆ) ಅವರಿಗೆ ವಿವಾಹವನ್ನು ಮಾಡಬೇಕೆಂದು ದಶರಥನಿಗೆ ಅಪೇಕ್ಷೆಯಾಯಿತು. ಅವನು ಉಪಾಧ್ಯಾಯರಾದ ವಸಿಷ್ಠಾದಿ ಮುನಿಗಳನ್ನೂ ಬಾಂಧವರನ್ನೂ ಮಂತ್ರಿಗಳನ್ನೂ ಕರೆಸಿ ಅವರೊಡನೆ ಈ ವಿಷಯವನ್ನು ಪರ್ಯಾಲೋಚಿಸುತ್ತ ಕುಳಿತಿದ್ದನು (೩೭). ಆ ಸಮಯಕ್ಕೆ ಸರಿಯಾಗಿ ವಿಶ್ವಾಮಿತ್ರ ಮಹರ್ಷಿಗಳು ರಾಜದರ್ಶನಕ್ಕಾಗಿ ದಯಮಾಡಿಸಿದರು. ಅವರು ಅರಮನೆಯ ದ್ವಾರಪಾಲಕರನ್ನು ಕುರಿತು "ಗಾಧಿಪುತ್ರನಾದ ಕೌಶಿಕನು ಬಂದಿದ್ದಾನೆಂದು ನಿಮ್ಮ ದೊರೆಗೆ ತಿಳಿಸಿ" ಎಂದರು. ಕೂಡಲೇ ದ್ವಾರಪಾಲಕರು ಗಾಬರಿಯಿಂದ ಅರಮನೆಯೊಳಗೆ ಓಡುತ್ತ ಹೋಗಿ ವಿಶ್ವಾಮಿತ್ರರು ಬಂದ ಸುದ್ದಿ

ತೇಷಾಂ ತದ್ವಚನಂ ಶ್ರುತ್ವಾ ಸಪುರೋಧಾಃ ಸಮಾಹಿತಃ ।
ಪ್ರತ್ಯುಜ್ಜಗಾಮ ತಂ ಹೃಷ್ಟೋ ಬ್ರಹ್ಮಾಣಮಿವ ವಾಸವಃ ॥ ೪೨
ತಂ ದೃಷ್ಟ್ವಾ ಜ್ವಲಿತಂ ದೀಪ್ತ್ಯಾ ತಾಪಸಂ ಸಂಶಿತವ್ರತಮ್ ।
ಪ್ರಹೃಷ್ಟವದನೋ ರಾಜಾ ತತೋಽರ್ಘ್ಯಮುಪಹಾರಯತ್ ॥ ೪೩
ಸ ರಾಜ್ಞಃ ಪ್ರತಿಗೃಹ್ಯಾರ್ಘ್ಯಂ ಶಾಸ್ತ್ರದೃಷ್ಟೇನ ಕರ್ಮಣಾ ।
ಕುಶಲಂ ಚಾವ್ಯಯಂ ಚೈವ ಪರ್ಯಪೃಚ್ಛನ್ನರಾಧಿಪಮ್ ॥ ೪೪
ಪುರೇ ಕೋಶೇ ಜನಪದೇ ಬಾಂಧವೇಷು ಸುಹೃತ್ಸು ಚ ।
ಕುಶಲಂ ಕೌಶಿಕೋ ರಾಜ್ಞಃ ಪರ್ಯಪೃಚ್ಛತ್ ಸುಧಾರ್ಮಿಕಃ ॥ ೪೫
ಅಪಿ ತೇ ಸಂನತಾಃ ಸರ್ವೇ ಸಾಮಂತಾ ರಿಪವೋ ಜಿತಾಃ ।
ದೈವಂ ಚ ಮಾನುಷಂ ಚಾಪಿ ಕರ್ಮ ತೇ ಸಾಧ್ವನುಷ್ಠಿತಮ್ ॥ ೪೬
ವಸಿಷ್ಠಂ ಚ ಸಮಾಗಮ್ಯ ಕುಶಲಂ ಮುನಿಪುಂಗವಃ ।
ಋಷೀಂಶ್ಚಾನ್ಯಾನ್ ಯಥಾನ್ಯಾಯಂ ಮಹಾಭಾಗಾನುವಾಚ ಹ ॥
ತೇ ಸರ್ವೇ ಹೃಷ್ಟಮನಸಸ್ತಸ್ಯ ರಾಜ್ಞೋ ನಿವೇಶನಮ್ ।
ವಿವಿಶುಃ ಪೂಜಿತಾಸ್ತತ್ರ ನಿಷೇದುಶ್ಚ ಯಥಾರ್ಹತಃ ॥ ೪೮

ಯನ್ನು ದಶರಥನಿಗೆ ನಿವೇದಿಸಿದರು (೩೮–೪೧). ಅದನ್ನು ಕೇಳಿ ದಶರಥನಿಗೆ ಆನಂದವಾಯಿತು. ಇಂದ್ರನು ಬ್ರಹ್ಮನನ್ನು ಎದುರುಗೊಳ್ಳುವಂತೆ ವಿಶ್ವಾಮಿತ್ರ ರನ್ನು ಎದುರುಗೊಳ್ಳಲು ಪುರೋಹಿತರೊಡನೆ ಹೊರಟನು. ವಿಶ್ವಾಮಿತ್ರರು ಮಹಾತಪಸ್ವಿಗಳು. ಕಠೋರನಿಯಮಶಾಲಿಗಳು. ತೇಜಸ್ಸಿನಿಂದ ಜ್ವಲಿಸು ತ್ತಿದ್ದರು. ಅವರನ್ನು ಕಂಡು ರಾಜನ ಮುಖವು ಅರಳಿತು. ಅವರಿಗೆ ವಿಧಿಪೂರ್ವಕ ವಾಗಿ ಅರ್ಘ್ಯವನ್ನು ಕೊಟ್ಟು ಉಪಚರಿಸಿದನು (೪೨–೪೩). ವಿಶ್ವಾಮಿತ್ರರು ಅರ್ಘ್ಯವನ್ನು ಸ್ವೀಕರಿಸಿ ದಶರಥನ ಕುಶಲವನ್ನು ವಿಚಾರಿಸಿದರು. ರಾಜಧಾನಿ, ರಾಜ್ಯ, ಭಂಡಾರ, ಬಾಂಧವರು, ಮಿತ್ರರು—ಇವರೆಲ್ಲರ ಯೋಗಕ್ಷೇಮವನ್ನು ಕೇಳಿದರು (೪೪–೪೫). "ದಶರಥ, ಸಾಮಂತರಾಜರು ನಿನಗೆ ವಿಧೇಯರಾಗಿ ದ್ದಾರೆಯೆ ? ಶತ್ರುಗಳನ್ನೆಲ್ಲಾ ಗೆದ್ದಿರುವೆಯಷ್ಟೆ ? ದೇವತೆಗಳಿಗೂ ಮನುಷ್ಯರಿಗೂ ಪ್ರೀತಿದಾಯಕವಾದ ಕರ್ತವ್ಯಗಳನ್ನು ಚೆನ್ನಾಗಿ ಮಾಡುತ್ತಿರುವೆಯಾ ?" ಎಂದರು. ಅನಂತರ ವಸಿಷ್ಠರನ್ನೂ ಇತರ ಮುನಿಗಳನ್ನೂ ಮಾತನಾಡಿಸಿ ಕುಶಲವನ್ನು ವಿಚಾರಿಸಿದರು (೪೬–೪೭). ಆಮೇಲೆ ಅವರೆಲ್ಲರೂ ಸಂತೋಷದಿಂದ ರಾಜ

ಅಥ ಹೃಷ್ಟಮನಾ ರಾಜಾ ವಿಶ್ವಾಮಿತ್ರಂ ಮಹಾಮುನಿಮ್ ।
ಉವಾಚ ಪರಮೋದಾರೋ ಹೃಷ್ಟಸ್ತಮಭಿಪೂಜಯನ್ ॥ ೪೯

ಯಥಾಮೃತಸ್ಯ ಸಂಪ್ರಾಪ್ತಿರ್ಯಥಾ ವರ್ಷಮನೂದಕೇ ।
ಯಥಾ ಸದೃಶದಾರೇಷು ಪುತ್ರಜನ್ಮಾಪ್ರಜಸ್ಯ ಚ ॥ ೫೦

ಪ್ರಣಷ್ಟಸ್ಯ ಯಥಾ ಲಾಭೋ ಯಥಾ ಹರ್ಷೋ ಮಹೋದಯೇ ।
ತಥೈವಾಗಮನಂ ಮನ್ಯೇ ಸ್ವಾಗತಂ ತೇ ಮಹಾಮುನೇ ॥ ೫೧

ಕಂ ಚ ತೇ ಪರಮಂ ಕಾಮಂ ಕರೋಮಿ ಕಿಮು ಹರ್ಷಿತಃ ।
ಪಾತ್ರಭೂತೋಽಸಿ ಮೇ ಬ್ರಹ್ಮನ್ ದಿಷ್ಟ್ಯಾ ಪ್ರಾಪ್ತೋಽಸಿ ಧಾರ್ಮಿಕ

ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಮ್ ।
ಪೂರ್ವಂ ರಾಜರ್ಷಿಶಬ್ದೇನ ತಪಸಾ ದ್ಯೋತಿತಪ್ರಭಃ ॥ ೫೩

ಬ್ರಹ್ಮರ್ಷಿತ್ವಮನುಪ್ರಾಪ್ತಃ ಪೂಜ್ಯೋಽಸಿ ಬಹುಧಾ ಮಯಾ ।
ತದದ್ಭುತಮಿದಂ ಬ್ರಹ್ಮನ್ ಪವಿತ್ರಂ ಪರಮಂ ಮಮ ॥ ೫೪

ಭವನವನ್ನು ಪ್ರವೇಶಿಸಿ ರಾಜನಿಂದ ಸತ್ಕೃತರಾಗಿ ತಮತಮಗೆ ಯೋಗ್ಯವಾದ ಸ್ಥಾನಗಳಲ್ಲಿ ಕುಳಿತುಕೊಂಡರು. ದಶರಥನು ಉಲ್ಲಾಸದಿಂದ ವಿಶ್ವಾಮಿತ್ರ ಮಹರ್ಷಿಗಳನ್ನು ಗೌರವಿಸಿ “ ಮಹರ್ಷಿಗಳೆ, ತಮ್ಮ ಆಗಮನದಿಂದ ನನಗೆ ಪರಮ ಸಂತೋಷವಾಯಿತು. ತಮ್ಮ ಆಗಮನವು (ಮನುಷ್ಯನಿಗೆ) ಅಮೃತವು ದೊರಕಿದಂತೆ, ನೀರಿಲ್ಲದಾಗ ಮಳೆ ಬಂದಂತೆ, ಮಕ್ಕಳಿಲ್ಲದವನಿಗೆ ಧರ್ಮಪತ್ನಿಯಲ್ಲಿ ಮಗನು ಜನಿಸಿದಂತೆ, ಕಳೆದುಹೋದ ನಿಧಿಯು ಸಿಕ್ಕಿದಂತೆ, ಮಹೋತ್ಸವಕಾಲದಲ್ಲಿ ಹರ್ಷದಂತೆ; ತಮಗೆ ಸ್ವಾಗತ (೪೮–೫೧). ನಿಮ್ಮ ಯಾವ ಇಷ್ಟಾರ್ಥವನ್ನು ನೆರವೇರಿಸಲಿ ? ಹೇ ಬ್ರಹ್ಮರ್ಷಿಗಳೆ, ಉತ್ತಮಪಾತ್ರರಾಗಿದ್ದೀರಿ. ನನ್ನ ಭಾಗ್ಯದಿಂದ ದಯಮಾಡಿಸಿದ್ದೀರಿ. ನಾನು ಹುಟ್ಟಿದ್ದು ಈ ದಿನ ಸಫಲವಾಯಿತು. ನಾನು ಬದುಕಿದ್ದು ಸಾರ್ಥಕವಾಯಿತು (೫೨–೫೩). ಮೊದಲು ರಾಜರ್ಷಿಗಳಾಗಿದ್ದು ತಪೋಮಹಿಮೆಯಿಂದ ಬ್ರಹ್ಮರ್ಷಿಗಳಾದವರು ನೀವು. ಎಲ್ಲ ವಿಧದಲ್ಲಿಯೂ ನನಗೆ ಪೂಜ್ಯರು. ಇಲ್ಲಿಯವರೆಗೆ ನಿಮ್ಮ ಪವಿತ್ರವಾದ ಆಗಮನವಾದದ್ದು ಆಶ್ಚರ್ಯವೇ ಸರಿ. ನಿಮ್ಮ ಸಂದರ್ಶನದಿಂದ ನಾನಿದ್ದ ಸ್ಥಳವೇ

ಶುಭಕ್ಷೇತ್ರಗತಶ್ಚಾಹಂ ತವ ಸಂದರ್ಶನಾತ್ ಪ್ರಭೋ ।
ಬ್ರೂಹಿ ಯತ್ ಪ್ರಾರ್ಥಿತಂ ತುಭ್ಯಂ ಕಾರ್ಯಮಾಗಮನಂ ಪ್ರತಿ ॥

ಇಚ್ಛಾಮ್ಯನುಗೃಹೀತೋಽಹಂ ತ್ವದರ್ಥಪರಿವೃದ್ಧಯೇ ।
ಕಾರ್ಯಸ್ಯ ನ ವಿಮರ್ಶಂ ಚ ಗಂತುಮರ್ಹಸಿ ಕೌಶಿಕ ॥ ೫೬

ಕರ್ತಾ ಚಾಹಮಶೇಷೇಣ ದೈವತಂ ಹಿ ಭವಾನ್ ಮಮ ।
ಮಮ ಚಾಯಮನುಪ್ರಾಪ್ತೋ ಮಹಾನಭ್ಯುದಯೋ ದ್ವಿಜ ॥ ೫೭

ತವಾಗಮನಜಃ ಕೃತ್ಸ್ನೋ ಧರ್ಮಶ್ಚಾನುತ್ತಮೋ ಮಮ ॥

ಇತಿ ಹೃದಯಸುಖಂ ನಿಶಮ್ಯ ವಾಕ್ಯಂ
ಶ್ರುತಿಸುಖಮಾತ್ಮವತಾ ವಿನೀತಮುಕ್ತಮ್ ।
ಪ್ರಥಿತಗುಣಯಶಾ ಗುಣೈರ್ವಿಶಿಷ್ಟಃ
ಪರಮಋಷಿಃ ಪರಮಂ ಜಗಾಮ ಹರ್ಷಮ್ ॥ ೫೮

ಇತಿ ಶ್ರೀಮದ್ರಾಮಾಯಣೇ ಬಾಲಕಾಂಡೇ ಅಷ್ಟಾದಶಃ ಸರ್ಗಃ

ಪುಣ್ಯಕ್ಷೇತ್ರವಾಯಿತು. ಹೇ ಸ್ವಾಮಿ, ನಿಮಗೆ ನನ್ನಿಂದ ಏನಾಗಬೇಕು? ಬಂದ ಉದ್ದೇಶವೇನು? ಅಪ್ಪಣೆಯಾಗಬೇಕು (೫೪-೫೫). ನಿಮ್ಮ ಕಾರ್ಯವನ್ನು ನಡೆಸಿಕೊಡುವಂತೆ ನನ್ನನ್ನು ಅನುಗ್ರಹಿಸಬೇಕು. ನಡೆಸುತ್ತೇನೋ ಇಲ್ಲವೋ ಎಂದು ಸಂದೇಹಪಡಬಾರದು. ಪೂರ್ತಿಯಾಗಿ ನಡೆಸುತ್ತೇನೆ. ನನ್ನ ಭಾಗಕ್ಕೆ ನೀವು ದೇವರೇ ಹೌದು. ನನಗೆ ಒಂದು ಭಾಗ್ಯವೇ ಒದಗಿಬಂದಿತು. ನಿಮ್ಮ ಆಗಮನದಿಂದ ಧರ್ಮದ ಎಲ್ಲ ಉತ್ತಮ ಫಲವೂ ದೊರಕಿತು" ಎಂದು ಹೇಳಿದನು (೫೬-೫೭). ಹೀಗೆ ಧೀಮಂತನಾದ ದಶರಥನು ವಿನಯದಿಂದ ಹೇಳಿದ ಹೃದಯಾನಂದಕರವಾದ ಮಾತನ್ನು ಕೇಳಿ ಗುಣಶಾಲಿಗಳೂ ಗುಣಗ್ರಾಹಿಗಳೂ ಆದ ವಿಶ್ವಾಮಿತ್ರಮುನಿಗಳಿಗೆ ಪರಮ ಹರ್ಷವಾಯಿತು (೫೮).

ಇಲ್ಲಿಗೆ ಶ್ರೀಮದ್ರಾಮಾಯಣದ ಬಾಲಕಾಂಡದಲ್ಲಿ ಹದಿನೆಂಟನೆಯ ಸರ್ಗ

ಕೌಸಲ್ಯಾಽಜನಯದ್ರಾಮಂ ಸರ್ವಲಕ್ಷಣಸಂಯುತಮ್ ।

—ಪುಟ ೨೧

ಶ್ರೀರಾಮಚಂದ್ರನ ಜನನಕಾಲವನ್ನು ಜ್ಯೋತಿಃಶಾಸ್ತ್ರದ ಪ್ರಕಾರ ಗೊತ್ತು ಪಡಿಸಿ ಜಾತಕವನ್ನು ಸಾಂಪ್ರದಾಯಿಕವಾಗಿ ತಿಳಿಸಿದ್ದಾರೆ.

ವೈವಸ್ವತಮನ್ವಂತರದ ತ್ರೇತಾಯುಗದಲ್ಲಿ ಮೂವತ್ತುಸಾವಿರ ವರ್ಷಗಳು ಅವಶಿಷ್ಟವಾಗಿರುವಾಗ ಪ್ರಾಪ್ತವಾದ ವಿಳಂಬಿನಾಮ ಸಂವತ್ಸರದ ಮೇಷಮಾಸ ಚೈತ್ರ ಶುಕ್ಲ ನವಮೀ ಬುಧವಾರ ಪುನರ್ವಸು ನಕ್ಷತ್ರ ಮಧ್ಯಾಹ್ನ ಸಮಯದಲ್ಲಿ ಕರ್ಕಾಟಕಲಗ್ನ ಕರ್ಕಾಟಕರಾಶಿಯಲ್ಲಿ ಶ್ರೀರಾಮಚಂದ್ರನ ಜನನ. ಆ ಕಾಲದಲ್ಲಿ ಸೂರ್ಯ, ಕುಜ, ಗುರು, ಶುಕ್ರ ಮತ್ತು ಶನಿ—ಈ ಪಂಚಗ್ರಹಗಳು ಉಚ್ಚವಾಗಿದ್ದರು. ಚಂದ್ರನು ಸ್ವಕ್ಷೇತ್ರಗತನಾಗಿಯೂ ಬುಧನು ನೀಚನಾಗಿಯೂ ಇದ್ದರು. ಜನ್ಮಕಾಲದಲ್ಲಿ ಗುರುದಶಾಶೇಷ ೪ ವರ್ಷ.

ತಾತ್ಕಾಲಿಕ ಗ್ರಹಸ್ಥಿತಿ

ಗ್ರಹ	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ	ರಾಹು	ಕೇತು
ನಕ್ಷತ್ರ	ಅಶ್ವಿನೀ	ಪುನ	ಶ್ರವಣ	ಉತ್ತರಾ ಭಾದ್ರ	ಪುಷ್ಯ	ರೇವತಿ	ಸ್ವಾತಿ	ಪುಬ್ಬ	ಪೂರ್ವಾ ಭಾದ್ರ
ಪಾದ	೩	೪	೩	೩	೧	೪	೪	೪	೨

ಬುಧ ಶುಕ್ರ	ರವಿ		
ಕೇತು	ಲಗ್ನಕುಂಡಲಿ		ಲಗ್ನ ಚಂದ್ರ ಗುರು
ಕುಜ			ರಾಹು
		ಶನಿ	

ಶುಕ್ರ ಶನಿ		ಕೇತು	ರವಿ ಕುಜ
	ಅಂಶಕುಂಡಲಿ		ಚಂದ್ರ
			ಗುರು
•	ರಾಹು	ಬುಧ	

ತ್ರಿಸಪ್ತತಿತಮಃ ಸರ್ಗಃ

ಸೀತಾಪರಿಣಯಃ

ಯಸ್ಮಿಂಸ್ತು ದಿವಸೇ ರಾಜಾ ಚಕ್ರೇ ಗೋದಾನಮುತ್ತಮಮ್ ।
ತಸ್ಮಿಂಸ್ತು ದಿವಸೇ ಶೂರೋ ಯುಧಾಜಿತ್ ಸಮುಪೇಯಿವಾನ್ ॥ ೧

ಪುತ್ರಃ ಕೇಕಯರಾಜಸ್ಯ ಸಾಕ್ಷಾದ್ಭರತಮಾತುಲಃ ।
ದೃಷ್ಟ್ವಾ ಪೃಷ್ಟ್ವಾ ಚ ಕುಶಲಂ ರಾಜಾನಮಿದಮಬ್ರವೀತ್ ॥ ೨

ಕೇಕಯಾಧಿಪತೀ ರಾಜಾ ಸ್ನೇಹಾತ್ ಕುಶಲಮಬ್ರವೀತ್ ।
ಯೇಷಾಂ ಕುಶಲಕಾಮೋऽಸಿ ತೇಷಾಂ ಸಂಪ್ರತ್ಯನಾಮಯಮ್ ॥ ೩

ಸ್ವಸ್ರೀಯಂ ಮಮ ರಾಜೇಂದ್ರ ದ್ರಷ್ಟುಕಾಮೋ ಮಹೀಪತಿಃ ।
ತದರ್ಥಮುಪಯಾತೋऽಹಮಯೋಧ್ಯಾಂ ರಘುನಂದನ ॥ ೪

ಶ್ರುತ್ವಾ ತ್ವಹಮಯೋಧ್ಯಾಯಾಂ ವಿವಾಹಾರ್ಥಂ ತವಾತ್ಮಜಾನ್ ।
ಮಿಥಿಲಾಮುಪಯಾತಾಂಸ್ತು ತ್ವಯಾ ಸಹ ಮಹೀಪತೇ ॥ ೫

ಸರ್ಗ ೭೩

ಶ್ರೀರಾಮ ಲಕ್ಷ್ಮಣ ಭರತ ಶತ್ರುಘ್ನರ ವಿವಾಹ

ದಶರಥನು ತನ್ನ ಮಕ್ಕಳಿಗೆ ಸಮಾವರ್ತನೆಯನ್ನು ನೆರವೇರಿಸಿದ ದಿವಸವೇ ಕೇಕಯರಾಜನ ಪುತ್ರನಾದ ಯುಧಾಜಿತನು ಅಲ್ಲಿಗೆ ಬಂದನು. ಅವನು ಭರತನ ಸೋದರಮಾವ. ಯುಧಾಜಿತನು ದಶರಥನನ್ನು ಸಂದರ್ಶಿಸಿ ಕುಶಲವನ್ನು ವಿಚಾರಿಸುತ್ತ ಹೀಗೆಂದನು (೧-೨): "ಮಹಾರಾಜ, ಕೇಕಯಾಧಿಪತಿಯು ನಿಮ್ಮೆಲ್ಲರ ಕ್ಷೇಮವನ್ನು ಸ್ನೇಹದಿಂದ ವಿಚಾರಿಸಿದ್ದಾನೆ. ನೀನು ಯಾರಿಗೆ ಕುಶಲವನ್ನು ಕೋರುವೆಯೋ ಅಂಥ ನಾವೆಲ್ಲರೂ ಸಾಂಪ್ರತದಲ್ಲಿ ಕುಶಲದಿಂದ ಇದ್ದೇವೆ. ಮಹಾರಾಜನು ನನ್ನ ಸೋದರಳಿಯನನ್ನು ನೋಡಲು ಬಯಸಿದ್ದರಿಂದ ಅವನನ್ನು ಕರೆದುಕೊಂಡು ಹೋಗುವುದಕ್ಕಾಗಿ ನಾನು ಅಯೋಧ್ಯೆಗೆ ಬಂದೆನು (೩-೪). ಅಲ್ಲಿ ವಿವಾಹದ ವೃತ್ತಾಂತ ತಿಳಿಯಿತು. ನೀವೆಲ್ಲರೂ ಮಿಥಿಲೆಗೆ ಬಂದಿದ್ದೀರೆಂಬು

ತ್ವರಯಾಭ್ಯುಪಯಾತೋಽಹಂ ದ್ರಷ್ಟುಕಾಮಃ ಸ್ವಸುಃ ಸುತಮ್ ।
ಅಥ ರಾಜಾ ದಶರಥಃ ಪ್ರಿಯಾತಿಥಿಮುಪಸ್ಥಿತಮ್ ॥ ೬

ದೃಷ್ಟ್ವಾ ಪರಮಸತ್ಕಾರೈಃ ಪೂಜನಾರ್ಹಮಪೂಜಯತ್ ।
ತತಸ್ತಾಮುಷಿತೋ ರಾತ್ರಿಂ ಸಹ ಪುತ್ರೈರ್ಮಹಾತ್ಮಭಿಃ ॥ ೭

ಪ್ರಭಾತೇ ಪುನರುತ್ಥಾಯ ಕೃತ್ವಾ ಕರ್ಮಾಣಿ ಕರ್ಮವಿತ್ ।
ಋಷೀಂಸ್ತದಾ ಪುರಸ್ಕೃತ್ಯ ಯಜ್ಞವಾಟಮುಪಾಗಮತ್ ॥ ೮

ಯುಕ್ತೇ ಮುಹೂರ್ತೇ ವಿಜಯೇ ಸರ್ವಾಭರಣಭೂಷಿತೈಃ ।
ಭ್ರಾತೃಭಿಃ ಸಹಿತೋ ರಾಮಃ ಕೃತಕೌತುಕಮಂಗಲಃ ॥ ೯

ವಸಿಷ್ಠಂ ಪುರತಃ ಕೃತ್ವಾ ಮಹರ್ಷೀನಪರಾನಪಿ ।
ಪಿತುಃ ಸಮೀಪಮಾಶ್ರಿತ್ಯ ತಸ್ಥೌ ಭ್ರಾತೃಭಿರಾವೃತಃ ॥ ೧೦

ವಸಿಷ್ಠೋ ಭಗವಾನೇತ್ಯ ವೈದೇಹಮಿದಮಬ್ರವೀತ್ ।
ರಾಜಾ ದಶರಥೋ ರಾಜನ್ ಕೃತಕೌತುಕಮಂಗಲೈಃ ॥ ೧೧

ದನ್ನು ತಿಳಿದು ನಾನು ಇಲ್ಲಿಗೆ ಬಂದೆನು. ಭರತನನ್ನು ನೋಡುವ ಉದ್ದೇಶದಿಂದ ನಾನು ಕೂಡಲೆ ಹೊರಟು ಬರಬೇಕಾಯಿತು.” ಆಗ ದಶರಥನು ಪ್ರಿಯನಾದ ಅತಿಥಿಯು ಬಂದನೆಂದು ಸಂಪ್ರೀತನಾಗಿ ಯುಧಾಜಿತನನ್ನು ಆದರದಿಂದ ಸತ್ಕರಿಸಿದನು (೫–೬). ರಾತ್ರಿ ಕಳೆದು ಬೆಳಗಾಯಿತು. ದಶರಥರಾಜನು ಎದ್ದು ಪುತ್ರರೊಡನೆ ಪ್ರಾತಃಕೃತ್ಯಗಳನ್ನು ನೆರವೇರಿಸಿ ಋಷಿಗಳನ್ನು ಮುಂದಿರಿಸಿಕೊಂಡು ಜನಕನ ಯಜ್ಞಶಾಲೆಯ ಬಳಿಗೆ ಬಂದನು (೭–೮). ಶ್ರೀರಾಮನೂ ಅವನ ತಮ್ಮಂದಿರೂ ಮಂಗಳಕಂಕಣವನ್ನು ಧರಿಸಿ ಸರ್ವಾಭರಣಭೂಷಿತರಾಗಿದ್ದರು. ಅವರೆಲ್ಲರೂ ಶುಭಲಗ್ನಯುಕ್ತವಾದ ವಿಜಯಮುಹೂರ್ತದಲ್ಲಿ ವಸಿಷ್ಠಾದಿಮಹರ್ಷಿಗಳನ್ನು ಮುಂದಿರಿಸಿಕೊಂಡು ತಂದೆಯ ಸಮೀಪದಲ್ಲಿ ಬಂದು ನಿಂತಿದ್ದರು (೯–೧೦). ವಸಿಷ್ಠರು ಜನಕರಾಜನ ಬಳಿಗೆ ಹೋಗಿ “ರಾಜ, ದಶರಥರಾಜನು ಮಂಗಳ ಕಂಕಣವನ್ನು ಧರಿಸಿದ ಪುತ್ರರೊಡನೆ ಬಂದಿದ್ದಾನೆ. ಅವನು ಕನ್ಯಾದಾತೃವಾದ ನಿನ್ನ ಪ್ರತೀಕ್ಷೆಯಲ್ಲಿದ್ದಾನೆ. ದಾತೃಪ್ರತಿಗೃಹೀತೃಗಳು ಒಟ್ಟಿಗೆ ಸೇರಿದರೆ ತಾನೆ ದಾನಧರ್ಮಾದಿ ಕಾರ್ಯಗಳು ನಡೆಯಬೇಕು? ಈಗ ವಿವಾಹವನ್ನು ನೆರವೇರಿಸಿ

ಇಯಂ ಸೀತಾ ಮಮಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥

ಪುತ್ರೈರ್ನರವರಶ್ರೇಷ್ಠ ದಾತಾರಮಭಿಕಾಂಕ್ಷತೇ ।
ದಾತೃಪ್ರತಿಗ್ರಹೀತೃಭ್ಯಾಂ ಸರ್ವಾರ್ಥಾಃ ಪ್ರಭವಂತಿ ಹಿ ॥ ೧೨

ಸ್ವಧರ್ಮಂ ಪ್ರತಿಪದ್ಯಸ್ವ ಕೃತ್ವಾ ವೈವಾಹ್ಯಮುತ್ತಮಮ್ ।
ಇತ್ಯುಕ್ತಃ ಪರಮೋದಾರೋ ವಸಿಷ್ಠೇನ ಮಹಾತ್ಮನಾ ॥ ೧೩

ಪ್ರತ್ಯುವಾಚ ಮಹಾತೇಜಾ ವಾಕ್ಯಂ ಪರಮಧರ್ಮವಿತ್ ।
ಕಃ ಸ್ಥಿತಃ ಪ್ರತಿಹಾರೋ ಮೇ ಕಸ್ಯಾಜ್ಞಾ ಸಂಪ್ರತೀಕ್ಷ್ಯತೇ ॥ ೧೪

ಸ್ವಗೃಹೇ ಕೋ ವಿಚಾರೋಽಸ್ತಿ ಯಥಾ ರಾಜ್ಯಮಿದಂ ತವ ।
ಕೃತಕೌತುಕಸರ್ವಸ್ವಾ ವೇದಿಮೂಲಮುಪಾಗತಾಃ ॥ ೧೫

ಮಮ ಕನ್ಯಾ ಮುನಿಶ್ರೇಷ್ಠ ದೀಪ್ತಾ ವಹ್ನೇರ್ಯಥಾರ್ಚಿಷಃ ।
ಸಜ್ಜೋಽಹಂ ತ್ವತ್ಪ್ರತೀಕ್ಷೋಽಸ್ಮಿ ವೇದ್ಯಾಮಸ್ಯಾಂ ಪ್ರತಿಷ್ಠಿತಃ ॥ ೧೬

ಅವಿಘ್ನಂ ಕ್ರಿಯತಾಂ ಸರ್ವಂ ಕಿಮರ್ಥಂ ಹಿ ವಿಲಂಬ್ಯತೇ ।
ತದ್ವಾಕ್ಯಂ ಜನಕೇನೋಕ್ತಂ ಶ್ರುತ್ವಾ ದಶರಥಸ್ತದಾ ॥ ೧೭

ಪ್ರವೇಶಯಾಮಾಸ ಸುತಾನ್ ಸರ್ವಾನೃಷಿಗಣಾನಪಿ ।
ತತೋ ರಾಜಾ ವಿದೇಹಾನಾಂ ವಸಿಷ್ಠಮಿದಮಬ್ರವೀತ್ ॥ ೧೮

ಕೊಡುವುದು ನಿನ್ನ ಧರ್ಮ" ಎಂದು ನುಡಿದರು (೧೧–೧೨). ಆಗ ಉದಾರ ಸ್ವಭಾವದವನೂ ಧರ್ಮಜ್ಞನೂ ಆದ ಜನಕನು "ಮುನಿಶ್ರೇಷ್ಠರೆ, ಬಾಗಿಲಲ್ಲಿ ಯಾವನಾದರೂ ಕಾವಲುಗಾರನಿದ್ದಾನೆಯೇ ? ಯಾರ ಆಜ್ಞೆಗಾಗಿ ನೀವು ಕಾಯಬೇಕು ? (೧೩–೧೪). ನಿಮ್ಮ ಮನೆಯಲ್ಲಿ ವಿಚಾರಿಸಬೇಕಾದ್ದು ತಾನೆ ಏನಿದೆ? ಇದೆಲ್ಲವೂ ನಿಮ್ಮ ರಾಜ್ಯವೆಂದೇ ಭಾವಿಸಬೇಕು. ನನ್ನ ಕುಮಾರಿಯರಿಗೆ ವಿವಾಹೋಚಿತವಾದ ಮಂಗಳಾಚಾರಗಳೆಲ್ಲವನ್ನೂ ನೆರವೇರಿಸಿದ್ದೇನೆ. ಅವರು ಹೋಮವೇದಿಕೆಯ ಸಮೀಪದಲ್ಲಿ ಅಗ್ನಿಜ್ವಾಲೆಗಳಂತೆ ವಿರಾಜಿಸುತ್ತಿದ್ದಾರೆ. ನಾನು ಸಿದ್ಧನಾಗಿ ಈ ವೇದಿಕೆಯಲ್ಲಿ ನಿಮ್ಮೆಲ್ಲರನ್ನೂ ಪ್ರತೀಕ್ಷೆಮಾಡುತ್ತಿದ್ದೇನೆ (೧೫–೧೬). ವಿಳಂಬವಿಲ್ಲದೆ ಎಲ್ಲವೂ ನಡೆಯಲಿ. (ಯಜ್ಞಶಾಲೆಯ ಬಾಗಿಲಿನಲ್ಲಿ) ತಡಮಾಡುವುದೇಕೆ ?" ಎಂದನು. ಅನಂತರ ದಶರಥನು ತನ್ನ ಮಕ್ಕಳನ್ನೂ

ಕಾರಯಸ್ವ ಋಷೇ ಸರ್ವವೃಷಿಭಿಃ ಸಹ ಧಾರ್ಮಿಕ ।
ರಾಮಸ್ಯ ಲೋಕರಾಮಸ್ಯ ಕ್ರಿಯಾಂ ವೈವಾಹಿಕೀಂ ಪ್ರಭೋ ॥ ೧೯

ತಥೇತ್ಯುಕ್ತ್ವಾ ತು ಜನಕಂ ವಸಿಷ್ಠೋ ಭಗವಾನೃಷಿಃ ।
ವಿಶ್ವಾಮಿತ್ರಂ ಪುರಸ್ಕೃತ್ಯ ಶತಾನಂದಂ ಚ ಧಾರ್ಮಿಕಮ್ ॥ ೨೦

ಪ್ರಪಾಮಧ್ಯೇ ತು ವಿಧಿವದ್ವೇದಿಂ ಕೃತ್ವಾ ಮಹಾತಪಾಃ ।
ಅಲಂಚಕಾರ ತಾಂ ವೇದಿಂ ಗಂಧಪುಷ್ಪೈಃ ಸಮಂತತಃ ॥ ೨೧

ಸುವರ್ಣಪಾಲಿಕಾಭಿಶ್ಚ ಛಿದ್ರಕುಂಭೈಶ್ಚ ಸಾಂಕುರೈಃ ।
ಅಂಕುರಾಢ್ಯೈಃ ಶರಾವೈಶ್ಚ ಧೂಪಪಾತ್ರೈಃ ಸಧೂಪಕೈಃ ॥ ೨೨

ಶಂಖಪಾತ್ರೈಃ ಸ್ರುವೈಃ ಸ್ರುಗ್ಭಿಃ ಪಾತ್ರೈ ರರ್ಘ್ಯಾಭಿಪೂರಿತೈಃ ।
ಲಾಜಪೂರ್ಣೈಶ್ಚ ಪಾತ್ರೀಭಿರಕ್ಷತೈರಪಿ ಸಂಸ್ಕೃತೈಃ ॥ ೨೩

ದರ್ಭೈಃ ಸಮೈಃ ಸಮಾಸ್ತೀರ್ಯ ವಿಧಿವನ್ಮಂತ್ರಪೂರ್ವಕಮ್ ।
ಅಗ್ನಿಮಾಧಾಯ ವೇದ್ಯಾಂ ತು ವಿಧಿಮಂತ್ರಪುರಸ್ಕೃತಮ್ ॥ ೨೪

ಋಷಿಗಳನ್ನೂ ಕರೆದುಕೊಂಡು ಒಳಕ್ಕೆ ಬಂದನು. ಜನಕರಾಜನು ವಸಿಷ್ಠರನ್ನು ಕುರಿತು "ಧರ್ಮಜ್ಞರೆ, ನೀವು ಋಷಿಸಹಿತರಾಗಿ ಲೋಕಪ್ರಿಯನಾದ ರಾಮನ ವಿವಾಹವನ್ನು ಮಾಡಿಸಿರಿ" ಎಂದನು (೧೭–೧೯). ವಸಿಷ್ಠರು ವಿಶ್ವಾಮಿತ್ರರನ್ನೂ ಶತಾನಂದರನ್ನೂ ಜೊತೆಗೂಡಿ ವಿವಾಹಮಂಟಪದ ಮಧ್ಯದಲ್ಲಿ ವಿಧಿವತ್ತಾಗಿ ಹೋಮಕುಂಡವನ್ನು ರಚಿಸಿ ಗಂಧಪುಷ್ಪಗಳಿಂದ ಸುತ್ತಲೂ ಅಲಂಕರಿಸಿದರು (೨೦–೨೧). ಸುವರ್ಣಕಲಶಗಳು, ಅಂಕುರಗಳಿಂದ ತುಂಬಿದ ರಂಧ್ರಯುಕ್ತ ಕಲಶಗಳು, ಹರಿವಾಣಗಳು, ಧೂಪ ತುಂಬಿದ ಪಾತ್ರೆಗಳು, ಶಂಖಗಳು, ಸ್ರುವಸ್ರುಕ್ಕು*ಗಳು, ಜಲಪೂರ್ಣ ಪಾತ್ರೆಗಳು, ಅರಳು ತುಂಬಿದ ಪಾತ್ರೆಗಳು, ಅಕ್ಷತೆ—ಇವುಗಳನು ವೇದಿಯ ಸುತ್ತ ಆಯಾ ಸ್ಥಾನಗಳಲ್ಲಿಟ್ಟರು (೨೨–೨೩). ಸಮಸಂಖ್ಯೆಯ ದರ್ಭೆಗಳನ್ನು ವಿಧಿವತ್ತಾಗಿ ಆಸ್ತರಣ ಮಾಡಿದರು. ವೇದಿಯಲ್ಲಿ ಮಂತ್ರಪೂರ್ವಕವಾಗಿ ಅಗ್ನಿಯನ್ನು ಪ್ರತಿಷ್ಠಾಪಿಸಿ ಶಾಸ್ತ್ರೋಕ್ತವಾದ ರೀತಿಯಲ್ಲಿ ಹೋಮ ಮಾಡಿದರು.

---

* ಸ್ರುವ ಸ್ರುಕ್ಕು—ಇವೆರಡೂ ಯಜ್ಞಪಾತ್ರೆಗಳು.

ಜುಹಾವಾಗ್ನೌ ಮಹಾತೇಜಾ ವಸಿಷ್ಠೋ ಭಗವಾನೃಷಿಃ ।
ತತಃ ಸೀತಾಂ ಸಮಾನೀಯ ಸರ್ವಾಭರಣಭೂಷಿತಾಮ್ ॥ ೨೫

ಸಮಕ್ಷಮಗ್ನೇಃ ಸಂಸ್ಥಾಪ್ಯ ರಾಘವಾಭಿಮುಖೇ ತದಾ ।
ಅಬ್ರವೀಜ್ಜನಕೋ ರಾಜಾ ಕೌಸಲ್ಯಾನಂದವರ್ಧನಮ್ ॥ ೨೬

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ॥ ೨೭

ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ ।
ಇತ್ಯುಕ್ತ್ವಾ ಪ್ರಾಕ್ಷಿಪದ್ರಾಜಾ ಮಂತ್ರಪೂತಂ ಜಲಂ ತದಾ ॥ ೨೮

ಸಾಧು ಸಾಧ್ವಿತಿ ದೇವಾನಾಮೃಷೀಣಾಂ ವದತಾಂ ತದಾ ।
ದೇವದುಂದುಭಿನಿರ್ಘೋಷಃ ಪುಷ್ಪವರ್ಷೋ ಮಹಾನಭೂತ್ ॥ ೨೯

ಏವಂ ದತ್ತ್ವಾ ಸುತಾಂ ಸೀತಾಂ ಮಂತ್ರೋದಕಪುರಸ್ಕೃತಾಮ್ ।
ಅಬ್ರವೀಜ್ಜನಕೋ ರಾಜಾ ಹರ್ಷೇಣಾಭಿಪರಿಪ್ಲುತಃ ॥ ೩೦

ಅನಂತರ ಜನಕರಾಜನು ಸರ್ವಾಭರಣಭೂಷಿತಳಾದ ಸೀತಾದೇವಿಯನ್ನು ಕರೆತಂದು ಅಗ್ನಿಯ ಸಮಕ್ಷದಲ್ಲಿ ಶ್ರೀರಾಮನಿಗೆ ಅಭಿಮುಖವಾಗಿ ನಿಲ್ಲಿಸಿದನು (೨೫–೨೬). ಅವನು ಕೌಸಲ್ಯಾತನಯನಾದ ಶ್ರೀರಾಮಚಂದ್ರನನ್ನು ಉದ್ದೇಶಿಸಿ "ನನ್ನ ಮಗಳಾದ ಈ ಸೀತೆಯು ನಿನಗೆ ಸಹಧರ್ಮಚಾರಿಣಿಯಾಗಿರುತ್ತಾಳೆ. ಇವಳನ್ನು ಸ್ವೀಕರಿಸು. ನಿನಗೆ ಮಂಗಳವಾಗಲಿ. ಇವಳ ಪಾಣಿಯನ್ನು ಗ್ರಹಣಮಾಡು. ಈ ಸೀತೆಯು ಪತಿವ್ರತೆಯೂ ಭಾಗ್ಯಶಾಲಿನಿಯೂ ಆಗಿ ನೆರಳಿನಂತೆ ಸದಾ ನಿನ್ನನ್ನು ಅನುಸರಿಸಿಕೊಂಡಿರುವಳು" ಎಂದು ಹೇಳಿ ಶ್ರೀರಾಮನ ಹಸ್ತದಲ್ಲಿ ಮಂತ್ರಪೂತವಾದ ನೀರನ್ನು ಬಿಟ್ಟು ಧಾರೆಯೆರೆದನು (೨೭–೨೮). ದೇವತೆಗಳೂ ಋಷಿಗಳೂ 'ಬಹಳ ಒಳ್ಳೆಯದಾಯಿತು. ಭಲಾ! ಭಲಾ!' ಎಂದು ಉದ್ಗಾರಮಾಡಿದರು. ದೇವ ದುಂದುಭಿಗಳು ಮೊಳಗಿದವು. ಪುಷ್ಪವೃಷ್ಟಿ ಸುರಿಯಿತು (೨೯). ಜನಕರಾಜನು ಆನಂದದಲ್ಲಿ ಮುಳುಗಿದನು. ಹೀಗೆ ಸುತೆಯಾದ ಸೀತೆಯನ್ನು ಮಂತ್ರೋದಕ ಪೂರ್ವಕವಾಗಿ ಪಾಣಿಗ್ರಹಣಮಾಡಿಸಿ, "ಲಕ್ಷ್ಮಣ, ಇತ್ತ ಬಾ. ನಿನಗೆ ಮಂಗಳ ವಾಗಲಿ; ನಾನು ಕೊಟ್ಟಿರುವ ಊರ್ಮಿಳೆಯನ್ನು ಸ್ವೀಕರಿಸು. ಇವಳ ಪಾಣಿ

ಲಕ್ಷ್ಮಣಾಗಚ್ಛ ಭದ್ರಂ ತೇ ಊರ್ಮಿಲಾಮುದ್ಯತಾಂ ಮಯಾ ।
ಪ್ರತೀಚ್ಛ ಪಾಣಿಂ ಗೃಹ್ಣೀಷ್ವ ಮಾ ಭೂತ್ ಕಾಲಸ್ಯ ಪರ್ಯಯಃ ॥

ತಮೇವಮುಕ್ತ್ವಾ ಜನಕೋ ಭರತಂ ಚಾಭ್ಯಭಾಷತ ।
ಪಾಣಿಂ ಗೃಹಾಣ ಮಾಂಡವ್ಯಾಃ ಪಾಣಿನಾ ರಘುನಂದನ ॥ ೩೨

ಶತ್ರುಘ್ನಂ ಚಾಪಿ ಧರ್ಮಾತ್ಮಾ ಅಬ್ರವೀಜ್ಜನಕೇಶ್ವರಃ ।
ಶ್ರುತಕೀರ್ತ್ಯಾ ಮಹಾಬಾಹೋ ಪಾಣಿಂ ಗೃಹ್ಣೀಷ್ವ ಪಾಣಿನಾ ॥ ೩೩

ಸರ್ವೇ ಭವಂತಃ ಸೌಮ್ಯಾಶ್ಚ ಸರ್ವೇ ಸುಚರಿತವ್ರತಾಃ ।
ಪತ್ನೀಭಿಃ ಸಂತು ಕಾಕುತ್ಸ್ಥಾ ಮಾ ಭೂತ್ ಕಾಲಸ್ಯ ಪರ್ಯಯಃ ॥

ಜನಕಸ್ಯ ವಚಃ ಶ್ರುತ್ವಾ ಪಾಣೀನ್ ಪಾಣಿಭಿರಸ್ಪೃಶನ್ ।
ಚತ್ವಾರಸ್ತೇ ಚತಸೃಣಾಂ ವಸಿಷ್ಠಸ್ಯ ಮತೇ ಸ್ಥಿತಾಃ ॥ ೩೫

ಅಗ್ನಿಂ ಪ್ರದಕ್ಷಿಣಂ ಕೃತ್ವಾ ವೇದಿಂ ರಾಜಾನಮೇವ ಚ ।
ಋಷೀಂಶ್ಚೈವ ಮಹಾತ್ಮಾನಃ ಸಭಾರ್ಯಾ ರಘುಸತ್ತಮಾಃ ॥ ೩೬

ಯನ್ನು ಗ್ರಹಣಮಾಡು. ಕಾಲಾತಿಕ್ರಮಣವಾದೀತು" ಎಂದನು (೩೦-೩೧). ಅನಂತರ ಜನಕನು ಭರತನನ್ನು ಕರೆದು "ರಘುನಂದನ, ಮಾಂಡವಿಯ ಪಾಣಿಗ್ರಹಣ ಮಾಡು" ಎಂದು ಹೇಳಿ, ಶತ್ರುಘ್ನನನ್ನುದ್ದೇಶಿಸಿ "ಮಹಾಬಾಹು, ನೀನು ಶ್ರುತಕೀರ್ತಿಯ ಪಾಣಿಗ್ರಹಣ ಮಾಡು" ಎಂದು ನುಡಿದನು* (೩೨-೩೩). ಆಮೇಲೆ ನಾಲ್ವರನ್ನೂ ಸಂಬೋಧಿಸಿ "ರಾಜಪುತ್ರರೆ, ನೀವೆಲ್ಲರೂ ಸೌಮ್ಯಸ್ವಭಾವದವರು. ಬ್ರಹ್ಮಚರ್ಯಾದಿ ವ್ರತವನ್ನು ಪಾಲಿಸಿದವರು. ಇನ್ನುಮೇಲೆ ಪತ್ನೀಸಮೇತರಾಗಿರಿ. ಕಾಲವಿಳಂಬ ಬೇಡ" ಎಂದನು (೩೪). ಆಗ ರಾಜಪುತ್ರರು ವಸಿಷ್ಠರ ಅನುಜ್ಞೆಯಂತೆ ನಾಲ್ವರು ರಾಜಕುಮಾರಿಯರನ್ನು ಯಥಾಕ್ರಮವಾಗಿ ಪಾಣಿಗ್ರಹಣಮಾಡಿದರು (೩೫). ಅನಂತರ ಆ ರಾಜಪುತ್ರರು ತಮ್ಮ ತಮ್ಮ

* ಲಕ್ಷ್ಮಣನು ಭರತನಿಗಿಂತ ಚಿಕ್ಕವನಾದರೂ ಭಿನ್ನೋದರನಾದ್ದರಿಂದ ಭರತನಿಗಿಂತ ಮೊದಲು ಅವನ ಪಾಣಿಗ್ರಹಣ ದೋಷಾವಹವಲ್ಲ. ಜನಕರಾಜನು ಜ್ಯೇಷ್ಠನಾದ್ದರಿಂದ ಇಲ್ಲಿ ಭರತಶತ್ರುಘ್ನರನ್ನುದ್ದೇಶಿಸಿ ಮಾತನಾಡಿದ್ದಾನೆ. ಅವರಿಗೆ ಕನ್ಯಾದಾನ ಮಾಡಿದವನು ಕುಶಧ್ವಜ.

ಯಥೋಕ್ತೇನ ತದಾ ಚಕ್ರುರ್ವಿವಾಹಂ ವಿಧಿಪೂರ್ವಕಮ್ ।
ಕಾಕುತ್ಸ್ಥೈಶ್ಚ ಗೃಹೀತೇಷು ಲಲಿತೇಷು ಚ ಪಾಣಿಷು ॥ ೩೭

ಪುಷ್ಪವೃಷ್ಟಿರ್ಮಹತ್ಯಾಸೀದಂತರಿಕ್ಷಾತ್ ಸುಭಾಸ್ವರಾ ।
ದಿವ್ಯದುಂದುಭಿನಿರ್ಘೋಷೈರ್ಗೀತವಾದಿತ್ರನಿಃಸ್ವನೈಃ ॥ ೩೮

ನನೃತುಶ್ಚಾಪ್ಸರಃಸಂಘಾ ಗಂಧರ್ವಾಶ್ಚ ಜಗುಃ ಕಲಮ್ ।
ವಿವಾಹೇ ರಘುಮುಖ್ಯಾನಾಂ ತದದ್ಭುತಮದೃಶ್ಯತ ॥ ೩೯

ಈದೃಶೇ ವರ್ತಮಾನೇ ತು ತೂರ್ಯೋದ್ಘುಷ್ಟನಿನಾದಿತೇ ।
ತ್ರಿರಗ್ನಿಂ ತೇ ಪರಿಕ್ರಮ್ಯ ಊಹುರ್ಭಾರ್ಯಾ ಮಹೌಜಸಃ ॥ ೪೦

ಅಥೋಪಕಾರ್ಯಾಂ ಜಗ್ಮುಸ್ತೇ ಸಭಾರ್ಯಾ ರಘುನಂದನಾಃ ।
ರಾಜಾಪ್ಯನುಯಯೌ ಪಶ್ಯನ್ ಸರ್ಷಿಸಂಘಃ ಸಬಾಂಧವಃ ॥ ೪೧

ಇತಿ ಶ್ರೀಮದ್ರಾಮಾಯಣೇ ಬಾಲಕಾಂಡೇ ತ್ರಿಸಪ್ತತಿತಮಃ ಸರ್ಗಃ

ಪತ್ನಿಯರ ಕೈಗಳನ್ನು ಹಿಡಿದುಕೊಂಡು ವೇದಿಯನ್ನು ಸುತ್ತಿ ಅಗ್ನಿಗೆ ಪ್ರದಕ್ಷಿಣ ನಮಸ್ಕಾರಗಳನ್ನುಮಾಡಿ ಜನಕರಾಜನಿಗೂ ವಸಿಷ್ಠಾದಿಮುನಿಗಳಿಗೂ ಅಭಿವಾದನೆ ಮಾಡಿದರು (೩೭). ಬಳಿಕ ವಿಧಿಪೂರ್ವಕವಾಗಿ ಮುಂದಿನ ವಿವಾಹಕಾರ್ಯವು ನಡೆಯಿತು. ಆ ಸಮಯದಲ್ಲಿ ದೇವದುಂದುಭಿಗಳು ಧ್ವನಿಗೈದವು. ಗೀತವಾದ್ಯ ಗಳೊಡನೆ ಅಪ್ಸರೆಯರು ನರ್ತಿಸಿದರು. ಗಂಧರ್ವರು ಇಂಪಾಗಿ ಹಾಡಿದರು. ಇದೆಲ್ಲವೂ ಜನರಿಗೆ ಅದ್ಭುತವಾಗಿ ತೋರಿತು (೩೭-೩೯). ಈ ರೀತಿಯಲ್ಲಿ ಮಂಗಳವಾದ್ಯವು ನಡೆಯುತ್ತಿರಲು ಆ ವೀರಕುಮಾರರು ಯಜ್ಞೇಶ್ವರನನ್ನು ಮೂರುಸಲ ಪ್ರದಕ್ಷಿಣೆಮಾಡಿ ಪತ್ನಿಯರನ್ನು ಸ್ವೀಕರಿಸಿ ವಿವಾಹಕಾರ್ಯವನ್ನು ಸಮಾಪ್ತಿಗೊಳಿಸಿದರು (೪೦). ಅನಂತರ ಅವರು ಭಾರ್ಯೆಯರೊಂದಿಗೆ ತಮ್ಮ ಶಿಬಿರಕ್ಕೆ ತೆರಳಿದರು. ದಶರಥರಾಜನು ಅವರೆಲ್ಲರನ್ನೂ ನೋಡಿಕೊಳ್ಳುತ್ತ ಋಷಿ ಗಳಿಂದಲೂ ಬಂಧುಗಳಿಂದಲೂ ಸಮೇತನಾಗಿ ಅವರ ಹಿಂದೆ ಹೋದನು (೪೧).

ಇಲ್ಲಿಗೆ ಶ್ರೀಮದ್ರಾಮಾಯಣದ ಬಾಲಕಾಂಡದಲ್ಲಿ ಎಪ್ಪತ್ತುಮೂರನೆಯ ಸರ್ಗ

ಪಂಚದಶಃ ಸರ್ಗಃ

ಸೀತೋಪಲಂಭಃ

ಸ ವೀಕ್ಷಮಾಣಸ್ತತ್ರಸ್ಥೋ ಮಾರ್ಗಮಾಣಶ್ಚ ಮೈಥಿಲೀಮ್ ।
ಅವೇಕ್ಷಮಾಣಶ್ಚ ಮಹೀಂ ಸರ್ವಾಂ ತಾಮನ್ವವೈಕ್ಷತ ॥ ೧
ಸಂತಾನಕಲತಾಭಿಶ್ಚ ಪಾದಪೈರುಪಶೋಭಿತಾಮ್ ।
ದಿವ್ಯಗಂಧರಸೋಪೇತಾಂ ಸರ್ವತಃ ಸಮಲಂಕೃತಾಮ್ ॥ ೨
ತಾಂ ಸ ನಂದನಸಂಕಾಶಾಂ ಮೃಗಪಕ್ಷಿಭಿರಾವೃತಾಮ್ ।
ಹರ್ಮ್ಯಪ್ರಾಸಾದಸಂಬಾಧಾಂ ಕೋಕಿಲಾಕುಲನಿಃಸ್ವನಾಮ್ ॥ ೩
ಕಾಂಚನೋತ್ಪಲಪದ್ಮಾಭಿರ್ವಾಪೀಭಿರುಪಶೋಭಿತಾಮ್ ।
ಬಹ್ವಾಸನಕುಥೋಪೇತಾಂ ಬಹುಭೂಮಿಗೃಹಾಯುತಾಮ್ ॥ ೪
ಸರ್ವರ್ತುಕುಸುಮೈ ರಮ್ಯಾಂ ಫಲವದ್ಭಿಶ್ಚ ಪಾದಪೈಃ ।
ಪುಷ್ಪಿತಾನಾಮಶೋಕಾನಾಂ ಶ್ರಿಯಾ ಸೂರ್ಯೋದಯಪ್ರಭಾಮ್ ॥

ಸರ್ಗ ೧೫

ಹನುಮಂತನು ಸೀತೆಯನ್ನು ಕಂಡು, ವಿವಿಧಕಾರಣಗಳಿಂದ
ಅವಳೇ ಸೀತೆಯೆಂದು ಮನಸ್ಸಿನಲ್ಲಿ ನಿರ್ಧರಿಸುವುದು.

ಹೀಗೆ ಹನುಮಂತನು ಸೀತಾನಿರೀಕ್ಷಣೆಮಾಡುತ್ತ ಶಿಂಶಪಾವೃಕ್ಷದ ಮೇಲೆ ಕುಳಿತು ಸುತ್ತಲೂ ಕಣ್ಣಿಟ್ಟು ನೋಡುತ್ತಿದ್ದನು. ಅಶೋಕವನವಾದರೋ ಕಲ್ಪಲತೆಗಳಿಂದಲೂ ಮರಗಳಿಂದಲೂ ತುಂಬಿ, ದಿವ್ಯಗಂಧವನ್ನು ಬೀರುತ್ತಲಿತ್ತು (೧–೨). ಅಲ್ಲಲ್ಲಿ ಉಪ್ಪರಿಗೆಯ ಮನೆಗಳಿಂದಲೂ ಕೋಗಿಲೆಗಳ ಕೂಗಿನಿಂದಲೂ ನಂದನ-ವನಕ್ಕೆ ಎಣೆಯಾಗಿದ್ದಿತು. ಸುವರ್ಣಮಯವಾದ ಪದ್ಮೋತ್ಪಲಗಳಿರುವ ಕೊಳಗಳಿಂದಲೂ ಬೆಲೆಬಾಳುವ ಪೀಠ, ರತ್ನಕಂಬಳಿಗಳಿಂದಲೂ ಉಪ್ಪರಿಗೆಗಳಿರುವ ಸೌಧಗಳಿಂದಲೂ ಅಲಂಕೃತವಾಗಿದ್ದಿತು (೩–೪). ಮರಗಳು ಸರ್ವಋತುಗಳಲ್ಲಿಯೂ ಹೂಹಣ್ಣುಗಳಿಂದ ರಂಜಿಸುತ್ತಿದ್ದವು. ಅಶೋಕಪುಷ್ಪಗಳು ಉದಯಿಸುವ ಸೂರ್ಯನಂತೆ ಪ್ರಕಾಶಿಸುತ್ತಿದ್ದವು. ಒಮ್ಮೊಮ್ಮೆ ಎಲೆ, ಕೊಂಬೆಗಳೊಂದೂ ಕಾಣದಂತೆ

ಹೃದಯಾಬ್ಜೇ ಸ್ಥಿರಭಾವಂ ಮಂಜುಲರೂಪಂ ಮಹೋಜ್ಜ್ವಲಂ ಧಾಮ ।
ಹಸ್ತಾಬ್ಜೇ ಪಶ್ಯಂತಂ ಧನ್ಯಂ ಕಲಯೇಽಞ್ಜನಾತನಯಮ್ ॥

ಪ್ರದೀಪ್ತಾಮಿವ ತತ್ರಸ್ಥೋ ಮಾರುತಿಃ ಸಮುದೈಕ್ಷತ ।
ನಿಷ್ಪತ್ರಶಾಖಾಂ ವಿಹಗೈಃ ಕ್ರಿಯಮಾಣಾಮಿವಾಸಕೃತ್ ॥ ೬

ವಿನಿಷ್ಪತದ್ಭಿಃ ಶತಶಶ್ಚಿತ್ರೈಃ ಪುಷ್ಪಾವತಂಸಕೈಃ ।
ಆಮೂಲಪುಷ್ಪನಿಚಿತೈರಶೋಕೈಃ ಶೋಕನಾಶನೈಃ ॥ ೭

ಪುಷ್ಪಭಾರಾತಿಭಾರೈಶ್ಚ ಸ್ಪೃಶದ್ಭಿರಿವ ಮೇದಿನೀಮ್ ।
ಕರ್ಣಿಕಾರೈಃ ಕುಸುಮಿತೈಃ ಕಿಂಶುಕೈಶ್ಚ ಸುಪುಷ್ಪಿತೈಃ ॥ ೮

ಸ ದೇಶಃ ಪ್ರಭಯಾ ತೇಷಾಂ ಪ್ರದೀಪ್ತ ಇವ ಸರ್ವತಃ ।
ಪುನ್ನಾಗಾಃ ಸಪ್ತಪರ್ಣಾಶ್ಚ ಚಂಪಕೋದ್ದಾಲಕಾಸ್ತಥಾ ॥ ೯

ವಿವೃದ್ಧಮೂಲಾ ಬಹವಃ ಶೋಭಂತೇ ಸ್ಮ ಸುಪುಷ್ಪಿತಾಃ ।
ಶಾತಕುಂಭನಿಭಾಃ ಕೇಚಿತ್ ಕೇಚಿದಗ್ನಿಶಿಖೋಪಮಾಃ ॥ ೧೦

ನೀಲಾಂಜನನಿಭಾಃ ಕೇಚಿತ್ತತ್ರಾಶೋಕಾಃ ಸಹಸ್ರಶಃ ।
ನಂದನಂ ವಿವಿಧೋದ್ಯಾನಂ ಚಿತ್ರಂ ಚೈತ್ರರಥಂ ಯಥಾ ॥ ೧೧

ಅತಿವೃತ್ತಮಿವಾಚಿಂತ್ಯಂ ದಿವ್ಯಂ ರಮ್ಯಂ ಶ್ರಿಯಾ ವೃತಮ್ ।
ದ್ವಿತೀಯಮಿವ ಚಾಕಾಶಂ ಪುಷ್ಪಜ್ಯೋತಿರ್ಗಣಾಯುತಮ್ ॥ ೧೨

ಪುಷ್ಪರತ್ನಶತೈಶ್ಚಿತ್ರಂ ಪಂಚಮಂ ಸಾಗರಂ ಯಥಾ ।
ಸರ್ವರ್ತುಪುಷ್ಪೈರ್ನಿಚಿತಂ ಪಾದಪೈರ್ಮಧುಗಂಧಿಭಿಃ ॥ ೧೩

ಹಕ್ಕಿಗಳು ಮರಗಳಮೇಲೆ ತುಂಬಿಕೊಳ್ಳುತ್ತಿದ್ದವು (೫–೬). ಅಶೋಕ, ಕರ್ಣಿಕಾರ, ಮುತ್ತುಗ, ಪುನ್ನಾಗ, ಸಪ್ತಪರ್ಣ, ಸಂಪಿಗೆ, ಚಳ್ಳೆ ಮೊದಲಾದ ಮರಗಳು ಪುಷ್ಪಭಾರದಿಂದ ನೆಲವನ್ನು ಮುಟ್ಟುವಂತೆ ಬಾಗಿದ್ದವು. ಪುಷ್ಪಗಳ ಪ್ರಭೆಯಿಂದ ಅಶೋಕವನವೇ ಬೆಂಕಿಯಿಂದ ಉರಿಯುತ್ತಿದೆಯೋ ಎಂಬಂತೆ ತೋರುತ್ತಿತ್ತು (೭–೯). ನಾನಾವರ್ಣದ ಅಶೋಕಪುಷ್ಪಗಳು ಅರಳಿದ್ದವು. ಆದ್ದರಿಂದ ಕೆಲವು ಮರಗಳು ಚಿನ್ನದಂತೆಯೂ ಕೆಲವು ಅಗ್ನಿಜ್ವಾಲೆಯಂತೆಯೂ ಕೆಲವು ನೀಲಾಂಜನದಂತೆಯೂ ಶೋಭಿಸುತ್ತಿದ್ದವು. ಅಶೋಕವನವು ನಂದನವನ ಚೈತ್ರರಥವನಗಳಂತೆ ಮನೋಹರವಾಗಿ, ಹೂಗಳೆಂಬ ನಕ್ಷತ್ರಗಳಿಂದ ತುಂಬಿದ ಗಗನಸ್ಥಳದಂತೆ ವಿರಾಜಿಸುತ್ತಿದ್ದಿತು (೧೦–೧೨). ಪುಷ್ಪಗಳೆಂಬ ಅಸಂಖ್ಯಾತ ರತ್ನಗಳಿಂದ ತುಂಬಿದ

ನಾನಾನಿನಾದೈರುದ್ಯಾನಂ ರಮ್ಯಂ ಮೃಗಗಣೈರ್ದ್ವಿಜೈಃ ।
ಅನೇಕಗಂಧಪ್ರವಹಂ ಪುಣ್ಯಗಂಧಂ ಮನೋರಮಮ್ ॥ ೧೪

ಶೈಲೇಂದ್ರಮಿವ ಗಂಧಾಢ್ಯಂ ದ್ವಿತೀಯಂ ಗಂಧಮಾದನಮ್ ।
ಅಶೋಕವನಿಕಾಯಾಂ ತು ತಸ್ಯಾಂ ವಾನರಪುಂಗವಃ ॥ ೧೫

ಸ ದದರ್ಶಾವಿದೂರಸ್ಥಂ ಚೈತ್ಯಪ್ರಾಸಾದಮುಚ್ಛ್ರಿತಮ್ ।
ಮಧ್ಯೇ ಸ್ತಂಭಸಹಸ್ರೇಣ ಸ್ಥಿತಂ ಕೈಲಾಸಪಾಂಡರಮ್ ॥ ೧೬

ಪ್ರವಾಲಕೃತಸೋಪಾನಂ ತಪ್ತಕಾಂಚನವೇದಿಕಮ್ ।
ಮುಷ್ಣಂತಮಿವ ಚಕ್ಷೂಂಷಿ ದ್ಯೋತಮಾನಮಿವ ಶ್ರಿಯಾ ॥ ೧೭

ವಿಮಲಂ ಪ್ರಾಂಶುಭಾವತ್ವಾದುಲ್ಲಿಖಂತಮಿವಾಂಬರಮ್ ।
ತತೋ ಮಲಿನಸಂವೀತಾಂ ರಾಕ್ಷಸೀಭಿಃ ಸಮಾವೃತಾಮ್ ॥ ೧೮

ಉಪವಾಸಕೃಶಾಂ ದೀನಾಂ ನಿಃಶ್ವಸಂತೀಂ ಪುನಃ ಪುನಃ ।
ದದರ್ಶ ಶುಕ್ಲಪಕ್ಷಾದೌ ಚಂದ್ರರೇಖಾಮಿವಾಮಲಾಮ್ ॥ ೧೯

ಮಂದಂ ಪ್ರಖ್ಯಾಯಮಾನೇನ ರೂಪೇಣ ರುಚಿರಪ್ರಭಾಮ್ ।
ಪಿನದ್ಧಾಂ ಧೂಮಜಾಲೇನ ಶಿಖಾಮಿವ ವಿಭಾವಸೋಃ ॥ ೨೦

ಐದನೆಯ ಸಾಗರವೋ ಎಂಬಂತೆ ವಿಶಾಲವಾಗಿ, ಮೃಗಪಕ್ಷಿಗಳ ವಿವಿಧ ಧ್ವನಿಗಳಿಂದ ಮನೋಜ್ಞವಾಗಿ, ನಾನಾ ಪುಷ್ಪಗಳ ಸುಗಂಧದಿಂದ ಮನೋಹರವಾದ ಗಂಧಮಾದನ ಪರ್ವತದಂತೆ ಎಸೆಯುತ್ತಿದ್ದಿತು (೧೩–೧೪). ಹನುಮಂತನು ಅದೆಲ್ಲವನ್ನೂ ನೋಡುತ್ತ ಸ್ವಲ್ಪ ದೂರದಲ್ಲಿ ಚೈತ್ಯಪ್ರಾಸಾದದಂತೆ ವರ್ತುಲಾಕಾರವಾದ ಒಂದು ಉನ್ನತ ಭವನವನ್ನು ಕಂಡನು. ಅದು ಕೈಲಾಸದಂತೆ ಬಿಳುಪಾಗಿ, ಸಾವಿರಾರು ಕಂಭಗಳಿಂದ ಯುಕ್ತವಾಗಿತ್ತು. ಹವಳದ ಮೆಟ್ಟಿಲುಗಳೂ ಬಂಗಾರದ ವೇದಿಕೆಗಳೂ ಕಣ್ಣನ್ನು ಕೋರೈಸುತ್ತಿದ್ದವು. ಆ ಭವನವು ಆಕಾಶವನ್ನು ಭೇದಿಸಿಕೊಂಡು ಹೋಗುವಂತೆ ಎತ್ತರವಾಗಿಯೂ ಸ್ವಚ್ಛವಾಗಿಯೂ ಇತ್ತು (೧೫–೧೮). ಹನುಮಂತನು ಅದನ್ನು ವೀಕ್ಷಿಸುತ್ತಿರುವಾಗ ಅದರ ಬುಡದಲ್ಲಿ ರಾಕ್ಷಸಸ್ತ್ರೀಯರಿಂದ ಪರಿವೃತಳಾಗಿ ಮಲಿನ ವಸ್ತ್ರವನ್ನುಟ್ಟಿದ್ದ ಒಬ್ಬ ಸ್ತ್ರೀಯನ್ನು ನೋಡಿದನು.

ಪೀತೇನೈಕೇನ ಸಂವೀತಾಂ ಕ್ಲಿಷ್ಟೇನೋತ್ತಮವಾಸಸಾ ।
ಸಪಂಕಾಮನಲಂಕಾರಾಂ ವಿಪದ್ಮಾಮಿವ ಪದ್ಮಿನೀಮ್ ॥ ೨೧

ವ್ರೀಡಿತಾಂ ದುಃಖಸಂತಪ್ತಾಂ ಪರಿಮ್ಲಾನಾಂ ತಪಸ್ವಿನೀಮ್ ।
ಗ್ರಹೇಣಾಂಗಾರಕೇಣೇವ ಪೀಡಿತಾಮಿವ ರೋಹಿಣೀಮ್ ॥ ೨೨

ಅಶ್ರುಪೂರ್ಣಮುಖೀಂ ದೀನಾಂ ಕೃಶಾಮನಶನೇನ ಚ ।
ಶೋಕಧ್ಯಾನಪರಾಂ ದೀನಾಂ ನಿತ್ಯಂ ದುಃಖಪರಾಯಣಾಮ್ ॥ ೨೩

ಪ್ರಿಯಂ ಜನಮಪಶ್ಯಂತೀಂ ಪಶ್ಯಂತೀಂ ರಾಕ್ಷಸೀಗಣಮ್ ।
ಸ್ವಗಣೇನ ಮೃಗೀಂ ಹೀನಾಂ ಶ್ವಗಣಾಭಿವೃತಾಮಿವ ॥ ೨೪

ನೀಲನಾಗಾಭಯಾ ವೇಣ್ಯಾ ಜಘನಂ ಗತಯೈಕಯಾ ।
ನೀಲಯಾ ನೀರದಾಪಾಯೇ ವನರಾಜ್ಯಾ ಮಹೀಮಿವ ॥ ೨೫

ಸುಖಾರ್ಹಾಂ ದುಃಖಸಂತಪ್ತಾಂ ವ್ಯಸನಾನಾಮಕೋವಿದಾಮ್ ।
ತಾಂ ಸಮೀಕ್ಷ್ಯ ವಿಶಾಲಾಕ್ಷೀಮಧಿಕಂ ಮಲಿನಾಂ ಕೃಶಾಮ್ ॥ ೨೬

ಅವಳು ಬಾರಿಬಾರಿಗೂ ನಿಟ್ಟುಸಿರುಬಿಡುತ್ತ ಉಪವಾಸದಿಂದ ಕೃಶಳಾಗಿ, ಶುಕ್ಲಪಕ್ಷದ ಆರಂಭದಲ್ಲಿರುವ ಚಂದ್ರರೇಖೆಯಂತೆ ಕಾಣಿಸುತ್ತಿದ್ದಳು. ದೇಹಕಾಂತಿಯು ಸ್ವಲ್ಪ ಮಾಸಿಹೋದುದರಿಂದ ಹೊಗೆಯು ಆವರಿಸಿದ ಅಗ್ನಿಜ್ವಾಲೆಯಂತೆ ತೋರುತ್ತಿದ್ದಳು (೧೯–೨೦). ಮಲಿನವಾದ ಒಂದು ಪಟ್ಟೆಸೀರೆಯನ್ನು ಮೈಗೆ ಸುತ್ತಿಕೊಂಡು ನಿರಾಭರಣಳಾಗಿದ್ದ ಆಕೆ, ಹೂವಿಲ್ಲದೆ ಕೆಸರಿನಿಂದ ಲಿಪ್ತವಾದ ಪದ್ಮಲತೆಯಂತೆ ಇದ್ದಳು. ಅಂಗಾರಕಗ್ರಹದಿಂದ ಪೀಡಿತವಾದ ರೋಹಿಣೀನಕ್ಷತ್ರದಂತೆ, ಅತಿ ದುಃಖದಿಂದ ಸಂತಪ್ತಳಾಗಿದ್ದಳು (೨೧–೨೨). ದೈನ್ಯದಿಂದಲೂ ದುಃಖದಿಂದಲೂ ಸದಾ ಏನನ್ನೋ ಚಿಂತಿಸುತ್ತಾ ಧಾರಾಕಾರವಾಗಿ ಕಣ್ಣೀರನ್ನು ಸುರಿಸುತ್ತಿದ್ದಳು. ಉಪವಾಸದಿಂದ ಕೃಶಳಾಗಿದ್ದಳು. ಅವಳಿಗೆ ಎತ್ತ ತಿರುಗಿದರೂ ಪ್ರಿಯಜನರಿಲ್ಲದೆ ಘೋರ ರಾಕ್ಷಸಿಯರೇ ಕಾಣಿಸುತ್ತಿದ್ದರು. ಆದ್ದರಿಂದ ತನ್ನ ಗುಂಪಿನಿಂದ ತಪ್ಪಿ ಬಂದು, ನಾಯಿಗಳ ಮಧ್ಯದಲ್ಲಿ ಸಿಕ್ಕಿದ ಹೆಣ್ಣು ಜಿಂಕೆಯಂತೆ ಇದ್ದಳು (೨೩–೨೪). ಕೃಷ್ಣಸರ್ಪದಂತೆ ಕಪ್ಪಾಗಿಯೂ ನೀಳವಾಗಿಯೂ ಇದ್ದ ವೇಣಿಯು ಬೆನ್ನಮೇಲೆ ಲಂಬಿಸಿದ್ದುದರಿಂದ, ಶರತ್ಕಾಲದಲ್ಲಿ ದಟ್ಟವಾದ ವನರಾಜಿಯಿಂದ ವಿರಾಜಿಸುವ ಭೂದೇವಿಯಂತೆ ತೋರುತ್ತಿದ್ದಳು (೨೫). ಆಂಜನೇಯನು ಸುಖಾರ್ಹಳೂ

ತರ್ಕಯಾಮಾಸ ಸೀತೇತಿ ಕಾರಣೈರುಪಪಾದಿಭಿಃ ।
ಹ್ರಿಯಮಾಣಾ ತದಾ ತೇನ ರಕ್ಷಸಾ ಕಾಮರೂಪಿಣಾ ॥ ೨೭

ಯಥಾರೂಪಾ ಹಿ ದೃಷ್ಟಾ ವೈ ತಥಾರೂಪೇಯಮಂಗನಾ ।
ಪೂರ್ಣಚಂದ್ರಾನನಾಂ ಸುಭ್ರೂಂ ಚಾರುವೃತ್ತಪಯೋಧರಾಮ್ ॥

ಕುರ್ವಂತೀಂ ಪ್ರಭಯಾ ದೇವೀಂ ಸರ್ವಾ ವಿತಿಮಿರಾ ದಿಶಃ ।
ತಾಂ ನೀಲಕೇಶೀಂ ಬಿಂಬೋಷ್ಠೀಂ ಸುಮಧ್ಯಾಂ ಸುಪ್ರತಿಷ್ಠಿತಾಮ್ ॥

ಸೀತಾಂ ಪದ್ಮಪಲಾಶಾಕ್ಷೀಂ ಮನ್ಮಥಸ್ಯ ರತಿಂ ಯಥಾ ।
ಇಷ್ಟಾಂ ಸರ್ವಸ್ಯ ಜಗತಃ ಪೂರ್ಣಚಂದ್ರಪ್ರಭಾಮಿವ ॥ ೩೦

ಭೂಮೌ ಸುತನುಮಾಸೀನಾಂ ನಿಯತಾಮಿವ ತಾಪಸೀಮ್ ।
ನಿಃಶ್ವಾಸಬಹುಲಾಂ ಭೀರುಂ ಭುಜಗೇಂದ್ರವಧೂಮಿವ ॥ ೩೧

ಶೋಕಜಾಲೇನ ಮಹತಾ ವಿತತೇನ ನ ರಾಜತೀಮ್ ।
ಸಂಸಕ್ತಾಂ ಧೂಮಜಾಲೇನ ಶಿಖಾಮಿವ ವಿಭಾವಸೋಃ ॥ ೩೨

ಕಷ್ಟವನ್ನು ಅರಿಯದವಳೂ ವಿಶಾಲಾಕ್ಷಿಯೂ ಆದ ಆ ಸ್ತ್ರೀಯನ್ನು ಗಮನಿಸಿ ನೋಡಿ, ಇವಳು ಸೀತೆಯೇ ಸರಿಯೆಂದು ಅನೇಕ ಕಾರಣಗಳಿಂದ ಊಹಿಸಿದನು : "ಹಿಂದೆ ಕಾಮರೂಪಿಯಾದ ರಾವಣನು ಅಪಹರಿಸಿಕೊಂಡು ಹೋಗುತ್ತಿದ್ದ ಸ್ತ್ರೀಯನ್ನು ನಾನು ದೂರದಿಂದ ನೋಡಿದ್ದೆನು. ಅವಳಂತೆಯೇ ಇವಳು ಇದ್ದಾಳೆ" ಎಂದುಕೊಂಡು ಅವಳನ್ನೇ ನೋಡಲಾರಂಭಿಸಿದನು (೨೬-೨೭). ಪೂರ್ಣಚಂದ್ರಾನನೆಯಾದ ಆ ದೇವಿಯು ತನ್ನ ಪ್ರಭೆಯಿಂದ ಸಮಸ್ತ ದಿಕ್ಕುಗಳನ್ನು ಬೆಳಗುತ್ತಿದ್ದಳು. ಕಪ್ಪಾದ ಕೇಶರಾಶಿ, ತೊಂಡೆಯ ಹಣ್ಣಿನಂತಹ ತುಟಿ, ಕೃಶವಾದ ನಡು, ಕಮಲದ ಎಸಳಿನಂತಹ ಕಣ್ಣುಗಳು, ಮನೋಜ್ಞವಾದ ಮೈಕಟ್ಟು – ಅವಳು ಸಾಕ್ಷಾತ್ ರತಿಯಂತೆ ಇದ್ದಳು. ಪೂರ್ಣಚಂದ್ರನ ಬೆಳದಿಂಗಳಂತೆ, ಅವಳನ್ನು ನೋಡಿದರೆ ಜಗತ್ತಿಗೇ ಒಂದು ಹರ್ಷವಾಗುತ್ತಿತ್ತು (೨೮-೩೦). ಆಕೆಯು ತಪಸ್ವಿನಿಯಂತೆ ನೆಲದಮೇಲೆ ಕುಳಿತು, ಹೆದರಿದ ಸರ್ಪಿಣಿಯಂತೆ ನಿಟ್ಟುಸಿರುಬಿಡುತ್ತಿದ್ದಳು. ವ್ಯಥೆಯಿಂದ ಬಾಡಿಹೋದ್ದರಿಂದ ಹೊಗೆ ಸುತ್ತಿದ ಅಗ್ನಿಜ್ವಾಲೆಯಂತಿದ್ದಳು (೩೧-೩೨).

ತಾಂ ಸ್ಮೃತೀಮಿವ ಸಂದಿಗ್ಧಾಮೃದ್ಧಿಂ ನಿಪತಿತಾಮಿವ ।
ವಿಹತಾಮಿವ ಚ ಶ್ರದ್ಧಾಮಾಶಾಂ ಪ್ರತಿಹತಾಮಿವ ॥ ೩೩

ಸೋಪಸರ್ಗಾಂ ಯಥಾ ಸಿದ್ಧಿಂ ಬುದ್ಧಿಂ ಸಕಲುಷಾಮಿವ ।
ಅಭೂತೇನಾಪವಾದೇನ ಕೀರ್ತಿಂ ನಿಪತಿತಾಮಿವ ॥ ೩೪

ರಾಮೋಪರೋಧವ್ಯಥಿತಾಂ ರಕ್ಷೋಹರಣಕರ್ಶಿತಾಮ್ ।
ಅಬಲಾಂ ಮೃಗಶಾವಾಕ್ಷೀಂ ವೀಕ್ಷಮಾಣಾಂ ಸಮಂತತಃ ॥ ೩೫

ಬಾಷ್ಪಾಂಬುಪರಿಪೂರ್ಣೇನ ಕೃಷ್ಣವಕ್ರಾಕ್ಷಿಪಕ್ಷ್ಮಣಾ ।
ವದನೇನಾಪ್ರಸನ್ನೇನ ನಿಃಶ್ವಸಂತೀಂ ಪುನಃ ಪುನಃ ॥ ೩೬

ಮಲಪಂಕಧರಾಂ ದೀನಾಂ ಮಂಡನಾರ್ಹಾಮಮಂಡಿತಾಮ್ ।
ಪ್ರಭಾಂ ನಕ್ಷತ್ರರಾಜಸ್ಯ ಕಾಲಮೇಘೈರಿವಾವೃತಾಮ್ ॥ ೩೭

ತಸ್ಯ ಸಂದಿದಿಹೇ ಬುದ್ಧಿರ್ಮುಹುಃ ಸೀತಾಂ ನಿರೀಕ್ಷ್ಯ ತು ।
ಆಮ್ನಾಯಾನಾಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ ॥ ೩೮

ದುಃಖೇನ ಬುಬುಧೇ ಸೀತಾಂ ಹನುಮಾನನಲಂಕೃತಾಮ್ ।
ಸಂಸ್ಕಾರೇಣ ಯಥಾ ಹೀನಾಂ ವಾಚಮರ್ಥಾಂತರಂ ಗತಾಮ್ ॥ ೩೯

ಅರ್ಥನಿಶ್ಚಯವಿಲ್ಲದ ಸ್ಮೃತಿಯಂತೆ, ಕ್ಷೀಣವಾದ ಸಂಪತ್ತಿನಂತೆ, ವಿಧಿಗೆಟ್ಟ ಶ್ರದ್ಧೆಯಂತೆ, ಭಗ್ನವಾದ ಆಸೆಯಂತೆ, ವಿಘ್ನಸಹಿತವಾದ ತಪಃಸಿದ್ಧಿಯಂತೆ, ಕಲುಷಗೊಂಡ ಬುದ್ಧಿಯಂತೆ, ಮಿಥ್ಯಾಪವಾದಕ್ಕೆ ಒಳಗಾದ ಕೀರ್ತಿಯಂತೆ (೩೩–೩೪). ಶ್ರೀರಾಮನ ವಿರಹದಿಂದ ದುಃಖಿತಳಾಗಿ, ರಾಕ್ಷಸನಿಗೆ ಸೆರೆಸಿಕ್ಕಿ ಕೃಶಳಾಗಿ, ಜಿಂಕೆಯಂತೆ ಸುತ್ತಲೂ ವೀಕ್ಷಿಸುವ ಅಬಲೆಯಾಗಿ, ಅಶ್ರುನೇತ್ರೆಯಾಗಿ, ಕಪ್ಪಾದ ರೆಪ್ಪೆಯ ಕೂದಲುಳ್ಳವಳಾಗಿ ಮ್ಲಾನಮುಖಿಯಾಗಿ (೩೫–೩೬). ಮಲಿನಗಾತ್ರೆಯಾಗಿ, ದೀನಳಾಗಿ, ಅಲ್ಪಾಭರಣಳಾಗಿ, ಕಾರ್ಮೋಡಗಳಿಂದ ಸುತ್ತಲ್ಪಟ್ಟ ಚಂದ್ರನ ಕಾಂತಿಯಂತೆಯೂ ಅಭ್ಯಾಸಮಾಡದೆ ಕ್ಷೀಣವಾದ ವಿದ್ಯೆಯಂತೆಯೂ ವ್ಯಾಕರಣ ಸಂಸ್ಕಾರವಿಲ್ಲದೆ ಸರಿಯಾದ ಅರ್ಥವನ್ನು ಬೋಧಿಸದಿರುವ ವಾಣಿಯಂತೆಯೂ ರೂಪಾಂತರವನ್ನು ಹೊಂದಿದ್ದ ಆ ಸೀತಾದೇವಿಯನ್ನು ನೋಡಿ, 'ಇವಳು ಸೀತೆ ಹೌದೋ ಅಲ್ಲವೋ' ಎಂದು ಹನುಮಂತನಿಗೆ ಮತ್ತೆ ಸಂದೇಹ ಉಂಟಾಯಿತು (೩೭–೩೯).

ತಾಂ ಸಮೀಕ್ಷ್ಯ ವಿಶಾಲಾಕ್ಷೀಂ ರಾಜಪುತ್ರೀಮನಿಂದಿತಾಮ್ ।
ತರ್ಕಯಾಮಾಸ ಸೀತೇತಿ ಕಾರಣೈರುಪಪಾದಿಭಿಃ ॥ ೪೦

ವೈದೇಹ್ಯಾ ಯಾನಿ ಚಾಂಗೇಷು ತದಾ ರಾಮೋಽನ್ವಕೀರ್ತಯತ್ ।
ತಾನ್ಯಾಭರಣಜಾಲಾನಿ ಗಾತ್ರಶೋಭೀನ್ಯಲಕ್ಷಯತ್ ॥ ೪೧

ಸುಕೃತೌ ಕರ್ಣವೇಷ್ಟೌ ಚ ಶ್ವದಂಷ್ಟ್ರೌ ಚ ಸುಸಂಸ್ಥಿತೌ ।
ಮಣಿವಿದ್ರುಮಚಿತ್ರಾಣಿ ಹಸ್ತೇಷ್ವಾಭರಣಾನಿ ಚ ॥ ೪೨

ಶ್ಯಾಮಾನಿ ಚಿರಯುಕ್ತತ್ವಾತ್ತಥಾ ಸಂಸ್ಥಾನವಂತಿ ಚ ।
ತಾನ್ಯೇವೈತಾನಿ ಮನ್ಯೇಽಹಂ ಯಾನಿ ರಾಮೋಽನ್ವಕೀರ್ತಯತ್ ॥

ತತ್ರ ಯಾನ್ಯವಹೀನಾನಿ ತಾನ್ಯಹಂ ನೋಪಲಕ್ಷಯೇ ।
ಯಾನ್ಯಸ್ಯಾ ನಾವಹೀನಾನಿ ತಾನೀಮಾನಿ ನ ಸಂಶಯಃ ॥ ೪೪

ಪೀತಂ ಕನಕಪಟ್ಟಾಭಂ ಸ್ರಸ್ತಂ ತದ್ವಸನಂ ಶುಭಮ್ ।
ಉತ್ತರೀಯಂ ನಗಾಸಕ್ತಂ ತದಾ ದೃಷ್ಟಂ ಪ್ಲವಂಗಮೈಃ ॥ ೪೫

ಭೂಷಣಾನಿ ವಿಚಿತ್ರಾಣಿ ದೃಷ್ಟಾನಿ ಧರಣೀತಲೇ ।
ಅನಯೈವಾಪವಿದ್ಧಾನಿ ಸ್ವನವಂತಿ ಮಹಾಂತಿ ಚ ॥ ೪೬

ಆಮೇಲೆ ಹನುಮಂತನು ಆ ರಾಜಕುಮಾರಿಯನ್ನು ಚೆನ್ನಾಗಿ ನೋಡಿ, 'ಇವಳು ಸೀತೆಯೇ ಹೌದು' ಎಂದು ಊಹಿಸಿದನು. ಏಕೆಂದರೆ, ಸೀತೆಯ ಮೈಮೇಲೆ ಯಾವ ಆಭರಣಗಳಿದ್ದವೆಂದು ಶ್ರೀರಾಮನು ಹೇಳಿದ್ದನೋ ಅವುಗಳನ್ನು ಹನುಮಂತನು ಲಕ್ಷಿಸಿ ನೋಡಿದನು (೪೦–೪೧) : "ಇವಳ ಕರ್ಣಕುಂಡಲಗಳೂ ಶ್ವದಂಷ್ಟ್ರ ಎಂಬ ಹೂವಿನ ಆಕಾರದ ಕರ್ಣಾಭರಣಗಳೂ ರತ್ನ ಮತ್ತು ಹವಳ ಗಳಿಂದ ಸುಂದರವಾದ ಹಸ್ತಾಭರಣಗಳೂ ಮಾಸಿಹೋಗಿದ್ದರೂ, ಶ್ರೀರಾಮನು ಹೇಳಿದಂತಹ ಒಡವೆಗಳೇ ಸರಿ; ಅವನು ಹೇಳಿದುದರಲ್ಲಿ ಕೆಲವು ಒಡವೆಗಳು ಇಲ್ಲದಿದ್ದರೂ ಇರತಕ್ಕವುಗಳು ಮಾತ್ರ ಅವನು ಹೇಳಿದವುಗಳೇ (೪೨–೪೪). ಹೊಂಬಣ್ಣದ ರೇಶ್ಮೆಯ ಉತ್ತರೀಯವು ಬೀಳುವಾಗ ಮರದಲ್ಲಿ ಸಿಕ್ಕಿಕೊಂಡುದನ್ನು ಋಷ್ಯಮೂಕ ಪರ್ವತದಲ್ಲಿ ವಾನರರು ನೋಡಿದರಲ್ಲವೆ? ಆಗ 'ಝಣಝಣ' ಎಂದು ಶಬ್ದ

ಇದಂ ಚಿರಗೃಹೀತತ್ವಾದ್ವಸನಂ ಕ್ಲಿಷ್ಟವತ್ತರಮ್ ।
ತಥಾಪಿ ನೂನಂ ತದ್ವರ್ಣಂ ತಥಾ ಶ್ರೀಮದ್ಯಥೇತರತ್ ॥ ೪೭

ಇಯಂ ಕನಕವರ್ಣಾಂಗೀ ರಾಮಸ್ಯ ಮಹಿಷೀ ಪ್ರಿಯಾ ।
ಪ್ರನಷ್ಟಾಪಿ ಸತೀ ಯಾಸ್ಯ ಮನಸೋ ನ ಪ್ರಣಶ್ಯತಿ ॥ ೪೮

ಇಯಂ ಸಾ ಯತ್ಕೃತೇ ರಾಮಶ್ಚತುರ್ಭಿಃ ಪರಿತಪ್ಯತೇ ।
ಕಾರುಣ್ಯೇನಾನೃಶಂಸ್ಯೇನ ಶೋಕೇನ ಮದನೇನ ಚ ॥ ೪೯

ಸ್ತ್ರೀ ಪ್ರನಷ್ಟೇತಿ ಕಾರುಣ್ಯಾದಾಶ್ರಿತೇತ್ಯಾನೃಶಂಸ್ಯತಃ ।
ಪತ್ನೀ ನಷ್ಟೇತಿ ಶೋಕೇನ ಪ್ರಿಯೇತಿ ಮದನೇನ ಚ ॥ ೫೦

ಅಸ್ಯಾ ದೇವ್ಯಾ ಯಥಾ ರೂಪಮಂಗಪ್ರತ್ಯಂಗಸೌಷ್ಠವಮ್ ।
ರಾಮಸ್ಯ ಚ ಯಥಾ ರೂಪಂ ತಸ್ಯೇಯಮಸಿತೇಕ್ಷಣಾ ॥ ೫೧

ಅಸ್ಯಾ ದೇವ್ಯಾ ಮನಸ್ತಸ್ಮಿಂಸ್ತಸ್ಯ ಚಾಸ್ಯಾಂ ಪ್ರತಿಷ್ಠಿತಮ್ ।
ತೇನೇಯಂ ಸ ಚ ಧರ್ಮಾತ್ಮಾ ಮುಹೂರ್ತಮಪಿ ಜೀವತಿ ॥ ೫೨

ಮಾಡುತ್ತ ಅಮೂಲ್ಯವಾದ ಆಭರಣಗಳು ನೆಲದ ಮೇಲೆ ಬಿದ್ದುಹೋದವು. ಅವೆಲ್ಲವನ್ನೂ ಈಕೆಯೇ ಬಿಸುಟಿರಬೇಕು (೪೫–೪೬). ಇವಳು ಧರಿಸಿದ ಈ ಸೀರೆಯು ಬಹಳ ಮಾಸಿಹೋಗಿದ್ದರೂ, ಬಣ್ಣದಲ್ಲಿಯೂ ಆಕಾರದಲ್ಲಿಯೂ ಆ ಉತ್ತರೀಯದಂತೆಯೇ ಇದೆ. ಶ್ರೀರಾಮನ ಕಣ್ಣಿಗೆ ಕಾಣಿಸದಿದ್ದರೂ ಅವನ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಸಿದ ಅವನ ಪ್ರಿಯಪತ್ನಿಯಾದ ಸಾಧ್ವಿ ಈ ಕನಕಾಂಗಿಯೇ ಹೌದು (೪೭–೪೮). ಶ್ರೀರಾಮನು ಯಾರಿಗೋಸ್ಕರ ಕೊರಗಿ ಸಂಕಟಪಡುತ್ತಿರುವನೋ ಆ ಸೀತಾದೇವಿ ಇವಳೇ ಸರಿ. ಅಬಲೆಯಾದ ಸ್ತ್ರೀಯೊಬ್ಬಳು ರಾಕ್ಷಸನ ಕೈಗೆ ಸಿಕ್ಕಿದಳಲ್ಲಾ ಎಂಬ ಕಾರುಣ್ಯ ಒಂದು, ತನ್ನನ್ನೇ ನಂಬಿಬಂದವಳನ್ನು ರಕ್ಷಿಸಲು ಆಗಲಿಲ್ಲವಲ್ಲಾ ಎಂಬ ವ್ಯಥೆ ಒಂದು, ಕೈಹಿಡಿದ ಹೆಂಡತಿ ಎಂಬ ಚಿಂತೆ ಒಂದು, ತನಗೆ ಅತ್ಯಂತ ಪ್ರಿಯಳೆಂಬ ಮೋಹ ಒಂದು—ಹೀಗೆ ನಾಲ್ಕೂ ವಿಧದಲ್ಲಿ ಇವಳಿಗಾಗಿಯೇ ಕೊರಗುತ್ತಿರುವನು (೪೯–೫೦). ಈ ದೇವಿಯ ರೂಪಲಕ್ಷಣಗಳಿಗೆ ಅನುರೂಪನಾದವನು ಶ್ರೀರಾಮನೇ. ಆತನ ರೂಪಲಕ್ಷಣಗಳಿಗೆ ಅನುರೂಪಳಾದವಳು ಈಕೆಯೇ. ಇವಳ ಮನಸ್ಸು ರಾಮ

ದುಷ್ಕರಂ ಕೃತವಾನ್ ರಾಮೋ ಹೀನೋ ಯದನಯಾ ಪ್ರಭುಃ ।
ಧಾರಯತ್ಯಾತ್ಮನೋ ದೇಹಂ ನ ಶೋಕೇನಾವಸೀದತಿ ॥ ೫೩

ಏವಂ ಸೀತಾಂ ತದಾ ದೃಷ್ಟ್ವಾ ಹೃಷ್ಟಃ ಪವನಸಂಭವಃ ।
ಜಗಾಮ ಮನಸಾ ರಾಮಂ ಪ್ರಶಶಂಸ ಚ ತಂ ಪ್ರಭುಮ್ ॥ ೫೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚದಶಃ ಸರ್ಗಃ

ನಲ್ಲಿಯೂ ಅವನ ಮನಸ್ಸು ಇವಳಲ್ಲಿಯೂ ನೆಲೆಸಿಹೋಗಿದೆ. ಆದ್ದರಿಂದಲೇ ಇವರಿಬ್ಬರೂ ಪರಸ್ಪರ ದರ್ಶನವಾದೀತೆಂಬ ಆಸೆಯಿಂದ ಈಗಲೂ ಜೀವಿಸಿದ್ದಾರೆ (೫೧–೫೨). ಆಹಾ! ಇಂತಹ ಪ್ರಿಯಪತ್ನಿಯನ್ನಗಲಿಯೂ ಪ್ರಭುವಾದ ರಾಮನು ದೇಹವನ್ನಿಟ್ಟುಕೊಂಡಿರುವನಲ್ಲ! ದುಃಖದಿಂದ ಕುಸಿದುಹೋಗಲಿಲ್ಲವಲ್ಲ! ಇದು ಇನ್ನೊಬ್ಬರಿಂದ ಸಾಧ್ಯವಿಲ್ಲ!" ಎಂದು ಮನಸ್ಸಿನಲ್ಲಿಯೇ ಗುಣಿಸಿದನು. ಆಮೇಲೆ ಹನುಮಂತನು ಸೀತೆಯನ್ನು ಕಂಡುದಕ್ಕಾಗಿ ಸಂತೋಷದಿಂದ ಉಬ್ಬಿ ರಾಮನನ್ನು ಧ್ಯಾನಿಸುತ್ತ "ಈ ಸತೀಮಣಿಯನ್ನು ಕೈಹಿಡಿದ ಶ್ರೀರಾಮನೇ ಭಾಗ್ಯಶಾಲಿ; ಈಕೆಗಾಗಿ ಅವನು ಪಡುತ್ತಿರುವ ಮಹಾಪ್ರಯತ್ನ ಯೋಗ್ಯವೇ ಸರಿ" ಎಂದು ಶ್ರೀರಾಮನನ್ನು ಕೊಂಡಾಡಿದನು (೫೩–೫೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನೈದನೆಯ ಸರ್ಗ

ಷಟ್‌ತ್ರಿಂಶಃ ಸರ್ಗಃ

ಅಂಗುಲೀಯಕಪ್ರದಾನಮ್

ಭೂಯ ಏವ ಮಹಾತೇಜಾ ಹನುಮಾನ್ ಮಾರುತಾತ್ಮಜಃ ।
ಅಬ್ರವೀತ್ ಪ್ರಶ್ರಿತಂ ವಾಕ್ಯಂ ಸೀತಾಪ್ರತ್ಯಯಕಾರಣಾತ್ ॥ ೧

ವಾನರೋಽಹಂ ಮಹಾಭಾಗೇ ದೂತೋ ರಾಮಸ್ಯ ಧೀಮತಃ ।
ರಾಮನಾಮಾಂಕಿತಂ ಚೇದಂ ಪಶ್ಯ ದೇವ್ಯಂಗುಲೀಯಕಮ್ ॥ ೨

ಪ್ರತ್ಯಯಾರ್ಥಂ ತವಾನೀತಂ ತೇನ ದತ್ತಂ ಮಹಾತ್ಮನಾ ।
ಸಮಾಶ್ವಸಿಹಿ ಭದ್ರಂ ತೇ ಕ್ಷೀಣದುಃಖಫಲಾ ಹ್ಯಸಿ ॥ ೩

ಗೃಹೀತ್ವಾ ಪ್ರೇಕ್ಷಮಾಣಾ ಸಾ ಭರ್ತುಃ ಕರವಿಭೂಷಣಮ್ ।
ಭರ್ತಾರಮಿವ ಸಂಪ್ರಾಪ್ತಂ ಜಾನಕೀ ಮುದಿತಾಭವತ್ ॥ ೪

ಚಾರು ತದ್ವದನಂ ತಸ್ಯಾಸ್ತಾಮ್ರಶುಕ್ಲಾಯತೇಕ್ಷಣಮ್ ।
ಬಭೂವ ಹರ್ಷೋದಗ್ರಂ ಚ ರಾಹುಮುಕ್ತ ಇವೋಡುರಾಟ್ ॥ ೫

ಸರ್ಗ ೩೬

ಹನುಮಂತನು ಶ್ರೀರಾಮನ ಅಂಗುಲೀಯಕವನ್ನು ಸೀತೆಗೆ ಕೊಡುವುದು.
ಅವನು ಸೀತೆಯ ನಾನಾ ಪ್ರಶ್ನೆಗಳಿಗೆ ಉತ್ತರ ಹೇಳಿ, ಶ್ರೀರಾಮನ
ಶೋಕಾವಸ್ಥೆಯನ್ನು ವರ್ಣಿಸುವುದು.

ವಾಯುಪುತ್ರನಾದ ಹನುಮಂತನು ಸೀತೆಗೆ ನಂಬಿಕೆಯಾಗಲೆಂದು ಪುನಃ ವಿನಯದಿಂದ “ದೇವಿ, ನಾನು ಶ್ರೀರಾಮನ ದೂತ. ಇದೊ! ಶ್ರೀರಾಮನ ಹೆಸರನ್ನು ಕೆತ್ತಿದ ಅಂಗುಲೀಯಕವನ್ನು ನೋಡು! ಆ ಮಹಾತ್ಮನು ನಿನಗೆ ವಿಶ್ವಾಸಹುಟ್ಟಲೆಂದು ಇದನ್ನು ನನ್ನ ಕೈಗೆ ಕೊಟ್ಟು ಕಳುಹಿಸಿದ್ದಾನೆ. ದೇವಿ, ಸಮಾಧಾನಹೊಂದು. ನಿನಗೆ ಶುಭವಾಗುವುದು. ನಿನ್ನ ಕಷ್ಟವು ನೀಗಿತೆಂದೇ ತಿಳಿ” ಎಂದನು (೧–೩). ಜಾನಕಿಯು ತನ್ನ ಗಂಡನ ಹಸ್ತಭೂಷಣವಾಗಿದ್ದ ಆ ಉಂಗುರವನ್ನು ಕೈಯಲ್ಲಿ ತೆಗೆದುಕೊಂಡು, ಅದನ್ನೇ ನೋಡುತ್ತ, ಶ್ರೀರಾಮನೇ ಅಲ್ಲಿಗೆ ಬಂದಷ್ಟು ಆನಂದವಾಗಿ ಉಬ್ಬಿಹೋದಳು. ಕೆಂಪು ಬಿಳುಪು ಮಿಶ್ರವಾದ ವಿಶಾಲನೇತ್ರಗಳುಳ್ಳ ಆಕೆಯ ಸುಂದರವದನವು ಹರ್ಷದಿಂದ ಹಿಗ್ಗಿ, ಗ್ರಹಣವು

ತತಃ ಸಾ ಹ್ರೀಮತೀ ಬಾಲಾ ಭರ್ತೃಸಂದೇಶಹರ್ಷಿತಾ ।
ಪರಿತುಷ್ಟಾ ಪ್ರಿಯಂ ಕೃತ್ವಾ ಪ್ರಶಶಂಸ ಮಹಾಕಪಿವ್ ॥ ೬

ವಿಕ್ರಾಂತಸ್ತ್ವಂ ಸಮರ್ಥಸ್ತ್ವಂ ಪ್ರಾಜ್ಞಸ್ತ್ವಂ ವಾನರೋತ್ತಮ ।
ಯೇನೇದಂ ರಾಕ್ಷಸಪದಂ ತ್ವಯೈಕೇನ ಪ್ರಧರ್ಷಿತವ್ ॥ ೭

ಶತಯೋಜನವಿಸ್ತೀರ್ಣಃ ಸಾಗರೋ ಮಕರಾಲಯಃ ।
ವಿಕ್ರಮಶ್ಲಾಘನೀಯೇನ ಕ್ರಮತಾ ಗೋಷ್ಪದೀಕೃತಃ ॥ ೮

ನ ಹಿ ತ್ವಾಂ ಪ್ರಾಕೃತಂ ಮನ್ಯೇ ವಾನರಂ ವಾನರರ್ಷಭ ।
ಯಸ್ಯ ತೇ ನಾಸ್ತಿ ಸಂತ್ರಾಸೋ ರಾವಣಾನ್ನಾಪಿ ಸಂಭ್ರಮಃ ॥ ೯

ಅರ್ಹಸೇ ಚ ಕಪಿಶ್ರೇಷ್ಠ ಮಯಾ ಸಮಭಿಭಾಷಿತುವ್ ।
ಯದ್ಯಸಿ ಪ್ರೇಷಿತಸ್ತೇನ ರಾಮೇಣ ವಿದಿತಾತ್ಮನಾ ॥ ೧೦

ಪ್ರೇಷಯಿಷ್ಯತಿ ದುರ್ಧರ್ಷೋ ರಾಮೋ ನ ಹ್ಯಪರೀಕ್ಷಿತವ್ ।
ಪರಾಕ್ರಮಮವಿಜ್ಞಾಯ ಮತ್ಸಕಾಶಂ ವಿಶೇಷತಃ ॥ ೧೧

ಬಿಟ್ಟ ಪೂರ್ಣಚಂದ್ರನಂತೆ ಮಿನುಗಿತು. ಪತಿಯು ಹೇಳಿಕಳಿಸಿದ ಕುಶಲವಾರ್ತೆಯಿಂದ ಸಂತುಷ್ಟಳಾದ ಆ ಬಾಲೆಯು ಸ್ವಲ್ಪ ನಾಚಿಕೆಪಡುತ್ತ ಆಂಜನೇಯನನ್ನು ಪ್ರಶಂಸೆ ಮಾಡತೊಡಗಿದಳು (೪-೬): "ವಾನರೋತ್ತಮ, ನೀನೇ ಪರಾಕ್ರಮಶಾಲಿ, ನೀನೇ ಸಮರ್ಥ, ಬುದ್ಧಿವಂತನೆಂದರೆ ನೀನೇ. ಈ ರಾಕ್ಷಸರ ಆವಾಸ ಸ್ಥಾನಕ್ಕೆ ಯಾರನ್ನೂ ಲಕ್ಷ್ಯಮಾಡದೆ ನೀನೊಬ್ಬನೇ ಬಂದಿದ್ದೀಯೆ. ಮೊಸಳೆ ಮುಂತಾದ ಕ್ರೂರಪ್ರಾಣಿಗಳಿರುವ ನೂರುಯೋಜನದಗಲದ ಮಹಾಸಾಗರವನ್ನು ಗೋವಿನ ಹೆಜ್ಜೆಯ ಕುಳಿಯನ್ನು ದಾಟುವಂತೆ ದಾಟಿ ಬಂದಿದ್ದೀಯೆ (೭-೮). ಕಪಿಶ್ರೇಷ್ಠ, ನೀನು ಸಾಮಾನ್ಯ ಕಪಿಯಲ್ಲ. ನಿನಗೆ ರಾವಣನಿಂದ ಭಯವೂ ಆಗಲಿಲ್ಲ, ಗಾಬರಿಯೂ ಆಗಲಿಲ್ಲ. ಪ್ರಾಜ್ಞನಾದ ರಾಮನು ನಿನ್ನನ್ನು ಕಳಿಸಿದಮೇಲೆ, ನಿನ್ನೊಡನೆ ನಾನು ಧಾರಾಳವಾಗಿ ಮಾತನಾಡಬಹುದು (೯-೧೦). ಅಜೇಯನಾದ ರಾಮನು ದೂತನನ್ನು ಪರೀಕ್ಷೆಮಾಡದೆ, ಅವನ ಪರಾಕ್ರಮವನ್ನು ತಿಳಿದುಕೊಳ್ಳದೆ ಕಳಿಸಲಾರನು. ಅದರಲ್ಲಿಯೂ ಈಗ ನನ್ನ ಬಳಿಗೆ ಸಾಮಾನ್ಯರನ್ನು ಕಳಿಸುವುದಿಲ್ಲ. ಧರ್ಮಾತ್ಮನಾದ ರಾಮನೂ

ರಾಮನಾಮಾಂಕಿತಂ ಚೇದಂ ಪಶ್ಯ ದೇವ್ಯಂಗುಲೀಯಕಮ್ ॥

ದಿಷ್ಟ್ಯಾ ಸ ಕುಶಲೀ ರಾಮೋ ಧರ್ಮಾತ್ಮಾ ಸತ್ಯಸಂಗರಃ ।
ಲಕ್ಷ್ಮಣಶ್ಚ ಮಹಾತೇಜಾಃ ಸುಮಿತ್ರಾನಂದವರ್ಧನಃ ॥ ೧೨

ಕುಶಲೀ ಯದಿ ಕಾಕುತ್ಸ್ಥಃ ಕಿಂ ನ ಸಾಗರಮೇಖಲಾಮ್ ।
ಮಹೀಂ ದಹತಿ ಕೋಪೇನ ಯುಗಾಂತಾಗ್ನಿರಿವೋತ್ಥಿತಃ ॥ ೧೩

ಅಥವಾ ಶಕ್ತಿಮಂತೌ ತೌ ಸುರಾಣಾಮಪಿ ನಿಗ್ರಹೇ ।
ಮಮೈವ ತು ನ ದುಃಖಾನಾಮಸ್ತಿ ಮನ್ಯೇ ವಿಪರ್ಯಯಃ ॥ ೧೪

ಕಚ್ಚಿನ್ನ ವ್ಯಥಿತೋ ರಾಮಃ ಕಚ್ಚಿನ್ನ ಪರಿತಪ್ಯತೇ ।
ಉತ್ತರಾಣಿ ಚ ಕಾರ್ಯಾಣಿ ಕುರುತೇ ಪುರುಷೋತ್ತಮಃ ॥ ೧೫

ಕಚ್ಚಿನ್ನ ದೀನಃ ಸಂಭ್ರಾಂತಃ ಕಾರ್ಯೇಷು ಚ ನ ಮುಹ್ಯತಿ ।
ಕಚ್ಚಿತ್ ಪುರುಷಕಾರ್ಯಾಣಿ ಕುರುತೇ ನೃಪತೇಃ ಸುತಃ ॥ ೧೬

ದ್ವಿವಿಧಂ ತ್ರಿವಿಧೋಪಾಯಮುಪಾಯಮಪಿ ಸೇವತೇ ।
ವಿಜಿಗೀಷುಃ ಸುಹೃತ್ ಕಚ್ಚಿನ್ಮಿತ್ರೇಷು ಚ ಪರಂತಪಃ ॥ ೧೭

ಸುಮಿತ್ರಾತನಯನಾದ ಲಕ್ಷ್ಮಣನೂ ಕ್ಷೇಮದಿಂದಿರುವುದು ನನ್ನ ಭಾಗ್ಯ (೧೧-೧೨). ಶ್ರೀರಾಮನು ಕ್ಷೇಮದಿಂದ ಇದ್ದಮೇಲೆ, ಅವನಿಗೆ ಕೋಪವೇಕೆ ಬರಲಿಲ್ಲ? ಪ್ರಳಯಕಾಲಾಗ್ನಿಯಂತೆ ಕ್ರುದ್ಧನಾಗಿ ಈ ಜಗತ್ತನ್ನು ಧ್ವಂಸಮಾಡದೆ ಬಿಟ್ಟಿರುವುದೇಕೆ? ಆ ವೀರರಿಬ್ಬರೂ ದೇವತೆಗಳನ್ನು ಕೂಡ ನಿಗ್ರಹಿಸಬಲ್ಲವರು. ಆದರೆ ನನ್ನ ದುಃಖಕ್ಕೆ ಇನ್ನೂ ಮುಗಿಯುವ ಕಾಲ ಬಂದಿಲ್ಲವೆಂದು ಎಣಿಸಬೇಕಾಗಿದೆ (೧೩–೧೪). ಅದು ಹಾಗಿರಲಿ. ರಾಮನು ನನಗೋಸ್ಕರ ವ್ಯಥೆಗೊಂಡು ಸದಾ ಸಂಕಟಪಡುತ್ತಿಲ್ಲವಷ್ಟೆ? ಮುಂದೆ ಮಾಡಬೇಕಾದ ಕಾರ್ಯಗಳನ್ನು ನಡೆಸುತ್ತಿರುವನಷ್ಟೆ? ಆ ರಾಜಪುತ್ರನು ದೈನ್ಯದಿಗ್ಭ್ರಮೆಗಳಿಂದ ಕರ್ತವ್ಯದಲ್ಲಿ ಪ್ರಮಾದಮಾಡುವುದಿಲ್ಲವಷ್ಟೆ? ಪುರುಷಪ್ರಯತ್ನಗಳನ್ನು ನಡೆಸುತ್ತಿರುವನಷ್ಟೆ? (೧೫–೧೬). ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗಗಳಿಗೆ ಸಾಧನವಾದ ಸಾಮ, ದಾನ, ಭೇದ, ದಂಡ ಎಂಬ ಉಪಾಯಗಳು ಎರಡು ವಿಧ. ಸಾಮದಾನಗಳು ಸೌಮ್ಯ. ಭೇದದಂಡಗಳು ಉಗ್ರ. ಶ್ರೀರಾಮನು ಇವುಗಳನ್ನು ಯಥೋಚಿತವಾಗಿ ಶತ್ರುಗಳಲ್ಲಿ ಉಪಯೋಗಿಸುತ್ತಿರುವನೆ? ಆ ಪರಂತಪನು ಮಿತ್ರರ

ಕಚ್ಚಿನ್ಮಿತ್ರಾಣಿ ಲಭತೇ ಮಿತ್ರೈಶ್ಚಾಪ್ಯಭಿಗಮ್ಯತೇ ।
ಕಚ್ಚಿತ್ ಕಲ್ಯಾಣಮಿತ್ರಶ್ಚ ಮಿತ್ರೈಶ್ಚಾಪಿ ಪುರಸ್ಕೃತಃ ॥ ೧೮

ಕಚ್ಚಿದಾಶಾಸ್ತಿ ದೇವಾನಾಂ ಪ್ರಸಾದಂ ಪಾರ್ಥಿವಾತ್ಮಜಃ ।
ಕಚ್ಚಿತ್ ಪುರುಷಕಾರಂ ಚ ದೈವಂ ಚ ಪ್ರತಿಪದ್ಯತೇ ॥ ೧೯

ಕಚ್ಚಿನ್ನ ವಿಗತಸ್ನೇಹೋ ವಿವಾಸಾನ್ಮಯಿ ರಾಘವಃ ।
ಕಚ್ಚಿನ್ಮಾಂ ವ್ಯಸನಾದಸ್ಮಾನ್ಮೋಕ್ಷಯಿಷ್ಯತಿ ರಾಘವಃ ॥ ೨೦

ಸುಖಾನಾಮುಚಿತೋ ನಿತ್ಯಮಸುಖಾನಾಮನೂಚಿತಃ ।
ದುಃಖಮುತ್ತರಮಾಸಾದ್ಯ ಕಚ್ಚಿದ್ರಾಮೋ ನ ಸೀದತಿ ॥ ೨೧

ಕೌಸಲ್ಯಾಯಾಸ್ತಥಾ ಕಚ್ಚಿತ್ ಸುಮಿತ್ರಾಯಾಸ್ತಥೈವ ಚ ।
ಅಭೀಕ್ಷ್ಣಂ ಶ್ರೂಯತೇ ಕಚ್ಚಿತ್ ಕುಶಲಂ ಭರತಸ್ಯ ಚ ॥ ೨೨

ಮನ್ನಿಮಿತ್ತೇನ ಮಾನಾರ್ಹಃ ಕಚ್ಚಿಚ್ಛೋಕೇನ ರಾಘವಃ ।
ಕಚ್ಚಿನ್ನಾನ್ಯಮನಾ ರಾಮಃ ಕಚ್ಚಿನ್ಮಾಂ ತಾರಯಿಷ್ಯತಿ ॥ ೨೩

ವಿಷಯದಲ್ಲಿ ಸಂತೃಪ್ತನಾಗಿ ಉತ್ಸಾಹದಿಂದಿರುವನೆ? (೧೭). ಮಿತ್ರರನ್ನು ಸಂಪಾದಿಸಿಕೊಳ್ಳುತ್ತಿದ್ದಾನೆಯೆ? ಅವರು ಇವನ ಬಳಿಗೆ ಸಹಾಯಾಪೇಕ್ಷೆಯಿಂದ ಬರುತ್ತಿರುವರೆ? ಅವರೆಲ್ಲರೂ ಒಳ್ಳೆಯವರಾಗಿದ್ದಾರೆಯೆ? ಇವನನ್ನು ಗೌರವಿಸುತ್ತಾರೆಯೆ? (೧೮). ಶ್ರೀರಾಮನು ದೇವತಾನುಗ್ರಹವನ್ನು ಸಂಪಾದಿಸುವುದಕ್ಕಾಗಿ ಇಷ್ಟದೇವತೆಯನ್ನು ಪ್ರಾರ್ಥಿಸುತ್ತಾನಷ್ಟೆ? ದೈವ ಪೌರುಷಗಳೆರಡರಲ್ಲಿಯೂ ನಂಬಿಕೆ ಇಟ್ಟಿರುವನಷ್ಟೆ? ಬಹುದಿನಗಳಿಂದ ಅಗಲಿದರೂ ನನ್ನಲ್ಲಿ ಸ್ನೇಹವು ತಪ್ಪಿಲ್ಲವಷ್ಟೆ? ವಾನರೋತ್ತಮ, ನನ್ನನ್ನು ಈ ಕಷ್ಟದಿಂದ ಪಾರುಮಾಡಲು ಶ್ರೀರಾಮನು ಬರುವುದು ನಿಜವೆ? (೧೯–೨೦). ಅವನು ಯಾವಾಗಲೂ ದುಃಖವನ್ನೇ ಕಾಣದೆ ಸುಖದಿಂದ ಇದ್ದವನು. ಈಗ ಈ ಮಹಾದುಃಖ ಬಂದೊದಗಿತು. ಇದರಿಂದ ದೇಹದಲ್ಲಿ ಕೃಶನಾಗಿಬಿಟ್ಟಿಲ್ಲವೆ? ಕೌಸಲ್ಯಾದೇವಿ, ಸುಮಿತ್ರಾದೇವಿ, ಭರತ—ಇವರ ಯೋಗಕ್ಷೇಮವೇನಾದರೂ ಕೇಳಿಬರುತ್ತಿದೆಯೆ? (೨೧–೨೨). ರಾಘವನು ನನಗೋಸ್ಕರ ಶೋಕಿಸುತ್ತಿರುವನೆ?

ಕಚ್ಚಿದಕ್ಷೌಹಿಣೀಂ ಭೀಮಾಂ ಭರತೋ ಭ್ರಾತೃವತ್ಸಲಃ ।
ಧ್ವಜಿನೀಂ ಮಂತ್ರಿಭಿರ್ಗುಪ್ತಾಂ ಪ್ರೇಷಯಿಷ್ಯತಿ ಮತ್ಕೃತೇ ॥ ೨೪

ವಾನರಾಧಿಪತಿಃ ಶ್ರೀಮಾನ್ ಸುಗ್ರೀವಃ ಕಚ್ಚಿದೇಷ್ಯತಿ ।
ಮತ್ಕೃತೇ ಹರಿಭಿರ್ವೀರೈರ್ವೃತೋ ದಂತನಖಾಯುಧೈಃ ॥ ೨೫

ಕಚ್ಚಿಚ್ಚ ಲಕ್ಷ್ಮಣಃ ಶೂರಃ ಸುಮಿತ್ರಾನಂದವರ್ಧನಃ ।
ಅಸ್ತ್ರವಿಚ್ಛರಜಾಲೇನ ರಾಕ್ಷಸಾನ್ ವಿಧಮಿಷ್ಯತಿ ॥ ೨೬

ರೌದ್ರೇಣ ಕಚ್ಚಿದಸ್ತ್ರೇಣ ರಾಮೇಣ ನಿಹತಂ ರಣೇ ।
ದ್ರಕ್ಷ್ಯಾಮ್ಯಲ್ಪೇನ ಕಾಲೇನ ರಾವಣಂ ಸಸುಹೃಜ್ಜನಮ್ ॥ ೨೭

ಕಚ್ಚಿನ್ನ ತದ್ಧೇಮಸಮಾನವರ್ಣಂ
ತಸ್ಯಾನನಂ ಪದ್ಮಸಮಾನಗಂಧಿ ।
ಮಯಾ ವಿನಾ ಶುಷ್ಯತಿ ಶೋಕದೀನಂ
ಜಲಕ್ಷಯೇ ಪದ್ಮಮಿವಾತಪೇನ ॥ ೨೮

ಅವನ ಮನಸ್ಸು ಬೇರೆಯಾಗಿಲ್ಲವೆ? ನನ್ನನ್ನು ಅವನು ಪಾರುಮಾಡಬಹುದೆ? ಭರತನು ಸೋದರವಾತ್ಸಲ್ಯವನ್ನಿಟ್ಟು ಮಂತ್ರಿಗಳಿಂದ ರಕ್ಷಿತವಾದ ಮಹಾಸೈನ್ಯವನ್ನು ನನಗೋಸ್ಕರ ಯುದ್ಧಮಾಡಲು ಕಳಿಸಿಕೊಡಬಹುದೆ? (೨೩–೨೪). ವಾನರೇಶ್ವರನಾದ ಸುಗ್ರೀವನು ದಂತನಖಗಳಿಂದಲೇ ಹೋರಾಡುವ ಕಪಿವೀರರೊಡನೆ ಸೇರಿ ನನಗೋಸ್ಕರ ಬರಬಹುದೆ? ಅಸ್ತ್ರವಿದ್ಯೆಯಲ್ಲಿ ನಿಪುಣನಾದ ವೀರಲಕ್ಷ್ಮಣನು ಶರಜಾಲಗಳಿಂದ ರಾಕ್ಷಸರನ್ನು ಧ್ವಂಸಮಾಡಬಹುದಲ್ಲವೆ? ರಾಮನ ರೌದ್ರಾಸ್ತ್ರದಿಂದ ಯುದ್ಧರಂಗದಲ್ಲಿ ರಾವಣನು ಮಿತ್ರಸಮೇತನಾಗಿ ಸತ್ತುಬೀಳುವುದನ್ನು ಶೀಘ್ರದಲ್ಲಿ ನಾನು ನೋಡುವೆನೆ? (೨೫–೨೭). ವಾನರೋತ್ತಮ, ಶ್ರೀರಾಮನ ಮುಖವು ಚಿನ್ನದಂತೆ ಮಿನುಗುವುದು. ಪದ್ಮದಂತೆ ಸುಗಂಧವನ್ನು ಬೀರುವುದು. ನೀರಿಲ್ಲದೆ ಬಿಸಿಲಿನಿಂದ ತಾವರೆಯ ಹೂವು ಬಾಡಿಹೋಗುವಂತೆ, ಅದು ನಾನಿಲ್ಲದೆ ಶೋಕದಿಂದ ಬಾಡಿಹೋಗದೆ ಇದ್ದೀತೆ? (೨೮).

*

ಧರ್ಮಾಪದೇಶಾತ್ತ್ಯಜತಶ್ಚ ರಾಜ್ಯಂ
ಮಾಂ ಚಾಪ್ಯರಣ್ಯಂ ನಯತಃ ಪದಾತಿವ್ ।
ನಾಸೀದ್ವ್ಯಥಾ ಯಸ್ಯ ನ ಭೀರ್ನ ಶೋಕಃ
ಕಚ್ಚಿತ್ ಸ ಧೈರ್ಯಂ ಹೃದಯೇ ಕರೋತಿ ॥ ೨೯

ನ ಚಾಸ್ಯ ಮಾತಾ ನ ಪಿತಾ ಚ ನಾನ್ಯಃ
ಸ್ನೇಹಾದ್ವಿಶಿಷ್ಟೋಽಸ್ತಿ ಮಯಾ ಸಮೋ ವಾ ।
ತಾವತ್ತ್ವಹಂ ದೂತ ಜಿಜೀವಿಷೇಯಂ
ಯಾವತ್ ಪ್ರವೃತ್ತಿಂ ಶೃಣುಯಾಂ ಪ್ರಿಯಸ್ಯ ॥ ೩೦

ಇತೀವ ದೇವೀ ವಚನಂ ಮಹಾರ್ಥಂ
ತಂ ವಾನರೇಂದ್ರಂ ಮಧುರಾರ್ಥಮುಕ್ತ್ವಾ ।
ಶ್ರೋತುಂ ಪುನಸ್ತಸ್ಯ ವಚೋಽಭಿರಾಮಂ
ರಾಮಾರ್ಥಯುಕ್ತಂ ವಿರರಾಮ ರಾಮಾ ॥ ೩೧

ಸೀತಾಯಾ ವಚನಂ ಶ್ರುತ್ವಾ ಮಾರುತಿರ್ಭೀಮವಿಕ್ರಮಃ ।
ಶಿರಸ್ಯಂಜಲಿಮಾಧಾಯ ವಾಕ್ಯಮುತ್ತರಮಬ್ರವೀತ್ ॥ ೩೨

ಧರ್ಮದ ಹೆಸರಿನಲ್ಲಿ ರಾಜ್ಯವನ್ನು ತೊರೆದಾಗಲೂ, ಕಾಲ್ನಡಿಗೆಯಲ್ಲಿ ನನ್ನನ್ನು ಅರಣ್ಯಕ್ಕೆ ಕರೆತಂದಾಗಲೂ ಅವನು ಚಿಂತೆ, ಭಯ, ಶೋಕಗಳೊಂದೂ ಇಲ್ಲದೆ ಧೀರನಾಗಿದ್ದನು. ಈಗ ನನ್ನನ್ನು ಅಗಲಿದಮಾತ್ರಕ್ಕೆ ಧೈರ್ಯವನ್ನು ಬಿಟ್ಟಿಲ್ಲ ವಷ್ಟೆ? (೨೯). ಅಪ್ಪಾ-ರಾಮದೂತ, ರಾಮನಿಗೆ ತಾಯಿಯಲ್ಲಾಗಲಿ, ತಂದೆ ಯಲ್ಲಾಗಲಿ, ಬೇರೆ ಯಾವ ಬಂಧುವಿನಲ್ಲಿಯಾಗಲಿ ನನ್ನ ಮೇಲಿರುವಷ್ಟು ಪ್ರೀತಿ ಇರಲಾರದು! ನನ್ನ ಪ್ರಿಯನು ನನ್ನನ್ನು ಬಿಡಿಸಿಕೊಳ್ಳುವ ವಾರ್ತೆಯನ್ನು ಒಂದು ದಿನ ಕೇಳುತ್ತೇನೆಂಬ ಆಸೆಯಿಂದ ಇದುವರೆಗೂ ಜೀವಿಸಿದ್ದೇನೆ" (೩೦). ಹೀಗೆ ಸೀತಾದೇವಿಯು ಅರ್ಥವತ್ತಾಗಿಯೂ ಮಧುರವಾಗಿಯೂ ಮಾತನಾಡಿ, ಹನುಮಂತನು ಹೇಳುವ ಆನಂದಕರವಾದ ರಾಮನ ವೃತ್ತಾಂತವನ್ನು ಕೇಳೋಣ ವೆಂದು ಸುಮ್ಮನಾದಳು (೩೧). ಆಗ ಹನುಮಂತನು ತಲೆಯಮೇಲೆ ಕೈಜೋಡಿಸಿ

ನ ತ್ವಾಮಿಹಸ್ಥಾಂ ಜಾನೀತೇ ರಾಮಃ ಕಮಲಲೋಚನಃ ।
ತೇನ ತ್ವಾಂ ನಾನಯತ್ಯಾಶು ಶಚೀಮಿವ ಪುರಂದರಃ ॥ ೩೩

ಶ್ರುತ್ವೈವ ತು ವಚೋ ಮಹ್ಯಂ ಕ್ಷಿಪ್ರಮೇಷ್ಯತಿ ರಾಘವಃ ।
ಚಮೂಂ ಪ್ರಕರ್ಷನ್ ಮಹತೀಂ ಹರ್ಯೃಕ್ಷಗಣಸಂಕುಲಾಮ್ ॥ ೩೪

ವಿಜೃಂಭಯಿತ್ವಾ ಬಾಣೌಘೈರಕ್ಷೋಭ್ಯಂ ವರುಣಾಲಯಮ್ ।
ಕರಿಷ್ಯತಿ ಪುರೀಂ ಲಂಕಾಂ ಕಾಕುತ್ಸ್ಥಃ ಶಾಂತರಾಕ್ಷಸಾಮ್ ॥ ೩೫

ತತ್ರ ಯದ್ಯಂತರಾ ಮೃತ್ಯುರ್ಯದಿ ದೇವಾ ಮಹಾಸುರಾಃ ।
ಸ್ಥಾಸ್ಯಂತಿ ಪಥಿ ರಾಮಸ್ಯ ಸ ತಾನಪಿ ವಧಿಷ್ಯತಿ ॥ ೩೬

ತವಾದರ್ಶನಜೇನಾರ್ಯೇ ಶೋಕೇನ ಸ ಪರಿಪ್ಲುತಃ ।
ನ ಶರ್ಮ ಲಭತೇ ರಾಮಃ ಸಿಂಹಾರ್ದಿತ ಇವ ದ್ವಿಪಃ ॥ ೩೭

ಮಲಯೇನ ಚ ವಿಂಧ್ಯೇನ ಮೇರುಣಾ ಮಂದರೇಣ ಚ ।
ದರ್ದುರೇಣ ಚ ತೇ ದೇವಿ ಶಪೇ ಮೂಲಫಲೇನ ಚ ॥ ೩೮

ಕೊಂಡು "ವೈದೇಹಿ, ಶ್ರೀರಾಮನಿಗೆ ನೀನು ಇಲ್ಲಿರುವುದು ಗೊತ್ತಿಲ್ಲವಾದ್ದರಿಂದ ನಿನ್ನನ್ನು ಕರೆದುಕೊಂಡು ಹೋಗಿಲ್ಲ. ಗೊತ್ತಿದ್ದರೆ, ದೇವೇಂದ್ರನು ಶಚೀದೇವಿಯನ್ನು ಕರೆದೊಯ್ಯುವಂತೆ ನಿನ್ನನ್ನು ಕರೆದೊಯ್ಯುತ್ತಿದ್ದನು (೩೨–೩೩). ಇಲ್ಲಿರುವ ಸುದ್ದಿಯನ್ನು ನನ್ನಿಂದ ಕೇಳುತ್ತಲೇ ರಾಘವನು ವಾನರಭಲ್ಲೂಕಗಳ ಮಹಾಸೈನ್ಯವನ್ನು ಕರೆತರುವನು. ಅಸ್ತ್ರಜಾಲಗಳಿಂದ ಸಮುದ್ರವನ್ನು ಸ್ತಬ್ಧಗೊಳಿಸಿ, ಲಂಕೆಯಲ್ಲಿ ರಾಕ್ಷಸರ ಸದ್ದಿಲ್ಲದಂತೆ ಅವರ ಹುಟ್ಟಡಗಿಸುವನು (೩೪–೩೫). ಒಂದು ವೇಳೆ ದೇವತೆಗಳಾಗಲಿ, ಅಸುರರಾಗಲಿ, ಮೃತ್ಯುದೇವತೆಯೇ ಆಗಲಿ ಅಡ್ಡಬಂದರೂ ರಾಮನು ಅವರನ್ನು ವಧಿಸದೆ ಬಿಡುವುದಿಲ್ಲ. ಆರ್ಯೆ, ಸಿಂಹದಿಂದ ಕಂಗೆಟ್ಟ ಗಜರಾಜನಂತೆ, ನಿನ್ನ ವಿಯೋಗದುಃಖದಿಂದ ರಾಮನು ಸಂತೋಷವನ್ನೇ ಕಾಣದೆ ಇದ್ದಾನೆ (೩೬–೩೭). ಈ ವಿಷಯದಲ್ಲಿ (ನಮ್ಮ ಕಪಿಗಳಿಗೆ ಆಶ್ರಯವಾದ) ಮಲಯಪರ್ವತದ ಆಣೆ! ವಿಂಧ್ಯಪರ್ವತದ ಆಣೆ! ಮೇರುಪರ್ವತದ ಆಣೆ! ಮಂದರ ದರ್ದುರ ಪರ್ವತಗಳ ಆಣೆ! ಕಂದಮೂಲಗಳ

ಯಥಾ ಸುನಯನಂ ವಲ್ಗು ಬಿಂಬೋಷ್ಠಂ ಚಾರುಕುಂಡಲಮ್ ।
ಮುಖಂ ದ್ರಕ್ಷ್ಯಸಿ ರಾಮಸ್ಯ ಪೂರ್ಣಚಂದ್ರಮಿವೋದಿತಮ್ ॥ ೩೯

ಕ್ಷಿಪ್ರಂ ದ್ರಕ್ಷ್ಯಸಿ ವೈದೇಹಿ ರಾಮಂ ಪ್ರಸ್ರವಣೇ ಗಿರೌ ।
ಶತಕ್ರತುಮಿವಾಸೀನಂ ನಾಕಪೃಷ್ಠಸ್ಯ ಮೂರ್ಧನಿ ॥ ೪೦

ನ ಮಾಂಸಂ ರಾಘವೋ ಭುಂಕ್ತೇ ನ ಚಾಪಿ ಮಧು ಸೇವತೇ ।
ವನ್ಯಂ ಸುವಿಹಿತಂ ನಿತ್ಯಂ ಭಕ್ತಮಶ್ನಾತಿ ಪಂಚಮಮ್ ॥ ೪೧

ನೈವ ದಂಶಾನ್ನ ಮಶಕಾನ್ನ ಕೀಟಾನ್ನ ಸರೀಸೃಪಾನ್ ।
ರಾಘವೋಽಪನಯೇದ್ಗಾತ್ರಾತ್ತ್ವದ್ಗತೇನಾಂತರಾತ್ಮನಾ ॥ ೪೨

ನಿತ್ಯಂ ಧ್ಯಾನಪರೋ ರಾಮೋ ನಿತ್ಯಂ ಶೋಕಪರಾಯಣಃ ।
ನಾನ್ಯಚ್ಚಿಂತಯತೇ ಕಿಂಚಿತ್ ಸ ತು ಕಾಮವಶಂ ಗತಃ ॥ ೪೩

ಅನಿದ್ರಃ ಸತತಂ ರಾಮಃ ಸುಪ್ತೋಽಪಿ ಚ ನರೋತ್ತಮಃ ।
ಸೀತೇತಿ ಮಧುರಾಂ ವಾಣೀಂ ವ್ಯಾಹರನ್ ಪ್ರತಿಬುಧ್ಯತೇ ॥ ೪೪

ಆಣೆ! (೩೮). ದೇವಿ, ಶೀಘ್ರದಲ್ಲಿಯೇ ನೀನು ಸುಂದರನೇತ್ರಗಳಿಂದೊಪ್ಪುವ, ತೊಂಡೆಯಹಣ್ಣಿನಂತಹ ತುಟಿಯುಳ್ಳ, ಮನೋಹರ ಕುಂಡಲಗಳಿಂದ ಶೋಭಿತವಾದ, ಪೂರ್ಣಚಂದ್ರನಿಗೆ ಎಣೆಯಾದ ಶ್ರೀರಾಮನ ರಮಣೀಯವಾದ ಮುಖವನ್ನು ನೋಡುತ್ತೀಯೆ. ದೇವಲೋಕದಲ್ಲಿರುವ ದೇವೇಂದ್ರನಂತೆ ಪ್ರಸ್ರವಣಗಿರಿಯಲ್ಲಿರುವ ರಾಮನನ್ನು ನೋಡುತ್ತೀಯೆ (೩೯–೪೦). ನಿನ್ನ ವಿರಹದುಃಖದಿಂದ ರಾಘವನು ಮಾಂಸವನ್ನೂ ಮಧುವನ್ನೂ ಸೇವಿಸುವುದೇ ಇಲ್ಲ. ನಿತ್ಯವೂ ಸಂಜೆ ಕಾಡಿನಲ್ಲಿ ದೊರೆಯುವ ಫಲಮೂಲಗಳನ್ನು ಮಾತ್ರ ಸ್ವಲ್ಪ ತಿನ್ನುತ್ತಿರುವನು. ಅವನ ಮನಸ್ಸು ನಿನ್ನಲ್ಲಿಯೇ ಲಯಿಸಿಹೋಗಿರುವುದರಿಂದ, ತನ್ನ ಮೈಮೇಲೆ ಕಾಡುನೊಣವಾಗಲಿ ಸೊಳ್ಳೆಯಾಗಲಿ ಹುಳು ಹಲ್ಲಿಗಳಾಗಲಿ ಎರಗಿದರೆ ಅವುಗಳನ್ನು ಓಡಿಸುವುದೇ ಇಲ್ಲ (೪೧–೪೨). ಕಾಮವಶನಾಗಿ ಸದಾ ನಿನ್ನನ್ನು ಚಿಂತಿಸುತ್ತ, ಸದಾ ಶೋಕಿಸುತ್ತ ಇರುವನು. ಬೇರೆ ಯಾವುದನ್ನೂ ಯೋಚಿಸುವುದೇ ಇಲ್ಲ. ಆತನಿಗೆ ನಿದ್ರೆಯೇ ಬರುತ್ತಿಲ್ಲ. ಆಕಸ್ಮಿಕವಾಗಿ ನಿದ್ರೆ ಬಂದರೂ 'ಹಾ ಸೀತೆ' ಎಂದು ಕನವರಿಸುತ್ತಲೇ ಎಚ್ಚರಗೊಳ್ಳುವನು (೪೩–೪೪).

ದೃಷ್ಟ್ವಾ ಫಲಂ ವಾ ಪುಷ್ಪಂ ವಾ ಯದ್ವಾನ್ಯತ್ ಸುಮನೋಹರಮ್ ।
ಬಹುಶೋ ಹಾ ಪ್ರಿಯೇತ್ಯೇವಂ ಶ್ವಸಂಸ್ತ್ವಾಮಭಿಭಾಷತೇ ॥ ೪೫

ಸ ದೇವಿ ನಿತ್ಯಂ ಪರಿತಪ್ಯಮಾನ-
ಸ್ತ್ವಾಮೇವ ಸೀತೇತ್ಯಭಿಭಾಷಮಾಣಃ ।
ಧೃತವ್ರತೋ ರಾಜಸುತೋ ಮಹಾತ್ಮಾ
ತವೈವ ಲಾಭಾಯ ಕೃತಪ್ರಯತ್ನಃ ॥ ೪೬

ಸಾ ರಾಮಸಂಕೀರ್ತನವೀತಶೋಕಾ
ರಾಮಸ್ಯ ಶೋಕೇನ ಸಮಾನಶೋಕಾ ।
ಶರನ್ಮುಖೇ ಸಾಂಬುದಶೇಷಚಂದ್ರಾ
ನಿಶೇವ ವೈದೇಹಸುತಾ ಬಭೂವ ॥ ೪೭

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್‌ತ್ರಿಂಶಃ ಸರ್ಗಃ

ಎಲ್ಲಿಯಾದರೂ ಹಣ್ಣನ್ನಾಗಲಿ ಸುಂದರವಾದ ಹೂವನ್ನಾಗಲಿ ನೋಡಿದರೆ, ನಿನ್ನನ್ನು ಸ್ಮರಿಸಿಕೊಂಡು 'ಹಾ ಸೀತೆ' ಎಂದು ಹಂಬಲಿಸುತ್ತ ನಿಟ್ಟುಸಿರು ಬಿಡುವನು. ದೇವಿ, ದುಃಖಸಂತಪ್ತನಾದ ಆ ರಾಜಕುಮಾರನು ಯಾವಾಗಲೂ 'ಸೀತೆ' ಎಂದು ನಿನ್ನ ಹೆಸರನ್ನು ನುಡಿಯುತ್ತಿರುವನು. ನಿನ್ನನ್ನು ಹುಡುಕಲೇ ಬೇಕೆಂದು ದೃಢನಿಶ್ಚಯದಿಂದ ಪ್ರಯತ್ನಮಾಡಿದ್ದಾನೆ" ಎಂದನು (೪೫–೪೬). ಶ್ರೀರಾಮನ ವೃತ್ತಾಂತವನ್ನು ಕೇಳಿ ಮನಸ್ಸಿಗೆ ನೆಮ್ಮದಿಯಾದರೂ, ಅವನು ತನಗಾಗಿ ಅನುಭವಿಸುತ್ತಿರುವ ಕಷ್ಟವನ್ನು ತಿಳಿದು ಜಾನಕಿಯು ರಾಮನಂತೆಯೇ ದುಃಖಿತಳಾದಳು. ಆಗ, ಶರತ್ಕಾಲಾರಂಭದಲ್ಲಿ ತೆಳುವಾದ ಮೋಡದಿಂದ ಮಾಸಿದ ಚಂದ್ರನಿರುವ ರಾತ್ರಿಯಂತೆ, ಆಕೆಯು ಕಾಣಿಸುತ್ತಿದ್ದಳು (೪೭).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತಾರನೆಯ ಸರ್ಗ

ಪಂಚಷಷ್ಟಿತಮಃ ಸರ್ಗಃ

ಚೂಡಾಮಣಿಪ್ರದಾನಮ್

ತತಃ ಪ್ರಸ್ರವಣಂ ಶೈಲಂ ತೇ ಗತ್ವಾ ಚಿತ್ರಕಾನನಮ್ ।
ಪ್ರಣಮ್ಯ ಶಿರಸಾ ರಾಮಂ ಲಕ್ಷ್ಮಣಂ ಚ ಮಹಾಬಲಮ್ ॥ ೧

ಯುವರಾಜಂ ಪುರಸ್ಕೃತ್ಯ ಸುಗ್ರೀವಮಭಿವಾದ್ಯ ಚ ।
ಪ್ರವೃತ್ತಿಮಥ ಸೀತಾಯಾಃ ಪ್ರವಕ್ತುಮುಪಚಕ್ರಮುಃ ॥ ೨

ರಾವಣಾಂತಃಪುರೇ ರೋಧಂ ರಾಕ್ಷಸೀಭಿಶ್ಚ ತರ್ಜನಮ್ ।
ರಾಮೇ ಸಮನುರಾಗಂ ಚ ಯಶ್ಚಾಯಂ ಸಮಯಃ ಕೃತಃ ॥ ೩

ಏತದಾಖ್ಯಾಂತಿ ತೇ ಸರ್ವೇ ಹರಯೋ ರಾಮಸಂನಿಧೌ ।
ವೈದೇಹೀಮಕ್ಷತಾಂ ಶ್ರುತ್ವಾ ರಾಮಸ್ತೂತ್ತರಮಬ್ರವೀತ್ ॥ ೪

ಕ್ವ ಸೀತಾ ವರ್ತತೇ ದೇವೀ ಕಥಂ ಚ ಮಯಿ ವರ್ತತೇ ।
ಏತನ್ಮೇ ಸರ್ವಮಾಖ್ಯಾತ ವೈದೇಹೀಂ ಪ್ರತಿ ವಾನರಾಃ ॥ ೫

ಸರ್ಗ ೬೫

ಹನುಮಂತನು ಶ್ರೀರಾಮನಿಗೆ ಸೀತಾವೃತ್ತಾಂತವನ್ನೂ, ಸೀತೆಯ ಸಂದೇಶವನ್ನೂ ತಿಳಿಸಿ, ಚೂಡಾಮಣಿಯನ್ನು ಅರ್ಪಿಸುವುದು

ಹೀಗೆ ಆ ವಾನರರು ಅಂಗದನನ್ನು ಮುಂದಿಟ್ಟುಕೊಂಡು ವಿಚಿತ್ರ ವನಗಳಿಂದ ತುಂಬಿದ ಪ್ರಸ್ರವಣಪರ್ವತಕ್ಕೆ ಬಂದು, ರಾಮಲಕ್ಷ್ಮಣಸುಗ್ರೀವರಿಗೆ ಅಭಿವಂದಿಸಿ ಸೀತಾವೃತ್ತಾಂತವನ್ನು ಹೇಳಲುಪಕ್ರಮಿಸಿದರು (೧–೨). ಅವರೆಲ್ಲರೂ 'ಸೀತಾದೇವಿಯು ರಾವಣನ ಅಂತಃಪುರದಲ್ಲಿ ಬಂದಿಯಾಗಿದ್ದಾಳೆ. ರಾಕ್ಷಸಿಯರು ಆಕೆಯನ್ನು ಹೆದರಿಸುತ್ತಿದ್ದಾರೆ. ಸೀತೆಯು ರಾಮನಲ್ಲಿಯೇ ಅನುರಾಗವನ್ನು ಇಟ್ಟಿದ್ದಾಳೆ. ರಾವಣನು ಆಕೆಗೆ ಇನ್ನು ಎರಡು ತಿಂಗಳು ಮಾತ್ರ ಅವಧಿಯನ್ನು ಕೊಟ್ಟಿದ್ದಾನೆ' ಎಂಬ ವಿಷಯವನ್ನು ತಿಳಿಸಿದರು (೩). ಶ್ರೀರಾಮನು ಮುಖ್ಯವಾಗಿ ಸೀತೆಯು ಯಾವ ಅಪಾಯವೂ ಇಲ್ಲದೆ ಜೀವಿಸಿದ್ದಾಳೆಂಬುದನ್ನರಿತು "ಎಲೈ ವಾನರರೆ, ಸೀತಾದೇವಿಯು ಎಲ್ಲಿದ್ದಾಳೆ? ನನ್ನ ವಿಷಯದಲ್ಲಿ ಅವಳ ಮನಸ್ಸು ಹೇಗಿದೆ? ಸೀತೆಯ ವೃತ್ತಾಂತವೆಲ್ಲವನ್ನೂ ವಿಶದವಾಗಿ ತಿಳಿಸಿರಿ" ಎಂದು ಕೇಳಿದನು (೪–೫).

ರಾಮಸ್ಯ ಗದಿತಂ ಶ್ರುತ್ವಾ ಹರಯೋ ರಾಮಸಂನಿಧೌ ।
ಚೋದಯಂತಿ ಹನೂಮಂತಂ ಸೀತಾವೃತ್ತಾಂತಕೋವಿದಮ್ ॥ ೬

ಶ್ರುತ್ವಾ ತೇ ವಚನಂ ತೇಷಾಂ ಹನುಮಾನ್ ಮಾರುತಾತ್ಮಜಃ ।
ಪ್ರಣಮ್ಯ ಶಿರಸಾ ದೇವ್ಯೈ ಸೀತಾಯೈ ತಾಂ ದಿಶಂ ಪ್ರತಿ ॥ ೭

ಉವಾಚ ವಾಕ್ಯಂ ವಾಕ್ಯಜ್ಞಃ ಸೀತಾಯಾ ದರ್ಶನಂ ಯಥಾ ।
ಸಮುದ್ರಂ ಲಂಘಯಿತ್ವಾಹಂ ಶತಯೋಜನಮಾಯತಮ್ ॥ ೮

ಅಗಚ್ಛಂ ಜಾನಕೀಂ ಸೀತಾಂ ಮಾರ್ಗಮಾಣೋ ದಿದೃಕ್ಷಯಾ ।
ತತ್ರ ಲಂಕೇತಿ ನಗರೀ ರಾವಣಸ್ಯ ದುರಾತ್ಮನಃ ॥ ೯

ದಕ್ಷಿಣಸ್ಯ ಸಮುದ್ರಸ್ಯ ತೀರೇ ವಸತಿ ದಕ್ಷಿಣೇ ।
ತತ್ರ ಸೀತಾ ಮಯಾ ದೃಷ್ಟಾ ರಾವಣಾಂತಃಪುರೇ ಸತೀ ॥ ೧೦

ಸಂನ್ಯಸ್ಯ ತ್ವಯಿ ಜೀವಂತೀ ರಾಮಾ ರಾಮ ಮನೋರಥಮ್ ।
ದೃಷ್ಟಾ ಮೇ ರಾಕ್ಷಸೀಮಧ್ಯೇ ತರ್ಜ್ಯಮಾನಾ ಮುಹುರ್ಮುಹುಃ ॥

ಆಗ ವಾನರರು ಸೀತಾವೃತ್ತಾಂತವನ್ನು ಚೆನ್ನಾಗಿ ಬಲ್ಲ ಹನುಮಂತನನ್ನು ನೋಡಿ "ಹನುಮಂತ, ಶ್ರೀರಾಮನಿಗೆ ಎಲ್ಲವನ್ನೂ ತಿಳಿಸು!" ಎಂದರು. ಅನಂತರ ಆಂಜನೇಯನು ಸೀತೆಯಿದ್ದ ದಿಕ್ಕಿಗೆ ತಿರುಗಿ ಅವಳಿಗೆ ತಲೆಬಾಗಿ ವಂದಿಸಿ, ಸೀತೆಯನ್ನು ಕಂಡುಬಂದ ಸಂಗತಿಯನ್ನು ಹೇಳಲಾರಂಭಿಸಿದನು. ಆಂಜನೇಯನು ಮಾತನಾಡುವ ಕಲೆಯಲ್ಲಿ ಪ್ರವೀಣ (೬-೭). "ದೇವ, ನಾನು ಸೀತಾದೇವಿಯನ್ನು ಹುಡುಕುವುದಕ್ಕಾಗಿ ನೂರುಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿಹೋದೆನು. ಅಲ್ಲಿ ಲಂಕೆ ಎಂಬ ಹೆಸರಿನ ಒಂದು ನಗರವಿದೆ. ಅದು ದುರಾತ್ಮನಾದ ರಾವಣನ ರಾಜಧಾನಿ. ಅದು ದಕ್ಷಿಣ ಸಮುದ್ರದ ಆಚೆಯ ದಡದಲ್ಲಿದೆ. ರಾವಣನ ಆ ನಗರದಲ್ಲಿ ನಾನು ಸಾಧ್ವಿಯಾದ ಸೀತಾದೇವಿಯನ್ನು ಕಂಡೆನು (೮-೧೦). ಶ್ರೀರಾಮ, ಅವಳು ಮುಂದಿನ ಆಸೆಯನ್ನೆಲ್ಲಾ ನಿನಗೊಪ್ಪಿಸಿ ನಿನ್ನನ್ನೇ ನಂಬಿ ಜೀವವನ್ನು ಹಿಡಿದುಕೊಂಡಿರುವಳು. ರಾಕ್ಷಸಿಯರು ಅವಳನ್ನು ಸುತ್ತುಗಟ್ಟಿ ಪದೇ ಪದೇ

ರಾಕ್ಷಸೀಭಿರ್ವಿರೂಪಾಭೀ ರಕ್ಷಿತಾ ಪ್ರಮದಾವನೇ ।
ದುಃಖಮಾಪದ್ಯತೇ ದೇವೀ ತವಾದುಃಖೋಚಿತಾ ಸತೀ ॥ ೧೨

ರಾವಣಾಂತಃಪುರೇ ರುದ್ಧಾ ರಾಕ್ಷಸೀಭಿಃ ಸುರಕ್ಷಿತಾ ।
ಏಕವೇಣೀಧರಾ ದೀನಾ ತ್ವಯಿ ಚಿಂತಾಪರಾಯಣಾ ॥ ೧೩

ಅಧಃಶಯ್ಯಾ ವಿವರ್ಣಾಂಗೀ ಪದ್ಮಿನೀವ ಹಿಮಾಗಮೇ ।
ರಾವಣಾದ್ವಿನಿವೃತ್ತಾರ್ಥಾ ಮರ್ತವ್ಯಕೃತನಿಶ್ಚಯಾ ॥ ೧೪

ದೇವೀ ಕಥಂಚಿತ್ ಕಾಕುತ್ಸ್ಥ ತ್ವನ್ಮನಾ ಮಾರ್ಗಿತಾ ಮಯಾ ।
ಇಕ್ಷ್ವಾಕುವಂಶವಿಖ್ಯಾತಿಂ ಶನೈಃ ಕೀರ್ತಯತಾನಘ ॥ ೧೫

ಸಾ ಮಯಾ ನರಶಾರ್ದೂಲ ವಿಶ್ವಾಸಮುಪಪಾದಿತಾ ।
ತತಃ ಸಂಭಾಷಿತಾ ದೇವೀ ಸರ್ವಮರ್ಥಂ ಚ ದರ್ಶಿತಾ ॥ ೧೬

ಹೆದರಿಸುವುದನ್ನು ನಾನು ನೋಡಿದೆ. ವಿಕಾರರೂಪಿನ ರಾಕ್ಷಸಿಯರು ಉದ್ಯಾನ ವನದಲ್ಲಿ ಅವಳನ್ನು ಕಾಯುತ್ತಿದ್ದಾರೆ. ಸೀತಾದೇವಿಯು ಅತ್ಯಂತ ದುಃಖ ದಲ್ಲಿದ್ದಾಳೆ. ಆ ಸಾಧ್ವಿಗೆ ಅಂತಹ ಕಷ್ಟಬರಬಾರದು (೧೧-೧೨). ರಾವಣನ ನಗರದಲ್ಲಿ ಸೆರೆಯಾಗಿಬಿಟ್ಟಿದ್ದಾಳೆ. ರಾಕ್ಷಸಿಯರು ಬಹು ಎಚ್ಚರಿಕೆಯಿಂದ ಕಾಯುತ್ತಿದ್ದಾರೆ. ದೇವಿಯು ಒಂಟಿ ಜಡೆಯನ್ನು ಬಿಟ್ಟು ದೈನ್ಯದಿಂದ ನಿನ್ನನ್ನೇ ಧ್ಯಾನಿಸುತ್ತಿದ್ದಾಳೆ. ನೆಲದಮೇಲೆ ಮಲಗುತ್ತಾಳೆ. ಕಂದಿಹೋಗಿದ್ದಾಳೆ. ಚಳಿಗಾಲದ ತಾವರೆಯ ಬಳ್ಳಿಯಂತೆ ಆಗಿಬಿಟ್ಟಿದ್ದಾಳೆ. ರಾವಣನಿಂದ ಉಳಿಗಾಲ ವಿಲ್ಲವೆಂದು ಭಾವಿಸಿ, ತಾನು ಆತ್ಮಹತ್ಯೆಮಾಡಿಕೊಳ್ಳಬೇಕೆಂದು ನಿರ್ಧರಿಸಿಕೊಂಡಿ ದ್ದಾಳೆ (೧೩--೧೪). ಶ್ರೀರಾಮ, ನಿನ್ನನ್ನೇ ಧ್ಯಾನಿಸುತ್ತಿರುವ ದೇವಿಯನ್ನು ನಾನು ಹೇಗೋ ಪ್ರಯತ್ನಪಟ್ಟು ಹುಡುಕಿದೆನು. ನಾನು ಮೊದಲು ನಿನ್ನ ಇಕ್ಷ್ವಾಕುವಂಶದ ಖ್ಯಾತಿಯನ್ನು ಹೊಗಳುತ್ತ, ಅವಳಿಗೆ ನನ್ನಲ್ಲಿ ನಂಬಿಕೆ ಯುಂಟಾಗುವಂತೆ ಮಾಡಿಕೊಂಡೆನು. ಅನಂತರ ಅವಳೊಡನೆ ಸಂಭಾಷಣೆ ಯನ್ನಾರಂಭಿಸಿ ಸಮಸ್ತ ವಿಷಯವನ್ನೂ ತಿಳಿಸಿದೆನು (೧೫-೧೬).

ರಾಮಸುಗ್ರೀವಸಖ್ಯಂ ಚ ಶ್ರುತ್ವಾ ಪ್ರೀತಿಮುಪಾಗತಾ ।
ನಿಯತಃ ಸಮುದಾಚಾರೋ ಭಕ್ತಿಶ್ಚಾಸ್ಯಾಸ್ತಥಾ ತ್ವಯಿ ॥ ೧೭

ಏವಂ ಮಯಾ ಮಹಾಭಾಗಾ ದೃಷ್ಟ್ವಾ ಜನಕನಂದಿನೀ ।
ಉಗ್ರೇಣ ತಪಸಾ ಯುಕ್ತಾ ತ್ವದ್ಭಕ್ತ್ಯಾ ಪುರುಷರ್ಷಭ ॥ ೧೮

ಅಭಿಜ್ಞಾನಂ ಚ ಮೇ ದತ್ತಂ ಯಥಾವೃತ್ತಂ ತವಾಂತಿಕೇ ।
ಚಿತ್ರಕೂಟೇ ಮಹಾಪ್ರಾಜ್ಞ ವಾಯಸಂ ಪ್ರತಿ ರಾಘವ ॥ ೧೯

ವಿಜ್ಞಾಪ್ಯಶ್ಚ ನರವ್ಯಾಘ್ರೋ ರಾಮೋ ವಾಯುಸುತ ತ್ವಯಾ ।
ಅಖಿಲೇನೇಹ ಯದ್ದೃಷ್ಟಮಿತಿ ಮಾಮಾಹ ಜಾನಕೀ ॥ ೨೦

ಅಯಂ ಚಾಸ್ಮೈ ಪ್ರದಾತವ್ಯೋ ಯತ್ನಾತ್ ಸುಪರಿರಕ್ಷಿತಃ ।
ಬ್ರುವತಾ ವಚನಾನ್ಯೇವಂ ಸುಗ್ರೀವಸ್ಯೋಪಶೃಣ್ವತಃ ॥ ೨೧

ನಿನಗೂ ಸುಗ್ರೀವನಿಗೂ ಸ್ನೇಹವಾಗಿದೆ ಎಂಬುದನ್ನು ಕೇಳಿ, ಬಹಳ ಸಂತೋಷ ಪಟ್ಟಳು. ಸೀತಾದೇವಿಯು ಪರಿಶುದ್ಧವಾದ ನಡತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡಿದ್ದಾಳೆ. ನಿನ್ನಲ್ಲಿ ದೃಢವಾದ ಭಕ್ತಿಯನ್ನು ಇಟ್ಟಿದ್ದಾಳೆ. ಹೇ ಪುರುಷೋತ್ತಮ, ಈ ರೀತಿಯಲ್ಲಿ ನಾನು ಮಹಾತ್ಮಳಾದ ಜಾನಕಿಯನ್ನು ನೋಡಿದೆನು. ಅವಳು ಪಾತಿವ್ರತ್ಯವೆಂಬ ಉಗ್ರವಾದ ತಪಸನ್ನಾಚರಿಸುತ್ತ ನಿನ್ನಲ್ಲಿ ಭಕ್ತಿಯಿಂದಿರುವಳು (೧೭–೧೮). ಚಿತ್ರಕೂಟದಲ್ಲಿದ್ದಾಗ ನಡೆದ ವಾಯಸ ವೃತ್ತಾಂತವೊಂದನ್ನು ನಿನಗೆ ಗುರುತಿಗಾಗಿ ನನ್ನೊಡನೆ ಹೇಳಿದಳು. ಸೀತಾದೇವಿಯು "ವಾಯುಪುತ್ರ, ನೀನು ಇಲ್ಲಿ ಕಣ್ಣಾರೆ ನೋಡಿದ ಎಲ್ಲಾ ಸಂಗತಿಯನ್ನೂ ಶ್ರೀರಾಮನಿಗೆ ತಿಳಿಸು (೧೯–೨೦). ಸುಗ್ರೀವನು ಸಮೀಪದಲ್ಲಿ ಕೇಳುತ್ತಿರುವಾಗಲೇ ಇದೆಲ್ಲವನ್ನೂ ತಿಳಿಸಿ, ನಾನು ರಕ್ಷಿಸಿಕೊಂಡು ಬಂದಿರುವ ಈ ವಸ್ತುವನ್ನು ಶ್ರೀರಾಮನಿಗೆ ಕೊಡು" ಎಂದು ಹೇಳಿದಳು. ಅನಂತರ "ಶ್ರೀರಾಮನಿಗೆ ಇದನ್ನು ಕೊಡುವಾಗ ನಾನು ಹೀಗೆ ನುಡಿದೆನೆಂದು ಹೇಳು: ಇದು ಬಹು ಪ್ರಯಾಸದಿಂದ ನಾನು ಕಾಪಾಡಿಕೊಂಡು ಬಂದಿರುವ ಚೂಡಾಮಣಿ. ಒಂದುಸಲ

ಏಷ ಚೂಡಾಮಣಿಃ ಶ್ರೀಮಾನ್ ಮಯಾ ಸುಪರಿರಕ್ಷಿತಃ ।
ಮನಃಶಿಲಾಯಾಸ್ತಿಲಕೋ ಗಂಡಪಾರ್ಶ್ವೇ ನಿವೇಶಿತಃ ॥ ೨೨

ತ್ವಯಾ ಪ್ರನಷ್ಟೇ ತಿಲಕೇ ತಂ ಕಿಲ ಸ್ಮರ್ತುಮರ್ಹಸಿ ।
ಏಷ ನಿರ್ಯಾತಿತಃ ಶ್ರೀಮಾನ್ ಮಯಾ ತೇ ವಾರಿಸಂಭವಃ ॥ ೨೩

ಏತಂ ದೃಷ್ಟ್ವಾ ಪ್ರಮೋದಿಷ್ಯೇ ವ್ಯಸನೇ ತ್ವಾಮಿವಾನಘ ।
ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ॥ ೨೪

ಊರ್ಧ್ವಂ ಮಾಸಾನ್ನ ಜೀವೇಯಂ ರಕ್ಷಸಾಂ ವಶಮಾಗತಾ ।
ಇತಿ ಮಾಮಬ್ರವೀತ್ ಸೀತಾ ಕೃಶಾಂಗೀ ವರವರ್ಣಿನೀ ॥ ೨೫

ರಾವಣಾಂತಃಪುರೇ ರುದ್ಧಾ ಮೃಗೀವೋತ್ಫುಲ್ಲಲೋಚನಾ ।
ಏತದೇವ ಮಯಾಖ್ಯಾತಂ ಸರ್ವಂ ರಾಘವ ಯದ್ಯಥಾ ॥ ೨೬

ಸರ್ವಥಾ ಸಾಗರಜಲೇ ಸಂತಾರಃ ಪ್ರವಿಧೀಯತಾಮ್ ॥

ನನ್ನ ತಿಲಕವು ಅಳಿಸಿಹೋಗಿರಲು ನೀನು ಮಣಿಶಿಲೆಯಿಂದ ನನ್ನ ಕಪೋಲದ ಮೇಲೆ ಒಂದು ಬೊಟ್ಟನ್ನು ಇಟ್ಟೆ. ಅದನ್ನು ನೆನಪುಮಾಡಿಕೊ (೨೧–೨೨). ನಾನು ರಕ್ಷಿಸಿಕೊಂಡು ಬಂದಿದ್ದ ಈ ದಿವ್ಯಚೂಡಾಮಣಿಯನ್ನು ಈಗ ಕಳುಹಿಸಿಬಿಟ್ಟಿದ್ದೇನೆ. ಶೋಕವು ಉಕ್ಕಿಬಂದಾಗ ಈ ಚೂಡಾಮಣಿಯನ್ನು ನೋಡಿದರೆ ನಿನ್ನನ್ನೇ ನೋಡಿದಂತೆ ಮನಸ್ಸಿಗೆ ಹರ್ಷವಾಗುತ್ತಿತ್ತು. ದಶರಥಪುತ್ರ, ಇನ್ನು ಒಂದು ತಿಂಗಳು ಹೇಗಾದರೂ ಪ್ರಾಣವನ್ನು ಹಿಡಿದುಕೊಳ್ಳುವೆನು. ತಿಂಗಳು ಕಳೆದಮೇಲೆ ಸರ್ವಥಾ ನಾನು ಬದುಕುವುದಿಲ್ಲ. ರಾಕ್ಷಸರ ಕೈಗೆ ಸಿಕ್ಕಿಹೋಗಿದ್ದೇನೆ" ಎಂದು ವಿಜ್ಞಾಪಿಸಬೇಕೆಂದು ನುಡಿದಳು (೨೩-೨೫). ರಘುನಾಥ, ರಾವಣಾಂತಃಪುರದಲ್ಲಿ ದೇವಿಯು ಸೆರೆಯಾಗಿ ಕೃಶಳಾಗಿಬಿಟ್ಟಿದ್ದಾಳೆ. ಹೆಣ್ಣುಜಿಂಕೆಯಂತೆ ಕಣ್ಣನ್ನು ಅರಳಿಸಿಕೊಂಡು ಈ ಮಾತನ್ನು ನನಗೆ ಹೇಳಿದಳು. ಅವಳು ಹೇಳಿದ ಮಾತನ್ನೇ ನಾನು ನಿನಗೆ ತಿಳಿಸಿದ್ದೇನೆ. ಈಗ ಸಮುದ್ರವನ್ನು ದಾಟಲು ತಕ್ಕ ಪ್ರಯತ್ನ ವನ್ನು ಮಾಡಬೇಕು" ಎಂದನು (೨೬).

ತೌ ಜಾತಾಶ್ವಾಸೌ ರಾಜಪುತ್ರೌ ವಿದಿತ್ವಾ
ತಚ್ಚಾಭಿಜ್ಞಾನಂ ರಾಘವಾಯ ಪ್ರದಾಯ ।
ದೇವ್ಯಾ ಚಾಖ್ಯಾತಂ ಸರ್ವಮೇವಾನುಪೂರ್ವ್ಯಾ-
ದ್ವಾಚಾ ಸಂಪೂರ್ಣಂ ವಾಯುಪುತ್ರಃ ಶಶಂಸ ॥ ೨೭

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಷಷ್ಟಿತಮಃ ಸರ್ಗಃ

ಹೀಗೆ ವಾಯುಪುತ್ರನಾದ ಆಂಜನೇಯನು ರಾಮಲಕ್ಷ್ಮಣರಿಗೆ ಸೀತಾ ವೃತ್ತಾಂತವನ್ನು ಹೇಳಿ ಧೈರ್ಯವನ್ನುಂಟುಮಾಡಿದನು. ಸೀತಾದೇವಿಯು ಹೇಳಿಕಳುಹಿಸಿದ ಸಂದೇಶವೆಲ್ಲವನ್ನೂ ಯಥಾವತ್ತಾಗಿ ತಿಳಿಸಿ, ಶ್ರೀರಾಮನಿಗೆ ಚೂಡಾಮಣಿಯನ್ನು ಅರ್ಪಿಸಿದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತೈದನೆಯ ಸರ್ಗ

ಯುದ್ಧಕಾಂಡಃ

ಸಪ್ತೋತ್ತರಶತತಮಃ ಸರ್ಗಃ

ಆದಿತ್ಯಹೃದಯಮ್

ತತೋ ಯುದ್ಧಪರಿಶ್ರಾಂತಂ ಸಮರೇ ಚಿಂತಯಾ ಸ್ಥಿತಮ್ ।
ರಾವಣಂ ಚಾಗ್ರತೋ ದೃಷ್ಟ್ವಾ ಯುದ್ಧಾಯ ಸಮುಪಸ್ಥಿತಮ್ ॥ ೧

ದೈವತೈಶ್ಚ ಸಮಾಗಮ್ಯ ದ್ರಷ್ಟುಮಭ್ಯಾಗತೋ ರಣಮ್ ।
ಉಪಾಗಮ್ಯಾಬ್ರವೀದ್ರಾಮಮಗಸ್ತ್ಯೋ ಭಗವಾನೃಷಿಃ ॥ ೨

ರಾಮ ರಾಮ ಮಹಾಬಾಹೋ ಶೃಣು ಗುಹ್ಯಂ ಸನಾತನಮ್ ।
ಯೇನ ಸರ್ವಾನರೀನ್ ವತ್ಸ ಸಮರೇ ವಿಜಯಿಷ್ಯಸಿ ॥ ೩

ಆದಿತ್ಯಹೃದಯಂ ಪುಣ್ಯಂ ಸರ್ವಶತ್ರುವಿನಾಶನಮ್ ।
ಜಯಾವಹಂ ಜಪೇನ್ನಿತ್ಯಮಕ್ಷಯ್ಯಂ ಪರಮಂ ಶಿವಮ್ ॥ ೪

ಸರ್ಗ ೧೦೭

ಅಗಸ್ತ್ಯಮುನಿಗಳು ಶ್ರೀರಾಮನಿಗೆ ಆದಿತ್ಯಹೃದಯವನ್ನು ಉಪದೇಶಿಸುವುದು.
ಅದನ್ನು ಜಪಿಸಿದುದರಿಂದ ಸೂರ್ಯನು ಪ್ರಸನ್ನನಾಗುವುದು.

ಯುದ್ಧಮಾಡಿ ಬಳಲಿದ ಶ್ರೀರಾಮನು ರಾವಣನನ್ನು ಜಯಿಸುವ ಬಗೆ ಯಾವುದೆಂದು ಆಲೋಚಿಸುತ್ತ ರಣಭೂಮಿಯಲ್ಲಿ ನಿಂತಿದ್ದನು. ಅಷ್ಟರಲ್ಲಿ ರಾವಣನು ಯುದ್ಧಾಭಿಮುಖನಾಗಿ ಎದುರಿಗೆ ಬರುತ್ತಿದ್ದನು. ಆ ಮಹಾಯುದ್ಧವನ್ನು ನೋಡಲು ಬಂದು ದೇವತೆಗಳೊಡನೆ ನಿಂತಿದ್ದ ಭಗವಾನ್ ಅಗಸ್ತ್ಯಮುನಿಗಳು ಅದೆಲ್ಲವನ್ನೂ ಸಮೀಕ್ಷಿಸಿ ಶ್ರೀರಾಮನ ಬಳಿಗೆ ಬಂದರು (೧-೨). ಅವರು ಶ್ರೀರಾಮನನ್ನು ನೋಡಿ ಹೀಗೆಂದರು: “ರಾಮ, ರಾಮ, ಮಹಾಬಾಹು, ಸನಾತನವಾದ ಒಂದು ರಹಸ್ಯಮಂತ್ರವನ್ನು ಉಪದೇಶಿಸುವೆನು, ಕೇಳು. ವತ್ಸ, ಅದನ್ನು ಜಪಿಸುವುದರಿಂದ ನೀನು ಸಮಸ್ತ ಶತ್ರುಗಳನ್ನೂ ಗೆಲ್ಲಬಹುದು (೩). ಸರ್ವಶತ್ರುವಿನಾಶಕವೂ ಪುಣ್ಯಕರವೂ ಆದ ಈ ಮಂತ್ರಕ್ಕೆ ಆದಿತ್ಯಹೃದಯವೆಂದು ಹೆಸರು. ಇದು ಕಾರ್ಯಸಿದ್ಧಿಪ್ರದವೂ ಅಕ್ಷಯಫಲವನ್ನು ಕೊಡತಕ್ಕದ್ದೂ ಪರಮಪಾವನವೂ ಆಗಿದೆ. ಇದನ್ನು ನಿತ್ಯವೂ ಜಪಿಸಬೇಕು (೪).

ಸರ್ವಮಂಗಲಮಾಂಗಲ್ಯಂ ಸರ್ವಪಾಪಪ್ರಣಾಶನಮ್ ।
ಚಿಂತಾಶೋಕಪ್ರಶಮನಮಾಯುರ್ವರ್ಧನಮುತ್ತಮಮ್ ॥ ೫

ರಶ್ಮಿಮಂತಂ ಸಮುದ್ಯಂತಂ ದೇವಾಸುರನಮಸ್ಕೃತಮ್ ।
ಪೂಜಯಸ್ವ ವಿವಸ್ವಂತಂ ಭಾಸ್ಕರಂ ಭುವನೇಶ್ವರಮ್ ॥ ೬

ಸರ್ವದೇವಾತ್ಮಕೋ ಹ್ಯೇಷ ತೇಜಸ್ವೀ ರಶ್ಮಿಭಾವನಃ ।
ಏಷ ದೇವಾಸುರಗಣಾನ್ ಲೋಕಾನ್ ಪಾತಿ ಗಭಸ್ತಿಭಿಃ ॥ ೭

ಏಷ ಬ್ರಹ್ಮಾ ಚ ವಿಷ್ಣುಶ್ಚ ಶಿವಃ ಸ್ಕಂದಃ ಪ್ರಜಾಪತಿಃ ।
ಮಹೇಂದ್ರೋ ಧನದಃ ಕಾಲೋ ಯಮಃ ಸೋಮೋ ಹ್ಯಪಾಂಪತಿಃ ॥

ಪಿತರೋ ವಸವಃ ಸಾಧ್ಯಾ ಹ್ಯಶ್ವಿನೌ ಮರುತೋ ಮನುಃ ।
ವಾಯುರ್ವಹ್ನಿಃ ಪ್ರಜಾಪ್ರಾಣ ಋತುಕರ್ತಾ ಪ್ರಭಾಕರಃ ॥ ೯

ಈ ಆದಿತ್ಯಹೃದಯವು ಸರ್ವಮಂಗಲಮಾಂಗಲ್ಯವೂ ಸರ್ವಪಾಪಪ್ರಣಾಶನವೂ ಆಗಿದೆ. ಚಿಂತಾಶೋಕಗಳನ್ನು ನೀಗಿಸುತ್ತದೆ. ಆಯುರ್ವೃದ್ಧಿಕರವಾದ ಉತ್ತಮ ಮಂತ್ರವಿದು (೫). ರಶ್ಮಿಯುಕ್ತನಾಗಿ ಪ್ರತಿದಿನವೂ ಉದಯಿಸುವ ದೇವಾಸುರವಂದಿತನೂ ಭಾಸ್ಕರನೂ ಭುವನೇಶ್ವರನೂ ಆದ ಸೂರ್ಯದೇವನನ್ನು ನೀನು ಪೂಜಿಸು. (ಆದಿತ್ಯಹೃದಯದ ಮಂತ್ರದೇವತೆಯಾದ ಸೂರ್ಯನು) ಸರ್ವದೇವಾತ್ಮಕನೂ ತೇಜಸ್ವಿಯೂ ಆಗಿ ತನ್ನ ರಶ್ಮಿಗಳಿಂದ ಜನರಿಗೆ ಶ್ರೇಯಸ್ಸನ್ನುಂಟುಮಾಡುತ್ತಾನೆ. ತನ್ನ ಕಿರಣಗಳಿಂದ ಭಕ್ತರಾದ ದೇವಾಸುರರನ್ನೂ ಸಮಸ್ತಲೋಕಗಳನ್ನೂ ರಕ್ಷಿಸುತ್ತಾನೆ (೬–೭). ಬ್ರಹ್ಮ, ವಿಷ್ಣು, ಶಿವ, ಸ್ಕಂದ, ಪ್ರಜಾಪತಿಗಳು, ಇಂದ್ರ, ಕುಬೇರ, ಕಾಲ, ಯಮ, ಚಂದ್ರ, ವರುಣ, ಪಿತೃದೇವತೆಗಳು, ವಸುಗಳು, ಸಾಧ್ಯರು, ಅಶ್ವಿನೀದೇವತೆಗಳು, ಮರುತ್ತುಗಳು, ಮನು, ವಾಯು, ವಹ್ನಿ, ಪ್ರಜೆಗಳ ಪ್ರಾಣವಾಯು, ಋತುನಿಯಾಮಕನಾದ ಸೂರ್ಯ–ಎಲ್ಲರೂ ಈತನೇ* (೮–೯).

---

* 'ಸರ್ವದೇವಾತ್ಮಕಃ' (ಶ್ಲೋ. ೭) ಎಂಬುದರಿಂದ 'ಲೋಕಸಾಕ್ಷಿಣೇ' (ಶ್ಲೋ. ೨೧) ಎಂಬಲ್ಲಿಯವರೆಗೆ ಮಾತ್ರವೇ 'ಆದಿತ್ಯಹೃದಯ'ವೆಂದು ಶ್ರೀ ಮಹೇಶ್ವರತೀರ್ಥರು ಹೇಳುತ್ತಾರೆ. ಅಲ್ಲಿಗೆ ಒಟ್ಟು ೧೦೮ ನಾಮಗಳಾಗುತ್ತವೆ. 'ಆದಿತ್ಯಃ ಸವಿತಾ' (ಶ್ಲೋ. ೧೦)

ಆದಿತ್ಯಃ ಸವಿತಾ ಸೂರ್ಯಃ ಖಗಃ ಪೂಷಾ ಗಭಸ್ತಿಮಾನ್ ।
ಸುವರ್ಣಸದೃಶೋ ಭಾನುಃ ಸ್ವರ್ಣರೇತಾ ದಿವಾಕರಃ ॥ ೧೦

ಹರಿದಶ್ವಃ ಸಹಸ್ರಾರ್ಚಿಃ ಸಪ್ತಸಪ್ತಿರ್ಮರೀಚಿಮಾನ್ ।
ತಿಮಿರೋನ್ಮಥನಃ ಶಂಭುಸ್ತ್ವಷ್ಟಾ ಮಾರ್ತಂಡ ಅಂಶುಮಾನ್ ॥ ೧೧

ದೇವ, ನೀನು ಸರ್ವ ವಿಷಯಗಳನ್ನು ಭೋಗಿಸತಕ್ಕವನು (ಆದತ್ತೇ ಸರ್ವಂ), ಅದಿತಿಯ ಪುತ್ರನಾಗಿ ಅವತರಿಸಿದವನು, ಭೂಮಿಗೆ ಒಡೆಯನು (ಅದಿತೇಃ ಭೂಮೇಃ ಈಶ್ವರಃ). ಜಗತ್ತನ್ನು ಸೃಷ್ಟಿಸಿದವನು. ಜನರನ್ನು ಕರ್ತವ್ಯದಲ್ಲಿ ಪ್ರೇರಿಸುವವನು. ಆಕಾಶದಲ್ಲಿ ಸಂಚರಿಸತಕ್ಕವನು. ವೃಷ್ಟಿಯಿಂದ ಲೋಕವನ್ನು ಪೋಷಿಸತಕ್ಕವನು. ಪ್ರಶಸ್ತವಾದ ಕಿರಣವುಳ್ಳವನು. ಚಿನ್ನದಂತೆ ಹೊಳೆಯುವವನು. ಸರ್ವಪ್ರಕಾಶಕನು. ಹಿರಣ್ಮಯವಾದ ಬ್ರಹ್ಮಾಂಡವನ್ನು ಸೃಜಿಸಿದವನು. ಪ್ರಕಾಶಮಯವಾದ ಹಗಲನ್ನು ಉಂಟುಮಾಡತಕ್ಕವನು. ನಿನಗೆ ನಮಸ್ಕಾರ (೧೦). ಹಸುರುಬಣ್ಣದ ಅಶ್ವಗಳನ್ನುಳ್ಳವನು, ದಿಕ್ಕುಗಳನ್ನು ವ್ಯಾಪಿಸುವವನು (ಹರಿತಃ ದಿಶಃ ಅಶ್ನೋತಿ ವ್ಯಾಪ್ನೋತಿ). ಸಾವಿರಾರು ಕಿರಣಗಳುಳ್ಳವನು. ಏಳು ಅಶ್ವಗಳುಳ್ಳವನು, ಏಳು ಬಗೆಯ ಕಿರಣಗಳುಳ್ಳವನು (ಸಪ್ತಿಃ = ಅಶ್ವಃ), 'ಸಪ್ತ' ಎಂಬ ಅಶ್ವವುಳ್ಳವನು, ಏಳು ಬಗೆಯಾದ ಒಂದೇ ಕಿರಣವುಳ್ಳವನು (ಏಕೋ ಅಶ್ವೋ ವಹತಿ ಸಪ್ತನಾಮಾ). ಪ್ರಕಾಶಮಯವಾದ ಕಿರಣವುಳ್ಳವನು. ಕತ್ತಲೆಯನ್ನು ನಾಶಮಾಡತಕ್ಕವನು. ಸುಖಕ್ಕೆ ಕಾರಣನಾದವನು. ದುಃಖನಾಶಕನು. ಬ್ರಹ್ಮಾಂಡವು ಲಯವಾದಾಗ ಅದನ್ನು ಸೃಜಿಸುವುದಕ್ಕಾಗಿ ಉದ್ಭವಿಸಿದವನು (ಮೃತೇ ಅಂಡೇ ಜಾತಃ). ಸರ್ವವ್ಯಾಪಿಯಾದ ಕಿರಣಗಳುಳ್ಳವನು. ನಿನಗೆ ನಮಸ್ಕಾರ (೧೧).

ಎಂಬುದರಿಂದ 'ಲೋಕಸಾಕ್ಷಿಣೇ' ಎಂದು ಮುಗಿಯುವ ೧೨ ಶ್ಲೋಕಗಳು ಮಾತ್ರವೆಂದು ಶ್ರೀ ಗೋವಿಂದರಾಜರು ಬರೆಯುತ್ತಾರೆ. ನಮ್ಮ ಗ್ರಂಥವರಿಗೆ ಈ ಸರ್ಗವು ಪೂರ್ತಿಯಾಗಿ ಪಠಿಸುವ ಸ್ತೋತ್ರವಾಗುತ್ತದೆ. 'ರಶ್ಮಿಮಂತಂ' (ಶ್ಲೋ. ೬) ಎಂಬ ಶಬ್ದದಿಂದ 'ರವಿಃ ಪ್ರಭುಃ' (ಶ್ಲೋ. ೨೪) ಎಂಬಲ್ಲಿಯವರೆಗೆ 'ನಮಃ' ಎಂಬ ಶಬ್ದವನ್ನು ಸೇರಿಸಿ ಸೂರ್ಯನ ನಮಸ್ಕಾರ ಮತ್ತು ಅರ್ಚನೆಗೆ ಉಪಯೋಗಿಸುತ್ತಾರೆ: 'ರಶ್ಮಿಮತೇ ನಮಃ', 'ಸಮುದ್ಯತೇ ನಮಃ' ಇತ್ಯಾದಿ.

ಹಿರಣ್ಯಗರ್ಭಃ ಶಿಶಿರಸ್ತಪನೋ ಭಾಸ್ಕರೋ ರವಿಃ ।
ಅಗ್ನಿಗರ್ಭೋಽದಿತೇಃ ಪುತ್ರಃ ಶಂಖಃ ಶಿಶಿರನಾಶನಃ ॥ ೧೨

ವ್ಯೋಮನಾಥಸ್ತಮೋಭೇದೀ ಋಗ್ಯಜುಃಸಾಮಪಾರಗಃ ।
ಘನವೃಷ್ಟಿರಪಾಂ ಮಿತ್ರೋ ವಿಂಧ್ಯವೀಥೀಪ್ಲವಂಗಮಃ ॥ ೧೩

ಆತಪೀ ಮಂಡಲೀ ಮೃತ್ಯುಃ ಪಿಂಗಲಃ ಸರ್ವತಾಪನಃ ।
ಕವಿರ್ವಿಶ್ವೋ ಮಹಾತೇಜಾ ರಕ್ತಃ ಸರ್ವಭವೋದ್ಭವಃ ॥ ೧೪

ಹಿರಣ್ಮಯವಾದ ಬ್ರಹ್ಮಾಂಡಕ್ಕೆ ಗರ್ಭಭೂತನಾದವನು*. ಹಿತರಮಣೀಯವಾದ ಅಂತಃಕರಣವುಳ್ಳವನು (ಹಿತರಮಣೀಯ=ಹಿರಣ್ಮಯ, ಗರ್ಭ=ಅಂತಃಕರಣ). ಶೀತಲವಾಗಿರುವವನು-ಸುಖಸ್ವರೂಪ. ಬಿಸಿಲಿನಿಂದ ತಾಪಗೊಳಿಸುವವನು (ತಪ=ಸಂತಾಪೇ). ಸರ್ವೈಶ್ವರ್ಯಸಂಪನ್ನ (ತಪ=ಐಶ್ವರ್ಯೇ). ಪ್ರಕಾಶವನ್ನು ಕೊಡತಕ್ಕವನು. ಸ್ತುತಿಸಲ್ಪಡತಕ್ಕವನು (ರೂಯತೇ ಇತಿ ರವಿಃ, ರು=ಶಬ್ದೇ). ಹಿರಣ್ಯಗರ್ಭಾದಿಗಳಿಗೆ ಉಪದೇಶಕ (ರೌತಿ=ಉಪದಿಶತಿ). ಅಗ್ನಿಯನ್ನು ಗರ್ಭದಲ್ಲಿ ಧರಿಸಿದವನು (ಉದ್ಯಂತಂ ವಾವಾದಿತ್ಯಮಗ್ನಿರನುಸಮಾರೋಹತಿ). ಅದಿತಿಯ ಪುತ್ರ, ಬ್ರಹ್ಮವಿದ್ಯೆಯಿಂದ ಲಭ್ಯನಾದ್ದರಿಂದ ಅದಿತಿಪುತ್ರ (ಅದಿತಿ=ಬ್ರಹ್ಮವಿದ್ಯೆ). ಸಾಯಂಕಾಲದಲ್ಲಿ ತಾನಾಗಿ ಶಾಂತನಾಗುವವನು (ಶಮೇಃ ಖಃ). ಆನಂದ ಮತ್ತು ಆಕಾಶಸ್ವರೂಪ (ಶಂ ಚ ಖಂ ಚ). ಹಿಮವನ್ನು ಮತ್ತು ಜಾಡ್ಯವನ್ನು ನಾಶಮಾಡತಕ್ಕವನು. ನಿನಗೆ ನಮಸ್ಕಾರ (೧೨). ಹೇ ದೇವ, ನೀನು ಗಗನದ ಒಡೆಯ. ಕತ್ತಲೆಯನ್ನು ನಾಶಮಾಡುವವನು. ಋಗ್ಯಜುಃಸಾಮವೇದಗಳ ಪಾರವನ್ನು ಕಂಡವನು (ವೇದೈರಶೂನ್ಯಸ್ತ್ರಿಭಿರೇತಿ ಸೂರ್ಯಃ). ದೊಡ್ಡ ಮಳೆಯನ್ನು ಸುರಿಸಲು ಕಾರಣನು (ಆದಿತ್ಯಾಜ್ಜಾಯತೇ ವೃಷ್ಟಿಃ). ನೀರಿಗೆ ಮಿತ್ರನಾದವನು-ನೀರನ್ನು ಉತ್ಪಾದಿಸುವವನು. ವಿಂಧ್ಯವೀಥಿಯೆಂಬ ಸೂರ್ಯಮಾರ್ಗದಲ್ಲಿ ಶೀಘ್ರವಾಗಿ ಸಂಚರಿಸುವವನು. ವಿಂಧ್ಯ=ಗಹನವಾದ, ವೀಥೀ=ಸುಷುಮ್ನಾನಾಡೀಮಾರ್ಗದಲ್ಲಿ ಶೀಘ್ರವಾಗಿ ಸಂಚರಿಸುವವನು. ನಿನಗೆ ನಮಸ್ಕಾರ (೧೩). ನೀನು ಆತಪವುಳ್ಳವನು. ವೃತ್ತಾಕಾರವಾದ ಬಿಂಬವುಳ್ಳವನು. ಸರ್ವಸಂಹಾರಕರ್ತ.

---

* 'ಭಗವತೇ ಹಿರಣ್ಯಗರ್ಭಾಯ ನಮಃ' ಎಂಬ ದ್ವಾದಶಾಕ್ಷರೀ ಮಂತ್ರವು ಆದಿತ್ಯಹೃದಯದ ರಹಸ್ಯವೆಂದು ಕತಕವ್ಯಾಖ್ಯಾನದಲ್ಲಿ ಬರೆದಿದೆ.

ನಕ್ಷತ್ರಗ್ರಹತಾರಾಣಾಮಧಿಪೋ ವಿಶ್ವಭಾವನಃ ।
ತೇಜಸಾಮಪಿ ತೇಜಸ್ವೀ ದ್ವಾದಶಾತ್ಮನ್ನಮೋಽಸ್ತು ತೇ ॥ ೧೫

ನಮಃ ಪೂರ್ವಾಯ ಗಿರಯೇ ಪಶ್ಚಿಮಾಯಾದ್ರಯೇ ನಮಃ ।
ಜ್ಯೋತಿರ್ಗಣಾನಾಂ ಪತಯೇ ದಿನಾಧಿಪತಯೇ ನಮಃ ॥ ೧೬

ಜಯಾಯ ಜಯಭದ್ರಾಯ ಹರ್ಯಶ್ವಾಯ ನಮೋ ನಮಃ ।
ನಮೋ ನಮಃ ಸಹಸ್ರಾಂಶೋ ಆದಿತ್ಯಾಯ ನಮೋ ನಮಃ ॥ ೧೭

ನಮ ಉಗ್ರಾಯ ವೀರಾಯ ಸಾರಂಗಾಯ ನಮೋ ನಮಃ ।
ನಮಃ ಪದ್ಮಪ್ರಬೋಧಾಯ ಮಾರ್ತಂಡಾಯ ನಮೋ ನಮಃ ॥ ೧೮

ಪಿಂಗಳವರ್ಣನಾದವನು, ಪಿಂಗಳನಾಡೀ ಪ್ರವರ್ತಕ. ಸರ್ವರನ್ನೂ ತಾಪಗೊಳಿಸುವವನು. ಸರ್ವಜ್ಞ. ವಿಶ್ವರೂಪ. ವಿಶ್ವನಿರ್ವಾಹಕ. ತೇಜೋರೂಪ. ಸರ್ವರಲ್ಲಿಯೂ ಅನುರಕ್ತ, ರಕ್ತವರ್ಣ. ಸರ್ವವಸ್ತುಗಳ ನಿರ್ಮಾತ. ನಿನಗೆ ನಮಸ್ಕಾರ (೧೪). ದೇವ, ನೀನು ನಕ್ಷತ್ರತಾರಾಗ್ರಹಗಳಿಗೆ ಅಧಿಪತಿ. ವಿಶ್ವಸ್ಥಾಪಕ. ಅಗ್ನ್ಯಾದಿ ತೇಜಸ್ಸುಗಳಿಗೂ ತೇಜಸ್ಸನ್ನು ಕೊಡತಕ್ಕವನು (ಯೇನ ಸೂರ್ಯಸ್ತಪತಿ ತೇಜಸೇದ್ಧಃ). ದ್ವಾದಶಮಾಸಗಳಿಂದ ದ್ವಾದಶಮೂರ್ತಿಸ್ವರೂಪ.* ನಿನಗೆ ನಮಸ್ಕಾರ (೧೫). ಪೂರ್ವದಿಕ್ಕಿನ ಉದಯಗಿರಿಸ್ವರೂಪನಾದ ನಿನಗೆ ನಮಸ್ಕಾರ. ಪಶ್ಚಿಮದ ಅಸ್ತಗಿರಿಸ್ವರೂಪನಾದ ನಿನಗೆ ನಮಸ್ಕಾರ. ಜ್ಯೋತಿಶ್ಚಕ್ರದ ಸ್ವಾಮಿಯಾದ ನಿನಗೆ ನಮಸ್ಕಾರ. ದಿನಾಧಿಪತಿಯಾದ ನಿನಗೆ ನಮಸ್ಕಾರ (೧೬). ಜಯದಾತನೂ ಜಯಕ್ಷೇಮಪ್ರದಾತನೂ ಹರಿದಶ್ವನೂ ಆದ ನಿನಗೆ ನಮೋ ನಮಃ. ಸಹಸ್ರಾಂಶುವೇ, ಆದಿತ್ಯನಾದ ನಿನಗೆ ನಮೋ ನಮಃ (೧೭). ಉಗ್ರನೂ ವೀರನೂ ಸಾರಂಗನೂ ಆದ ನಿನಗೆ ನಮೋ ನಮಃ (ಸಾರಂಗ = ಸಾರವಾದ ಪ್ರಣವದಿಂದ ಪ್ರತಿಪಾದ್ಯ). ಪದ್ಮವನ್ನರಳಿಸುವವನೂ ಮಾರ್ತಂಡನೂ ಆದ ನಿನಗೆ ನಮೋ ನಮಃ (ಪದ್ಮಪ್ರಬೋಧ = ಕಮಲವನ್ನು ಮತ್ತು ಹೃದಯಕಮಲವನ್ನು ಅರಳಿಸುವವನು) (೧೮).

---

* ಇಂದ್ರೋ ಧಾತಾ ಭಗಃ ಪೂಷಾ ಮಿತ್ರೋಽಥ ವರುಣೋಽರ್ಯಮಾ ।
ಅರ್ಚಿರ್ವಿವಸ್ವಾನ್ ತ್ವಷ್ಟಾ ಚ ಸವಿತಾ ವಿಷ್ಣುರೇವ ಚ ॥

ಬ್ರಹ್ಮೇಶಾನಾಚ್ಯುತೇಶಾಯ ಸೂರ್ಯಾಯಾದಿತ್ಯವರ್ಚಸೇ ।
ಭಾಸ್ವತೇ ಸರ್ವಭಕ್ಷಾಯ ರೌದ್ರಾಯ ವಪುಷೇ ನಮಃ ॥ ೧೯

ತಮೋಘ್ನಾಯ ಹಿಮಘ್ನಾಯ ಶತ್ರುಘ್ನಾಯಾಮಿತಾತ್ಮನೇ ।
ಕೃತಘ್ನಘ್ನಾಯ ದೇವಾಯ ಜ್ಯೋತಿಷಾಂ ಪತಯೇ ನಮಃ ॥ ೨೦

ತಪ್ತಚಾಮೀಕರಾಭಾಯ ವಹ್ನಯೇ ವಿಶ್ವಕರ್ಮಣೇ ।
ನಮಸ್ತಮೋಽಭಿನಿಘ್ನಾಯ ರವಯೇ ಲೋಕಸಾಕ್ಷಿಣೇ ॥ ೨೧

ನಾಶಯತ್ಯೇಷ ವೈ ಭೂತಂ ತದೇವ ಸೃಜತಿ ಪ್ರಭುಃ ।
ಪಾಯತ್ಯೇಷ ತಪತ್ಯೇಷ ವರ್ಷತ್ಯೇಷ ಗಭಸ್ತಿಭಿಃ ॥ ೨೨

ಏಷ ಸುಪ್ತೇಷು ಜಾಗರ್ತಿ ಭೂತೇಷು ಪರಿನಿಷ್ಠಿತಃ ।
ಏಷ ಏವಾಗ್ನಿಹೋತ್ರಂ ಚ ಫಲಂ ಚೈವಾಗ್ನಿಹೋತ್ರಿಣಾಮ್ ॥ ೨೩

ಬ್ರಹ್ಮಾದಿ ತ್ರಿಮೂರ್ತಿಗಳಿಗೆ ಸ್ವಾಮಿಯೂ* ಸೂರನೂ (ಸೂರ್ಯನೂ) ಆದಿತ್ಯಸ್ವರೂಪನೂ ಆದ ನಿನಗೆ ನಮಸ್ಕಾರ. ಭಾಸ್ವಂತನೂ ಸರ್ವಸಂಹಾರಕನೂ ರುದ್ರದೇಹನೂ ಆದ ನಿನಗೆ ನಮಸ್ಕಾರ (೧೯). ತಮೋಹಂತೃವೂ ಹಿಮಹಂತೃವೂ ಶತ್ರುಹಂತೃವೂ ಅಜ್ಞೇಯಸ್ವರೂಪನೂ ಕೃತಘ್ನಸಂಹಾರಕನೂ ದೇವನೂ ಜ್ಯೋತಿಗಳಿಗೆ ಅಧಿಪತಿಯೂ ಆದ ನಿನಗೆ ನಮಸ್ಕಾರ (೨೦). ಕಾಯಿಸಿದ ಬಂಗಾರದ ಬಣ್ಣದವನೂ ವಹ್ನಿಯೂ ವಿಶ್ವಕರ್ಮನೂ ತಮೋನಿವರ್ತಕನೂ ರವಿಯೂ ಲೋಕಸಾಕ್ಷಿಯೂ ಆದ ನಿನಗೆ ನಮಸ್ಕಾರ (ಇಲ್ಲಿಗೆ ಆದಿತ್ಯಹೃದಯವು ಮುಗಿಯಿತು. ಇವನ್ನು ಉಪದೇಶಿಸಿ ಅಗಸ್ತ್ಯಮುನಿಗಳು ದೇವತಾಮಹಿಮೆಯನ್ನು ಮುಂದೆ ಹೇಳುತ್ತಾರೆ) (೨೧). ಶ್ರೀರಾಮ, ಸರ್ವಶಕ್ತನಾದ ಆದಿತ್ಯನು ಪಂಚಭೂತಗಳನ್ನೂ ನಾಶಮಾಡಿ ಮತ್ತೆ ಸೃಜಿಸುವನು. ಈತನು ತನ್ನ ಕಿರಣಗಳಿಂದ ಜಗತ್ತನ್ನು ಶೋಷಿಸುವನು; ತಾಪಗೊಳಿಸುವನು; ಮಳೆ ಸುರಿಸುವನು (೨೨). ಪ್ರಾಣಿಗಳು ನಿದ್ರಿಸುವಾಗಲೂ ಈತನು ಎಚ್ಚರಗೊಂಡಿರುತ್ತಾನೆ. ಸಕಲ ಜೀವಿಗಳಲ್ಲಿಯೂ ಅಂತರ್ಯಾಮಿಯಾಗಿದ್ದಾನೆ. ಈತನೇ ಅಗ್ನಿಹೋತ್ರ (ಅಗ್ನಿಗಳಲ್ಲಿ

---

* ಸೃಷ್ಟಿಸ್ಥಿತ್ಯಂತಕರಣೀಂ ಬ್ರಹ್ಮವಿಷ್ಣುಶಿವಾತ್ಮಿಕಾಮ್ ।
ಸ ಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ ॥ —ವಿಷ್ಣು ೧-೨-೬೬.

*

ವೇದಾಶ್ಚ ಕ್ರತವಶ್ಚೈವ ಕ್ರತೂನಾಂ ಫಲಮೇವ ಚ ।
ಯಾನಿ ಕೃತ್ಯಾನಿ ಲೋಕೇಷು ಸರ್ವ ಏಷ ರವಿಃ ಪ್ರಭುಃ ॥ ೨೪

ಏನಮಾಪತ್ಸು ಕೃಚ್ಛ್ರೇಷು ಕಾಂತಾರೇಷು ಭಯೇಷು ಚ ।
ಕೀರ್ತಯನ್ ಪುರುಷಃ ಕಶ್ಚಿನ್ನಾವಸೀದತಿ ರಾಘವ ॥ ೨೫

ಪೂಜಯಸ್ವೈನಮೇಕಾಗ್ರೋ ದೇವದೇವಂ ಜಗತ್ಪತಿಮ್ ।
ಏತತ್ತ್ರಿಗುಣಿತಂ ಜಪ್ತ್ವಾ ಯುದ್ಧೇಷು ವಿಜಯಿಷ್ಯಸಿ ॥ ೨೬

ಅಸ್ಮಿನ್ ಕ್ಷಣೇ ಮಹಾಬಾಹೋ ರಾವಣಂ ತ್ವಂ ವಧಿಷ್ಯಸಿ ।
ಏವಮುಕ್ತ್ವಾ ತದಾಗಸ್ತ್ಯೋ ಜಗಾಮ ಚ ಯಥಾಗತಮ್ ॥ ೨೭

ಏತಚ್ಛ್ರುತ್ವಾ ಮಹಾತೇಜಾ ನಷ್ಟಶೋಕೋಽಭವತ್ತದಾ ।
ಧಾರಯಾಮಾಸ ಸುಪ್ರೀತೋ ರಾಘವಃ ಪ್ರಯತಾತ್ಮವಾನ್ ॥ ೨೮

ಹೋಮಮಾಡಿದಾಗ ಹವಿಸ್ಸನ್ನು ಸ್ವೀಕರಿಸುತ್ತಾನೆ. (ಇದು ಬಾಹ್ಯವಾದ ಹೋಮ) ಅಂತರ್ಯಾಮಿಯಾಗಿ ಪಂಚಜ್ಞಾನೇಂದ್ರಿಯಗಳಿಂದ ವಿಷಯವನ್ನು ಅನುಭವಿಸುತ್ತಾನೆ. (ಇದು ಆಂತರಹೋಮ). ಹೋಮಮಾಡತಕ್ಕವರಿಗೆ ಫಲವನ್ನು ಕೊಡತಕ್ಕವನು ಈತನೇ (ಬಾಹ್ಯಹೋಮಕ್ಕೆ ಸ್ವರ್ಗವೂ ಆಂತರಹೋಮಕ್ಕೆ ಮುಕ್ತಿಯೂ ಫಲ) (೨೩). ವೇದ, ಕ್ರತು, ಕ್ರತುಫಲ, ಅಲ್ಲದೆ ಜಗತ್ತಿನಲ್ಲಿ ಜನರು ಮಾಡುವ ಸಕಲಕರ್ಮಗಳು-ಇವೆಲ್ಲವುಗಳಿಗೂ ಆದಿತ್ಯನೇ ಪ್ರಭು (೨೪). ಶ್ರೀರಾಮ, ಸಕಲ ವಿಪತ್ತುಗಳಲ್ಲಿಯೂ ಕಷ್ಟಕಾಲದಲ್ಲಿಯೂ ದುರ್ಗಮಸ್ಥಳಗಳಲ್ಲಿಯೂ ಭಯಸಂದರ್ಭಗಳಲ್ಲಿಯೂ ಈ ಆದಿತ್ಯಹೃದಯವನ್ನು ಪಠಿಸುವ ಮನುಷ್ಯನು ವಿಪತ್ತಿನಿಂದ ಪಾರಾಗುತ್ತಾನೆ (೨೫). ರಾಘವ, ದೇವದೇವನೂ ಜಗತ್ಪತಿಯೂ ಆದ ಆದಿತ್ಯನನ್ನು ಏಕಾಗ್ರತೆಯಿಂದ ಅರ್ಚಿಸು. ಈ ಆದಿತ್ಯಹೃದಯವನ್ನು ಮೂರುಸಲ ಜಪಿಸಿದರೆ, ನಿನಗೆ ಯುದ್ಧದಲ್ಲಿ ಜಯ ಲಭಿಸುವುದು (೨೬). ಮಹಾಬಾಹು-ಶ್ರೀರಾಮ, ಈಗಲೇ ಇದನ್ನು ಜಪಿಸು. ರಾವಣನನ್ನು ನೀನು ಸಂಹರಿಸುತ್ತೀಯೆ" ಎಂದು ಹೇಳಿ ಅಗಸ್ತ್ಯಮಹರ್ಷಿಗಳು ಹೊರಟುಹೋದರು (೨೭). ಆಗ ತೇಜೋರಾಶಿಯಾದ ಶ್ರೀರಾಮನ ಚಿಂತೆಯು ದೂರವಾಯಿತು. ಅವನು ಸಂತುಷ್ಟನಾಗಿ (ಆಚಮನ ಮಾಡಿ) ಪರಿಶುದ್ಧಚಿತ್ತದಿಂದ ಅಗಸ್ತ್ಯರ ಉಪದೇಶವನ್ನು ಸ್ವೀಕರಿಸಿದನು. ಅನಂತರ

ಆದಿತ್ಯಂ ಪ್ರೇಕ್ಷ್ಯ ಜಪ್ತ್ವಾ ತು ಪರಂ ಹರ್ಷಮವಾಪ್ತವಾನ್ ।
ತ್ರಿರಾಚಮ್ಯ ಶುಚಿರ್ಭೂತ್ವಾ ಧನುರಾದಾಯ ವೀರ್ಯವಾನ್ ॥ ೨೯

ರಾವಣಂ ಪ್ರೇಕ್ಷ್ಯ ಹೃಷ್ಟಾತ್ಮಾ ಯುದ್ಧಾಯ ಸಮುಪಾಗಮತ್ ।
ಸರ್ವಯತ್ನೇನ ಮಹತಾ ವಧೇ ತಸ್ಯ ಧೃತೋಽಭವತ್ ॥ ೩೦

ಅಥ ರವಿರವದನ್ನಿರೀಕ್ಷ್ಯ ರಾಮಂ
ಮುದಿತಮನಾಃ ಪರಮಂ ಪ್ರಹೃಷ್ಯಮಾಣಃ ।
ನಿಶಿಚರಪತಿಸಂಕ್ಷಯಂ ವಿದಿತ್ವಾ
ಸುರಗಣಮಧ್ಯಗತೋ ವಚಸ್ತ್ವರೇತಿ ॥ ೩೧

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತೋತ್ತರಶತತಮಃ ಸರ್ಗಃ

ಸೂರ್ಯನನ್ನು ನೋಡುತ್ತ ಮೂರುಸಲ ಆದಿತ್ಯಹೃದಯವನ್ನು ಪಠಿಸಿ ಉತ್ಸಾಹಗೊಂಡನು. ಮತ್ತೆ ಶುಚಿಯಾಗಿಯೇ ಮೂರುಸಲ ಆಚಮನಮಾಡಿ ಕೋದಂಡವನ್ನು ಕೈಯಲ್ಲಿ ಹಿಡಿದನು (೨೮–೨೯). ಅಷ್ಟರಲ್ಲಿ ರಾವಣನು ಎದುರಾಗಿ ಬರಲು, ಶ್ರೀರಾಮನು ಹರ್ಷದಿಂದ ಯುದ್ಧಸನ್ನದ್ಧನಾದನು. ಸರ್ವಪ್ರಯತ್ನದಿಂದಲೂ ರಾವಣನನ್ನು ವಧಿಸಬೇಕೆಂದು ನಿರ್ಧರಿಸಿದನು (೩೦). ಆಗ ಸೂರ್ಯದೇವನು ಶ್ರೀರಾಮನ ಜಪದಿಂದ ಸಂಪ್ರೀತನಾಗಿ, ರಾಕ್ಷಸೇಂದ್ರನ ಸಂಹಾರವು ಸಮೀಪಿಸಿತೆಂದು ತಿಳಿದು, ದೇವತೆಗಳ ಮಧ್ಯದಲ್ಲಿ ಕಾಣಿಸಿಕೊಂಡು ಹರ್ಷದಿಂದ "ರಾಘವ, ತ್ವರೆಮಾಡು" ಎಂದು ಹೇಳಿದನು (೩೧).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನೂರೇಳನೆಯ ಸರ್ಗ

ವಿಂಶತ್ಯುತ್ತರಶತತಮಃ ಸರ್ಗಃ

ಬ್ರಹ್ಮಕೃತರಾಮಸ್ತವಃ

ತತೋ ಹಿ ದುರ್ಮನಾ ರಾಮಃ ಶ್ರುತ್ವೈವ ವದತಾಂ ಗಿರಃ ।
ದಧ್ಯೌ ಮುಹೂರ್ತಂ ಧರ್ಮಾತ್ಮಾ ಬಾಷ್ಪವ್ಯಾಕುಲಲೋಚನಃ ॥ ೧

ತತೋ ವೈಶ್ರವಣೋ ರಾಜಾ ಯಮಶ್ಚಾಮಿತ್ರಕರ್ಶನಃ ।
ಸಹಸ್ರಾಕ್ಷೋ ಮಹೇಂದ್ರಶ್ಚ ವರುಣಶ್ಚ ಪರಂತಪಃ ॥ ೨

ಷಡರ್ಧನಯನಃ ಶ್ರೀಮಾನ್ ಮಹಾದೇವೋ ವೃಷಧ್ವಜಃ ।
ಕರ್ತಾ ಸರ್ವಸ್ಯ ಲೋಕಸ್ಯ ಬ್ರಹ್ಮಾ ಬ್ರಹ್ಮವಿದಾಂ ವರಃ ॥ ೩

ಏತೇ ಸರ್ವೇ ಸಮಾಗಮ್ಯ ವಿಮಾನೈಃ ಸೂರ್ಯಸಂನಿಭೈಃ ।
ಆಗಮ್ಯ ನಗರೀಂ ಲಂಕಾಮಭಿಜಗ್ಮುಶ್ಚ ರಾಘವಮ್ ॥ ೪

ತತಃ ಸಹಸ್ತಾಭರಣಾನ್ ಪ್ರಗೃಹ್ಯ ವಿಪುಲಾನ್ ಭುಜಾನ್ ।
ಅಬ್ರುವಂಸ್ತ್ರಿದಶಶ್ರೇಷ್ಠಾಃ ಪ್ರಾಂಜಲಿಂ ರಾಘವಂ ಸ್ಥಿತಮ್ ॥ ೫

ಸರ್ಗ ೧೨೦

ಬ್ರಹ್ಮಾದಿದೇವತೆಗಳು ಶ್ರೀರಾಮನ ಸನ್ನಿಧಿಗೆ ಆಗಮಿಸುವುದು.
ಬ್ರಹ್ಮನು ಶ್ರೀರಾಮನನ್ನು ಸ್ತುತಿಸುವುದು.

ವಿಷಣ್ಣನಾಗಿದ್ದ ಶ್ರೀರಾಮನು ಜನರ ಕೋಲಾಹಲಧ್ವನಿಯನ್ನು ಕೇಳಿದನು. ಆ ಧರ್ಮಾತ್ಮನ ಕಣ್ಣುಗಳಿಂದ ನೀರು ತುಳುಕಿತು. ಸ್ವಲ್ಪಕಾಲ ಏನೂ ತೋರದೆ ಅವನು ಚಿಂತಾಕುಲನಾದನು (೧). ಅಷ್ಟರಲ್ಲಿ ಯಕ್ಷರಾಜನಾದ ಕುಬೇರ, ಶತ್ರುವಿನಾಶಿಯಾದ ಯಮ, ಸಹಸ್ರಾಕ್ಷನಾದ ದೇವೇಂದ್ರ, ಪರಂತಪನಾದ ವರುಣ, ತ್ರಿನೇತ್ರನೂ ವೃಷಭಧ್ವಜನೂ ಆದ ಪರಮೇಶ್ವರ, ಸೃಷ್ಟಿಕರ್ತನೂ ಬ್ರಹ್ಮವಿದರಲ್ಲಿ ಶ್ರೇಷ್ಠನೂ ಆದ ಬ್ರಹ್ಮ—ಮುಂತಾದ ದೇವತೆಗಳು ಸೂರ್ಯಸಂಕಾಶವಾದ ವಿಮಾನಗಳನ್ನೇರಿ, ಲಂಕಾಭಿಮುಖರಾಗಿ ಬಂದು ಶ್ರೀರಾಮನ ಸನ್ನಿಧಿಗೆ ಆಗಮಿಸಿದರು (೨–೪). ಶ್ರೀರಾಮನು ಅವರನ್ನು ನೋಡಿ ಬದ್ಧಾಂಜಲಿಯಾದನು. ಆ ದೇವತೆಗಳು ದಿವ್ಯಾಭರಣಗಳನ್ನು ತೊಟ್ಟಿದ್ದ ತಮ್ಮ ದೀರ್ಘಬಾಹು

ಕರ್ತಾ ಸರ್ವಸ್ಯ ಲೋಕಸ್ಯ ಶ್ರೇಷ್ಠೋ ಜ್ಞಾನವತಾಂ ವರಃ ।
ಉಪೇಕ್ಷಸೇ ಕಥಂ ಸೀತಾಂ ಪತಂತೀಂ ಹವ್ಯವಾಹನೇ ॥ ೬

ಕಥಂ ದೇವಗಣಶ್ರೇಷ್ಠಮಾತ್ಮಾನಂ ನಾವಬುಧ್ಯಸೇ ।
ಋತಧಾಮಾ ವಸುಃ ಪೂರ್ವಂ ವಸೂನಾಂ ತ್ವಂ ಪ್ರಜಾಪತಿಃ ॥ ೭

ತ್ರಯಾಣಾಂ ತ್ವಂ ಹಿ ಲೋಕಾನಾಮಾದಿಕರ್ತಾ ಸ್ವಯಂಪ್ರಭುಃ ।
ರುದ್ರಾಣಾಮಷ್ಟಮೋ ರುದ್ರಃ ಸಾಧ್ಯಾನಾಮಸಿ ಪಂಚಮಃ ॥ ೮

ಅಶ್ವಿನೌ ಚಾಪಿ ತೇ ಕರ್ಣೌ ಚಂದ್ರಸೂರ್ಯೌ ಚ ಚಕ್ಷುಷೀ ।
ಅಂತೇ ಚಾದೌ ಚ ಲೋಕಾನಾಂ ದೃಶ್ಯಸೇ ತ್ವಂ ಪರಂತಪ ॥ ೯

ಉಪೇಕ್ಷಸೇ ಚ ವೈದೇಹೀಂ ಮಾನುಷಃ ಪ್ರಾಕೃತೋ ಯಥಾ ।
ಇತ್ಯುಕ್ತೋ ಲೋಕಪಾಲೈಸ್ತೈಃ ಸ್ವಾಮೀ ಲೋಕಸ್ಯ ರಾಘವಃ ॥ ೧೦

ಗಳನ್ನು ಮೇಲೆತ್ತಿ "ಶ್ರೀರಾಮ, ಸರ್ವಲೋಕಗಳ ಸೃಷ್ಟಿಕರ್ತನೂ ಸರ್ವಶ್ರೇಷ್ಠನೂ ಜ್ಞಾನಿಗಳಲ್ಲಿ ಅಗ್ರಗಣ್ಯನೂ ಆದವನು ನೀನು. ನಿನ್ನ ಧರ್ಮಪತ್ನಿಯಾದ ಸೀತೆಯು ಅಗ್ನಿಯಲ್ಲಿ ಪ್ರವೇಶಿಸುತ್ತಿರುವಾಗಲೂ ಉಪೇಕ್ಷಿಸುವ ಈ ಪರಿ ಯಾವುದು ? (೫–೬). ಇಂದ್ರಾದಿ ಸಕಲ ದೇವತೆಗಳಿಗಿಂತಲೂ ನೀನು ಶ್ರೇಷ್ಠನೆಂಬುದನ್ನು ಏಕೆ ತಿಳಿಯದಿದ್ದೀಯೆ ? ಅಷ್ಟವಸುಗಳಲ್ಲಿ ಪ್ರಜಾಸ್ವಾಮಿಯಾದ ಋತಧಾಮನೆಂಬ ವಸು ನೀನೇ.* ಮೂರು ಲೋಕಗಳ ಆದಿಕರ್ತನೂ ಅನಿಯಮ್ಯನೂ ಆದ ಸ್ವಾಮಿ ನೀನೇ. ರುದ್ರರಲ್ಲಿ ಎಂಟನೆಯ ರುದ್ರನಾದ ಮಹಾದೇವನೂ ಸಾಧ್ಯರಲ್ಲಿ ಐದನೆಯ ಸಾಧ್ಯನಾದ ವೀರ್ಯವಂತನೂ ನೀನೇ (೭–೮). ಅಶ್ವಿನೀದೇವತೆಗಳು ನಿನ್ನ ಕಿವಿಗಳು. ಸೂರ್ಯಚಂದ್ರರು ನಿನ್ನ ಕಣ್ಣುಗಳು. ಲೋಕಗಳ ಸೃಷ್ಟಿಯ ಆದಿಯಲ್ಲಿಯೂ ಪ್ರಳಯದ ಕಡೆಯಲ್ಲಿಯೂ ಶಾಶ್ವತನಾಗಿ ಉಳಿದಿರುವವನು ನೀನೊಬ್ಬನೇ. ಹೀಗಿರುವಾಗ ಪ್ರಾಕೃತನಾದ ಒಬ್ಬ ಮಾನವನಂತೆ ವೈದೇಹಿಯನ್ನು ಉಪೇಕ್ಷಿಸಬಹುದೆ ?" ಎಂದರು (೯–೧೦).

* 'ಋತಧಾಮ' ಎಂಬುದರಿಂದ ಮುಂದೆ ಮೂರು ಶ್ಲೋಕಗಳನ್ನು ಕತಕ ವ್ಯಾಖ್ಯಾನಕಾರರು ಅಂಗೀಕರಿಸಿಲ್ಲ.

ಅಬ್ರವೀತ್ತ್ರಿದಶಶ್ರೇಷ್ಠಾನ್ ರಾಮೋ ಧರ್ಮಭೃತಾಂ ವರಃ ।
ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಮ್ ॥ ೧೧

ಯೋಽಹಂ ಯಸ್ಯ ಯತಶ್ಚಾಹಂ ಭಗವಾಂಸ್ತದ್ಬ್ರವೀತು ಮೇ ।
ಇತಿ ಬ್ರುವಂತಂ ಕಾಕುತ್ಸ್ಥಂ ಬ್ರಹ್ಮಾ ಬ್ರಹ್ಮವಿದಾಂ ವರಃ ॥ ೧೨

ಅಬ್ರವೀಚ್ಛೃಣು ಮೇ ರಾಮ ಸತ್ಯಂ ಸತ್ಯಪರಾಕ್ರಮ ।
ಭವಾನ್ನಾರಾಯಣೋ ದೇವಃ ಶ್ರೀಮಾಂಶ್ಚಕ್ರಾಯುಧೋ ವಿಭುಃ ॥

ಏಕಶೃಂಗೋ ವರಾಹಸ್ತ್ವಂ ಭೂತಭವ್ಯಸಪತ್ನಜಿತ್ ।
ಅಕ್ಷರಂ ಬ್ರಹ್ಮ ಸತ್ಯಂ ಚ ಮಧ್ಯೇ ಚಾಂತೇ ಚ ರಾಘವ ॥ ೧೪

ಲೋಕಾನಾಂ ತ್ವಂ ಪರೋ ಧರ್ಮೋ ವಿಷ್ವಕ್ಸೇನಶ್ಚತುರ್ಭುಜಃ ।
ಶಾರ್ಙ್ಗಧನ್ವಾ ಹೃಷೀಕೇಶಃ ಪುರುಷಃ ಪುರುಷೋತ್ತಮಃ ॥ ೧೫

ಹೀಗೆ ಲೋಕಪಾಲರಾದ ದೇವತೆಗಳು ಹೇಳಲು, ಲೋಕೇಶ್ವರನೂ ಧರ್ಮವಿದರಲ್ಲಿ ಅಗ್ರಗಣ್ಯನೂ ಆದ ಶ್ರೀರಾಮನು "ಇದೇನು ಹೀಗೆ ಹೇಳುವಿರಿ ? ನಾನೊಬ್ಬ ಮಾನವನೆಂದೂ ದಶರಥಪುತ್ರನಾದ ರಾಮನೆಂದೂ ತಿಳಿದುಕೊಂಡಿದ್ದೇನೆ" ಎಂದನು. ಅನಂತರ ಬ್ರಹ್ಮನನ್ನು ನೋಡಿ "ಭಗವನ್, ನಾನು ಯಾರು ? ಯಾರ ಸಂಬಂಧಿ ? ಎಲ್ಲಿಂದ ಬಂದೆನು ? ಎಂಬುದನ್ನು ಕೃಪೆಯಿಂದ ತಿಳಿಸು" ಎಂದು ಕೇಳಿದನು (೧೧-೧೨). ಆಗ ಬ್ರಹ್ಮವಿದರಲ್ಲಿ ಅಗ್ರಗಣ್ಯನಾದ ಬ್ರಹ್ಮದೇವನು ಕಾಕುತ್ಸ್ಥನನ್ನು ಕುರಿತು ಹೀಗೆಂದನು : "ಸತ್ಯ ಪರಾಕ್ರಮ-ಶ್ರೀರಾಮ, ಸತ್ಯವಾದ ನಿನ್ನ ಸ್ವರೂಪವನ್ನು ಹೇಳುವೆನು ಕೇಳು : ನೀನೇ ದೇವದೇವನಾದ ಶ್ರೀಮನ್ನಾರಾಯಣ. ಚಕ್ರಾಯುಧನಾದ ವಿಭು (೧೩). ಏಕದಂಷ್ಟ್ರನಾದ ವರಾಹಾವತಾರಿ. ಭೂತಭವಿಷ್ಯದ್ವರ್ತಮಾನಕಾಲಗಳ ವೈರಿಗಳನ್ನು ಜಯಿಸಿದವನು. ಆದ್ಯಂತರಹಿತವೂ ಅವಿಕಾರಿಯೂ ಆದ ಬ್ರಹ್ಮವಸ್ತು ನೀನು. ಜನರಿಗೆ ಶ್ರೇಯಸ್ಕರವಾದ ಪರಮಧರ್ಮವೇ ನೀನು. ಚತುರ್ಭುಜನಾದ ವಿಷ್ವಕ್‌ಸೇನನೇ ನೀನು. ನೀನೇ ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿದವನು. ಇಂದ್ರಿಯಗಳಿಗೆ ಅಧೀಶ್ವರ. ಆದಿಪುರುಷ. ಪುರುಷೋತ್ತಮ (೧೪-೧೫).

ಅಜಿತಃ ಖಡ್ಗಧೃದ್ವಿಷ್ಣುಃ ಕೃಷ್ಣಶ್ಚೈವ ಬೃಹದ್ಬಲಃ ।
ಸೇನಾನೀರ್ಗ್ರಾಮಣೀಶ್ಚ ತ್ವಂ ಬುದ್ಧಿಃ ಸತ್ತ್ವಂ ಕ್ಷಮಾ ದಮಃ ॥ ೧೬

ಪ್ರಭವಶ್ಚಾಪ್ಯಯಶ್ಚ ತ್ವಮುಪೇಂದ್ರೋ ಮಧುಸೂದನಃ ।
ಇಂದ್ರಕರ್ಮಾ ಮಹೇಂದ್ರಸ್ತ್ವಂ ಪದ್ಮನಾಭೋ ರಣಾಂತಕೃತ್ ॥ ೧೭

ಶರಣ್ಯಂ ಶರಣಂ ಚ ತ್ವಾಮಾಹುರ್ದಿವ್ಯಾ ಮಹರ್ಷಯಃ ।
ಸಹಸ್ರಶೃಂಗೋ ವೇದಾತ್ಮಾ ಶತಜಿಹ್ವೋ ಮಹರ್ಷಭಃ ॥ ೧೮

ತ್ವಂ ತ್ರಯಾಣಾಂ ಹಿ ಲೋಕಾನಾಮಾದಿಕರ್ತಾ ಸ್ವಯಂಪ್ರಭುಃ ।
ಸಿದ್ಧಾನಾಮಪಿ ಸಾಧ್ಯಾನಾಮಾಶ್ರಯಶ್ಚಾಸಿ ಪೂರ್ವಜಃ ॥ ೧೯

ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಂಕಾರಃ ಪರಂತಪಃ ।
ಪ್ರಭವಂ ನಿಧನಂ ವಾ ತೇ ನ ವಿದುಃ ಕೋ ಭವಾನಿತಿ ॥ ೨೦

ದೃಶ್ಯಸೇ ಸರ್ವಭೂತೇಷು ಬ್ರಾಹ್ಮಣೇಷು ಚ ಗೋಷು ಚ ।
ದಿಕ್ಷು ಸರ್ವಾಸು ಗಗನೇ ಪರ್ವತೇಷು ವನೇಷು ಚ ॥ ೨೧

ಪರರಿಂದ ಅಜಿತ. ನಂದಕವೆಂಬ ಖಡ್ಗವನ್ನು ಧರಿಸಿದವನು. ವಿಷ್ಣು, ಕೃಷ್ಣ, ಅಮಿತಬಲಶಾಲಿ. ದೇವಸೇನೆಯನ್ನೂ ಇಂದ್ರಿಯಗ್ರಾಮಗಳನ್ನೂ ಪ್ರೇರಿಸತಕ್ಕವನು. ಜ್ಞಾನ, ಸತ್ತ್ವ, ಕ್ಷಮೆ, ದಮೆಗಳೆಲ್ಲವೂ ನೀನೇ. ಸೃಷ್ಟಿಕರ್ತನೂ ಲಯಕರ್ತನೂ ನೀನು. ಉಪೇಂದ್ರನೂ ಮಧುಸೂದನನೂ ನೀನು. ಇಂದ್ರನನ್ನೇ ನಿರ್ಮಿಸುವ ಮಹೇಂದ್ರ ನೀನು. ಪದ್ಮನಾಭ. ಸಂಸಾರವೆಂಬ ಯುದ್ಧವನ್ನು ಸಮಾಪ್ತಿಗೊಳಿಸತಕ್ಕವನು (೧೬–೧೭). ದಿವ್ಯಜ್ಞಾನಸಂಪನ್ನರಾದ ಮಹರ್ಷಿಗಳು ನೀನೇ ಶರಣಾರ್ಹನೆಂದೂ ರಕ್ಷಣೋಪಾಯವೆಂದೂ ಹೇಳುತ್ತಾರೆ. ಸಾವಿರಾರು ಶಾಖೆಗಳೆಂಬ ಕೊಂಬುಗಳಿಂದಲೂ ನೂರಾರು ವಿಧಿಗಳೆಂಬ ನಾಲಗೆಗಳಿಂದಲೂ ಕೂಡಿದ ವೇದಸ್ವರೂಪನಾದ ಮಹಾವೃಷಭ ನೀನು (೧೮). ಸರ್ವಪ್ರಜೆಗಳನ್ನೂ ಸೃಜಿಸಿದ ಸ್ವಯಂಪ್ರಭು. ಮುಕ್ತರಿಗೂ ಮುಮುಕ್ಷುಗಳಿಗೂ ಪುರಾತನವಾದ ಆಶ್ರಯ. ಶ್ರೀರಾಮ, ಯಜ್ಞ ವಷಟ್ಕಾರ ಮತ್ತು ಓಂಕಾರಗಳು ನೀನೇ. ಪ್ರಕೃತಿಯ ಆಚೆಗಿರುವ ಪರವಸ್ತು ನೀನು. ನಿನ್ನ ಆದ್ಯಂತಗಳನ್ನಾಗಲಿ ನಿನ್ನ ಸ್ವರೂಪವನ್ನಾಗಲಿ ಯಾರೂ ಅರಿಯರು (೧೯–೨೦). ಬ್ರಹ್ಮವಿದರು, ಗೋವುಗಳು

ಸಹಸ್ರಚರಣಃ ಶ್ರೀಮಾನ್ ಶತಶೀರ್ಷಃ ಸಹಸ್ರದೃಕ್ ।
ತ್ವಂ ಧಾರಯಸಿ ಭೂತಾನಿ ವಸುಧಾಂ ಚ ಸಪರ್ವತಾಮ್ ॥ ೨೨

ಅಂತೇ ಪೃಥಿವ್ಯಾಃ ಸಲಿಲೇ ದೃಶ್ಯಸೇ ತ್ವಂ ಮಹೋರಗಃ ।
ತ್ರೀನ್ ಲೋಕಾನ್ ಧಾರಯನ್ ರಾಮ ದೇವಗಂಧರ್ವದಾನವಾನ್ ॥

ಅಹಂ ತೇ ಹೃದಯಂ ರಾಮ ಜಿಹ್ವಾ ದೇವೀ ಸರಸ್ವತೀ ।
ದೇವಾ ಗಾತ್ರೇಷು ರೋಮಾಣಿ ನಿರ್ಮಿತಾ ಬ್ರಹ್ಮಣಾ ಪ್ರಭೋ ॥ ೨೪

ನಿಮೇಷಸ್ತೇ ಭವೇದ್ರಾತ್ರಿರುನ್ಮೇಷಸ್ತೇ ಭವೇದ್ದಿವಾ ।
ಸಂಸ್ಕಾರಾಸ್ತೇಽಭವನ್ ವೇದಾ ನ ತದಸ್ತಿ ತ್ವಯಾ ವಿನಾ ॥ ೨೫

ಜಗತ್ ಸರ್ವಂ ಶರೀರಂ ತೇ ಸ್ಥೈರ್ಯಂ ತೇ ವಸುಧಾತಲಮ್ ।
ಅಗ್ನಿಃ ಕೋಪಃ ಪ್ರಸಾದಸ್ತೇ ಸೋಮಃ ಶ್ರೀವತ್ಸಲಕ್ಷಣಃ ॥ ೨೬

ಮೊದಲಾದ ಸರ್ವಭೂತಗಳಲ್ಲಿಯೂ ಸಮಸ್ತದಿಕ್ಕುಗಳಲ್ಲಿಯೂ ಗಗನಪರ್ವತಾರಣ್ಯಗಳಲ್ಲಿಯೂ ಯೋಗಿಗಳಿಗೆ ಗೋಚರಿಸುವ ಅಂತರ್ಯಾಮಿ ನೀನು (೨೧). 'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್' ಆಗಿರುವ ಮಹಾಮಹಿಮ. ಸಕಲಜೀವಜಾತಗಳನ್ನೂ ಪರ್ವತಸಹಿತವಾದ ವಸುಧೆಯನ್ನೂ ಧರಿಸಿದ್ದೀಯೆ. ಶ್ರೀರಾಮ, ಪೃಥಿವಿಯು ನಾಶವಾದಾಗ ಜಲರಾಶಿಯಲ್ಲಿ ಶೇಷಶಾಯಿಯಾದ ಅನಂತನಾಗಿ ಗೋಚರಿಸುವೆ. ದೇವದಾನವ ಗಂಧರ್ವರನ್ನೂ ತ್ರೈಲೋಕ್ಯವನ್ನೂ ಧರಿಸಿರುವ ವಿರಾಟ್‌ಪುರುಷ ನೀನು (೨೨–೨೩). ರಾಘವ, ನಿನ್ನ ಹೃದಯವೇ ನಾನು! ನಿನ್ನ ನಾಲಗೆಯೇ ಸರಸ್ವತೀದೇವಿ! ದೇವತೆಗಳು ನಿನ್ನ ದೇಹದಲ್ಲಿರುವ ರೋಮಗಳು! ಪ್ರಭು, ಈ ರೀತಿಯಲ್ಲಿ ಪರಬ್ರಹ್ಮದ ಸೃಷ್ಟಿಕ್ರಮ! (೨೪). ನೀನು ಕಣ್ಣುಮುಚ್ಚಿದರೆ ರಾತ್ರಿ, ಕಣ್ತೆರೆದರೆ ಹಗಲು! ಪ್ರವೃತ್ತಿನಿವೃತ್ತಿಬೋಧಕಗಳಾದ ವೇದಗಳು ನಿನ್ನಿಂದ ಆವಿರ್ಭವಿಸಿದವು. ನೀನಿಲ್ಲದ ವಸ್ತುವೇ ಇಲ್ಲ (೨೫). ಈ ಜಗತ್ತೆಲ್ಲವೂ ನಿನ್ನ ಶರೀರ. ಧಾರಣಸಾಮರ್ಥ್ಯವುಳ್ಳ ವಸುಧಾತಳವೇ ನೀನು. ನಿನ್ನ ಕೋಪವೇ ಅಗ್ನಿ; ನಿನ್ನ ಪ್ರಸನ್ನತೆಯೇ ಚಂದ್ರ. ಶ್ರೀವತ್ಸವನ್ನು ವಕ್ಷ

ತ್ವಯಾ ಲೋಕಾಸ್ತ್ರಯಃ ಕ್ರಾಂತಾಃ ಪುರಾ ಸ್ವೈರ್ವಿಕ್ರಮೈಸ್ತ್ರಿಭಿಃ ।
ಮಹೇಂದ್ರಶ್ಚ ಕೃತೋ ರಾಜಾ ಬಲಿಂ ಬದ್ಧ್ವಾ ಮಹಾಸುರಮ್ ॥

ಸೀತಾ ಲಕ್ಷ್ಮೀರ್ಭವಾನ್ ವಿಷ್ಣುರ್ದೇವಃ ಕೃಷ್ಣಃ ಪ್ರಜಾಪತಿಃ ।
ವಧಾರ್ಥಂ ರಾವಣಸ್ಯೇಹ ಪ್ರವಿಷ್ಟೋ ಮಾನುಷೀಂ ತನುಮ್ ॥ ೨೮

ತದಿದಂ ನಃ ಕೃತಂ ಕಾರ್ಯಂ ತ್ವಯಾ ಧರ್ಮಭೃತಾಂ ವರ ।
ನಿಹತೋ ರಾವಣೋ ರಾಮ ಪ್ರಹೃಷ್ಟೋ ದಿವಮಾಕ್ರಮ ॥ ೨೯

ಅಮೋಘಂ ಬಲವೀರ್ಯಂ ತೇ ಅಮೋಘಸ್ತೇ ಪರಾಕ್ರಮಃ ।
ಅಮೋಘಂ ದರ್ಶನಂ ರಾಮ ನ ಚ ಮೋಘಃ ಸ್ತವಸ್ತವ ॥ ೩೦

ಅಮೋಘಾಸ್ತೇ ಭವಿಷ್ಯಂತಿ ಭಕ್ತಿಮಂತಶ್ಚ ಯೇ ನರಾಃ ।
ಯೇ ತ್ವಾಂ ದೇವಂ ಧ್ರುವಂ ಭಕ್ತಾಃ ಪುರಾಣಂ ಪುರುಷೋತ್ತಮಮ್॥

ಸ್ಥಳದಲ್ಲಿ ಧರಿಸಿದವನು ನೀನು. ಹಿಂದೆ ವಾಮನಾವತಾರದಲ್ಲಿ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಅಳೆದಿದ್ದೀಯೆ. ಮಹಾಸುರನಾದ ಬಲಿಚಕ್ರವರ್ತಿಯನ್ನು ಬಂಧಿಸಿ, ಇಂದ್ರನನ್ನು ಸ್ವರ್ಗಾಧಿಪತಿಯನ್ನಾಗಿ ಮಾಡಿದ್ದೀಯೆ (೨೬–೨೭). ಸೀತೆಯೇ ಲಕ್ಷ್ಮಿ, ನೀನೇ ಮಹಾವಿಷ್ಣು. ಕೃಷ್ಣನೂ ಪ್ರಜಾಪತಿಯೂ ಆದ ಆದಿದೇವ ನೀನು. ರಾವಣನನ್ನು ವಧಿಸುವುದಕ್ಕಾಗಿ ನಮ್ಮ ಪ್ರಾರ್ಥನೆಯಂತೆ ಮನುಷ್ಯದೇಹವನ್ನು ಧರಿಸಿ ಬಂದಿದ್ದೀಯೆ. ಓ ಧರ್ಮರಕ್ಷಕ, ಈಗ ನಮ್ಮ ಕಾರ್ಯವನ್ನು ನೆರವೇರಿಸಿಕೊಟ್ಟಿದ್ದೀಯೆ. ರಾವಣನನ್ನು ಸಂಹರಿಸಿದ್ದಾಯಿತು. ಶ್ರೀರಾಮ, ಇನ್ನು ಕೆಲವುಕಾಲ ಹರ್ಷದಿಂದಿದ್ದು ನಿನ್ನ ಸ್ಥಾನವಾದ ಸ್ವರ್ಗವನ್ನೇರು ! (೨೮–೨೯). ನಿನ್ನ ಬಲ ವೀರ್ಯಗಳು ಅಮೋಘವಾದವು. ನಿನ್ನ ಪರಾಕ್ರಮವು ಎಣೆಯಿಲ್ಲದ್ದು. ನಿನ್ನ ದರ್ಶನವು ಅನಂತಫಲವನ್ನು ಕೊಡತಕ್ಕದ್ದು. ಶ್ರೀರಾಮ, ನಿನ್ನ ಸ್ತೋತ್ರವು ಎಂದಿಗೂ ವ್ಯರ್ಥವಾಗದು (೩೦). ನಿನ್ನ ಭಕ್ತರು ಉತ್ತಮ ಫಲವನ್ನು ಪಡೆಯುವರು. ಶಾಶ್ವತನೂ ಪುರಾಣಪುರುಷನೂ ಪುರುಷೋತ್ತಮನೂ ಆದ ನಿನ್ನನ್ನು ಯಾರು ದೃಢವಾಗಿ ನಂಬಿ ಭಜಿಸುವರೋ, ಅವರು ಇಹಪರಗಳಲ್ಲಿ

ಪ್ರಾಪ್ನುವಂತಿ ಸದಾ ಕಾಮಾನಿಹ ಲೋಕೇ ಪರತ್ರ ಚ ।
ಇಮಮಾರ್ಷಂ ಸ್ತವಂ ನಿತ್ಯಮಿತಿಹಾಸಂ ಪುರಾತನಮ್ ॥ ೩೨

ಯೇ ನರಾಃ ಕೀರ್ತಯಿಷ್ಯಂತಿ ನಾಸ್ತಿ ತೇಷಾಂ ಪರಾಭವಃ ॥

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ವಿಂಶತ್ಯುತ್ತರಶತತಮಃ ಸರ್ಗಃ

ಸಕಲಾಭೀಷ್ಟಗಳನ್ನೂ ಪಡೆಯುತ್ತಾರೆ. ವೇದಸಮ್ಮತವೂ ಪುರಾವೃತ್ತಪ್ರತಿಪಾದಕವೂ ಅನಾದಿಬ್ರಹ್ಮವಿದ್ಯಾಪರವೂ ಆದ ಈ ಸ್ತೋತ್ರವನ್ನು ಯಾವ ಜನರು ನಿತ್ಯವೂ ಪಠಿಸುವರೋ ಅವರಿಗೆ ಪರಾಜಯವೆಂಬುದಿಲ್ಲ" ಎಂದು ಬ್ರಹ್ಮನು ಸ್ತುತಿಸಿದನು (೩೧–೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನೂರಿಪ್ಪತ್ತನೆಯ ಸರ್ಗ

ಏಕವಿಂಶತ್ಯುತ್ತರಶತತಮಃ ಸರ್ಗಃ

ಸೀತಾಪ್ರತಿಗ್ರಹಃ

ಏತಚ್ಛ್ರುತ್ವಾ ಶುಭಂ ವಾಕ್ಯಂ ಪಿತಾಮಹಸಮೀರಿತಮ್ ।
ಅಂಕೇನಾದಾಯ ವೈದೇಹೀಮುತ್ಪಪಾತ ವಿಭಾವಸುಃ ॥ ೧

ಸ ವಿಧೂಯ ಚಿತಾಂ ತಾಂ ತು ವೈದೇಹೀಂ ಹವ್ಯವಾಹನಃ ।
ಉತ್ತಸ್ಥೌ ಮೂರ್ತಿಮಾನಾಶು ಗೃಹೀತ್ವಾ ಜನಕಾತ್ಮಜಾಮ್ ॥ ೨

ತರುಣಾದಿತ್ಯಸಂಕಾಶಾಂ ತಪ್ತಕಾಂಚನಭೂಷಣಾಮ್ ।
ರಕ್ತಾಂಬರಧರಾಂ ಬಾಲಾಂ ನೀಲಕುಂಚಿತಮೂರ್ಧಜಾಮ್ ॥ ೩

ಅಕ್ಲಿಷ್ಟಮಾಲ್ಯಾಭರಣಾಂ ತಥಾರೂಪಾಂ ಮನಸ್ವಿನೀಮ್ ।
ದದೌ ರಾಮಾಯ ವೈದೇಹೀಮಂಕೇ ಕೃತ್ವಾ ವಿಭಾವಸುಃ ॥ ೪

ಸರ್ಗ ೧೨೧

ಯಜ್ಞೇಶ್ವರನು ವೈದೇಹಿಯನ್ನು ಶ್ರೀರಾಮನಿಗೆ ಅರ್ಪಿಸುವುದು. ಶ್ರೀರಾಮನು ಅವಳ ಚಾರಿತ್ರವನ್ನು ಕೊಂಡಾಡಿ ಪುನಃ ಸ್ವೀಕರಿಸುವುದು. ಅವರಿಬ್ಬರಿಗೂ ನಿರತಿಶಯವಾದ ಆನಂದ.

ಬ್ರಹ್ಮನು ಶ್ರೀರಾಮನಿಗೆ ಹೇಳಿದ ಶುಭವಾಕ್ಯವನ್ನು ಕೇಳಿದೊಡನೆ, ಅತ್ತಲಾಗಿ ಯಜ್ಞೇಶ್ವರನು ವೈದೇಹಿಯನ್ನು ತನ್ನ ಮಡಿಲಲ್ಲಿ ಕುಳ್ಳಿರಿಸಿಕೊಂಡು ಚಿತೆಯಿಂದ ಮೇಲೆದ್ದನು! ಅಗ್ನಿದೇವನು ಪುರುಷಾಕೃತಿಯನ್ನು ಧರಿಸಿ ತನ್ನ ನಿಜಸ್ವರೂಪದಿಂದ ಮೇಲೆದ್ದು, ಜನಕರಾಜತನಯಳನ್ನು ಎತ್ತಿಕೊಂಡು ಚಿತೆಯಿಂದ ಹೊರಗೆ ಬಂದನು (೧–೨). ಸ್ವರ್ಣಾಭರಣಭೂಷಿತೆಯಾದ ಜಾನಕಿಯಾದರೋ ಬಾಲಸೂರ್ಯನಂತೆ ತೊಳಗುತ್ತಿದ್ದಳು. ಹೊಂಬಣ್ಣದ ಸೀರೆಯನ್ನುಟ್ಟಿದ್ದ ಆ ಬಾಲೆಯು ಮುಂಗುರುಳಿನ ಕೃಷ್ಣಕೇಶರಾಶಿಯಿಂದ ವಿರಾಜಿಸುತ್ತಿದ್ದಳು. ಮುಡಿದ ಹೂಗಳೂ ಧರಿಸಿದ ಒಡವೆಗಳೂ ಕಂದದೆ ಕುಂದದೆ, ಮೊದಲಿನಂತೆಯೇ ಇದ್ದವು. ಅಣುಮಾತ್ರವೂ ಕಳವಳಿಸದೆ ಧೀರೆಯಾಗಿದ್ದ ವೈದೇಹಿಯನ್ನು ಲೋಕಸಾಕ್ಷಿಯಾದ ಯಜ್ಞಪುರುಷನು ಅಂಕದಲ್ಲಿ ಹಿಡಿದು ಎತ್ತಿಕೊಂಡು ಬಂದು ಶ್ರೀರಾಮನಿಗೆ ಅರ್ಪಿಸಿ ಹೀಗೆಂದನು (೩–೪) :

ಅಬ್ರವೀಚ್ಚ ತದಾ ರಾಮಂ ಸಾಕ್ಷೀ ಲೋಕಸ್ಯ ಪಾವಕಃ ।
ಏಷಾ ತೇ ರಾಮ ವೈದೇಹೀ ಪಾಪಮಸ್ಯಾಂ ನ ವಿದ್ಯತೇ ॥ ೫

ನೈವ ವಾಚಾ ನ ಮನಸಾ ನಾನುಧ್ಯಾನಾನ್ನ ಚಕ್ಷುಷಾ ।
ಸುವೃತ್ತಾ ವೃತ್ತಶೌಂಡೀರ ನ ತ್ವಾಮತಿಚಚಾರ ಹ ॥ ೬

ರಾವಣೇನಾಪನೀತೈಷಾ ವೀರ್ಯೋತ್ಸಿಕ್ತೇನ ರಕ್ಷಸಾ ।
ತ್ವಯಾ ವಿರಹಿತಾ ದೀನಾ ವಿವಶಾ ನಿರ್ಜನಾದ್ವನಾತ್ ॥ ೭

ರುದ್ಧಾ ಚಾಂತಃಪುರೇ ಗುಪ್ತಾ ತ್ವಚ್ಚಿತ್ತಾ ತ್ವತ್ಪರಾಯಣಾ ।
ರಕ್ಷಿತಾ ರಾಕ್ಷಸೀಸಂಘೈರ್ವಿಕೃತೈರ್ಘೋರದರ್ಶನೈಃ ॥ ೮

ಪ್ರಲೋಭ್ಯಮಾನಾ ವಿವಿಧಂ ಭರ್ತ್ಸ್ಯಮಾನಾ ಚ ಮೈಥಿಲೀ ।
ನಾಚಿಂತಯತ ತದ್ರಕ್ಷಸ್ತ್ವದ್ಗತೇನಾಂತರಾತ್ಮನಾ ॥ ೯

ವಿಶುದ್ಧಭಾವಾಂ ನಿಷ್ಪಾಪಾಂ ಪ್ರತಿಗೃಹ್ಣೀಷ್ವ ರಾಘವ ।
ನ ಕಿಂಚಿದಭಿಧಾತವ್ಯಮಹಮಾಜ್ಞಾಪಯಾಮಿ ತೇ ॥ ೧೦

"ಶ್ರೀರಾಮ, ಈ ವೈದೇಹಿಯು ನಿನ್ನವಳು. ಇವಳನ್ನು ಪರಿಗ್ರಹಿಸು. ಇವಳಲ್ಲಿ ಯಾವ ದೋಷವೂ ಇಲ್ಲ. ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಸಂಕಲ್ಪದಿಂದಾಗಲಿ, ಕಣ್ಣಿನ ನೋಟದಿಂದಾಗಲಿ – ಇವಳು ನಿನ್ನನ್ನು ಮೀರಿ ನಡೆದವಳಲ್ಲ. ಸದಾಚಾರನಿರತೆಯಾದ ಈ ಸುಶೀಲೆಯು, ಎಲೈ ಸದಾಚಾರ ನಿರತ, ನಿನ್ನನ್ನು ಎಂದೂ ಅತಿಕ್ರಮಿಸಲಿಲ್ಲ (೫–೬). ನಿರ್ಜನವಾದ ವನದಲ್ಲಿ ನೀನಿಲ್ಲದಾಗ ದಿಕ್ಕಿಲ್ಲದೆ ದೈನ್ಯದಿಂದ ಪರಾಧೀನಳಾಗಿದ್ದ ಇವಳನ್ನು, ವೀರ್ಯೋದ್ಧತನಾದ ರಾವಣನು ಬಲಾತ್ಕಾರದಿಂದ ಅಪಹರಿಸಿ ತಂದನು. ತನ್ನ ಅಂತಃಪುರಕ್ಕೆ ಸೇರಿದ ಉಪವನದಲ್ಲಿ ಸೆರೆಯಿಟ್ಟು ರಾಕ್ಷಸಿಯರ ಕಾವಲನ್ನು ಹಾಕಿದ್ದನು. ವಿಕಾರಿಗಳೂ ಭೀಕರಾಕೃತಿಗಳೂ ಆದ ರಾಕ್ಷಸಿಯರ ಹಿಂಡು ಎಡಬಿಡದೆ ಕಾಯುತ್ತಿತ್ತು. ಆಗಲೂ ಸೀತೆಯು ನಿನ್ನನ್ನೇ ನೆನೆಯುತ್ತ ನೀನೇ ಪರಾಯಣವೆಂದು ನಂಬಿದ್ದಳು (೭–೮). ರಾವಣನು ನಾನಾವಿಧದ ಪ್ರಲೋಭನೆಗಳನ್ನೊಡ್ಡಿದರೂ ಬಗೆಬಗೆಯಲ್ಲಿ ಬೆದರಿಸಿದರೂ ಮೈಥಿಲಿಯು ಒಂದು ಕ್ಷಣವೂ ಆ ರಾಕ್ಷಸನನ್ನು ಮನಸ್ಸಿನಲ್ಲಿ ಚಿಂತಿಸಲಿಲ್ಲ. ಅವಳ ಅಂತರಾತ್ಮವು ಸದಾ ನಿನ್ನಲ್ಲಿ ನೆಲೆಸಿತ್ತು (೯). ರಾಘವ,

ತತಃ ಪ್ರೀತಮನಾ ರಾಮಃ ಶ್ರುತ್ವೈತದ್ವದತಾಂ ವರಃ ।
ದಧ್ಯೌ ಮುಹೂರ್ತಂ ಧರ್ಮಾತ್ಮಾ ಬಾಷ್ಪವ್ಯಾಕುಲಲೋಚನಃ ॥ ೧೧

ಏವಮುಕ್ತೋ ಮಹಾತೇಜಾ ದ್ಯುತಿಮಾನ್ ದೃಢವಿಕ್ರಮಃ ।
ಅಬ್ರವೀತ್ತ್ರಿದಶಶ್ರೇಷ್ಠಂ ರಾಮೋ ಧರ್ಮಭೃತಾಂ ವರಃ ॥ ೧೨

ಅವಶ್ಯಂ ತ್ರಿಷು ಲೋಕೇಷು ನ ಸೀತಾ ಪಾಪಮರ್ಹತಿ ।
ದೀರ್ಘಕಾಲೋಷಿತಾ ಹೀಯಂ ರಾವಣಾಂತಃಪುರೇ ಶುಭಾ ॥ ೧೩

ಬಾಲಿಶಃ ಖಲು ಕಾಮಾತ್ಮಾ ರಾಮೋ ದಶರಥಾತ್ಮಜಃ ।
ಇತಿ ವಕ್ಷ್ಯಂತಿ ಮಾಂ ಸಂತೋ ಜಾನಕೀಮವಿಶೋಧ್ಯ ಹಿ ॥ ೧೪

ಅನನ್ಯಹೃದಯಾಂ ಭಕ್ತಾಂ ಮಚ್ಚಿತ್ತಪರಿವರ್ತಿನೀಮ್ ।
ಅಹಮಪ್ಯವಗಚ್ಛಾಮಿ ಮೈಥಿಲೀಂ ಜನಕಾತ್ಮಜಾಮ್ ॥ ೧೫

ಸೀತೆಯ ಅಂತಃಕರಣವು ಅತ್ಯಂತ ಪರಿಶುದ್ಧವಾದದ್ದು. ಇವಳಲ್ಲಿ ಯಾವ ಕಳಂಕವೂ ಇಲ್ಲ. ಇವಳನ್ನು ಸ್ವೀಕರಿಸು. ಶ್ರೀರಾಮ, ತಿರುಗಿ ಒಂದು ಮಾತನ್ನೂ ಆಡಬೇಡ. ಇದು ನನ್ನ ಆಜ್ಞೆ!" ಎಂದನು (೧೦). ಶ್ರೀರಾಮನ ಮನಸ್ಸು ಪ್ರಸನ್ನವಾಯಿತು. ಕಣ್ಣೀರು ಉಕ್ಕಿತು. ಆ ಧರ್ಮಾತ್ಮನು ಸ್ವಲ್ಪಕಾಲ ಧ್ಯಾನ ವಶನಾಗಿ ನಿಂತನು (೧೧). ಅಗ್ನಿದೇವನ ನುಡಿಯನ್ನು ಕೇಳಿ ತೇಜೋನಿಧಿಯೂ ದೃಢವಿಕ್ರಮನೂ ಧಾರ್ಮಿಕೋತ್ತಮನೂ ಆದ ಶ್ರೀರಾಮನು ಆ ದೇವೋತ್ತಮನನ್ನು* ನೋಡಿ ಹೀಗೆಂದನು : "ಭಗವನ್, ಮೂರು ಲೋಕಗಳಲ್ಲಿಯೂ ಸೀತೆಯ ವಿಷಯದಲ್ಲಿ ದೋಷವನ್ನು ಶಂಕಿಸುವುದು ಸರ್ವಥಾ ಯುಕ್ತವಲ್ಲ. ಆದರೆ ರಾವಣನ ಗೃಹದಲ್ಲಿ ಈ ಶುಭಾಂಗಿಯು ದೀರ್ಘಕಾಲದವರೆಗಿದ್ದಳು (೧೨-೧೩). ಜಾನಕಿಯನ್ನು ಪರೀಕ್ಷಿಸದೆ ನಾನು ಸ್ವೀಕರಿಸಿದ್ದರೆ, 'ದಶರಥನ ಮಗನಾದ ರಾಮನು ಅವಿವೇಕಿ. ಇವನೊಬ್ಬ ಕಾಮುಕ' ಎಂದು ಮಹಾಜನರೇ ಹೇಳುತ್ತಿದ್ದರು. ಈ ಮೈಥಿಲಿ–ಈ ಜನಕರಾಜನಂದಿನಿ ನನ್ನನ್ನೇ ನಂಬಿದವಳು; ನನ್ನಲ್ಲಿಯೇ ಇವಳ ಹೃದಯವು ನೆಲೆಸಿದೆ. ನನ್ನ ಇಚ್ಛೆಯಂತೆಯೇ ನಡೆಯತಕ್ಕವಳು ಎಂಬುದನ್ನು, ದೇವೋತ್ತಮ, ನಾನೂ ಬಲ್ಲೆನು (೧೪-೧೫).

---

* ಮೂಲದಲ್ಲಿ ತ್ರಿದಶಶ್ರೇಷ್ಠ ಎಂದಿದೆ. ಅಗ್ನಿ ಅಥವಾ ಬ್ರಹ್ಮ ಎಂದೂ ಅರ್ಥ ಮಾಡಬಹುದು.

ಪ್ರತ್ಯಯಾರ್ಥಂ ತು ಲೋಕಾನಾಂ ತ್ರಯಾಣಾಂ ಸತ್ಯಸಂಶ್ರಯಃ ।
ಉಪೇಕ್ಷೇ ಚಾಪಿ ವೈದೇಹೀಂ ಪ್ರವಿಶಂತೀಂ ಹುತಾಶನಮ್ ॥ ೧೬

ಇಮಾಮಪಿ ವಿಶಾಲಾಕ್ಷೀಂ ರಕ್ಷಿತಾಂ ಸ್ವೇನ ತೇಜಸಾ ।
ರಾವಣೋ ನಾತಿವರ್ತೇತ ವೇಲಾಮಿವ ಮಹೋದಧಿಃ ॥ ೧೭

ನ ಹಿ ಶಕ್ತಃ ಸ ದುಷ್ಟಾತ್ಮಾ ಮನಸಾಪಿ ಹಿ ಮೈಥಿಲೀಮ್ ।
ಪ್ರಧರ್ಷಯಿತುಮಪ್ರಾಪ್ಯಾಂ ದೀಪ್ತಾಮಗ್ನಿಶಿಖಾಮಿವ ॥ ೧೮

ನೇಯಮರ್ಹತಿ ಚೈಶ್ವರ್ಯಂ ರಾವಣಾಂತಃಪುರೇ ಶುಭಾ ।
ಅನನ್ಯಾ ಹಿ ಮಯಾ ಸೀತಾ ಭಾಸ್ಕರೇಣ ಪ್ರಭಾ ಯಥಾ ॥ ೧೯

ವಿಶುದ್ಧಾ ತ್ರಿಷು ಲೋಕೇಷು ಮೈಥಿಲೀ ಜನಕಾತ್ಮಜಾ ।
ನ ಹಿ ಹಾತುಮಿಯಂ ಶಕ್ಯಾ ಕೀರ್ತಿರಾತ್ಮವತಾ ಯಥಾ ॥ ೨೦

ಆದರೂ ಸತ್ಯವನ್ನೇ ನಂಬಿರುವ ನಾನು ಸತ್ಯವು ಪ್ರಕಟವಾಗಲೆಂದು ಸುಮ್ಮನಿದ್ದೆನು. ವೈದೇಹಿಯು ಅಗ್ನಿಪ್ರವೇಶಮಾಡುವಾಗಲೂ, ಮೂರು ಲೋಕಗಳಿಗೆ ವಿಶ್ವಾಸವು ಮೂಡಲೆಂದು ಸುಮ್ಮನಿದ್ದೆನು. ಈ ವಿಶಾಲಾಕ್ಷಿಯು ತನ್ನ ತೇಜೋಬಲದಿಂದಲೇ ಸುರಕ್ಷಿತಳಾಗಿದ್ದಳು. ರಾವಣನು ಇವಳನ್ನು ಅತಿಕ್ರಮಿಸಿಯಾನೆ? ವೇಲೆಯನ್ನುಲ್ಲಂಘಿಸಲು ಸಮುದ್ರಕ್ಕೆ ಸಾಧ್ಯವೆ? (೧೬–೧೭). ಆ ದುರುಳನು ಮೈಥಿಲಿಯನ್ನು ಕೆಣಕಬಲ್ಲನೆಂದು ಮನಸ್ಸಿನಿಂದ ಊಹಿಸುವುದೂ ಶಕ್ಯವಲ್ಲ. ಉರಿಯುವ ಅಗ್ನಿಜ್ವಾಲೆಯಲ್ಲವೆ ಇವಳು? ಬಲಾತ್ಕಾರಕ್ಕೆ ಮಣಿಯತಕ್ಕವಳಲ್ಲವೆಂದು ನನಗೆ ಗೊತ್ತಿದೆ. ಈ ಶುಭಾಂಗಿಯು ರಾವಣನ ಐಶ್ವರ್ಯಕ್ಕೆ ಮರುಳಾಗತಕ್ಕವಳಲ್ಲ. ಸೂರ್ಯಪ್ರಭೆಯು ಸೂರ್ಯನನ್ನು ಹೇಗೆ ಬಿಟ್ಟು ಇರಲಾರದೋ, ಹಾಗೆ ಸೀತೆಯು ನನ್ನನ್ನು ಅಗಲಿ ಇರುವವಳಲ್ಲ. ಅವಳು ನನಗಿಂತ ಬೇರೆಯವಳೇ ಅಲ್ಲ (ಅವಳು ನನ್ನ ದೇಹದ ಒಂದು ಭಾಗ) (೧೮–೧೯). ಮೂರು ಲೋಕಗಳಲ್ಲಿಯೂ ಅತ್ಯಂತ ಪರಿಶುದ್ಧಳಾದವಳು ಈ ಜನಕರಾಜತನಯೆ. ಮೈಥಿಲಿಯನ್ನು ಪರಿತ್ಯಜಿಸುವುದು ಆಗದ ಮಾತು. ಬುದ್ಧಿಶಾಲಿಯು ತನ್ನ ಕೀರ್ತಿಯನ್ನು ತೊರೆಯಲು ಬಯಸಿದಂತೆ ಇದು. ನೀವೆಲ್ಲರೂ ನನ್ನಲ್ಲಿ ಸ್ನೇಹವನ್ನಿಟ್ಟು ಹಿತವಚನ

ಅವಶ್ಯಂ ತು ಮಯಾ ಕಾರ್ಯಂ ಸರ್ವೇಷಾಂ ವೋ ವಚಃ ಶುಭಮ್ ।
ಸ್ನಿಗ್ಧಾನಾಂ ಲೋಕಮಾನ್ಯಾನಾಮೇವಂ ಚ ಬ್ರುವತಾಂ ಹಿತಮ್ ॥

ಇತೀದಮುಕ್ತ್ವಾ ವಿದಿತಂ ಮಹಾಬಲೈಃ
ಪ್ರಶಸ್ಯಮಾನಃ ಸ್ವಕೃತೇನ ಕರ್ಮಣಾ ।
ಸಮೇತ್ಯ ರಾಮಃ ಪ್ರಿಯಯಾ ಮಹಾಬಲಃ
ಸುಖಂ ಸುಖಾರ್ಹೋಽನುಬಭೂವ ರಾಘವಃ ॥ ೨೨

ಇತಿ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕವಿಂಶತ್ಯುತ್ತರಶತತಮಃ ಸರ್ಗಃ

ವನ್ನು ಹೇಳುತ್ತಿದ್ದೀರಿ. ಲೋಕಮಾನ್ಯರಾದ ನಿಮ್ಮ ಶುಭವಚನವನ್ನು ಪಾಲಿಸುವುದು ನನ್ನ ಕರ್ತವ್ಯ. ನಿಮ್ಮ ಮಾತಿನಂತೆ ನಡೆಯುವೆನು" ಎಂದನು (೨೦-೨೧). ಈ ಪ್ರಕಾರವಾಗಿ ಶ್ರೀರಾಮನು ತನ್ನ ಮನೋಗತವನ್ನು ವ್ಯಕ್ತಪಡಿಸಲಾಗಿ ಮಹಾಮಹಿಮರಾದ ಬ್ರಹ್ಮಾದಿ ದೇವತೆಗಳು ಆತನ ಮಹಾಕಾರ್ಯವನ್ನು ಕಂಡು ಸ್ತುತಿಸಿದರು. ವೀರಾಗ್ರಗಣ್ಯನಾದ ಶ್ರೀರಾಮಚಂದ್ರನು ತನ್ನ ಪ್ರಿಯಳಾದ ಜಾನಕಿಯನ್ನು ಕೈಹಿಡಿದು ಸ್ವೀಕರಿಸಿ, ಪತ್ನೀಸಮೇತನಾಗಿ ಆನಂದದಲ್ಲಿದ್ದನು (೨೨).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನೂರಿಪ್ಪತ್ತೊಂದನೆಯ ಸರ್ಗ.

ಏಕತ್ರಿಂಶದುತ್ತರಶತತಮಃ ಸರ್ಗಃ

ಶ್ರೀರಾಮಪಟ್ಟಾಭಿಷೇಕಃ

ಶಿರಸ್ಯಂಜಲಿಮಾಧಾಯ ಕೈಕೇಯ್ಯಾನಂದವರ್ಧನಃ ।
ಬಭಾಷೇ ಭರತೋ ಜ್ಯೇಷ್ಠಂ ರಾಮಂ ಸತ್ಯಪರಾಕ್ರಮಮ್ ॥ ೧

ಪೂಜಿತಾ ಮಾಮಿಕಾ ಮಾತಾ ದತ್ತಂ ರಾಜ್ಯಮಿದಂ ಮಮ ।
ತದ್ದದಾಮಿ ಪುನಸ್ತುಭ್ಯಂ ಯಥಾ ತ್ವಮದದಾ ಮಮ ॥ ೨

ಧುರಮೇಕಾಕಿನಾ ನ್ಯಸ್ತಾಮೃಷಭೇಣ ಬಲೀಯಸಾ ।
ಕಿಶೋರವದ್ಗುರುಂ ಭಾರಂ ನ ವೋಢುಮಹಮುತ್ಸಹೇ ॥ ೩

ವಾರಿವೇಗೇನ ಮಹತಾ ಭಿನ್ನಃ ಸೇತುರಿವ ಕ್ಷರನ್ ।
ದುರ್ಬಂಧನಮಿದಂ ಮನ್ಯೇ ರಾಜ್ಯಚ್ಛಿದ್ರಮಸಂವೃತಮ್ ॥ ೪

ಸರ್ಗ ೧೩೧

ಶ್ರೀರಾಮನ ಪಟ್ಟಾಭಿಷೇಕ.

ಆಗ ಭರತನು ತನ್ನ ಶಿರಸ್ಸಿನಮೇಲೆ ಕೈಜೋಡಿಸಿಕೊಂಡು ತಾಯಿಯಾದ ಕೈಕೇಯಿಯ ಆನಂದವನ್ನು ವರ್ಧಿಸುತ್ತ, ಜ್ಯೇಷ್ಠನೂ ಸತ್ಯಸಂಧನೂ ಆದ ಶ್ರೀರಾಮನನ್ನು ಕುರಿತು ಈ ರೀತಿಯಲ್ಲಿ ವಿಜ್ಞಾಪಿಸಿದನು (೧). "ಅಣ್ಣ, ನನ್ನ ಮಾತೆಯ ನುಡಿಗೆ ಬೆಲೆ ಕೊಟ್ಟು ಆದರಿಸಿದ್ದಾಯಿತು. ಈ ರಾಜ್ಯವನ್ನು ಯಾವ ಪ್ರಕಾರದಲ್ಲಿ ನನ್ನ ವಶಕ್ಕೆ ಕೊಟ್ಟೆಯೋ ಅದೇ ರೂಪದಲ್ಲಿ ಇದನ್ನು ನಿನಗೆ ಅರ್ಪಿಸುತ್ತೇನೆ. ಪ್ರಬಲವಾದ ಮಹಾವೃಷಭವು ಹೊರಬಲ್ಲ ಮಹಾಭಾರವನ್ನು ಒಂದು ಕರು ಹೊರಬಲ್ಲುದೆ? ರಾಜ್ಯದ ಈ ಭಾರವನ್ನು ನಿರ್ವಹಿಸಲು ನಾನು ಶಕ್ತನಲ್ಲ (೨-೩). ರಾಜ್ಯನಿರ್ವಹಣೆ ಬಹು ತೊಡಕಾದುದು. ಉತ್ತಮವಾದ ಪ್ರಭುಶಕ್ತಿಯ ಬಲವಿಲ್ಲದೆ ತೊಡಕನ್ನು ಪರಿಹರಿಸಿ ರಾಜ್ಯವನ್ನು ಪಾಲಿಸುವುದು ಅಶಕ್ಯವೆಂದು ತಿಳಿಯುತ್ತೇನೆ. ರಾಜ್ಯಪಾಲನೆಯೆಂಬುದು ಮಹಾವೇಗದಿಂದೆರಗುವ ಜಲಪ್ರವಾಹದ ಹೊಡೆತಕ್ಕೆ ಒಡೆದುಹೋದ ಅಣೆಕಟ್ಟನ್ನು ಸರಿಪಡಿಸಿದಂತೆಯೇ ಸರಿ! ನನ್ನಂತಹ

ಗತಿಂ ಖರ ಇವಾಶ್ವಸ್ಯ ಹಂಸಸ್ಯೇವ ಚ ವಾಯಸಃ ।
ನಾನ್ವೇತುಮುತ್ಸಹೇ ರಾಮ ತವ ಮಾರ್ಗಮರಿಂದಮ ॥ ೫

ಯಥಾ ಚಾರೋಪಿತೋ ವೃಕ್ಷೋ ಜಾತಶ್ಚಾಂತರ್ನಿವೇಶನೇ ।
ಮಹಾಂಶ್ಚ ಸುದುರಾರೋಹೋ ಮಹಾಸ್ಕಂಧಪ್ರಶಾಖವಾನ್ ॥ ೬

ಶೀರ್ಯೇತ ಪುಷ್ಪಿತೋ ಭೂತ್ವಾ ನ ಫಲಾನಿ ಪ್ರದರ್ಶಯನ್ ।
ತಸ್ಯ ನಾನುಭವೇದರ್ಥಂ ಯಸ್ಯ ಹೇತೋಃ ಸ ರೋಪ್ಯತೇ ॥ ೭

ಏಷೋಪಮಾ ಮಹಾಬಾಹೋ ತ್ವದರ್ಥಂ ವೇತ್ತುಮರ್ಹಸಿ ।
ಯದ್ಯಸ್ಮಾನ್ಮನುಜೇಂದ್ರ ತ್ವಂ ಭಕ್ತಾನ್ ಭೃತ್ಯಾನ್ನ ಶಾಧಿ ಹಿ ॥ ೮

ಸಾಮಾನ್ಯರಿಂದ ಇದು ಆಗತಕ್ಕದ್ದಲ್ಲ (೪). ಶ್ರೀರಾಮ, ನಿನ್ನ ಮಾರ್ಗವನ್ನು ತುಳಿಯಲು–ನಿನ್ನ ನಿರ್ವಾಹದಕ್ಷತೆಯನ್ನನುಕರಿಸಲು–ನನಗೆ ಶಕ್ತಿಯಿಲ್ಲ. ಅಶ್ವದ ನಡೆಯನ್ನು ಕತ್ತೆಯೂ ಹಂಸದ ಗಮನ ವಿಧಾನವನ್ನು ಕಾಗೆಯೂ ಅನುಕರಿಸಿದಂತಾಗುವುದು (೫). ಮನೆಯ ತೋಟದಲ್ಲಿ ಹುಟ್ಟಿದ ಗಿಡವನ್ನು ಸಾಕಿ ಬೆಳೆಸಿದಾಗ, ಅದು ದೊಡ್ಡದಾಗಿ ಶಾಖೋಪಶಾಖೆಗಳಿಂದ ಕೂಡಿ ದುರಾರೋಹವಾದ ವೃಕ್ಷವಾಗುತ್ತದೆ. ಅದರಲ್ಲಿ ಬೇಕಾದಷ್ಟು ಹೂಗಳು ಅರಳುತ್ತವೆ. ಆದರೆ ಆ ವೃಕ್ಷವು ಹಣ್ಣುಗಳನ್ನು ಕೊಡದೆ ಹಾಗೆಯೇ ನಶಿಸಿಹೋದ ಪಕ್ಷದಲ್ಲಿ, ಅದನ್ನು ಬೆಳೆಸಿದವನಿಗೆ ಎಷ್ಟು ಖೇದವಾದೀತು? ಯಾವ ಫಲದ ಅಪೇಕ್ಷೆಯಿಂದ ಆ ವೃಕ್ಷವನ್ನು ಪೋಷಿಸಿದನೋ, ಅದು ಪೋಷಕನಿಗೆ ಲಭಿಸದೆ ಹೋಗುವುದು (೬–೭). ಓ ಮಹಾಬಾಹು, ಭಕ್ತರೂ ಭೃತ್ಯರೂ ಆದ ನಮ್ಮನ್ನು ನರೇಂದ್ರನಾಗಿ ನೀನು ಪಾಲಿಸದಿದ್ದಲ್ಲಿ, ಇದೇ ನಾನು ಕೊಡುವ ಹೋಲಿಕೆ! ಈ ವೃಕ್ಷೋಪಮೆಯ*

* ದಶರಥನು ಬಹುಕಾಲದವರೆಗೆ ಪರಿತಪಿಸಿ ಪುತ್ರಕಾಮೇಷ್ಟಿಯನ್ನು ಮಾಡಿ ಶ್ರೀರಾಮನನ್ನು ಪಡೆದನು. ಶ್ರೀರಾಮನು ಮಹಾರಾಜನಾಗಿ ರಾಜ್ಯವನ್ನು ಪಾಲಿಸಬೇಕೆಂಬುದು ದಶರಥನ ಉದ್ದೇಶವಾಗಿತ್ತು. ಈಗ ಶ್ರೀರಾಮನು ರಾಜ್ಯಪಾಲನಾಕಾರ್ಯವನ್ನು ಅಂಗೀಕರಿಸದಿದ್ದಲ್ಲಿ, ದಶರಥನ ಮುಖ್ಯೋದ್ದೇಶವೇ ಭಗ್ನವಾಗುವುದೆಂದೂ ಸಕಲ ಪ್ರಜೆಗಳಿಗೂ ದುಃಖವಾಗುವುದೆಂದೂ ಭರತನ ಅಭಿಪ್ರಾಯ. ಇಲ್ಲಿ ಶ್ರೀರಾಮನಿಗೂ ವೃಕ್ಷಕ್ಕೂ ಹೋಲಿಕೆ.

*

ಜಗದದ್ಯಾಭಿಷಿಕ್ತಂ ತ್ವಾಮನುಪಶ್ಯತು ಸರ್ವತಃ ।
ಪ್ರತಪಂತಮಿವಾದಿತ್ಯಂ ಮಧ್ಯಾಹ್ನೇ ದೀಪ್ತತೇಜಸಮ್ ॥ ೯

ತೂರ್ಯಸಂಘಾತನಿರ್ಘೋಷೈಃ ಕಾಂಚೀನೂಪುರನಿಃಸ್ವನೈಃ ।
ಮಧುರೈರ್ಗೀತಶಬ್ದೈಶ್ಚ ಪ್ರತಿಬುಧ್ಯಸ್ವ ರಾಘವ ॥ ೧೦

ಯಾವದಾವರ್ತತೇ ಚಕ್ರಂ ಯಾವತೀ ಚ ವಸುಂಧರಾ ।
ತಾವತ್ತ್ವಮಿಹ ಸರ್ವಸ್ಯ ಸ್ವಾಮಿತ್ವಮನುವರ್ತಯ ॥ ೧೧

ಭರತಸ್ಯ ವಚಃ ಶ್ರುತ್ವಾ ರಾಮಃ ಪರಪುರಂಜಯಃ ।
ತಥೇತಿ ಪ್ರತಿಜಗ್ರಾಹ ನಿಷಸಾದಾಸನೇ ಶುಭೇ ॥ ೧೨

ತತಃ ಶತ್ರುಘ್ನವಚನಾನ್ನಿಪುಣಾಃ ಶ್ಮಶ್ರುವರ್ಧಕಾಃ ।
ಸುಖಹಸ್ತಾಃ ಸುಶೀಘ್ರಾಶ್ಚ ರಾಘವಂ ಪರ್ಯುಪಾಸತ ॥ ೧೩

ಪೂರ್ವಂ ತು ಭರತೇ ಸ್ನಾತೇ ಲಕ್ಷ್ಮಣೇ ಚ ಮಹಾಬಲೇ ।
ಸುಗ್ರೀವೇ ವಾನರೇಂದ್ರೇ ಚ ರಾಕ್ಷಸೇಂದ್ರೇ ವಿಭೀಷಣೇ ॥ ೧೪

ಅರ್ಥವೇನೆಂಬುದನ್ನು ನೀನೇ ತಿಳಿದುಕೊ. ಅಣ್ಣ, ಈ ದಿನ ನೀನು ಪಟ್ಟಾಭಿಷಿಕ್ತನಾಗುವುದನ್ನು ಜಗತ್ತು ನೋಡಬೇಕು. ಮಧ್ಯಾಹ್ನದಲ್ಲಿ ರಾರಾಜಿಸುವ ಆದಿತ್ಯನಂತೆ ರಾಜತೇಜಸ್ಸಿನಿಂದ ಬೆಳಗುವ ನಿನ್ನನ್ನು ಲೋಕವು ಕಾಣಬೇಕು (೮–೯). ರಘುಕುಲತಿಲಕ, (ಇನ್ನುಮೇಲೆ ನಾಳೆಯ ಬೆಳಗಿನಿಂದಲೇ) ಮಂಗಳವಾದ್ಯಘೋಷಗಳನ್ನೂ ಕಾಂಚೀನೂಪುರಗಳ ಇಂಪಾದ ಜಣಜಣತ್ಕಾರಗಳನ್ನೂ ಮಧುರವಾದ ಸಂಗೀತವನ್ನೂ ಕೇಳುತ್ತ ನೀನು ಸುಖನಿದ್ರೆಯಿಂದ ಎಚ್ಚರಗೊಳ್ಳುವಂತಾಗಬೇಕು! (೧೦). ಎಂದಿನವರೆಗೆ ಈ ಜ್ಯೋತಿಶ್ಚಕ್ರವು ಸುತ್ತುವುದೋ, ಎಂದಿನವರೆಗೆ ಈ ಭೂಮಿ ಇರುವುದೋ ಅಂದಿನವರೆಗೆ, ಅಣ್ಣ, ಈ ಸಮಸ್ತ ರಾಜ್ಯಕ್ಕೂ ಪ್ರಭುವಾಗಿ ಪಾಲಿಸುತ್ತಿರು" ಎಂದು ನಿವೇದಿಸಿದನು (೧೧). ಭರತನ ನುಡಿಯನ್ನು ಕೇಳಿ ಶ್ರೀರಾಮನು "ವತ್ಸ, ಹಾಗೆಯೇ ಆಗಲಿ" ಎಂದು ಸಮ್ಮತಿಸಿದನು. ಆಮೇಲೆ ಭರತನು ಒಂದು ಶುಭಾಸನದಲ್ಲಿ ಕುಳಿತನು. ಆಗ ಶತ್ರುಘ್ನನು ಶೀಘ್ರದಲ್ಲಿ ಮೃದುವಾಗಿ ಕೆಲಸಮಾಡಬಲ್ಲ ನಿಪುಣರಾದ ಕ್ಷೌರಿಕರನ್ನು ಕರೆಸಿದನು. ಅವರು ಶ್ರೀರಾಮ, ಭರತ ಮೊದಲಾದವರಿಗೆ ಕ್ಷೌರಕರ್ಮವನ್ನು ನಡೆಸಿದರು (೧೨–೧೩). ಮೊದಲು ಭರತನು ಸ್ನಾನಮಾಡಿದ ಮೇಲೆ ಲಕ್ಷ್ಮಣನು ಸ್ನಾನಮಾಡಿದನು.

ವಿಶೋಧಿತಜಟಃ ಸ್ನಾತಶ್ಚಿತ್ರಮಾಲ್ಯಾನುಲೇಪನಃ ।
ಮಹಾರ್ಹವಸನೋ ರಾಮಸ್ತಸ್ಥೌ ತತ್ರ ಶ್ರಿಯಾ ಜ್ವಲನ್ ॥ ೧೫

ಪ್ರತಿಕರ್ಮ ಚ ರಾಮಸ್ಯ ಕಾರಯಾಮಾಸ ವೀರ್ಯವಾನ್ ।
ಲಕ್ಷ್ಮಣಸ್ಯ ಚ ಲಕ್ಷ್ಮೀವಾನಿಕ್ಷ್ವಾಕುಕುಲವರ್ಧನಃ ॥ ೧೬

ಪ್ರತಿಕರ್ಮ ಚ ಸೀತಾಯಾಃ ಸರ್ವಾ ದಶರಥಸ್ತ್ರಿಯಃ ।
ಆತ್ಮನೈವ ತದಾ ಚಕ್ರುರ್ಮನಸ್ವಿನ್ಯೋ ಮನೋಹರಮ್ ॥ ೧೭

ತತೋ ವಾನರಪತ್ನೀನಾಂ ಸರ್ವಾಸಾಮೇವ ಶೋಭನಮ್ ।
ಚಕಾರ ಯತ್ನಾತ್ ಕೌಸಲ್ಯಾ ಪ್ರಹೃಷ್ಟಾ ಪುತ್ರಲಾಲಸಾ ॥ ೧೮

ತತಃ ಶತ್ರುಘ್ನವಚನಾತ್ ಸುಮಂತ್ರೋ ನಾಮ ಸಾರಥಿಃ ।
ಯೋಜಯಿತ್ವಾಭಿಚಕ್ರಾಮ ರಥಂ ಸರ್ವಾಂಗಶೋಭನಮ್ ॥ ೧೯

ಆಮೇಲೆ ಸುಗ್ರೀವನೂ ವಿಭೀಷಣನೂ ಸ್ನಾನಮಾಡಿದರು.* ಅನಂತರ ಶ್ರೀರಾಮನು ಜಟೆಯನ್ನು ತೆಗೆಸಿ ಕೂದಲನ್ನು ನಯಪಡಿಸಿಕೊಂಡು ಸ್ನಾನಮಾಡಿ ಚಿತ್ರಮಾಲ್ಯಗಳನ್ನು ಧರಿಸಿ ದಿವ್ಯಗಂಧವನ್ನು ಹಚ್ಚಿಕೊಂಡು, ಶ್ರೇಷ್ಠವಾದ ಪೀತಾಂಬರವನ್ನುಟ್ಟನು. ಆಗ ಶ್ರೀರಾಮನ ದಿವ್ಯತೇಜಸ್ಸನ್ನು ಏನೆಂದು ವರ್ಣಿಸುವುದು! (೧೪-೧೫). ಇಕ್ಷ್ವಾಕುವಂಶೋತ್ತಮನೂ ತೇಜಸ್ವಿಯೂ ಆದ ಶತ್ರುಘ್ನನು ವಿವಿಧಾಭರಣಗಳನ್ನು ತರಿಸಿ ಶ್ರೀರಾಮನಿಗೂ ಲಕ್ಷ್ಮಣನಿಗೂ ಅಲಂಕಾರ ಮಾಡಿಸಿದನು. ಶುಭಹೃದಯರಾದ ದಶರಥನ ಅಂತಃಪುರಸ್ತ್ರೀಯರೆಲ್ಲರೂ ಬಂದು ತಮ್ಮ ಕೈಯಿಂದಲೇ ಜಾನಕಿಗೆ ಸ್ನಾನಮಾಡಿಸಿ ದಿವ್ಯವಸ್ತ್ರವನ್ನುಡಿಸಿ ಆಭರಣಗಳನ್ನು ತೊಡಿಸಿ ಮನೋಹರವಾಗಿ ಶೃಂಗರಿಸಿದರು (೧೬-೧೭). ಪುತ್ರವತ್ಸಲೆಯಾದ ಕೌಸಲ್ಯೆಯು ಸಂತುಷ್ಟಳಾಗಿ ವಾನರಪತ್ನಿಯರೆಲ್ಲರಿಗೂ ಆಸ್ಥೆಯಿಂದ ಅಲಂಕಾರ ಮಾಡಿಸಿದಳು! ಅಷ್ಟರಲ್ಲಿ ಶತ್ರುಘ್ನನ ಸೂಚನೆಯಂತೆ ಸುಮಂತ್ರನು ಸರ್ವಾಂಗಸುಂದರವಾದ ರಥಕ್ಕೆ ಅಶ್ವ

---

* ಶತ್ರುಘ್ನನೂ ಕ್ಷೌರಮಾಡಿಸಿಕೊಂಡು ಸ್ನಾನಮಾಡಿದನೆಂದು ಉಪಲಕ್ಷಣವಾಗಿ ತಿಳಿಯಬೇಕು.

ಅರ್ಕಮಂಡಲಸಂಕಾಶಂ ದಿವ್ಯಂ ದೃಷ್ಟ್ವಾ ರಥೋತ್ತಮಮ್ ।
ಆರುರೋಹ ಮಹಾಬಾಹೂ ರಾಮಃ ಸತ್ಯಪರಾಕ್ರಮಃ ॥ ೨೦

ಸುಗ್ರೀವೋ ಹನುಮಾಂಶ್ಚೈವ ಮಹೇಂದ್ರಸದೃಶದ್ಯುತೀ ।
ಸ್ನಾತೌ ದಿವ್ಯನಿಭೈರ್ವಸ್ತ್ರೈರ್ಜಗ್ಮತುಃ ಶುಭಕುಂಡಲೌ ॥ ೨೧

ವರಾಭರಣಸಂಪನ್ನಾ ಯಯುಸ್ತಾಃ ಶುಭಕುಂಡಲಾಃ ।
ಸುಗ್ರೀವಪತ್ನ್ಯಃ ಸೀತಾ ಚ ದ್ರಷ್ಟುಂ ನಗರಮುತ್ಸುಕಾಃ ॥ ೨೨

ಅಯೋಧ್ಯಾಯಾಂ ತು ಸಚಿವಾ ರಾಜ್ಞೋ ದಶರಥಸ್ಯ ಯೇ ।
ಪುರೋಹಿತಂ ಪುರಸ್ಕೃತ್ಯ ಮಂತ್ರಯಾಮಾಸುರರ್ಥವತ್ ॥ ೨೩

ಅಶೋಕೋ ವಿಜಯಶ್ಚೈವ ಸುಮಂತ್ರಶ್ಚೈವ ಸಂಗತಾಃ ।
ಮಂತ್ರಯನ್ ರಾಮವೃದ್ಧ್ಯರ್ಥಮೃದ್ಧ್ಯರ್ಥಂ ನಗರಸ್ಯ ಚ ॥ ೨೪

ಗಳನ್ನು ಹೂಡಿ ತಂದು ನಿಲ್ಲಿಸಿದನು (೧೮–೧೯). ಮಹಾಬಾಹುವೂ ಸತ್ಯಪರಾಕ್ರಮನೂ ಆದ ಶ್ರೀರಾಮನು ಸೂರ್ಯಮಂಡಲದಂತೆ ಬೆಳಗುತ್ತಿದ್ದ ಆ ದಿವ್ಯರಥವನ್ನೇರಿ ಕುಳಿತನು. ಅಷ್ಟರಲ್ಲಿ ಸುಗ್ರೀವನೂ ಹನುಮಂತನೂ ಸ್ನಾನಮಾಡಿ ದಿವ್ಯವಸ್ತ್ರಗಳನ್ನುಟ್ಟು ಅಂದವಾದ ಕುಂಡಲಗಳನ್ನು ಧರಿಸಿ, ದೇವೇಂದ್ರಸಮಾನವಾದ ತೇಜಸ್ಸಿನಿಂದ ರಾರಾಜಿಸುತ್ತ ಶ್ರೀರಾಮನೊಡನೆ ಹೊರಟರು (೨೦–೨೧). ಹಾಗೆಯೇ ಸುಗ್ರೀವಪತ್ನಿಯರೂ ಶ್ರೇಷ್ಠವಾದ ಒಡವೆಗಳನ್ನು ತೊಟ್ಟು ಶುಭಕುಂಡಲಗಳನ್ನು ಧರಿಸಿ, ಅಯೋಧ್ಯೆಯನ್ನು ನೋಡುವ ಕುತೂಹಲದಿಂದ ಸೀತಾದೇವಿಯೊಡನೆ ಬಂದರು. ಇತ್ತ ಅಯೋಧ್ಯಾನಗರದಲ್ಲಿ ದಶರಥರಾಜನಿಗೆ ಸಚಿವರಾಗಿದ್ದ ಅಶೋಕ, ವಿಜಯ, ಸುಮಂತ್ರ–ಮುಂತಾದವರು ಕುಲಪುರೋಹಿತರಾದ ವಸಿಷ್ಠರನ್ನು ಕಂಡು ಶ್ರೀರಾಮನ ಪಟ್ಟಾಭಿಷೇಕದ ವಿಷಯವಾಗಿ ಸಮಾಲೋಚಿಸಿದರು (೨೨–೨೩). ಶ್ರೀರಾಮನಿಗೂ ರಾಜಧಾನಿಗೂ ಶ್ರೇಯಸ್ಸಾಗುವಂತೆ ಯಾವ ಕ್ರಮದಲ್ಲಿ ಪಟ್ಟಾಭಿಷೇಕವನ್ನು ನಡೆಸಬೇಕೆಂದು ವಿಚಾರಮಾಡಿದರು. ಅವರು ವಸಿಷ್ಠರೊಡನೆ "ಮಾನ್ಯರೆ, ಶ್ರೇಯೋಭಾಗಿಯೂ ಮಹಾತ್ಮನೂ ಆದ ಶ್ರೀರಾಮನ ಪಟ್ಟಾಭಿಷೇಕಕ್ಕೆ ಯಾವ ಯಾವ ಮಂಗಳದ್ರವ್ಯಗಳು ಬೇಕೋ, ಅವೆಲ್ಲವನ್ನೂ

ಸರ್ವಮೇವಾಭಿಷೇಕಾರ್ಥಂ ಜಯಾರ್ಹಸ್ಯ ಮಹಾತ್ಮನಃ ।
ಕರ್ತುಮರ್ಹಸಿ ರಾಮಸ್ಯ ಯದ್ಯನ್ಮಂಗಲಪೂರ್ವಕಮ್ ॥ ೨೫

ಇತಿ ತೇ ಮಂತ್ರಿಣಃ ಸರ್ವೇ ಸಂದಿಶ್ಯ ತು ಪುರೋಹಿತಮ್ ।
ನಗರಾನ್ನಿರ್ಯಯುಸ್ತೂರ್ಣಂ ರಾಮದರ್ಶನಬುದ್ಧಯಃ ॥ ೨೬

ಹರಿಯುಕ್ತಂ ಸಹಸ್ರಾಕ್ಷೋ ರಥಮಿಂದ್ರ ಇವಾನಘಃ ।
ಪ್ರಯಯೌ ರಥಮಾಸ್ಥಾಯ ರಾಮೋ ನಗರಮುತ್ತಮಮ್ ॥ ೨೭

ಜಗ್ರಾಹ ಭರತೋ ರಶ್ಮೀನ್ ಶತ್ರುಘ್ನಶ್ಛತ್ರಮಾದದೇ ।
ಲಕ್ಷ್ಮಣೋ ವ್ಯಜನಂ ತಸ್ಯ ಮೂರ್ಧ್ನಿ ಸಂಪರ್ಯವೀಜಯತ್ ॥ ೨೮

ಶ್ವೇತಂ ಚ ವಾಲವ್ಯಜನಂ ಜಗ್ರಾಹ ಪುರತಃ ಸ್ಥಿತಃ ।
ಅಪರಂ ಚಂದ್ರಸಂಕಾಶಂ ರಾಕ್ಷಸೇಂದ್ರೋ ವಿಭೀಷಣಃ ॥ ೨೯

ಋಷಿಸಂಘೈಸ್ತದಾಕಾಶೇ ದೇವೈಶ್ಚ ಸಮರುದ್ಗಣೈಃ ।
ಸ್ತೂಯಮಾನಸ್ಯ ರಾಮಸ್ಯ ಶುಶ್ರುವೇ ಮಧುರಧ್ವನಿಃ ॥ ೩೦

ತತಃ ಶತ್ರುಂಜಯಂ ನಾಮ ಕುಂಜರಂ ಪರ್ವತೋಪಮಮ್ ।
ಆರುರೋಹ ಮಹಾತೇಜಾಃ ಸುಗ್ರೀವಃ ಪ್ಲವಗರ್ಷಭಃ ॥ ೩೧

ಸಿದ್ಧಪಡಿಸಿಕೊಳ್ಳಿರಿ" ಎಂದು ತಿಳಿಸಿ, ಶ್ರೀರಾಮನನ್ನು ಸಂದರ್ಶಿಸುವುದಕ್ಕಾಗಿ ಅಯೋಧ್ಯೆಯಿಂದ ಹೊರಟುಬಂದರು (೨೪-೨೬). ಶ್ರೀರಾಮನು ಅಶ್ವಗಳನ್ನು ಹೂಡಿದ ಉತ್ತಮರಥವನ್ನೇರಿ, ದಿವ್ಯರಥದಲ್ಲಿ ಮಂಡಿಸಿದ ದೇವೇಂದ್ರನಂತೆ ಅಯೋಧ್ಯಾಭಿಮುಖನಾಗಿ ಬಂದನು. ಭರತನು ಅಶ್ವಗಳ ಹಗ್ಗವನ್ನು ಹಿಡಿದು ತಾನೇ ಶ್ರೀರಾಮನ ರಥವನ್ನು ನಡೆಸಿದನು. ಶತ್ರುಘ್ನನು ಶ್ವೇತಚ್ಛತ್ರವನ್ನು ಹಿಡಿದನು. ಲಕ್ಷ್ಮಣನು ಚಾಮರವನ್ನು ಹಿಡಿದು ಶ್ರೀರಾಮನ ಶಿರಸ್ಸಿನ ಬಳಿ ಬೀಸುತ್ತಿದ್ದನು (೨೭-೨೮). ರಾಕ್ಷಸೇಂದ್ರನಾದ ವಿಭೀಷಣನು ಚಂದ್ರಸಂಕಾಶವಾದ ಮತ್ತೊಂದು ಬಿಳಿಯ ಚಾಮರವನ್ನು ಬೀಸುತ್ತ ಮುಂದೆ ನಿಂತನು. ವೈಭವೋಪೇತವಾದ ಆ ಮೆರವಣಿಗೆಯ ಸಮಯದಲ್ಲಿ ಋಷಿಗಳೂ ದೇವತೆಗಳೂ ಮರುತ್ತುಗಳೂ ಆಕಾಶದಲ್ಲಿ ನಿಂತು, ರಾಘವನ ಗುಣಪರಾಕ್ರಮಗಳನ್ನು ಮಂಜುಲಧ್ವನಿಯಿಂದ ಹೊಗಳಿ ಹಾಡುತಿದ್ದರು (೨೯-೩೦). ವಾನರೇಶ್ವರನೂ ಮಹಾತೇಜಸ್ವಿಯೂ

ನವನಾಗಸಹಸ್ರಾಣಿ ಯಯುರಾಸ್ಥಾಯ ವಾನರಾಃ ।
ಮಾನುಷಂ ವಿಗ್ರಹಂ ಕೃತ್ವಾ ಸರ್ವಾಭರಣಭೂಷಿತಾಃ ॥ ೩೨

ಶಂಖಶಬ್ದಪ್ರಣಾದೈಶ್ಚ ದುಂದುಭೀನಾಂ ಚ ನಿಃಸ್ವನೈಃ ।
ಪ್ರಯಯೌ ಪುರುಷವ್ಯಾಘ್ರಸ್ತಾಂ ಪುರೀಂ ಹರ್ಮ್ಯಮಾಲಿನೀಮ್ ॥

ದದೃಶುಸ್ತೇ ಸಮಾಯಾಂತಂ ರಾಘವಂ ಸಪುರಸ್ಸರಮ್ ।
ವಿರಾಜಮಾನಂ ವಪುಷಾ ರಥೇನಾತಿರಥಂ ತದಾ ॥ ೩೪

ತೇ ವರ್ಧಯಿತ್ವಾ ಕಾಕುತ್ಸ್ಥಂ ರಾಮೇಣ ಪ್ರತಿನಂದಿತಾಃ ।
ಅನುಜಗ್ಮುರ್ಮಹಾತ್ಮಾನಂ ಭ್ರಾತೃಭಿಃ ಪರಿವಾರಿತಮ್ ॥ ೩೫

ಅಮಾತ್ಯೈರ್ಬ್ರಾಹ್ಮಣೈಶ್ಚೈವ ತಥಾ ಪ್ರಕೃತಿಭಿರ್ವೃತಃ ।
ಶ್ರಿಯಾ ವಿರುರುಚೇ ರಾಮೋ ನಕ್ಷತ್ರೈರಿವ ಚಂದ್ರಮಾಃ ॥ ೩೬

ಆದ ಸುಗ್ರೀವನು ಶತ್ರುಂಜಯವೆಂಬ ಪರ್ವತಾಕಾರವಾದ ಆನೆಯನ್ನೇರಿ ಬಂದನು. ಮಾನವರೂಪವನ್ನು ಧರಿಸಿದ ವಾನರರು ಸರ್ವಾಭರಣಭೂಷಿತರಾಗಿ ಒಂಬತ್ತು ಸಾವಿರ ಆನೆಗಳನ್ನೇರಿ ಬಂದರು ! (೩೧–೩೨). ಶಂಖಗಳ ಭೋಂಕಾರ, ಜನಗಳ ಜಯಕಾರ, ದುಂದುಭಿಗಳ ಝುಂಕಾರಗಳೊಡನೆ ಪುರುಷೋತ್ತಮನಾದ ರಘುವೀರನು ಉನ್ನತ ಸೌಧಪಂಕ್ತಿಗಳಿಂದ ವಿರಾಜಿಸುವ ಅಯೋಧ್ಯಾನಗರದ ಕಡೆಗೆ ಪ್ರಯಾಣ ಮಾಡಿದನು (೩೩). ಅಯೋಧ್ಯೆಯಿಂದ ಬರುತ್ತಿದ್ದ ಸುಮಂತ್ರಾದಿ ಮಂತ್ರಿಗಳು ಮಾರ್ಗಮಧ್ಯದಲ್ಲಿ, ಭವ್ಯಾಕೃತಿಯಿಂದ ಬೆಳಗುತ್ತ ಪರಿವಾರ ಸಮೇತನಾಗಿ ಆಗಮಿಸುತ್ತಿದ್ದ ವೀರಾಗ್ರಣಿಯಾದ ರಘುಕುಲತಿಲಕನನ್ನು ಸಂದರ್ಶಿಸಿದರು. ಅವರು ಜಯಕಾರದೊಡನೆ ಕಾಕುತ್ಸ್ಥನನ್ನು ಅಭಿನಂದಿಸಲಾಗಿ, ಆತನು ಮಂತ್ರಿಗಳನ್ನು ಕುಶಲಪ್ರಶ್ನೆಯಿಂದ ಆದರಿಸಿದನು. ಸೋದರರಿಂದ ಪರಿವೃತನಾದ ಆ ಮಹಾಭಾಗನನ್ನು ಹಿಂಬಾಲಿಸಿ ಅವರೆಲ್ಲರೂ ನಡೆದರು (೩೪–೩೫). ಅಮಾತ್ಯರಿಂದಲೂ ಬ್ರಾಹ್ಮಣರಿಂದಲೂ ಪ್ರಜೆಗಳಿಂದಲೂ ಸಮಾವೃತನಾದ ಶ್ರೀರಾಮನು ನಕ್ಷತ್ರಗಳಿಂದ ಸಮಾವೃತನಾದ ಚಂದ್ರಮನಂತೆ ಕಂಗೊಳಿಸುತ್ತಿದ್ದನು. ಮುಂದುಗಡೆಯಲ್ಲಿ ತೂರ್ಯ, ತಾಳ, ಸ್ವಸ್ತಿಕ ಮುಂತಾದ ವಾದ್ಯಗಳನ್ನು ಬಾರಿಸುತ್ತ, ಮಂಗಳ

ಸ ಪುರೋಗಾಮಿಭಿಸ್ತೂರ್ಯೈಸ್ತಾಲಸ್ವಸ್ತಿಕಪಾಣಿಭಿಃ ।
ಪ್ರವ್ಯಾಹರದ್ಭಿರ್ಮುದಿತೈರ್ಮಂಗಲಾನಿ ಯಯೌ ವೃತಃ ॥ ೩೭

ಅಕ್ಷತಂ ಜಾತರೂಪಂ ಚ ಗಾವಃ ಕನ್ಯಾಸ್ತಥಾ ದ್ವಿಜಾಃ ।
ನರಾ ಮೋದಕಹಸ್ತಾಶ್ಚ ರಾಮಸ್ಯ ಪುರತೋ ಯಯುಃ ॥ ೩೮

ಸಖ್ಯಂ ಚ ರಾಮಃ ಸುಗ್ರೀವೇ ಪ್ರಭಾವಂ ಚಾನಿಲಾತ್ಮಜೇ ।
ವಾನರಾಣಾಂ ಚ ತತ್ ಕರ್ಮ ರಾಕ್ಷಸಾನಾಂ ಚ ತದ್ಬಲಮ್ ॥ ೩೯

ವಿಭೀಷಣಸ್ಯ ಸಂಯೋಗಮಾಚಚಕ್ಷೇ ಚ ಮಂತ್ರಿಣಾಮ್ ।
ಶ್ರುತ್ವಾ ತು ವಿಸ್ಮಯಂ ಜಗ್ಮುರಯೋಧ್ಯಾಪುರವಾಸಿನಃ ॥ ೪೦

ದ್ಯುತಿಮಾನೇತದಾಖ್ಯಾಯ ರಾಮೋ ವಾನರಸಂವೃತಃ ।
ಹೃಷ್ಟಪುಷ್ಟಜನಾಕೀರ್ಣಾಮಯೋಧ್ಯಾಂ ಪ್ರವಿವೇಶ ಹ ॥ ೪೧

ತತೋ ಹ್ಯಭ್ಯುಚ್ಛ್ರಯನ್ ಪೌರಾಃ ಪತಾಕಾಸ್ತೇ ಗೃಹೇ ಗೃಹೇ ।
ಐಕ್ಷ್ವಾಕಾಧ್ಯುಷಿತಂ ರಮ್ಯಮಾಸಸಾದ ಪಿತುರ್ಗೃಹಮ್ ॥ ೪೨

ಸ್ತೋತ್ರಗಳನ್ನು ಪಠಿಸುತ್ತ ಜನರು ಸಂತೋಷದಿಂದ ಸಾಗಿದರು (೩೬-೩೭). ಶ್ರೀರಾಮನ ಎದುರಿಗೆ ಗೋವುಗಳೂ ಹೊಂಬಣ್ಣದ ಮಂಗಳಾಕ್ಷತೆಯನ್ನು ಹಿಡಿದ ಕನ್ಯೆಯರೂ ದ್ವಿಜರೂ ಮೋದಕಹಸ್ತರಾದ ಜನರೂ ಮೆರವಣಿಗೆಯಲ್ಲಿ ಹೋಗುತ್ತಿದ್ದರು. ಹೀಗೆ ಹೋಗುತ್ತಿರುವಾಗ ರಾಘವನು, ತನ್ನಲ್ಲಿ ಸುಗ್ರೀವನಿಗಿದ್ದ ದೃಢಸ್ನೇಹವನ್ನೂ ಹನುಮಂತನ ಅಗಾಧ ಸಾಮರ್ಥ್ಯವನ್ನೂ ವಾನರಯೋಧರ ಸಾಹಸಕೃತ್ಯವನ್ನೂ ರಾಕ್ಷಸರ ಬಲಾತಿಶಯವನ್ನೂ ವಿಭೀಷಣನು ತನ್ನೊಡನೆ ಬಂದು ಸೇರಿಕೊಂಡ ವಿಧಾನವನ್ನೂ ಮಂತ್ರಿಗಳಿಗೆ ವಿವರಿಸುತ್ತಿದ್ದನು. ಮಂತ್ರಿಗಳೂ ಅಯೋಧ್ಯಾಪುರವಾಸಿಗಳೂ ಆ ವೃತ್ತಾಂತವನ್ನು ಕೇಳಿ ವಿಸ್ಮಿತರಾದರು (೩೮-೪೦). ತೇಜೋನಿಧಿಯಾದ ಕಾಕುತ್ಸ್ಥನು ಈ ರೀತಿಯಲ್ಲಿ ನಡೆದ ಪ್ರಕರಣವನ್ನು ಹೇಳುತ್ತ, ಹೃಷ್ಟಪುಷ್ಟ ಜನರಿಂದ ತುಂಬಿದ ಅಯೋಧ್ಯಾನಗರವನ್ನು ಪ್ರವೇಶಿಸಿದನು. ಪೌರರು ಮನೆಮನೆಗಳಲ್ಲಿಯೂ ಬಾವುಟಗಳನ್ನು ಹಾರಿಸಿದರು. ಶ್ರೀರಾಮನು ಅಯೋಧ್ಯಾನಗರವನ್ನು ಪ್ರವೇಶಿಸಿ, ಬಹುಕಾಲದಿಂದ ಇಕ್ಷ್ವಾಕುವಂಶದ ದೊರೆಗಳು ವಾಸಿಸುತ್ತಿದ್ದ ರಮಣೀಯವಾದ ತನ್ನ ತಂದೆಯ ಅರಮನೆಯ ಸಮೀಪಕ್ಕೆ ಆಗಮಿಸಿ

ಅಥಾಬ್ರವೀದ್ರಾಜಪುತ್ರೋ ಭರತಂ ಧರ್ಮಿಣಾಂ ವರಮ್ ।
ಅರ್ಥೋಪಹಿತಯಾ ವಾಚಾ ಮಧುರಂ ರಘುನಂದನಃ ॥ ೪೩

ಪಿತುರ್ಭವನಮಾಸಾದ್ಯ ಪ್ರವಿಶ್ಯ ಚ ಮಹಾತ್ಮನಃ ।
ಕೌಸಲ್ಯಾಂ ಚ ಸುಮಿತ್ರಾಂ ಚ ಕೈಕೇಯೀಮಭಿವಾದ್ಯ ಚ ॥ ೪೪

ಯಚ್ಚ ಮದ್ಭವನಂ ಶ್ರೇಷ್ಠಂ ಸಾಶೋಕವನಿಕಂ ಮಹತ್ ।
ಮುಕ್ತಾವೈದೂರ್ಯಸಂಕೀರ್ಣಂ ಸುಗ್ರೀವಾಯ ನಿವೇದಯ ॥ ೪೫

ತಸ್ಯ ತದ್ವಚನಂ ಶ್ರುತ್ವಾ ಭರತಃ ಸತ್ಯವಿಕ್ರಮಃ ।
ಪಾಣೌ ಗೃಹೀತ್ವಾ ಸುಗ್ರೀವಂ ಪ್ರವಿವೇಶ ತಮಾಲಯಮ್ ॥ ೪೬

ತತಸ್ತೈಲಪ್ರದೀಪಾಂಶ್ಚ ಪರ್ಯಂಕಾಸ್ತರಣಾನಿ ಚ ।
ಗೃಹೀತ್ವಾ ವಿವಿಶುಃ ಕ್ಷಿಪ್ರಂ ಶತ್ರುಘ್ನೇನ ಪ್ರಚೋದಿತಾಃ ॥ ೪೭

ಉವಾಚ ಚ ಮಹಾತೇಜಾಃ ಸುಗ್ರೀವಂ ರಾಘವಾನುಜಃ ।
ಅಭಿಷೇಕಾಯ ರಾಮಸ್ಯ ದೂತಾನಾಜ್ಞಾಪಯ ಪ್ರಭೋ ॥ ೪೮

ದನು (೪೧–೪೨). ರಘುನಂದನನಾದ ಆ ರಾಜಕುಮಾರನು ಮಹಾತ್ಮನಾದ ತನ್ನ ತಂದೆಯ ಭವನವನ್ನು ಪ್ರವೇಶಿಸಿ, ಕೌಸಲ್ಯೆ ಸುಮಿತ್ರೆ ಮತ್ತು ಕೈಕೇಯಿಯರಿಗೆ ಅಭಿವಾದನೆಮಾಡಿದನು. ಅನಂತರ ಧರ್ಮನಿಷ್ಠನಾದ ಭರತನನ್ನು ನೋಡಿ ಮಧುರ ವಚನದಿಂದ "ಭರತ, ಅಶೋಕವೃಕ್ಷಗಳಿರುವ ಅಂತಃಪುರೋದ್ಯಾನದಿಂದ ಸಮೇತ ವಾಗಿಯೂ ಮುಕ್ತಾವೈಡೂರ್ಯಗಳಿಂದ ಭೂಷಿತವಾಗಿಯೂ ಇರುವ ಶ್ರೇಷ್ಠವಾದ ನನ್ನ ಮಹಾಭವನ ಉಂಟಷ್ಟೆ, ಅದನ್ನು ತಂಗುವುದಕ್ಕಾಗಿ ಸುಗ್ರೀವನಿಗೆ ಬಿಡಿಸಿ ಕೊಡು" ಎಂದು ತಿಳಿಸಿದನು (೪೩–೪೫). ಶ್ರೀರಾಮನ ಆಜ್ಞೆಯನ್ನು ಕೇಳಿ ಸತ್ಯವಿಕ್ರಮನಾದ ಭರತನು ಸುಗ್ರೀವನನ್ನು ಕೈಹಿಡಿದು ಕರೆದುಕೊಂಡು ಆ ಭವನಕ್ಕೆ ಹೋದನು. ಅಷ್ಟರಲ್ಲಿ ಶತ್ರುಘ್ನನ ಆದೇಶದಂತೆ ಪರಿಚಾರಕರು ತೈಲದೀಪಗಳನ್ನೂ ಮಂಚಗಳನ್ನೂ ವಿವಿಧ ಪೀಠೋಪಕರಣಗಳನ್ನೂ ತೆಗೆದುಕೊಂಡುಹೋಗಿ ಆ ಭವನ ವನ್ನು ಸಜ್ಜುಪಡಿಸಿದರು (೪೬–೪೭). ಹೀಗೆ ವಾನರಾದಿಗಳೆಲ್ಲರೂ ತಂಗಿದಮೇಲೆ ಭರತನು ಸುಗ್ರೀವನನ್ನು ನೋಡಿ "ಸುಗ್ರೀವ, ಶ್ರೀರಾಮನ ಪಟ್ಟಾಭಿಷೇಕಾರ್ಥವಾಗಿ

ಸೌವರ್ಣಾನ್ ವಾನರೇಂದ್ರಾಣಾಂ ಚತುರ್ಣಾಂ ಚತುರೋ ಘಟಾನ್ ।
ದದೌ ಕ್ಷಿಪ್ರಂ ಸ ಸುಗ್ರೀವಃ ಸರ್ವರತ್ನವಿಭೂಷಿತಾನ್ ॥ ೪೯

ಯಥಾ ಪ್ರತ್ಯೂಷಸಮಯೇ ಚತುರ್ಣಾಂ ಸಾಗರಾಂಭಸಾಮ್ ।
ಪೂರ್ಣೈರ್ಘಟೈಃ ಪ್ರತೀಕ್ಷಧ್ವಂ ತಥಾ ಕುರುತ ವಾನರಾಃ ॥ ೫೦

ಏವಮುಕ್ತಾ ಮಹಾತ್ಮಾನೋ ವಾನರಾ ವಾರಣೋಪಮಾಃ ।
ಉತ್ಪೇತುರ್ಗಗನಂ ಶೀಘ್ರಂ ಗರುಡಾನಿಲಶೀಘ್ರಗಾಃ ॥ ೫೧

ಜಾಂಬವಾಂಶ್ಚ ಸುಷೇಣಶ್ಚ ವೇಗದರ್ಶೀ ಚ ವಾನರಃ ।
ಋಷಭಶ್ಚೈವ ಕಲಶಾನ್ ಜಲಪೂರ್ಣಾನಥಾನಯನ್ ॥ ೫೨

ನದೀಶತಾನಾಂ ಪಂಚಾನಾಂ ಜಲಂ ಕುಂಭೇಷು ಚಾಹರನ್ ।
ಪೂರ್ವಾತ್ ಸಮುದ್ರಾತ್ ಕಲಶಂ ಜಲಪೂರ್ಣಮಥಾನಯತ್ ॥ ೫೩

ಸುಷೇಣಃ ಸತ್ತ್ವಸಂಪನ್ನಃ ಸರ್ವರತ್ನವಿಭೂಷಿತಮ್ ।
ಋಷಭೋ ದಕ್ಷಿಣಾತ್ತೂರ್ಣಂ ಸಮುದ್ರಾಜ್ಜಲಮಾಹರತ್ ॥ ೫೪

ಮಂಗಳಜಲವನ್ನು ತರುವುದಕ್ಕೋಸ್ಕರ ನಿನ್ನ ದೂತರಿಗೆ ಆಜ್ಞಾಪಿಸು. ಈ ಕಾರ್ಯದಲ್ಲಿ ನೀನೇ ಸಮರ್ಥ" ಎಂದನು (೪೮). ಆಗ ಸುಗ್ರೀವನು ಸರ್ವರತ್ನಾಲಂಕೃತಗಳಾದ ನಾಲ್ಕು ಸುವರ್ಣಕಲಶಗಳನ್ನು ನಾಲ್ವರು ವಾನರ ಶ್ರೇಷ್ಠರಿಗೆ ಕೊಟ್ಟು "ವಾನರೋತ್ತಮರೆ, ಈ ಕಲಶಗಳಲ್ಲಿ ನಾಲ್ಕು ಸಮುದ್ರಗಳಿಂದಲೂ ವಿವಿಧ ಪುಣ್ಯತೀರ್ಥಗಳಿಂದಲೂ ಜಲವನ್ನು ತುಂಬಿಕೊಂಡು ಬನ್ನಿರಿ. ನಾಳೆ ಬೆಳಗಾಗುವಷ್ಟರಲ್ಲಿ ಬಂದು ನೀವು ಕಾದಿರಬೇಕು" ಎಂದು ತಿಳಿಸಿದನು (೪೯–೫೦). ಸುಗ್ರೀವನ ಆಜ್ಞೆಯನ್ನು ಕೇಳಿ, ಆನೆಗಳಂತೆ ದೃಢಕಾಯರೂ ಗರುಡವಾಯುಗಳಂತೆ ಶೀಘ್ರಗಾಮಿಗಳೂ ಆದ ಬಹುಮಂದಿ ವಾನರರು ಬೇರೆ ಬೇರೆ ಕಲಶಗಳನ್ನು ತೆಗೆದುಕೊಂಡು ಗಗನಮಾರ್ಗವನ್ನಡರಿ ಸಾಗಿದರು. ಅವರೊಡನೆ ಜಾಂಬವಂತ, ಸುಷೇಣ, ವೇಗದರ್ಶಿ ಮತ್ತು ಋಷಭ–ಎಂಬ ಪ್ರಮುಖರೂ ಹೋದರು (೫೧–೫೨). ಆ ವಾನರರು ಐದುನೂರು ಪುಣ್ಯನದಿಗಳಿಂದ ಕಲಶಗಳಲ್ಲಿ ಜಲವನ್ನು ತುಂಬಿ ತಂದರು. ಸತ್ತ್ವಶಾಲಿಯಾದ ಸುಷೇಣನು ಸರ್ವರತ್ನಾಲಂಕೃತವಾದ ಕಲಶದಲ್ಲಿ ಪೂರ್ವಸಮುದ್ರದಿಂದ

ರಕ್ತಚಂದನಶಾಖಾಭಿಃ ಸಂವೃತಂ ಕಾಂಚನಂ ಘಟಮ್ ।
ಗವಯಃ ಪಶ್ಚಿಮಾತ್ತೋಯಮಾಜಹಾರ ಮಹಾರ್ಣವಾತ್ ॥ ೫೫

ರತ್ನಕುಂಭೇನ ಮಹತಾ ಶೀತಂ ಮಾರುತವಿಕ್ರಮಃ ।
ಉತ್ತರಾಚ್ಚ ಜಲಂ ಶೀಘ್ರಂ ಗರುಡಾನಿಲವಿಕ್ರಮಃ ॥ ೫೬

ಆಜಹಾರ ಸ ಧರ್ಮಾತ್ಮಾ ನಲಃ ಸರ್ವಗುಣಾನ್ವಿತಃ ।
ತತಸ್ತೈರ್ವಾನರಶ್ರೇಷ್ಠೈರಾನೀತಂ ಪ್ರೇಕ್ಷ್ಯ ತಜ್ಜಲಮ್ ॥ ೫೭

ಅಭಿಷೇಕಾಯ ರಾಮಸ್ಯ ಶತ್ರುಘ್ನಃ ಸಚಿವೈಃ ಸಹ ।
ಪುರೋಹಿತಾಯ ಶ್ರೇಷ್ಠಾಯ ಸುಹೃದ್ಭ್ಯಶ್ಚ ನ್ಯವೇದಯತ್ ॥ ೫೮

ಜಲವನ್ನು ತಂದನು. ಋಷಭನು ಸುವರ್ಣಕುಂಭದಲ್ಲಿ ದಕ್ಷಿಣಸಮುದ್ರದ ಜಲವನ್ನು ತುಂಬಿ, ರಕ್ತಚಂದನಶಾಖೆಗಳಿಂದ ಆ ಕುಂಭವನ್ನು ಅಲಂಕರಿಸಿಕೊಂಡು ತಂದನು (೫೩–೫೪). ಮಾರುತವಿಕ್ರಮನಾದ ಗವಯನು ದೊಡ್ಡದಾದ ರತ್ನಕುಂಭದಲ್ಲಿ ಪಶ್ಚಿಮಸಾಗರದಿಂದ ಶೀತಲವಾದ ಜಲವನ್ನು ತಂದನು. ಧರ್ಮಾತ್ಮನೂ ಸರ್ವಗುಣಾನ್ವಿತನೂ ಆದ ನಲನು ಗರುಡನಂತೆಯೂ ವಾಯುವಿನಂತೆಯೂ ಅತಿ ಶೀಘ್ರವಾಗಿ ಹಾರುತ್ತಹೋಗಿ ಉತ್ತರಸಾಗರದಿಂದ ಜಲವನ್ನು ತಂದನು (೫೫-೫೬). ಹೀಗೆ ವಾನರೋತ್ತಮರು ಪುಣ್ಯತೀರ್ಥವನ್ನು ತರಲಾಗಿ, ಶತ್ರುಘ್ನನು ಸಚಿವರೊಡನೆ ಹೋಗಿ ಪುರೋಹಿತರಾದ ವಸಿಷ್ಠರಿಗೂ ಮಿತ್ರರಿಗೂ ಶ್ರೀರಾಮನ ಪಟ್ಟಾಭಿಷೇಕವನ್ನು ನೆರವೇರಿಸಬೇಕೆಂದು ನಿವೇದಿಸಿದನು (೫೭–೫೮).

ತತಃ ಸ ಪ್ರಯತೋ ವೃದ್ಧೋ ವಸಿಷ್ಠೋ ಬ್ರಾಹ್ಮಣೈಃ ಸಹ ।
ರಾಮಂ ರತ್ನಮಯೇ ಪೀಠೇ ಸಹಸೀತಂ ನ್ಯವೇಶಯತ್ ॥ ೫೯

ವಸಿಷ್ಠೋ ವಾಮದೇವಶ್ಚ ಜಾಬಾಲಿರಥ ಕಾಶ್ಯಪಃ ।
ಕಾತ್ಯಾಯನಃ ಸುಯಜ್ಞಶ್ಚ ಗೌತಮೋ ವಿಜಯಸ್ತಥಾ ॥ ೬೦

ಅಭ್ಯಷಿಂಚನ್ನರವ್ಯಾಘ್ರಂ ಪ್ರಸನ್ನೇನ ಸುಗಂಧಿನಾ ।
ಸಲಿಲೇನ ಸಹಸ್ರಾಕ್ಷಂ ವಸವೋ ವಾಸವಂ ಯಥಾ ॥ ೬೧

ಋತ್ವಿಗ್ಭಿರ್ಬ್ರಾಹ್ಮಣೈಃ ಪೂರ್ವಂ ಕನ್ಯಾಭಿರ್ಮಂತ್ರಿಭಿಸ್ತಥಾ ।
ಯೋಧೈಶ್ಚೈವಾಭ್ಯಷಿಂಚಂಸ್ತೇ ಸಂಪ್ರಹೃಷ್ಟಾಃ ಸನೈಗಮೈಃ ॥ ೬೨

ಸರ್ವೌಷಧಿರಸೈರ್ದಿವ್ಯೈರ್ದೈವತೈರ್ನಭಸಿ ಸ್ಥಿತೈಃ ।
ಚತುರ್ಭಿರ್ಲೋಕಪಾಲೈಶ್ಚ ಸರ್ವೈರ್ದೇವೈಶ್ಚ ಸಂಗತೈಃ ॥ ೬೩

ಶ್ರೀರಾಮ ಪಟ್ಟಾಭಿಷೇಕ

ಅನಂತರ ಪವಿತ್ರಾತ್ಮರೂ ವೃದ್ಧರೂ ಆದ ವಸಿಷ್ಠಮುನಿಗಳು ಬ್ರಾಹ್ಮಣರೊಡನೆ ಬಂದು, ಸೀತಾಸಮೇತನಾದ ಶ್ರೀರಾಮಚಂದ್ರನನ್ನು ರತ್ನಮಯವಾದ ಪೀಠದಲ್ಲಿ ಕುಳ್ಳಿರಿಸಿದರು. ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ, ಕಾತ್ಯಾಯನ, ಸುಯಜ್ಞ, ಗೌತಮ ಮತ್ತು ವಿಜಯ ಎಂಬ ಮಹರ್ಷಿಗಳು ಶುದ್ಧವೂ ಸುಗಂಧಿಯೂ ಆದ ಪುಣ್ಯಜಲದಿಂದ, ಅಷ್ಟವಸುಗಳು ಸಹಸ್ರಾಕ್ಷನಾದ ಇಂದ್ರನಿಗೆ ಅಭಿಷೇಕ ಮಾಡಿದಂತೆ, ಶ್ರೀರಾಮನಿಗೆ ಅಭಿಷೇಕ ಮಾಡಿದರು (೫೯–೬೦). ಋತ್ವಿಜರಾದ ಬ್ರಾಹ್ಮಣರೂ ಆ ಮಹಾಭಾಗನನ್ನು ಅಭಿಷೇಚಿಸಿದರು. ಅನಂತರ ಕನ್ಯೆಯರು, ಮಂತ್ರಿಗಳು, ಯೋಧರು ಮತ್ತು ವಣಿಗ್ಜನರು ಸಂತೋಷದಿಂದ ಬಂದು ಆ ಪುರುಷೋತ್ತಮನಿಗೆ ಅಭಿಷೇಕ ಮಾಡಿದರು (೬೧–೬೨). ಹಾಗೆಯೇ ನಾಲ್ವರು ದಿಕ್ಪಾಲಕರು ಸಮಸ್ತದೇವತೆಗಳೊಡನೆ ಗಗನಮಾರ್ಗದಲ್ಲಿ ಬಂದು, ಸರ್ವೌಷಧಿಗಳ ದಿವ್ಯರಸದಿಂದ ಸಂಮಿಲಿತವಾದ ಪವಿತ್ರಜಲದಿಂದ ಶ್ರೀರಾಮನನ್ನು ಅಭಿಷೇಚಿಸಿದರು (೬೩).

ಬ್ರಹ್ಮಣಾ ನಿರ್ಮಿತಂ ಪೂರ್ವಂ ಕಿರೀಟಂ ರತ್ನಶೋಭಿತಮ್ ।
ಅಭಿಷಿಕ್ತಃ ಪುರಾ ಯೇನ ಮನುಸ್ತಂ ದೀಪ್ತತೇಜಸಮ್ ॥ ೬೪

ತಸ್ಯಾನ್ವವಾಯೇ ರಾಜಾನಃ ಕ್ರಮಾದ್ಯೇನಾಭಿಷೇಚಿತಾಃ ।
ಸಭಾಯಾಂ ಹೇಮಕ್ಲ್ಪ್ತಾಯಾಂ ಶೋಭಿತಾಯಾಂ ಮಹಾಜನೈಃ ॥

ರತ್ನೈರ್ನಾನಾವಿಧೈಶ್ಚೈವ ಚಿತ್ರಿತಾಯಾಂ ಸುಶೋಭನೈಃ ।
ನಾನಾರತ್ನಮಯೇ ಪೀಠೇ ಕಲ್ಪಯಿತ್ವಾ ಯಥಾವಿಧಿ ॥ ೬೬

ಕಿರೀಟೇನ ತತಃ ಪಶ್ಚಾದ್ವಸಿಷ್ಠೇನ ಮಹಾತ್ಮನಾ ।
ಋತ್ವಿಗ್ಭಿರ್ಭೂಷಣೈಶ್ಚೈವ ಸಮಯೋಕ್ಷ್ಯತ ರಾಘವಃ ॥ ೬೭

ಛತ್ರಂ ತು ತಸ್ಯ ಜಗ್ರಾಹ ಶತ್ರುಘ್ನಃ ಪಾಂಡರಂ ಶುಭಮ್ ।
ಶ್ವೇತಂ ಚ ವಾಲವ್ಯಜನಂ ಸುಗ್ರೀವೋ ವಾನರೇಶ್ವರಃ ॥ ೬೮

ಅಪರಂ ಚಂದ್ರಸಂಕಾಶಂ ರಾಕ್ಷಸೇಂದ್ರೋ ವಿಭೀಷಣಃ ।
ಮಾಲಾಂ ಜ್ವಲಂತೀಂ ವಪುಷಾ ಕಾಂಚನೀಂ ಶತಪುಷ್ಕರಾಮ್ ॥ ೬೯

ಬ್ರಹ್ಮದೇವನು ನಿರ್ಮಿಸಿದ ರತ್ನಶೋಭಿತವಾದ ಒಂದು ದಿವ್ಯ ಕಿರೀಟವಿತ್ತು. ಹಿಂದೆ ಮನುಚಕ್ರವರ್ತಿಯು ಪಟ್ಟಾಭಿಷಿಕ್ತನಾದಾಗ ಆ ಕಿರೀಟವನ್ನು ಧರಿಸಿದ್ದನು. ಆ ಮನುವಂಶದಲ್ಲಿ ಜನಿಸಿದ ನಿಖಿಲನರಪತಿಗಳೂ ಆ ಕಿರೀಟವನ್ನು ಧರಿಸಿ ಪಟ್ಟಾಭಿಷಿಕ್ತರಾಗಿದ್ದರು. ಸುವರ್ಣದಿಂದಲೂ ನಾನಾರತ್ನಗಳಿಂದಲೂ ಭೂಷಿತವಾದ ಸಭಾಮಂದಿರದಲ್ಲಿ ಮಹಾಜನರು ಬಂದು ನೆರೆದಿದ್ದರು (೬೪–೬೫). ಅನಂತರ ನವರತ್ನಖಚಿತವಾದ ಸಿಂಹಾಸನವನ್ನು ಆ ಸಭಾಮಂದಿರದಲ್ಲಿ ತಂದಿರಿಸಿ, ತೇಜೋನಿಧಿಯಾದ ರಘುವೀರನನ್ನು ಮಹಾತ್ಮರಾದ ವಸಿಷ್ಠಮುನಿಗಳು ಶಾಸ್ತ್ರೋಕ್ತವಿಧಾನದಿಂದ ಕರೆತಂದು ಆ ಪೀಠದಲ್ಲಿ ಕುಳ್ಳಿರಿಸಿದರು. ಪೂರ್ವೋಕ್ತವಾದ ದಿವ್ಯಕಿರೀಟವನ್ನು ವಸಿಷ್ಠರು ಶ್ರೀರಾಮಚಂದ್ರನ ಶಿರಸ್ಸಿನಲ್ಲಿಟ್ಟು ಪಟ್ಟಾಭಿಷೇಕವಿಧಿಯನ್ನು ನಡೆಸಿದರು. ಋತ್ವಿಜರು ವಿವಿಧಭೂಷಣಗಳಿಂದ ರಘುಕುಲತಿಲಕನನ್ನು ಅಲಂಕರಿಸಿದರು (೬೬–೬೭). ಶತ್ರುಘ್ನನು ಶ್ವೇತಚ್ಛತ್ರವನ್ನು ಹಿಡಿದನು. ವಾನರೇಂದ್ರನಾದ ಸುಗ್ರೀವನು ಶ್ರೀರಾಮನ ಒಂದು ಪಾರ್ಶ್ವದಲ್ಲಿ ಬಿಳಿಯ ಚಾಮರವನ್ನು ಬೀಸುತ್ತಿದ್ದನು. ರಾಕ್ಷಸೇಂದ್ರನಾದ ವಿಭೀಷಣನು ಮತ್ತೊಂದು ಪಾರ್ಶ್ವದಲ್ಲಿ ಚಂದ್ರಸಂಕಾಶವಾದ ಚಾಮರವನ್ನು

ರಾಘವಾಯ ದದೌ ವಾಯುರ್ವಾಸವೇನ ಪ್ರಚೋದಿತಃ ।
ಸರ್ವರತ್ನಸಮಾಯುಕ್ತಂ ಮಣಿರತ್ನವಿಭೂಷಿತಮ್ ॥ ೭೦

ಮುಕ್ತಾಹಾರಂ ನರೇಂದ್ರಾಯ ದದೌ ಶಕ್ರಪ್ರಚೋದಿತಃ ।
ಪ್ರಜಗುರ್ದೇವಗಂಧರ್ವಾ ನನೃತುಶ್ಚಾಪ್ಸರೋಗಣಾಃ ॥ ೭೧

ಅಭಿಷೇಕೇ ತದರ್ಹಸ್ಯ ತದಾ ರಾಮಸ್ಯ ಧೀಮತಃ ।
ಭೂಮಿಃ ಸಸ್ಯವತೀ ಚೈವ ಫಲವಂತಶ್ಚ ಪಾದಪಾಃ ॥ ೭೨

ಗಂಧವಂತಿ ಚ ಪುಷ್ಪಾಣಿ ಬಭೂವೂ ರಾಘವೋತ್ಸವೇ ।
ಸಹಸ್ರಶತಮಶ್ವಾನಾಂ ಧೇನೂನಾಂ ಚ ಗವಾಂ ತಥಾ ॥ ೭೩

ದದೌ ಶತಂ ವೃಷಾನ್ ಪೂರ್ವಂ ದ್ವಿಜೇಭ್ಯೋ ಮನುಜರ್ಷಭಃ ।
ತ್ರಿಂಶತ್ಕೋಟೀರ್ಹಿರಣ್ಯಸ್ಯ ಬ್ರಾಹ್ಮಣೇಭ್ಯೋ ದದೌ ಪುನಃ ॥ ೭೪

ಬೀಸುತ್ತಿದ್ದನು (೬೮-೬೯). ಆಗ ವಾಯುದೇವನು ದೇವೇಂದ್ರನಿಂದ ಪ್ರೇರಿತನಾಗಿ ಬಂದು, ನೂರು ಚಿನ್ನದ ಕಮಲಗಳಿಂದ ಭೂಷಿತವೂ ಸುವರ್ಣಮಯವೂ ಆದ ಒಂದು ಮುಕ್ತಾಹಾರವನ್ನು ಶ್ರೀರಾಮನಿಗೆ ಸಮರ್ಪಿಸಿದನು. ಜಗಜಗಿಸುತ್ತಿದ್ದ ಆ ಮುತ್ತಿನ ಸರವು ನವರತ್ನಗಳಿಂದ ಅಲಂಕೃತವಾಗಿತ್ತು.* ಅದರ ಮಧ್ಯದಲ್ಲಿ ಶ್ರೇಷ್ಠವಾದ ಒಂದು ನಾಯಕಮಣಿಯು ವಿರಾಜಿಸುತ್ತಿತ್ತು. ಆ ಮಹೋತ್ಸವದಲ್ಲಿ ದೇವಗಂಧರ್ವರು ಹಾಡಿದರು. ಅಪ್ಸರೆಯರು ಕುಣಿದರು (೭೦-೭೧). ಧೀಮಂತನಾದ ಶ್ರೀರಾಮಚಂದ್ರನು ರಾಜಾಧಿರಾಜನಾಗಿ ಪಟ್ಟಾಭಿಷಿಕ್ತನಾಗಲು, ಭೂಮಿಯು ಸಸ್ಯಸಮೃದ್ಧವಾಯಿತು. ಮರಗಳಲ್ಲಿ ಹಣ್ಣುಗಳು ತುಂಬಿದವು. ಸುಗಂಧಮಯವಾದ ಹೂಗಳು ಅರಳಿದವು. ಆ ಮಹೋತ್ಸವದ ಸಮಯದಲ್ಲಿ ಪುರುಷೋತ್ತಮನಾದ ಶ್ರೀರಾಮನು ದ್ವಿಜೋತ್ತಮರಿಗೆ ಅಶ್ವಗಳು, ಹಾಲುಕರೆಯುವ ಹಸುಗಳು ಮತ್ತು ವೃಷಭಗಳನ್ನು ಲಕ್ಷಗಟ್ಟಲೆ ದಾನಮಾಡಿದನು. ಮೂವತ್ತುಕೋಟಿ ಚಿನ್ನದ ನಾಣ್ಯಗಳನ್ನು ಬ್ರಾಹ್ಮಣರಿಗೆ ಕೊಟ್ಟು ಸಂಭಾವಿಸಿದನು (೭೨-೭೪).

---

* ಚಿನ್ನದ ಸರ, ಮುತ್ತಿನ ಸರ—ಹೀಗೆ ಎರಡು ಹಾರಗಳನ್ನು ವಾಯುವು ಕೊಟ್ಟನೆಂದು ಕೆಲವರು ಹೇಳುತ್ತಾರೆ.

ನಾನಾಭರಣವಸ್ತ್ರಾಣಿ ಮಹಾರ್ಹಾಣಿ ಚ ರಾಘವಃ ।
ಅರ್ಕರಶ್ಮಿಪ್ರತೀಕಾಶಾಂ ಕಾಂಚನೀಂ ಮಣಿವಿಗ್ರಹಾಮ್ ॥ ೭೫

ಸುಗ್ರೀವಾಯ ಸ್ರಜಂ ದಿವ್ಯಾಂ ಪ್ರಾಯಚ್ಛನ್ಮನುಜರ್ಷಭಃ ।
ವೈದೂರ್ಯಮಣಿಚಿತ್ರೇ ಚ ಚಂದ್ರರಶ್ಮಿವಿಭೂಷಿತೇ ॥ ೭೬

ವಾಲಿಪುತ್ರಾಯ ಧೃತಿಮಾನಂಗದಾಯಾಂಗದೇ ದದೌ ।
ಮಣಿಪ್ರವರಜುಷ್ಟಂ ಚ ಮುಕ್ತಾಹಾರಮನುತ್ತಮಮ್ ॥ ೭೭

ಸೀತಾಯೈ ಪ್ರದದೌ ರಾಮಶ್ಚಂದ್ರರಶ್ಮಿಸಮಪ್ರಭಮ್ ।
ಅರಜೇ ವಾಸಸೀ ದಿವ್ಯೇ ಶುಭಾನ್ಯಾಭರಣಾನಿ ಚ ॥ ೭೮

ಅವೇಕ್ಷಮಾಣಾ ವೈದೇಹೀ ಪ್ರದದೌ ವಾಯುಸೂನವೇ ।
ಅವಮುಚ್ಯಾತ್ಮನಃ ಕಂಠಾದ್ಧಾರಂ ಜನಕನಂದಿನೀ ॥ ೭೯

ಅವೈಕ್ಷತ ಹರೀನ್ ಸರ್ವಾನ್ ಭರ್ತಾರಂ ಚ ಮುಹುರ್ಮುಹುಃ ।
ತಾಮಿಂಗಿತಜ್ಞಃ ಸಂಪ್ರೇಕ್ಷ್ಯ ಬಭಾಷೇ ಜನಕಾತ್ಮಜಾಮ್ ॥ ೮೦

ಅಲ್ಲದೆ ನಾನಾಬಗೆಯ ಒಡವೆಗಳನ್ನೂ ಬೆಲೆಬಾಳುವ ವಸ್ತ್ರಗಳನ್ನೂ ದಾನಮಾಡಿದನು. ಅನಂತರ ಸೂರ್ಯರಶ್ಮಿಯಂತೆ ಹೊಳೆಹೊಳೆಯುತ್ತಿದ್ದ ಮಣಿಖಚಿತವಾದ ಒಂದು ದಿವ್ಯಕಾಂಚನಮಾಲೆಯನ್ನು ಸುಗ್ರೀವನಿಗೆ ಕೊಟ್ಟು ಸಮ್ಮಾನಿಸಿದನು. ರಾಘವನು ಅಂಗದನಿಗೆ ವೈಡೂರ್ಯಮಣಿರಂಜಿತವೂ ಚಂದ್ರರಶ್ಮಿಯಂತೆ ರಮಣೀಯವೂ ಆದ ಎರಡು ಭುಜಕೀರ್ತಿಗಳನ್ನು ನೀಡಿ ಬಹುಮಾನಿಸಿದನು (೭೫–೭೬). ಆಮೇಲೆ ಶ್ರೀರಾಮನು ದಿವ್ಯರತ್ನ ವಿಭೂಷಿತವೂ ಶಶಿಕಿರಣದಂತೆ ಶುಭ್ರವೂ ಅತ್ಯುತ್ತಮವೂ ಆದ ಒಂದು ಮುತ್ತಿನಸರವನ್ನು ಜಾನಕಿಯ ಕೊರಳಿಗೆ ಹಾಕಿ, ಸ್ವಚ್ಛವೂ ದೇವಯೋಗ್ಯವೂ ಆದ ಎರಡು ಸೀರೆಗಳನ್ನೂ ಶ್ರೇಷ್ಠವಾದ ಆಭರಣಗಳನ್ನೂ ಅವಳಿಗೆ ನೀಡಿದನು (೭೭–೭೮). ಆಗ ಜನಕನಂದಿನಿಯು ಆ ಮುತ್ತಿನ ಸರವನ್ನು ತನ್ನ ಕೊರಳಿಂದ ತೆಗೆದು, ಒಮ್ಮೆ ಪತಿಯ ಮುಖವನ್ನೂ ಒಮ್ಮೆ ವಾನರಸಮೂಹವನ್ನೂ ನೋಡತೊಡಗಿದಳು! ಇಂಗಿತಜ್ಞನಾದ ಶ್ರೀರಾಮನು ಜಾನಕಿಯ ಆಶಯವನ್ನೂಹಿಸಿ “ದೇವಿ, ಯಾರ ವಿಷಯದಲ್ಲಿ ನೀನು ಸಂತುಷ್ಟಳಾಗಿರುವೆಯೋ ಅವನಿಗೆ ಈ ಹಾರವನ್ನು ಅರ್ಪಿಸು! (೭೯–೮೦).

ವಾಮೇ ಭೂಮಿಸುತಾ ಪುರಶ್ಚ ಹನುಮಾನ್ ಪಶ್ಚಾತ್ ಸುಮಿತ್ರಾಸುತಃ
ಶತ್ರುಘ್ನೋ ಭರತಶ್ಚ ಪಾರ್ಶ್ವದಲಯೋರ್ವಾಯ್ವಾದಿಕೋಣೇಷು ಚ ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ ಶ್ಯಾಮಲಮ್ ॥

ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ ।
ತೇಜೋಧೃತಿರ್ಯಶೋ ದಾಕ್ಷ್ಯಂ ಸಾಮರ್ಥ್ಯಂ ವಿನಯೋ ನಯಃ ॥

ಪೌರುಷಂ ವಿಕ್ರಮೋ ಬುದ್ಧಿರ್ಯಸ್ಮಿನ್ನೇತಾನಿ ನಿತ್ಯದಾ ।
ದದೌ ಸಾ ವಾಯುಪುತ್ರಾಯ ತಂ ಹಾರಮಸಿತೇಕ್ಷಣಾ ॥ ೮೨

ಹನುಮಾಂಸ್ತೇನ ಹಾರೇಣ ಶುಶುಭೇ ವಾನರರ್ಷಭಃ ।
ಚಂದ್ರಾಂಶುಚಯಗೌರೇಣ ಶ್ವೇತಾಭ್ರೇಣ ಯಥಾಚಲಃ ॥ ೮೩

ತತೋ ದ್ವಿವಿದಮೈಂದಾಭ್ಯಾಂ ನೀಲಾಯ ಚ ಪರಂತಪಃ ।
ಸರ್ವಾನ್ ಕಾಮಗುಣಾನ್ ವೀಕ್ಷ್ಯ ಪ್ರದದೌ ವಸುಧಾಧಿಪಃ ॥ ೮೪

ಸರ್ವೇ ವಾನರವೃದ್ಧಾಶ್ಚ ಯೇ ಚಾನ್ಯೇ ವಾನರೇಶ್ವರಾಃ ।
ವಾಸೋಭಿರ್ಭೂಷಣೈಶ್ಚೈವ ಯಥಾರ್ಹಂ ಪ್ರತಿಪೂಜಿತಾಃ ॥ ೮೫

ಯಾರಲ್ಲಿ ತೇಜಸ್ಸು, ಧೈರ್ಯ, ಯಶಸ್ಸು, ದಕ್ಷತೆ, ಸಾಮರ್ಥ್ಯ, ನಯ, ವಿನಯಗಳೂ ಬುದ್ಧಿ, ಪೌರುಷ, ಪರಾಕ್ರಮಗಳೂ ಸದಾ ನೆಲೆಸಿವೆಯೋ ಆತನಿಗೆ ಈ ಹಾರವನ್ನು ಬಹುಮಾನಿಸು" ಎಂದು ನುಡಿದನು. ಆ ನೀಲಲೋಚನೆಯು ಹನುಮಂತನನ್ನು ಕರೆದು ದಿವ್ಯವಾದ ಆ ಮುಕ್ತಾಹಾರವನ್ನು ನೀಡಿದಳು !* (೮೧–೮೨). ವಾನರೋತ್ತಮನಾದ ಹನುಮಂತನು ಚಂದ್ರಕಿರಣಗಳ ಸಮುದಾಯವೋ ಎಂಬಂತೆ ಶುಭ್ರವಾದ ಆ ಮುಕ್ತಾಹಾರವನ್ನು ತನ್ನ ಕೊರಳಲ್ಲಿ ಧರಿಸಿ, ಬಿಳಿಯ ಮೋಡದಿಂದೊಪ್ಪುವ ಗಿರಿರಾಜನಂತೆ ಕಂಗೊಳಿಸಿದನು (೮೩). ಅನಂತರ ವಸುಧೇಶ್ವರನಾದ ಶ್ರೀರಾಮನು ಮೈಂದ, ದ್ವಿವಿದ, ನೀಲ–ಮೊದಲಾದ ವಾನರವೀರರಿಗೂ, ವಾನರವೃದ್ಧರಿಗೂ, ಯೂಥಪಾಲರಿಗೂ ಶ್ರೇಷ್ಠವಾದ ವಸ್ತ್ರಭೂಷಣಾದಿಗಳನ್ನಿತ್ತು ಯಥಾಯೋಗ್ಯವಾಗಿ ಸತ್ಕರಿಸಿದನು (೮೪–೮೫).

---

* ಲಂಕೆಯಲ್ಲಿ ಸೀತೆಯನ್ನು ಕಾಣದೆ ಹನುಮಂತನು ನಿರ್ವಿಣ್ಣನಾಗಿ 'ನನಗೆ ಯಶೋಮಾಲಿಕೆಯು ಲಭಿಸಲಿಲ್ಲ' ಎಂದು ಚಿಂತಿಸುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು (ಸುಂದರ, ೧೩-೪೪,೪೫).

ವಿಭೀಷಣೋಽಥ ಸುಗ್ರೀವೋ ಹನುಮಾನ್ ಜಾಂಬವಾಂಸ್ತಥಾ ।
ಸರ್ವೇ ವಾನರಮುಖ್ಯಾಶ್ಚ ರಾಮೇಣಾಕ್ಲಿಷ್ಟಕರ್ಮಣಾ ॥ ೮೬

ಯಥಾರ್ಹಂ ಪೂಜಿತಾಃ ಸರ್ವೇ ಕಾಮೈ ರತ್ನೈಶ್ಚ ಪುಷ್ಕಲೈಃ ।
ಪ್ರಹೃಷ್ಟಮನಸಃ ಸರ್ವೇ ಜಗ್ಮುರೇವ ಯಥಾಗತಮ್ ॥ ೮೭

ನತ್ವಾ ಸರ್ವೇ ಮಹಾತ್ಮಾನಂ ತತಸ್ತೇ ಪ್ಲವಗರ್ಷಭಾಃ ।
ವಿಸೃಷ್ಟಾಃ ಪಾರ್ಥಿವೇಂದ್ರೇಣ ಕಿಷ್ಕಿಂಧಾಮಭ್ಯುಪಾಗಮನ್ ॥ ೮೮

ಸುಗ್ರೀವೋ ವಾನರಶ್ರೇಷ್ಠೋ ದೃಷ್ಟ್ವಾ ರಾಮಾಭಿಷೇಚನಮ್ ।
ಪೂಜಿತಶ್ಚೈವ ರಾಮೇಣ ಕಿಷ್ಕಿಂಧಾಂ ಪ್ರಾವಿಶತ್ ಪುರೀಮ್ ॥ ೮೯

ವಿಭೀಷಣೋಽಪಿ ಧರ್ಮಾತ್ಮಾ ಸಹ ತೈರ್ನೈರ್ಋತರ್ಷಭೈಃ ।
ಲಬ್ಧ್ವಾ ಕುಲಧನಂ ರಾಜಾ ಲಂಕಾಂ ಪ್ರಾಯಾದ್ವಿಭೀಷಣಃ ॥ ೯೦

ವಿಭೀಷಣ, ಸುಗ್ರೀವ, ಹನುಮಂತ, ಜಾಂಬವಂತ ಮೊದಲಾದ ಪ್ರಮುಖರೂ ಸಮಸ್ತವಾನರಯೋಧರೂ ಧರ್ಮಾತ್ಮನಾದ ಶ್ರೀರಾಮನಿಂದ ಯಥಾರ್ಹವಾದ ಪಾರಿತೋಷಿಕಗಳನ್ನು ಪಡೆದು ಸಮ್ಮಾನಿತರಾದರು. ಸಮಸ್ತರೂ ಅಭೀಷ್ಟವಾದ ರತ್ನಾದಿ ದ್ರವ್ಯಗಳನ್ನು ಪುಷ್ಕಳವಾಗಿ ಪಡೆದು ಸಂತೃಪ್ತರಾದರು (೮೬–೮೭). ಪಟ್ಟಾಭಿಷೇಕಮಹೋತ್ಸವವು ಮುಗಿದಮೇಲೆ ನಿಖಿಲವಾನರೂ ಸಂತುಷ್ಟ ಹೃದಯರಾಗಿ, ಮಹಾರಾಜನಾದ ಶ್ರೀರಾಮನನ್ನು ಕಂಡು ವಂದಿಸಿ ಬೀಳ್ಕೊಂಡು, ಕಿಷ್ಕಿಂಧೆಯೇ ಮೊದಲಾದ ತಮ್ಮ ಸ್ಥಳಗಳಿಗೆ ತೆರಳಿದರು (೮೮). ಕಪೀಂದ್ರನಾದ ಸುಗ್ರೀವನು ಶ್ರೀರಾಮನ ಪಟ್ಟಾಭಿಷೇಕವಿಧಿಯನ್ನು ವೀಕ್ಷಿಸಿ, ಶ್ರೀರಾಮನಿಂದ ಸತ್ಕೃತನಾಗಿ, ತನ್ನ ನಗರಿಯಾದ ಕಿಷ್ಕಿಂಧೆಗೆ ಪ್ರಯಾಣಮಾಡಿದನು. ಧರ್ಮಾತ್ಮನಾದ ವಿಭೀಷಣನೂ ತನ್ನ ಸಚಿವರೊಡನೆ ರಾಘವನನ್ನು ಬೀಳ್ಕೊಂಡು, ಆತನ ಅನುಗ್ರಹದಿಂದ ಕುಲಧನವಾದ* ಸ್ವರಾಜ್ಯವನ್ನು ಪಡೆದು ಲಂಕೆಗೆ ನಿರ್ಗಮಿಸಿದನು (೮೯–೯೦).

---

* ಅನುಬಂಧವನ್ನು ನೋಡಿ.

ಸ ರಾಜ್ಯಮಖಿಲಂ ಶಾಸನ್ನಿಹತಾರಿರ್ಮಹಾಯಶಾಃ ।
ರಾಘವಃ ಪರಮೋದಾರೋ ರರಾಜ ಪರಯಾ ಮುದಾ ॥ ೯೧

ಉವಾಚ ಲಕ್ಷ್ಮಣಂ ರಾಮೋ ಧರ್ಮಜ್ಞಂ ಧರ್ಮವತ್ಸಲಃ ॥

ಆತಿಷ್ಠ ಧರ್ಮಜ್ಞ ಮಯಾ ಸಹೇಮಾಂ
ಗಾಂ ಪೂರ್ವರಾಜಾಧ್ಯುಷಿತಾಂ ಬಲೇನ ।
ತುಲ್ಯಂ ಮಯಾ ತ್ವಂ ಪಿತೃಭಿರ್ಧೃತಾ ಯಾ
ತಾಂ ಯೌವರಾಜ್ಯೇ ಧುರಮುದ್ವಹಸ್ವ ॥ ೯೨

ಸರ್ವಾತ್ಮನಾ ಪರ್ಯನುನೀಯಮಾನೋ
ಯದಾ ನ ಸೌಮಿತ್ರಿರುಪೈತಿ ಯೋಗಮ್ ।
ನಿಯುಜ್ಯಮಾನೋಽಪಿ ಚ ಯೌವರಾಜ್ಯೇ
ತತೋಽಭ್ಯಷಿಂಚದ್ಭರತಂ ಮಹಾತ್ಮಾ ॥ ೯೩

ಈ ಪ್ರಕಾರದಲ್ಲಿ ಪರಮೋದಾರನೂ ಮಹಾಕೀರ್ತಿಶಾಲಿಯೂ ಆದ ರಘುಕುಲೋತ್ತಮನು ಪಟ್ಟಾಭಿಷಿಕ್ತನಾಗಿ ನಿಖಿಲಕೋಸಲರಾಜ್ಯವನ್ನೂ ಪಾಲಿಸುತ್ತ ಆನಂದದಿಂದಿದ್ದನು (೯೧). ಅನಂತರ ಧರ್ಮಶೀಲನಾದ ಶ್ರೀರಾಮನು ಧರ್ಮಜ್ಞನಾದ ಲಕ್ಷ್ಮಣನನ್ನು ನೋಡಿ "ವತ್ಸ–ಲಕ್ಷ್ಮಣ, ಈ ರಾಜ್ಯವು ನಮ್ಮ ಪೂರ್ವಜರಿಂದ ಆಳಲ್ಪಡುತ್ತ ಬಂದಿದೆ. ಇದರ ಆಡಳಿತದಲ್ಲಿ ನನಗೆ ನೆರವಾಗು. ಶೌರ್ಯದಲ್ಲಿ ನೀನು ನನಗೆ ಸಮನಾಗಿದ್ದೀಯೆ. ಆದ್ದರಿಂದ, ಲಕ್ಷ್ಮಣ, ಯುವರಾಜಪದವಿಯನ್ನು* ಸ್ವೀಕರಿಸು" ಎಂದನು (೯೨). ಆದರೆ ಸುಮಿತ್ರಾತನಯನು ಅದಕ್ಕೊಪ್ಪಲಿಲ್ಲ. ಎಷ್ಟು ಅನುನಯದಿಂದ ಹೇಳಿದರೂ ಯುವರಾಜನಾಗುವುದಕ್ಕೆ ಲಕ್ಷ್ಮಣನು ಸಮ್ಮತಿಸಲಿಲ್ಲ. ಆಗ ಶ್ರೀರಾಮನು ಭರತನಿಗೆ ಯುವರಾಜಪದವಿಯನ್ನಿತ್ತನು (೯೩).

---

* 'ಲಕ್ಷ್ಮಣೇಮಾಂ ಮಯಾ ಸಾರ್ಧಂ ಪ್ರಶಾಧಿ ತ್ವಂ ವಸುಂಧರಾಮ್' ಎಂದು ಅಯೋಧ್ಯಾಕಾಂಡದಲ್ಲಿ (ಸ. ೫, ಶ್ಲೋ. ೪೩) ಶ್ರೀರಾಮನು ಆಡಿದ ವಚನವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

*

ಪೌಂಡರೀಕಾಶ್ವಮೇಧಾಭ್ಯಾಂ ವಾಜಪೇಯೇನ ಚಾಸಕೃತ್ ।
ಅನ್ಯೈಶ್ಚ ವಿವಿಧೈರ್ಯಜ್ಞೈರಯಜತ್ ಪಾರ್ಥಿವಾತ್ಮಜಃ ॥ ೯೪

ರಾಜ್ಯಂ ದಶ ಸಹಸ್ರಾಣಿ ಪ್ರಾಪ್ಯ ವರ್ಷಾಣಿ ರಾಘವಃ ।
ಶತಾಶ್ವಮೇಧಾನಾಜಹ್ರೇ ಸದಶ್ವಾನ್ ಭೂರಿದಕ್ಷಿಣಾನ್ ॥ ೯೫

ಆಜಾನುಲಂಬಬಾಹುಃ ಸ ಮಹಾಸ್ಕಂಧಃ ಪ್ರತಾಪವಾನ್ ।
ಲಕ್ಷ್ಮಣಾನುಚರೋ ರಾಮಃ ಪೃಥಿವೀಮನ್ವಪಾಲಯತ್ ॥ ೯೬

ರಾಘವಶ್ಚಾಪಿ ಧರ್ಮಾತ್ಮಾ ಪ್ರಾಪ್ಯ ರಾಜ್ಯಮನುತ್ತಮಮ್ ।
ಈಜೇ ಬಹುವಿಧೈರ್ಯಜ್ಞೈಃ ಸಸುಹೃಜ್ಜ್ಞಾತಿಬಾಂಧವೈಃ ॥ ೯೭

ನ ಪರ್ಯದೇವನ್ ವಿಧವಾ ನ ಚ ವ್ಯಾಲಕೃತಂ ಭಯಮ್ ।
ನ ವ್ಯಾಧಿಜಂ ಭಯಂ ವಾಪಿ ರಾಮೇ ರಾಜ್ಯಂ ಪ್ರಶಾಸತಿ ॥ ೯೮

ನಿರ್ದಸ್ಯುರಭವಲ್ಲೋಕೋ ನಾನರ್ಥಃ ಕಂಚಿದಸ್ಪೃಶತ್ ।
ನ ಚ ಸ್ಮ ವೃದ್ಧಾ ಬಾಲಾನಾಂ ಪ್ರೇತಕಾರ್ಯಾಣಿ ಕುರ್ವತೇ ॥ ೯೯

ಹೀಗೆ ರಾಜ್ಯವನ್ನಾಳುತ್ತ ಶ್ರೀರಾಮನು ಪೌಂಡರೀಕ, ಅಶ್ವಮೇಧ, ವಾಜಪೇಯ ಮುಂತಾದ ಅನೇಕ ಯಾಗಗಳನ್ನಾಚರಿಸಿದನು. ಹತ್ತುಸಾವಿರ ವರ್ಷಗಳವರೆಗೆ ರಾಘವನು ರಾಜ್ಯವನ್ನು ಪಾಲಿಸುತ್ತ ನೂರು ಅಶ್ವಮೇಧಗಳನ್ನಾಚರಿಸಿ ಭೂರಿದಕ್ಷಿಣೆಗಳನ್ನಿತ್ತನು (೯೪–೯೫). ಆಜಾನುಬಾಹುವೂ ಮಹಾಸ್ಕಂಧನೂ ಪ್ರತಾಪಶಾಲಿಯೂ ಆದ ಶ್ರೀರಾಮಭದ್ರನು ವಿಶೇಷವಾಗಿ ಲಕ್ಷ್ಮಣಸಮೇತನಾಗಿಯೇ ಇರುತ್ತ ಪ್ರಜಾಪಾಲನೆಯಲ್ಲಿ ನಿರತನಾಗಿದ್ದನು. ಆ ಧರ್ಮಾತ್ಮನು ಪರಂಪರಾಪ್ರಾಪ್ತವಾದ ತನ್ನ ಉತ್ತಮರಾಜ್ಯವನ್ನು ಪಡೆದು, ಮಿತ್ರರಿಂದಲೂ ಬಂಧುಬಾಂಧವರಿಂದಲೂ ಪರಿವೃತನಾಗಿ, ಬಹುವಿಧ ಯಜ್ಞಗಳನ್ನು ನಡೆಸಿದನು (೯೬–೯೭). ಶ್ರೀರಾಮಚಂದ್ರನು ರಾಜ್ಯಭಾರವನ್ನು ಮಾಡುತ್ತಿರುವಾಗ, ರಾಷ್ಟ್ರದಲ್ಲಿ ಸ್ತ್ರೀಯರು ವಿಧವೆಯರಾಗಿ ಶೋಕಿಸುವ ಪ್ರಸಂಗವು ಬರಲಿಲ್ಲ. ಕ್ರೂರಜಂತುಗಳ ಹಾವಳಿ ಇರಲಿಲ್ಲ. ಪ್ರಜೆಗಳಿಗೆ ರೋಗಗಳ ಭಯವು ಸಂಭವಿಸಲಿಲ್ಲ (೯೮). ದೇಶದಲ್ಲಿ ಕಳ್ಳಕಾಕರು ಸುಳಿಯಲಿಲ್ಲ. ಯಾರಿಗೂ ಯಾವ ವಿಪತ್ತೂ ಒದಗಲಿಲ್ಲ. ಹಿರಿಯರು ಕಿರಿಯರ ಉತ್ತರಕ್ರಿಯೆಗಳನ್ನು ನಡೆಸಬೇಕಾದ ದುಃಖಸಂದರ್ಭವೇ ಘಟಿಸಲಿಲ್ಲ (೯೯).

ಸರ್ವಂ ಮುದಿತಮೇವಾಸೀತ್ ಸರ್ವೋ ಧರ್ಮಪರೋಽಭವತ್ ।
ರಾಮಮೇವಾನುಪಶ್ಯಂತೋ ನಾಭ್ಯಹಿಂಸನ್ ಪರಸ್ಪರಮ್ ॥ ೧೦೦

ಆಸನ್ ವರ್ಷಸಹಸ್ರಾಣಿ ತಥಾ ಪುತ್ರಸಹಸ್ರಿಣಃ ।
ನಿರಾಮಯಾ ವಿಶೋಕಾಶ್ಚ ರಾಮೇ ರಾಜ್ಯಂ ಪ್ರಶಾಸತಿ ॥ ೧೦೧

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ ।
ರಾಮಭೂತಂ ಜಗದಭೂದ್ರಾಮೇ ರಾಜ್ಯಂ ಪ್ರಶಾಸತಿ ॥ ೧೦೨

ನಿತ್ಯಪುಷ್ಪಾ ನಿತ್ಯಫಲಾಸ್ತರವಃ ಸ್ಕಂಧವಿಸ್ತೃತಾಃ ।
ಕಾಲೇ ವರ್ಷೀ ಚ ಪರ್ಜನ್ಯಃ ಸುಖಸ್ಪರ್ಶಶ್ಚ ಮಾರುತಃ ॥ ೧೦೩

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಲೋಭವಿವರ್ಜಿತಾಃ ।
ಸ್ವಕರ್ಮಸು ಪ್ರವರ್ತಂತೇ ತುಷ್ಟಾಃ ಸ್ವೈರೇವ ಕರ್ಮಭಿಃ ॥ ೧೦೪

ರಾಮರಾಜ್ಯದಲ್ಲಿ ಸಕಲವೂ ಸಂತೋಷದ ನೆಲೆಯಾಗಿತ್ತು. ನಿಖಿಲ ಜನರೂ ಧರ್ಮನಿಷ್ಠರಾಗಿ ಬಾಳುತ್ತಿದ್ದರು. ಅಖಿಲ ಪ್ರಜೆಗಳೂ ಶ್ರೀರಾಮನನ್ನು ಆದರ್ಶ ಪುರುಷನನ್ನಾಗಿ ತಿಳಿದು, ಆತನ ಮನಸ್ಸಿಗೆ ವಿಷಾದವಾದೀತೆಂದು ಎಣಿಸಿ, ಯಾವ ಸಂದರ್ಭದಲ್ಲಿಯೂ ಒಬ್ಬರಿಗೊಬ್ಬರು ತೊಂದರೆ ಕೊಡುತ್ತಿರಲಿಲ್ಲ (೧೦೦). ಶ್ರೀರಾಮಭದ್ರನ ರಾಜ್ಯಭಾರದಲ್ಲಿ ಜನರು ಸಾವಿರಾರು ವರ್ಷಗಳ ವರೆಗೆ ದೀರ್ಘಾಯುಷ್ಕರಾಗಿ ಬಾಳಿದರು. ಸಾವಿರಾರು ಮಕ್ಕಳನ್ನೂ ಮೊಮ್ಮಕ್ಕಳನ್ನೂ ಕಂಡರು. ಆಧಿವ್ಯಾಧಿಗಳ ಅಂಜಿಕೆಯಿಲ್ಲದೆ ಸುಖದಿಂದ ಜೀವಿಸಿದರು (೧೦೧). ಶ್ರೀರಾಮಚಂದ್ರನು ರಾಜ್ಯವನ್ನಾಳುತ್ತಿರುವಾಗ ಪ್ರಜೆಗಳು ಎಲ್ಲೆಲ್ಲಿಯೂ 'ರಾಮ, ರಾಮ, ರಾಮ!' ಎಂದು ಕೊಂಡಾಡಿ ನಲಿಯುತ್ತಿದ್ದರು. ಜಗತ್ತೇ ರಾಮಮಯವಾಯಿತು! ರಾಷ್ಟ್ರದಲ್ಲಿ ಸಕಲವೃಕ್ಷಗಳೂ ಶಾಖೋಪಶಾಖೆಗಳೊಡನೆ ವಿಸ್ತೃತವಾಗಿ ಬೆಳೆದು, ಸದಾ ಫಲಪುಷ್ಪಗಳಿಂದ ತುಂಬಿದವು. ಮೋಡವು ಕಾಲಕಾಲದಲ್ಲಿ ಮಳೆಯನ್ನು ಸುರಿಸುತ್ತಿತ್ತು. ಗಾಳಿಯು ಹಿತಕರವಾಗಿ ಬೀಸುತ್ತಿತ್ತು (೧೦೨–೧೦೩). ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ–ಇವರೆಲ್ಲರೂ ತಮ್ಮ ತಮ್ಮ ಕರ್ತವ್ಯಗಳಲ್ಲಿ ನಿರತರಾಗಿ, ತಮ್ಮ ವರ್ಣೋಚಿತ ಕರ್ಮಗಳಿಂದ ಸಂತುಷ್ಟರಾಗಿ, ಸಲ್ಲದ ಆಸೆಯನ್ನಿಟ್ಟುಕೊಳ್ಳದೆ ತೃಪ್ತಿಯಿಂದ ಬದುಕುತ್ತಿದ್ದರು (೧೦೪).

ಆಸನ್ ಪ್ರಜಾ ಧರ್ಮರತಾ ರಾಮೇ ಶಾಸತಿ ನಾನೃತಾಃ ।
ಸರ್ವೇ ಲಕ್ಷಣಸಂಪನ್ನಾಃ ಸರ್ವೇ ಧರ್ಮಪರಾಯಣಾಃ ॥ ೧೦೫

ದಶ ವರ್ಷಸಹಸ್ರಾಣಿ ದಶ ವರ್ಷಶತಾನಿ ಚ ।
ಭ್ರಾತೃಭಿಃ ಸಹಿತಃ ಶ್ರೀಮಾನ್ ರಾಮೋ ರಾಜ್ಯಮಕಾರಯತ್॥ ೧೦೬

ಧನ್ಯಂ ಯಶಸ್ಯಮಾಯುಷ್ಯಂ ರಾಜ್ಞಾಂ ಚ ವಿಜಯಾವಹಮ್ ।
ಆದಿಕಾವ್ಯಮಿದಂ ತ್ವಾರ್ಷಂ ಪುರಾ ವಾಲ್ಮೀಕಿನಾ ಕೃತಮ್ ॥ ೧೦೭

ಯಃ ಪಠೇಚ್ಛೃಣುಯಾಲ್ಲೋಕೇ ನರಃ ಪಾಪಾದ್ವಿಮುಚ್ಯತೇ ।
ಪುತ್ರಕಾಮಸ್ತು ಪುತ್ರಾನ್ ವೈ ಧನಕಾಮೋ ಧನಾನಿ ಚ ॥ ೧೦೮

ಶ್ರೀರಾಮನು ರಾಜ್ಯವನ್ನು ಪಾಲಿಸುತ್ತಿರುವಾಗ, ಪ್ರಜೆಗಳು ಧರ್ಮತತ್ಪರರಾಗಿದ್ದರು. ಅನೃತವೆಂಬುದು ಅವರ ಬಳಿ ಸುಳಿಯಲಿಲ್ಲ. ಸಕಲರೂ ಧರ್ಮಲಕ್ಷಣಸಂಪನ್ನರಾಗಿ ಧರ್ಮವೇ ತಮಗೆ ಪರಮಲಕ್ಷ್ಯವೆಂದು ಬಗೆದು ಜೀವನವನ್ನು ನಡೆಸಿದರು. ಹೀಗೆ ಮಹಾತ್ಮನಾದ ಶ್ರೀರಾಮಚಂದ್ರನು ತನ್ನ ಸೋದರರಿಂದ ಪರಿವೃತನಾಗಿ, ಹನ್ನೊಂದುಸಾವಿರ ವರ್ಷಗಳಕಾಲ* ರಾಜ್ಯವನ್ನು ಪಾಲಿಸಿದನು (೧೦೫-೧೦೬).

ಫಲಶ್ರುತಿ

ವೇದಾರ್ಥಪ್ರತಿಪಾದಕವಾದ ಈ ಆದಿಕಾವ್ಯವನ್ನು ವಾಲ್ಮೀಕಿಮಹರ್ಷಿಗಳು ಎಲ್ಲ ಕವಿಗಳಿಗಿಂತಲೂ ಮೊದಲು ವಿರಚಿಸಿದರು. ಈ ರಾಮಾಯಣ ಗ್ರಂಥವು ಧನಸಮೃದ್ಧಿಯನ್ನುಂಟುಮಾಡತಕ್ಕದ್ದೂ ಯಶಸ್ಕರವೂ ಆಯುರ್ವರ್ಧಕವೂ ಆಗಿದೆ. ರಾಜರಿಗೆ ವಿಜಯಸಂಪಾದಕವಾಗಿದೆ (೧೦೭). ಲೋಕದಲ್ಲಿ ಯಾರು ಈ ಗ್ರಂಥವನ್ನು ಪಠಿಸುವರೋ ಅವರು ಸರ್ವಪಾಪಗಳಿಂದಲೂ ವಿಮುಕ್ತರಾಗುವರು. ಶ್ರೀರಾಮಪಟ್ಟಾಭಿಷೇಕದ ಪ್ರಕರಣವನ್ನು

---

* ೧೦೬ನೆಯ ಶ್ಲೋಕದಲ್ಲಿ ಹತ್ತುಸಾವಿರ ವರ್ಷಗಳೆಂದು ಹೇಳಿದೆ. ಶ್ರೀರಾಮನು ಸೀತಾಸಮೇತನಾಗಿ ಹತ್ತುಸಾವಿರ ವರ್ಷವೂ ಸೀತಾಪರಿತ್ಯಾಗವಾದಮೇಲೆ ಒಂದು ಸಾವಿರ ವರ್ಷವೂ ರಾಜ್ಯಭಾರ ಮಾಡಿದನು. ಈ ರೀತಿಯಾಗಿ ಪೂರ್ವಾಪರ ವಿರೋಧವನ್ನು ಪರಿಹರಿಸಿಕೊಳ್ಳಬೇಕು.

ಲಭತೇ ಮನುಜೋ ಲೋಕೇ ಶ್ರುತ್ವಾ ರಾಮಾಭಿಷೇಚನಮ್ ।
ಮಹೀಂ ವಿಜಯತೇ ರಾಜಾ ರಿಪೂಂಶ್ಚಾಪ್ಯಧಿತಿಷ್ಠತಿ ॥ ೧೦೯

ರಾಘವೇಣ ಯಥಾ ಮಾತಾ ಸುಮಿತ್ರಾ ಲಕ್ಷ್ಮಣೇನ ಚ ।
ಭರತೇನ ಚ ಕೈಕೇಯೀ ಜೀವಪುತ್ರಾಸ್ತಥಾ ಸ್ತ್ರಿಯಃ ೧೧೦

ಭವಿಷ್ಯಂತಿ ಸದಾನಂದಾಃ ಪುತ್ರಪೌತ್ರಸಮನ್ವಿತಾಃ ।
ಶ್ರುತ್ವಾ ರಾಮಾಯಣಮಿದಂ ದೀರ್ಘಮಾಯುಶ್ಚ ವಿಂದತಿ ॥ ೧೧೧

ರಾಮಸ್ಯ ವಿಜಯಂ ಚೈವ ಸರ್ವಮಕ್ಲಿಷ್ಟಕರ್ಮಣಃ ।
ಶೃಣೋತಿ ಯ ಇದಂ ಕಾವ್ಯಮಾರ್ಷಂ ವಾಲ್ಮೀಕಿನಾ ಕೃತಮ್ ॥

ಶ್ರದ್ದಧಾನೋ ಜಿತಕ್ರೋಧೋ ದುರ್ಗಾಣ್ಯತಿತರತ್ಯಸೌ ।
ಸಮಾಗಮಂ ಪ್ರವಾಸಾಂತೇ ಲಭತೇ ಚಾಪಿ ಬಾಂಧವೈಃ ೧೧೩

ಭಕ್ತಿಯಿಂದ ಆಲಿಸಿದರೆ, ಪುತ್ರಾರ್ಥಿಯು ಪುತ್ರರನ್ನೂ ಧನಾರ್ಥಿಯು ಧನವನ್ನೂ ಪಡೆಯುತ್ತಾನೆ. ರಾಜನು ತನ್ನ ವೈರಿಗಳನ್ನು ಜಯಿಸಿ ವಿಶಾಲವಾದ ರಾಜ್ಯವನ್ನಾಳುವನು (೧೦೮–೧೦೯). ಈ ಪುಣ್ಯಕಥೆಯನ್ನು ಕೇಳುವ ಸ್ತ್ರೀಯರು, ಶ್ರೀರಾಮಸಮೇತಳಾದ ಕೌಸಲ್ಯೆಯಂತೆಯೂ ಲಕ್ಷ್ಮಣಯುಕ್ತಳಾದ ಸುಮಿತ್ರೆಯಂತೆಯೂ, ಭರತಸಹಿತಳಾದ ಕೈಕೇಯಿಯಂತೆಯೂ ದೀರ್ಘಾಯುಷ್ಮಂತರಾದ ಪುತ್ರರೊಡನೆ ಬಾಳುವರು (೧೧೦). ಯಾವಾಗಲೂ ಆನಂದಯುಕ್ತರಾಗಿ ಪುತ್ರಪೌತ್ರರೊಡನೆ ನೆಮ್ಮದಿಯಿಂದ ಜೀವಿಸುವರು. ಸತ್ಕಾರ್ಯನಿರತನಾದ ರಾಘವನ ದಿವ್ಯಚರಿತವಾದ ಶ್ರೀಮದ್ರಾಮಾಯಣವನ್ನೂ ಅವನ ವಿಜಯವೃತ್ತಾಂತವನ್ನೂ ಪಠಿಸತಕ್ಕವನು ದೀರ್ಘಾಯುಸ್ಸನ್ನು ಪಡೆಯುವನು (೧೧೧). ವೇದೋಪಬೃಂಹಣರೂಪವಾಗಿ ವಾಲ್ಮೀಕಿಮುನಿಗಳಿಂದ ರಚಿತವಾದ ಈ ರಾಮಾಯಣಕಾವ್ಯವನ್ನು ಯಾವನು ಶ್ರದ್ಧೆಯಿಂದ ಕೇಳುವನೋ, ಅವನು ಕಾಮಕ್ರೋಧಾದಿಗಳನ್ನು ಜಯಿಸಿ ಸಕಲವಿಪತ್ತುಗಳನ್ನೂ ದಾಟುವನು. ದೇಶಾಂತರಕ್ಕೆ ಹೋದವನು ತನ್ನ ಬಂಧುಗಳೊಡನೆ ಸೇರಿ ಸುಖಿಸುವನು (೧೧೨–೧೧೩).

ಪ್ರಾರ್ಥಿತಾಂಶ್ಚ ವರಾನ್ ಸರ್ವಾನ್ ಪ್ರಾಪ್ನುಯಾದಿಹ ರಾಘವಾತ್ ।
ಶ್ರವಣೇನ ಸುರಾಃ ಸರ್ವೇ ಪ್ರೀಯಂತೇ ಸಂಪ್ರಶೃಣ್ವತಾಮ್ ॥ ೧೧೪

ವಿನಾಯಕಾಶ್ಚ ಶಾಮ್ಯಂತಿ ಗೃಹೇ ತಿಷ್ಠಂತಿ ಯಸ್ಯ ವೈ ।
ವಿಜಯೇತ ಮಹೀಂ ರಾಜಾ ಪ್ರವಾಸೀ ಸ್ವಸ್ತಿಮಾನ್ ವ್ರಜೇತ್ ॥

ಸ್ತ್ರಿಯೋ ರಜಸ್ವಲಾಃ ಶ್ರುತ್ವಾ ಪುತ್ರಾನ್ ಸೂಯುರನುತ್ತಮಾನ್ ।
ಪೂಜಯಂಶ್ಚ ಪಠಂಶ್ಚೇಮಮಿತಿಹಾಸಂ ಪುರಾತನಮ್ ॥ ೧೧೬

ಸರ್ವಪಾಪೈಃ ಪ್ರಮುಚ್ಯೇತ ದೀರ್ಘಮಾಯುರವಾಪ್ನುಯಾತ್ ।
ಪ್ರಣಮ್ಯ ಶಿರಸಾ ನಿತ್ಯಂ ಶ್ರೋತವ್ಯಂ ಕ್ಷತ್ರಿಯೈರ್ದ್ವಿಜಾತ್ ॥ ೧೧೭

ಐಶ್ವರ್ಯಂ ಪುತ್ರಲಾಭಶ್ಚ ಭವಿಷ್ಯತಿ ನ ಸಂಶಯಃ ।
ರಾಮಾಯಣಮಿದಂ ಕೃತ್ಸ್ನಂ ಶೃಣ್ವತಃ ಪಠತಃ ಸದಾ ॥ ೧೧೮

ಪ್ರೀಯತೇ ಸತತಂ ರಾಮಃ ಸ ಹಿ ವಿಷ್ಣುಃ ಸನಾತನಃ ।
ಆದಿದೇವೋ ಮಹಾಬಾಹುರ್ಹರಿರ್ನಾರಾಯಣಃ ಪ್ರಭುಃ ॥ ೧೧೯

ಶ್ರೀರಾಮನ ಅನುಗ್ರಹದಿಂದ ಸಕಲಾಭೀಷ್ಟಗಳನ್ನೂ ಪಡೆಯುವನು. ಶ್ರೀಮದ್ರಾಮಾಯಣವನ್ನು ಭಕ್ತಿಪೂರ್ವಕವಾಗಿ ಕೇಳುವುದರಿಂದ ನಿಖಿಲ ದೇವತೆಗಳೂ ಪ್ರಸನ್ನರಾಗುವರು (೧೧೪). ಮನೆಗಳಲ್ಲಿ ವಿಘ್ನಕಾರಿಗಳಾದ ಭೂತಾದಿಗಳ ಬಾಧೆ ಅಡಗುವುದು. ರಾಜನು ವಿಶಾಲವಾದ ಭೂಮಿಯನ್ನು ಗೆಲ್ಲುವನು. ಪ್ರವಾಸಿಯು ಕ್ಷೇಮದಿಂದ ಪ್ರವಾಸವನ್ನು ಮುಗಿಸಿ ಬರುವನು. ಕನ್ಯೆಯರು ರಜಸ್ವಲೆಯರಾದಮೇಲೆ ಈ ಪುಣ್ಯಕಥೆಯನ್ನು ಕೇಳಿದ ಪಕ್ಷದಲ್ಲಿ, ಶ್ರೇಷ್ಠರಾದ ಪುತ್ರರನ್ನು ಪಡೆಯುವರು (೧೧೫–೧೧೬). ಪುರಾತನವಾದ ಈ ಪವಿತ್ರಗ್ರಂಥವನ್ನು ಆದರದಿಂದ ಪೂಜಿಸಿ ಪಾರಾಯಣ ಮಾಡತಕ್ಕವನು ಸರ್ವಪಾಪಗಳಿಂದಲೂ ವಿಮುಕ್ತನಾಗಿ ದೀರ್ಘಾಯುಸ್ಸನ್ನು ಹೊಂದುವನು. ಕ್ಷತ್ರಿಯಾದಿಗಳು ಶ್ರದ್ಧೆಯಿಂದ ತಲೆಬಾಗಿ ವಂದಿಸಿ, ಬ್ರಾಹ್ಮಣರ ಮುಖದಿಂದ ಈ ಗ್ರಂಥವನ್ನು ಕೇಳಬೇಕು (೧೧೭). ಅಂಥವರಿಗೆ ಐಶ್ವರ್ಯವು ಲಭಿಸುವುದು. ಪುತ್ರಲಾಭವಾಗುವುದು. ಇದರಲ್ಲಿ ಸಂದೇಹವಿಲ್ಲ. ಸಮಗ್ರ ರಾಮಾಯಣವನ್ನು ಸರ್ವದಾ ಯಾರು ಕೇಳುವರೋ ಯಾರು ಪಾರಾಯಣ ಮಾಡುವರೋ, ಅವರಲ್ಲಿ ಶ್ರೀರಾಮನು ಸಂಪ್ರೀತನಾಗುವನು. ಆತನು

ಕುಟುಂಬವೃದ್ಧಿಂ ಧನಧಾನ್ಯವೃದ್ಧಿಂ
ಸ್ತ್ರಿಯಶ್ಚ ಮುಖ್ಯಾಃ ಸುಖಮುತ್ತಮಂ ಚ ।
ಶ್ರುತ್ವಾ ಶುಭಂ ಕಾವ್ಯಮಿದಂ ಮಹಾರ್ಥಂ
ಪ್ರಾಪ್ನೋತಿ ಸರ್ವಾಂ ಭುವಿ ಚಾರ್ಥಸಿದ್ಧಿಮ್ ॥ ೧೨೦

ಆಯುಷ್ಯಮಾರೋಗ್ಯಕರಂ ಯಶಸ್ಯಂ
ಸೌಭ್ರಾತೃಕಂ ಬುದ್ಧಿಕರಂ ಶುಭಂ ಚ ।
ಶ್ರೋತವ್ಯಮೇತನ್ನಿಯಮೇನ ಸದ್ಭಿ-
ರಾಖ್ಯಾನಮೋಜಸ್ಕರಮೃದ್ಧಿಕಾಮೈಃ ॥ ೧೨೧

ಏವಮೇತತ್ ಪುರಾವೃತ್ತಮಾಖ್ಯಾನಂ ಭದ್ರಮಸ್ತು ವಃ ।
ಪ್ರವ್ಯಾಹರತ ವಿಸ್ರಬ್ಧಂ ಬಲಂ ವಿಷ್ಣೋಃ ಪ್ರವರ್ಧತಾಮ್ ॥ ೧೨೨

ದೇವಾಶ್ಚ ಸರ್ವೇ ತುಷ್ಯಂತಿ ಗ್ರಹಣಾಚ್ಛ್ರವಣಾತ್ತಥಾ ।
ರಾಮಾಯಣಸ್ಯ ಶ್ರವಣಾತ್ತುಷ್ಯಂತಿ ಪಿತರಸ್ತಥಾ ॥ ೧೨೩

ಸನಾತನಪುರುಷನಾದ ಶ್ರೀಮನ್ನಾರಾಯಣನಲ್ಲವೆ? ಮಹಾಬಾಹುವಾದ ಶ್ರೀರಾಮಚಂದ್ರನು ಆದಿದೇವನೂ ಸರ್ವಲೋಕೇಶ್ವರನೂ ಆಗಿದ್ದಾನೆ (೧೧೮–೧೧೯). ಮಹಾರ್ಥಗರ್ಭಿತವಾದ ಈ ಶುಭಕಾವ್ಯವನ್ನು ಕೇಳತಕ್ಕವರು ಉತ್ತಮಸ್ತ್ರೀಯರನ್ನು ಕೈಹಿಡಿದು, ಕುಟುಂಬವೃದ್ಧಿ ಧನಧಾನ್ಯಸಮೃದ್ಧಿಗಳನ್ನು ಪಡೆದು, ಪರಮಸುಖವನ್ನನುಭವಿಸುತ್ತಾರೆ. ಈ ಜಗತ್ತಿನಲ್ಲಿ ಸಮಸ್ತ ಕಾರ್ಯವೂ ಅವರಿಗೆ ಸಿದ್ಧಿಸುತ್ತದೆ (೧೨೦). ಶ್ರೀಮದ್ರಾಮಾಯಣವು ಆಯುರಾರೋಗ್ಯಗಳನ್ನು ವರ್ಧಿಸುತ್ತದೆ. ಕೀರ್ತಿಕರವಾಗಿದೆ. ಸೋದರ ವಾತ್ಸಲ್ಯವನ್ನು ದೃಢಗೊಳಿಸಿ ಬುದ್ಧಿಬಲವನ್ನೂ ಸೌಖ್ಯವನ್ನೂ ಕೊಡುತ್ತದೆ. ತೇಜಸ್ಸನ್ನು ಹೆಚ್ಚಿಸುತ್ತದೆ. ಆದ್ದರಿಂದ ಶ್ರೇಯಸ್ಕಾಮರಾದ ಸಕಲ ಸಜ್ಜನರೂ ಅವಶ್ಯವಾಗಿ ಈ ಆಖ್ಯಾನವನ್ನು ಕೇಳುತ್ತಿರಬೇಕು (೧೨೧). ಎಲೈ ಮಹಾಜನರೆ, ಈ ರೀತಿಯಲ್ಲಿ ಪುರಾತನವಾದ ಒಂದು ಪುಣ್ಯಚರಿತೆಯು ನಡೆಯಿತು. ನಿಮ್ಮೆಲ್ಲರಿಗೂ ಮಂಗಳವಾಗಲಿ! ಎಲ್ಲರೂ ಶ್ರದ್ಧೆಯಿಂದ ಈ ಗ್ರಂಥವನ್ನು ಪಠಿಸಿರಿ. ಮಹಾವಿಷ್ಣುವಿನ ಮಹಿಮೆಯು ಪ್ರಚುರವಾಗಲಿ (೧೨೨). ಶ್ರೀಮದ್ರಾಮಾಯಣದ ಶ್ರವಣದಿಂದಲೂ ಅದರ ಅರ್ಥವನ್ನು ಗ್ರಹಿಸು

ಭಕ್ತ್ಯಾ ರಾಮಸ್ಯ ಯೇ ಚೇಮಾಂ ಸಂಹಿತಾಮೃಷಿಣಾ ಕೃತಾಮ್ ।
ಲೇಖಯಂತೀಹ ಚ ನರಾಸ್ತೇಷಾಂ ವಾಸಸ್ತ್ರಿವಿಷ್ಟಪೇ* ॥ ೧೨೪

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಚತುರ್ವಿಂಶತಿಸಹಸ್ರಿಕಾಯಾಂ ಸಂಹಿತಾಯಾಂ ಯುದ್ಧಕಾಂಡೇ
ಏಕತ್ರಿಂಶದುತ್ತರಶತತಮಃ ಸರ್ಗಃ

ವುದರಿಂದಲೂ ಸಕಲದೇವತೆಗಳೂ ಸಂತುಷ್ಟರಾಗುವರು. ಪಿತೃಗಳು ಸಂತೃಪ್ತರಾಗುವರು. ಋಷಿಪ್ರಣೀತವಾದ ಈ ಶ್ರೀ ರಾ ಮ ಚ ರಿ ತೆ ಯ ನ್ನು ಯಾರು ಭಕ್ತಿಯಿಂದ ಬರೆಯಿಸುವರೋ, ಅವರಿಗೂ ಸಹ ಸದ್ಗತಿಯು ಲಭಿಸುವುದು (೧೨೩-೧೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನೂರಮೂವತ್ತೊಂದನೆಯ ಸರ್ಗ

॥ ಶ್ರೀರಾಮಚಂದ್ರಾರ್ಪಣಮಸ್ತು ॥

ರಾವಣಾದಿನಿಹಂತಾರಂ ಶ್ರೀಶರುದ್ರಾದಿಸೇವಿತಮ್ ।
ಸೀತಾದೇವೀಯುತಂ ಯೌದ್ಧೇ ರಾಮಂ ಧ್ಯಾಯೇತ್ ಹೃದಂಬುಜೇ ॥

* ಸಮಾಪ್ತಿಯಲ್ಲಿ ಈ ಎರಡು ಶ್ಲೋಕಗಳನ್ನು ಪಠಿಸುವ ಸಂಪ್ರದಾಯವುಂಟು :

ಪ್ರಾಪ್ತರಾಜ್ಯಸ್ಯ ರಾಮಸ್ಯ ರಾಕ್ಷಸಾನಾಂ ವಧೇ ಕೃತೇ ।
ಆಜಗ್ಮುರ್ಮುನಯಃ ಸರ್ವೇ ರಾಘವಂ ಪ್ರತಿನಂದಿತುಮ್ ॥
ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥

ಶ್ರೀಭದ್ರಾಚಲಶ್ರೀರಾಮದಾಸಕೃತಂ

ಶ್ರೀರಾಮಚಂದ್ರದಂಡಕಮ್

॥ ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ ॥

ಶ್ರೀಮದಖಿಲಾಂಡಕೋಟಿ ಬ್ರಹ್ಮಾಂಡ ಭಾಂಡ ಖಂಡೋಪಖಂಡ ಕರಂಡ ಮಂಡಲ ಶಾಂತೋದ್ದೀಪಿತ ಸಗುಣನಿರ್ಗುಣಾತೀತ ಸಚ್ಚಿದಾ-ನಂದ ಪರಾತ್ಪರ ತಾರಕಬ್ರಹ್ಮಾಹ್ವಯ ದಶದಿಶ ಪ್ರಕಾಶಂ ಸಕಲ ಚರಾಚರಾಧೀಶಂ ॥ ೧ ॥

ಕಮಲ ಸಂಭವ ಶಚೀಧವ ಪ್ರಮುಖ ನಿಖಿಲ ವೃಂದಾರಕ ವೃಂದ ವಂದ್ಯಮಾನ ಸಂದೀಪ್ತ ದಿವ್ಯಚರಣಾರವಿಂದಂ ಶ್ರೀಮುಕುಂದಂ ॥೨॥

ದುಷ್ಟನಿಗ್ರಹ ಶಿಷ್ಟಪರಿಪಾಲನೋತ್ಕಟ ಕಪಟನಾಟಕ ಸೂತ್ರ ಚರಿತ್ರಾಂಚಿತಬಹುವಿಧಾವತಾರಂ ಶ್ರೀರಘುವೀರಂ ॥ ೩ ॥

ಕೌಸಲ್ಯಾ ದಶರಥ ಮನೋರಥಾಮಂದಾನಂದ ಕಂದಲಿತ ನಿರೂಢ ಕ್ರೀಡಾವಿಲೋಲನ ಶೈಶವಂ ಶ್ರೀಕೇಶವಂ ॥ ೪ ॥

ವಿಶ್ವಾಮಿತ್ರ ವಿಘ್ನಕಾರಣೋತ್ಕಟ ತಾಟಕಾ ಸುಬಾಹುಬಾಹು ದಲವಿದಲನ ಬಾಣಪ್ರವೀಣ ಕೋಪಪರಾಯಣಂ ಶ್ರೀಮನ್ನಾರಾಯಣಂ ॥ ೫ ॥

ನಿಜಪಾದರಜಃಕಣ ಸ್ಪರ್ಶನೀಯ ಶಿಲಾರೂಪ ಶಾಪಮುಕ್ತ ಗೌತಮ ಸತೀ ವಿನುತ ಮಹೀಧವಂ ಶ್ರೀಮಾಧವಂ ॥ ೬ ॥

ಖಂಡೇಂದುಧರ ಪ್ರಚಂಡ ಕೋದಂಡ ಖಂಡನೋದ್ದಂಡ ದೋರ್ದಂಡ ಕೌಶಿಕ ಲೋಚನೋತ್ಸವ ಜನಕ ಚಕ್ರೇಶ್ವರ ಸಮರ್ಪಿತ ಸೀತಾವಿವಾಹೋತ್ಸವಾನಂದಂ ಶ್ರೀಗೋವಿಂದಂ ॥ ೭ ॥

ಪರಶುರಾಮ ಭುಜಾಖರ್ವಗರ್ವನಿರ್ವಾಪಣಾನುಗತ ರಣವಿಜಯ ವರ್ಧಿಷ್ಣುಂ ಶ್ರೀಮಹಾವಿಷ್ಣುಂ ॥ ೮ ॥

ಪಿತೃವಾಕ್ಯ ಪರಿಪಾಲನೋತ್ಕಟ ಜಟಾವಲ್ಕಲೋಪೇತ ಸೀತಾ ಲಕ್ಷ್ಮಣ ಸಹಿತ ಮಹಿತ ರಾಜ್ಯಾಭಿಮತ ದೃಢವ್ರತಕಲಿತ ಪ್ರಯಾಣ ರಂಗೋದ್ಗಂಗಾವತರಣಸಾಧನಂ ಶ್ರೀಮಧುಸೂದನಂ ॥ ೯ ॥

ಭಾರದ್ವಾಜೋಪಚಾರ ನಿವಾರಿತಶ್ರಮಕ್ರಮ ನಿರಾಘಾಟ ಚಿತ್ರ ಕೂಟ ಪ್ರವೇಶಕ್ರಮಂ ಶ್ರೀತ್ರಿವಿಕ್ರಮಂ ॥ ೧೦ ॥

ಜನಕ ವಿಯೋಗ ಶೋಕಾಕುಲಿತ ಭರತ ಶತ್ರುಘ್ನ ಲಾಲನಾನುಕೂಲ ಬಂಧುಪಾದುಕಾ ಪ್ರದಾನ ಸುಧಾನಿರ್ಮಿತಾಂತಃ ಕರಣ ದುಷ್ಟ ಚೇಷ್ಟಾಯಮಾನ ಕ್ರೂರಕಾಕಾಸುರ ಗರ್ವೋಪಶಮನಂ ಶ್ರೀವಾಮನಂ ॥ ೧೧ ॥

ದಂಡಕಾಗಮನ ನಿರೋಧ ಕ್ರೋಧ ವಿರಾಧಾನಲ ಜ್ವಾಲಾ ನಿರ್ವಾಪಣ ಜಲಧರಂ ಶ್ರೀಧರಂ ॥ ೧೨ ॥

ಶರಭಂಗ ಸುತೀಕ್ಷ್ಣಾತ್ರಿದರ್ಶನಾಶೀರ್ವಾದ ನಿರ್ವ್ಯಾಜ ಕುಂಭ ಸಂಭವ ಕೃಪಾಲಬ್ಧ ಮಹಾದಿವ್ಯಾಸ್ತ್ರ ಸಮುದಾಯಾರ್ಜಿತಪ್ರಕಾಶಂ ಶ್ರೀಹೃಷೀಕೇಶಂ ॥ ೧೩ ॥

ಪಂಚವಟೀ ಸಂಘಟಿತ ವಿಶಾಲ ಪರ್ಣಶಾಲಾ ಗತ ಶೂರ್ಪನಖಾ ನಾಸಿಕಾ ಚ್ಛೇದನಾಪಮಾನಾಪ ಬೋಧನ ಮಹಾಹವಾರಂಭ ವಿಜೃಂಭಣ ರಾವಣ ನಿಯೋಗ ಮಾಯಾಮೃಗ ಸಂಹಾರ ಕಾರ್ಯಾರ್ಥಲಾಭಂ ಶ್ರೀಪದ್ಮನಾಭಂ ॥ ೧೪ ॥

ರಾತ್ರಿಂಚರವರ ವಂಚನಾಪಹೃತ ಸೀತಾನ್ವೇಷಣ ಪಥ ಪಂಜ್ಕ್ತಿ ಮುಖಕ್ಷೋಭ ಶಿಥಿಲೀಕೃತ ಪಕ್ಷಜಟಾಯುಮೋಕ್ಷ ಬಂಧು ಪ್ರಿಯಾ ವಸಾನ ನಿರ್ಬಂಧ ಕಬಂಧ ವಕ್ತ್ರೋದರ ಶರೀರ ನಿರೋಧಕರಂ ಶ್ರೀದಾಮೋದರಂ ॥ ೧೫ ॥

ಶಬರ್ಯುಪದೇಶ ಪಂಪಾತಟಿಗಮನ ಹನುಮತ್ಸುಗ್ರೀವ ಸಂಭಾಷಣ ಬಂಧುರೋದ್ಬಂಧುರ ದುಂದುಭಿ ಕಲೇವರೋತ್ಪತನ ಸಪ್ತ ತಾಲಚ್ಛೇದನ ವಾಲಿವಿದಾರಣಪ್ರಸನ್ನ ಸುಗ್ರೀವ ಸಾಮ್ರಾಜ್ಯಸುಖ ಸಮರ್ಪಣಂ ಶ್ರೀಸಂಕರ್ಷಣಂ ॥ ೧೬ ॥

ಸುಗ್ರೀವಾಂಗದ ನೀಲ ಜಾಂಬವತ್ಪವನಜಕೇಸರಿ ಪ್ರಮುಖ ನಿಖಿಲ ಕಪಿನಾಯಕ ಸೇವಾ ಸಮುದಾಯಾರ್ಚಿತ ದೇವಂ ಶ್ರೀ ವಾಸುದೇವಂ ॥ ೧೭ ॥

ನಿಜದತ್ತ ಮುದ್ರಿಕಾ ಜಾಗ್ರತ್ಸಮಗ್ರಾಂಜನೇಯ ವಿನಯ ವಚನ ರಚನಾಂಬುಧಿ ಲಂಘನೋಲ್ಲಂಘಿತ ಲಂಕಿಣೀ ಪ್ರಾಣೋಲ್ಲಂಘನ ಜನಕಜಾದರ್ಶನಾಕ್ಷಕುಮಾರಮಾರಣ ಲಂಕಾಪುರೀದಹನ ತತ್ಪ್ರತಿಷ್ಠಿತ ಸುಖ ಪ್ರಸಂಗ ಧೃಷ್ಟದ್ಯುಮ್ನಂ ಶ್ರೀಪ್ರದ್ಯುಮ್ನಂ ॥ ೧೮ ॥

ಅಗ್ರಜೋದಗ್ರ ಮಹೋಗ್ರ ನಿಗ್ರಹ ಫಲಾವಮಾನ ಮಾನ-ನೀಯ ನಿಜಶರಣ್ಯಾಗಣ್ಯ ಪುಣ್ಯಾಲಯ ವಿಭೀಷಣಾಭಯಪ್ರದಾನ ನಿರುದ್ಧಂ ಶ್ರೀಮದನಿರುದ್ಧಂ ॥ ೧೯ ॥

ಅಪಾರ ಲವಣ ಪಾರಾವಾರ ಸಮುಜ್ಜೃಂಭಿತೋತ್ಕರ್ಷಣ ಗರ್ವ ನಿರ್ವಾಪಣ ದೀಕ್ಷಾಸಮರ್ಥ ಸೇತುನಿರ್ಮಾಣ ಪ್ರವೀಣಾಖಿಲ ತರುಚರೋತ್ತಮಂ ಶ್ರೀ ಪುರುಷೋತ್ತಮಂ ॥ ೨೦ ॥

ನಿಸ್ತುಲ ಪ್ರಹಸ್ತ ಕುಂಭಕರ್ಣೇಂದ್ರಜಿತ್ಕುಂಭನಿಕುಂಭಾಗ್ನಿ-ವರ್ಣಾತಿಕಾಯ ಮಹೋದರ ಮಹಾಪಾರ್ಶ್ವಾದಿ ದನುಜತನು ಖಂಡನಾಯಮಾನ ಕೋದಂಡಗುಣಶ್ರವಣ ಶೋಷಣ ಹತಶೇಷ ರಾಕ್ಷಸ ವ್ರಜಂ ಶ್ರೀಮದಧೋಕ್ಷಜಂ ॥ ೨೧ ॥

ಅಕುಂಠಿತ ರಣೋಪಕಂಠ ಸಮುತ್ಕಂಠದನುಜ ಕಂಠೀರವ ಕಂಠ ಲುಂಠನಾಯಮಾನ ಜಯ ಸಮಾರಂಭಂ ಶ್ರೀ ನಾರಸಿಂಹಂ ॥೨೨॥

ದಶಗ್ರೀವಾನುಜಪಟ್ಟಭದ್ರತ್ವಾಶಕ್ಯ ವಿಭವ ಲಂಕಾಪುರೀ ಸ್ಫುರಣ ಸಕಲ ಸಾಮ್ರಾಜ್ಯಸುಖಾತ್ ಚ್ಯುತಂ ಶ್ರೀಮದಚ್ಯುತಂ ‖ ೨೩ ‖

ಸಕಲ ಸುರಾಸುರಾದ್ಭುತ ಪ್ರಜ್ವಲಿತ ಪಾವಕಮುಖ ಪೂರಾಯಮಾನ ಸೀತಾಲಕ್ಷ್ಮಣಾನುಗತ ಮಹನೀಯ ಪುಷ್ಪಕಾರೋಹಣ ನಂದಿಗ್ರಾಮಸ್ಥಿತ ಭ್ರಾತೃಸಂಯುತ ಜಟಾವಲ್ಕಲ ವಿಸರ್ಜನಾಂಬರ ಭೂಷಣಾಲಂಕೃತಶ್ರೇಯೋ ವಿವರ್ಧನಂ ಶ್ರೀಜನಾರ್ದನಂ ‖೨೪‖

ಅಯೋಧ್ಯಾನಗರ ಪಟ್ಟಾಭಿಷೇಕ ವಿಶೇಷ ಮಹೋತ್ಸವ ನಿರಂತರ ದಿಗಂತ ವಿಶ್ರಾಂತ ಹಾರಹೀರ ಕರ್ಪೂರ ಪಯಃಪಾರಾವಾರ ಪಾರದ ವಾಣೀ ಕುಂದೇಂದು ಮಂದಾಕಿನೀ ಚಂದನ ಧೇನು ಶರದಂ-ಬುದಾಲೀಧರ ದಂಭೋಲಿ ಶತಧಾರಾ ಧಾವಲ್ಯ ಕುಂಭ ಕೀರ್ತಿಚ್ಛಟಾಂತರ ಪಾಂಡುರೀಭೂತ ಸಭಾ ವಿಭ್ರಾಜಮಾನ ನಿಖಿಲ ಭುವನೈಕ ಯಶಃಸ್ಸಾಂದ್ರಂ ಶ್ರೀಮದುಪೇಂದ್ರಂ ‖ ೨೫ ‖

ಭಕ್ತಜನ ಸಂರಕ್ಷ ದೀಕ್ಷಾ ಕಟಾಕ್ಷವಿಜೃಂಭಮಾಣ ಶುಭೋದಯ ಸಮುಜ್ಜ್ವರಿಂ ಶ್ರೀಹರಿಂ ‖ ೨೬ ‖

ಕೇಶವಾದಿ ಚತುರ್ವಿಂಶತಿ ನಾಮಗರ್ಭ ಸಂದರ್ಭಿತ ನಿಜಕಥಾಂಗೀಕೃತ ಮೇಧಾ ವರ್ಧಿಷ್ಣುಂ ಶ್ರೀಕೃಷ್ಣಂ ‖ ೨೭ ‖

ಸರ್ವಸುಪರ್ವ ಪಾರ್ವತೀ ಹೃದಯ ಕಮಲ ತಾರಕ ಬ್ರಹ್ಮನಾಮ ಸಂಪೂರ್ಣಕಾಮಂ ಶ್ರೀರಾಮಂ ‖ ೨೮ ‖

ಭವತರಣಾನುಗುಣ ಸಾಂದ್ರಂ ಭವಜನಿತ ಭಯೋಚ್ಛೇದ ಛಿದ್ರಮಚ್ಛಿದ್ರಂ ಭಕ್ತಜನ ಮನೋರಥೋನ್ನಿದ್ರಂ ಶ್ರೀಮದ್ಭದ್ರಾಚಲ ರಾಮಚಂದ್ರಂ ಶ್ರೀರಾಮದಾಸ ಸುಪ್ರಸನ್ನಂ ಭಜೇಽಹಂ ಭಜೇಽಹಂ ಭಜೇಽಹಮ್ ‖ ೨೯ ‖

‖ ಓಂ ತತ್ ಸತ್ ‖

ಶ್ರೀರಾಮಚಂದ್ರಸುಪ್ರಭಾತವಮ್

ಅನುಷ್ಟುಪ್

ಶ್ರೀರಾಮಚಂದ್ರದಯಿತೇ ಸೀತೇ ಜನಕನಂದಿನಿ ।
ಉತ್ತಮೇ ಸರ್ವನಾರೀಣಾಂ ಸುಪ್ರಭಾತಂ ಮದಂಬ ತೇ ॥ ೧

ಸರ್ವಮಂಗಲಮಾಂಗಲ್ಯೇ ರಘುನಾಥಮನೋರಮೇ ।
ಉತ್ತಿಷ್ಠಮಾತಃ ಸುಪ್ರಾತಂ ಜಗದಸ್ತು ಜಗನ್ನುತೇ ॥ ೨

ಕೌಸಲ್ಯಾಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ವಿಶ್ವಮಂಗಲಮ್ ॥ ೩

ವಸಂತತಿಲಕಾ

ಆಜಾನುಬಾಹುರರವಿಂದದಲಾಯತಾಕ್ಷಃ
ಕೋದಂಡಪಾಣಿರನುಜಾವನಿಜಾಸಹಾಯಃ ।
ಧ್ಯೇಯಃ ಸದಾ ಸಕಲಲೋಕಹೃದಂತರಾತ್ಮಾ
ರಾಮ ತ್ವಮೇವ ಶರಣಂ ತವ ಸುಪ್ರಭಾತಮ್ ॥ ೪

ವಾಕ್ಯಂ ಗುರೋರನುಸರನ್ ಕುಶಿಕಾತ್ಮಜಸ್ಯ
ಹತ್ವಾ ಸುಕೇತುತನಯಾಮನಯಪ್ರತಿಷ್ಠಾಮ್ ।
ಧರ್ಮಸ್ಯ ವೀರ ಜಯಮಾದ್ಯಮದರ್ಶಯಸ್ತ್ವಂ
ಶ್ರೀರಾಮಚಂದ್ರ ರಘುಪುಂಗವ ಸುಪ್ರಭಾತಮ್ ॥ ೫

ಯಜ್ಞಸ್ಯ ರಕ್ಷಣವಿಧಾವಥ ಗಾಧಿಸೂನೋಃ
ಅಸ್ತ್ರೇಣ ತೇ ಸದಹಿತೋ ನಿಹತಃ ಸುಬಾಹುಃ ।
ದೈತ್ಯಃ ಪರೋಽಪ್ಯಹೃತ ಪರ್ಣಮಿವಾರ್ಣವಾಂತಃ
ಶ್ರೀರಾಮಚಂದ್ರ ರಘುನಂದನ ಸುಪ್ರಭಾತಮ್ ॥ ೬

ಗತ್ವಾ ವಿದೇಹನಗರೀಮಮರ್ಯೈರನಮ್ಯಂ
ರೌದ್ರಂ ಧನುರ್ದಲಯತಾ ಜಯತಾಯತಾಕ್ಷೀಮ್ ।
ಕಾಕುತ್ಸ್ಥ ಕೀರ್ತಿವನಿತಾಪ್ಯಮಲಾ ತ್ವಯಾಪ್ತಾ
ಸೀತಾಪತೇ ರಘುಪತೇ ನೃಪತೇ ಪ್ರಭಾತಮ್ ॥ ೭

ಘೋರಂ ಪ್ರಗೃಹ್ಯ ಪರಶುಂ ಪರುಷಂ ಬ್ರುವಾಣೋ
ಧೀರ ತ್ವಯಾ ಧೃತಶರೇಣ ಸ ರೈಣುಕೇಯಃ ।
ನೀತಃ ಶಮಂ ವಿಪಿನವಹ್ನಿರಿವಾಂಬುದೇನ
ಶ್ರೀರಾಮಚಂದ್ರ ಜಯ ಸಂಪ್ರತಿ ಸುಪ್ರಭಾತಮ್ ॥ ೮

ಲೋಕಾತಿಗಸ್ಯ ಭವತೋ ಜಗದಾಧಿಪತ್ಯಂ
ವಾಕ್ಯಾತ್ ಪಿತುಶ್ಚ ವಿಪಿನೇಷ್ವಥ ಮೌನಿಕೃತ್ಯಮ್ ।
ಧರ್ಮಾತ್ಮನಃ ಸಮದೃಶಃ ಸದೃಶಂ ವಿಭಾತಂ
ಶ್ರೀರಾಮಚಂದ್ರ ಭರತಾರ್ಚಿತ ಸುಪ್ರಭಾತಮ್ ॥ ೯

ಸೌವರ್ಣವರ್ಣವಪುಷಾ ತವ ಕರ್ತುಮಿಚ್ಛನ್
ಮಾಯಾವಿನಿರ್ಮಿತಜಗತ್ತ್ರಿತಯಸ್ಯ ಮೋಹಮ್ ।
ಮೂಢೋಽಸುರಃ ಶಕಲಿತಃ ಶಿತಸಾಯಕೇನ
ಶ್ರೀರಾಮಚಂದ್ರ ಜಯ ರಾಘವ ಸುಪ್ರಭಾತಮ್ ॥ ೧೦

ಉಗ್ರೋರಗಾವಿವ ನಿಕೃತ್ಯ ಕರಾಲಬಾಹೂ
ಪ್ರಕ್ಷಿಪ್ಯ ಭೀಷ್ಮವಪುಷಂ ಸುಷಿರೇ ಕಬಂಧಮ್ ।
ಸೌಮಿತ್ರಿಣಾ ಸಹ ಮದೀಶ ಯಯಾಥ ಪಂಪಾಂ
ಶ್ರೀರಾಮಚಂದ್ರ ರಘುವೀರ ಜಯ ಪ್ರಭಾತಮ್ ॥ ೧೧

ಸುಗ್ರೀವಸಖ್ಯಬಹುಲೀಕೃತಕಾರ್ಯ ಶೀಘ್ರಂ
ಸೂನುಂ ನಿಷೂದ್ಯ ಭವತಾ ಬಲಿನಂ ಬಲಾರೇಃ ।
ಧರ್ಮಸ್ಯ ಸೂಕ್ಷ್ಮತಮತಾ ವಿವೃತಾಽವತಾ ನಃ
ಶ್ರೀರಾಮಚಂದ್ರ ಮನುಜೇಂದ್ರ ಜಯ ಪ್ರಭಾತಮ್ ॥

ಮಾಲಿನೀ

ಅಥ ವಿರಹಸಮುತ್ಥಂ ಶೋಕವಹ್ನಿಂ ಪ್ರಿಯಾಯಾಃ
ರಘುವರ ಶಮಯಿಷ್ಯನ್ ಸ್ತಂಭಯನ್ನಂಬುರಾಶಿಮ್ ।
ತ್ರಿಭುವನಜಯಕೇತುಂ ಸೇತುಮಾಬಧ್ಯ ಪಾರಂ
ಪ್ಲವಗಬಲಮನೈಷೀಃ ರಾಮ ತೇ ಸುಪ್ರಭಾತಮ್ ॥ ೧೩

ಪವನತನಯಮೇರೋಃ ಶೃಂಗಮಾರುಹ್ಯ ತುಂಗಂ
ರವಿರಿವ ಕಿರಣೌಘೈಃ ಕೀರ್ಣಮಂಧಂ ತಮಿಸ್ರಮ್ ।
ಸಪದಿ ದನುಜವೃಂದಂ ಘೋರಮಸ್ತ್ರೈರುದಸ್ಯನ್
ಜಯಸಿ ಮಹಿತತೇಜಾ ದೇವ ತೇ ಸುಪ್ರಭಾತಮ್ ॥ ೧೪

ಗಿರಿಮಿವ ಗುರುಕಾಯಂ ಭೀಷಣಂ ಕುಂಭಕರ್ಣಂ
ಕವಲಮಿವ ಕಪೀನಾಂ ಯೂಥಮಾಚಾಮಯಂತಮ್ ।
ಮದಗಜಮಿವ ಸಿಂಹಃ ಸಂಹರನ್ ಜಿಹ್ಮಗೈಸ್ತ್ವಂ
ಜಯಸಿ ವಿಬುಧಸಂಘೈಃ ಸ್ತೂಯಮಾನಃ ಪ್ರಭಾತಮ್ ॥

ಶಿಖರಿಣೀ

ಯದರ್ಥಂ ಜನ್ಮಾಭೂತ್ ಪ್ರಭವ ಜಗತಾಂ ತೇ ರಘುಕುಲೇ
ಯದರ್ಥೋ ವಾಸಸ್ತೇ ನಿಖಿಲಜಗದಾವಾಸ ವಿಪಿನೇ ।
ಸ ಧರ್ಮಃ ಸಂಸಿದ್ಧೋ ದಶವದನಸಂಹಾರವಿಧಿನಾ
ಪ್ರಭಾತಂ ಸಂಜಾತಂ ಕಥಯತಿ ಖಗಾನಾಂ ಕಲರುತಮ್ ॥

ಮಂದಾಕ್ರಾಂತಾ

ಲಂಕಾಯಾಂ ತ್ವಂ ನಿಶಿಚರಪತಿಂ ಸಾಂಪರಾಯೇ ಮಥಿತ್ವಾ
ಭಕ್ತಂ ಸಾಧುಂ ತದನುಜಮಥ ಸ್ಥಾಪಯಿತ್ವಾ ಸ್ವರಾಜ್ಯೇ ।
ದೇವ್ಯಾ ಯುಕ್ತಃ ಕನಕನಿಭಯಾ ವಿದ್ಯುತೇವಾಂಬುವಾಹಃ
ಪ್ರಾಪ್ತೋಽಯೋಧ್ಯಾಂ ಭರತವರದೋ ರಾಮ ತೇ
ಸುಪ್ರಭಾತಮ್ ॥ ೧೭

ಶಾರ್ದೂಲವಿಕ್ರೀಡಿತಮ್

ಕೌಸಲ್ಯಾತನಯಂ ಪ್ರಫುಲ್ಲನಯನಂ ಕಾರುಣ್ಯನಿಃಷ್ಯಂದನಂ
ಸೀತಾಮಾನಸರಾಜಹಂಸಮನಿಶಂ ಯೋಗೀಶ್ವರಾನ್ವೇಷಿತಮ್ ।
ಮಾಯಾಮಾನುಷವೇಷಧಾರಿಣಮಜಂ ಕೈವಲ್ಯನಾಥಂ ವಿಭುಂ
ವಂದೇ ದಾಶರಥಿಂ ಪ್ರಭಾತಸಮಯೇ ರಾಮಂ
ಜಗನ್ಮಂಗಲಮ್ ॥ ೧೮

ಪೃಥ್ವೀ

ವಿದೇಹಕುಲನಂದಿನೀಹೃದಯಮಂದಿರೇ ಬಂಧುರೇ
ವಿರಾಜಿತಮಧೋಕ್ಷಜಂ ಜಲದಮೇಚಕಂ ರೋಚಕಮ್ ।
ಮನೋಗತಮಹಾರಿಪುಪ್ರಕರದಾರಕಂ ತಾರಕಂ
ಪ್ರಭಾತಸಮಯೇ ಭಜೇ ರಘುವರಂ ಪುಮಾಂಸಂ
ಪರಮ್ ॥ ೧೯

ಅನುಷ್ಟುಪ್

ನಮೋ ಧರ್ಮಾಯ ಮಹತೇ ವಿಶ್ವಕಲ್ಯಾಣಧಾರಿಣೇ ।
ನಮಃ ಸತ್ಯಾಯ ಶಾಂತಾಯ ಶ್ರೀರಾಮಾಯ ನಮೋ ನಮಃ ॥

—ಎನ್. ರಂಗನಾಥಶರ್ಮಾ

ಕಳೆದುಕೊಳ್ಳದೆ ಗಂಟೆ ದೇವರ ನಾಮವ-
ನೊಲಿದು ಹಾಡಲು ಕಷ್ಟವೇನು ।
ಬಲು ಘೋರಸಂಸಾರ ಶತ್ರುವ ಜಯಿಸಲು
ಬೆಳಗಾಗೆ ನೆನೆ ರಾಮಪದವ ॥

(ಸಮರ್ಥರಾಮದಾಸರ ರಚನೆಯ ಕನ್ನಡ ಅನುವಾದ)

ಸಂಕ್ಷೇಪರಾಮಾಯಣ

(ಜೈಮಿನಿ ಭಾರತ)

ವ್ಯಾಪಿಸಿದ ಸಂಪದಕೆ ನೆಲವನೆಯೆನಿಪ್ಪಯೋ
ಧ್ಯಾಪುರದೊಳವತರಿಸಿದಂ ಮಹಾವಿಷ್ಣು ಸುತ
ರೂಪದಿಂ ರಾಮಾಭಿಧಾನದೊಳ್ಪುತ್ರಕಾಮೇಷ್ಟಿಯಿಂ ದಶರಥಂಗೆ || ೧ ||

ತೊಳೆದು ಜನನಿಯ ಜಠರಮಂ ಜನಿಸಿ ಭವನದೊ
ಳ್ಬೆಳೆದು ಲಕ್ಷ್ಮಣ ಭರತ ಶತ್ರುಘ್ನರೊಡಗೂಡಿ
ತಳೆದು ಕೌಶಿಕನ ಮಖಮಂ ಕಾದು ತಾಟಕೆಯನೊರಸಿ ಮುನಿಸತಿಯಘವನು ।
ಕಳೆದು ಮಿಥಿಲೆಗೆ ಪೋಗಿ ಭಾರ್ಗವನ ಗರ್ವಮಂ
ಸೆಳೆದು ಹರಚಾಪಮಂ ಮುರಿದೊಲಿಸಿ ಸೀತೆಯಂ
ತಳೆದುತ್ಸವದೊಳಯೋಧ್ಯಾಪುರಿಗೆ ದಶರಥನೊಡನೆ ರಾಘವಂ ಬಂದನು || ೨ ||

ವರ್ಧಿಪ ಕುಮಾರಂಗೆ ಭೂಮೀಶ್ವರಂ ಬಳಿಕ
ಮೂರ್ಧಾಭಿಷೇಚನಂ ಮಾಡಲನುಗೈಯ್ಯೆ ನೃಪ-
ನರ್ಧಾಂಗಿ ತಡೆಯೆ ಪೊರಮಟ್ಟು ಬನಕೈದೆ ನರಪತಿ ಪುತ್ರಶೋಕದಿಂದ ।
ಸ್ವರ್ಧಾಮಕಡರೆ ಕೇಳುತ ಭರತನಂ ಕಳುಹಿ
ದುರ್ಧರದರಣ್ಯ ಪ್ರವೇಶಮಂ ಮಾಡಿದಂ
ಸ್ಪರ್ಧಿಸುವ ದನುಜರಂ ಮುರಿದು ಮುನಿಗಳನೋವಿ ಸತಿಸಹಿತ ಕಾಕುತ್ಸ್ಥನು
|| ೩ ||

ದಂಡಕಾರಣ್ಯದೊಳಿರಲ್ಕೆ ಶೂರ್ಪನಖೆ ಬಂ-
ದಂಡಲೆಯಲಾಕೆಯಂ ಭಂಗಿಸಿ ಖರಾದ್ಯರಂ
ಖಂಡಿಸಿ ಕನಕಮೃಗ ವ್ಯಾಜದಿಂದೈದೆ ಲಕ್ಷ್ಮಣನಗಲೆ ಕಪಟದಿಂದೆ ।
ಕೊಂಡೊಯ್ಯೆ ರಾವಣಂ ಸೀತೆಯಂ ಕಾಣದುರೆ
ಬೆಂಡಾಗಿ ವಿರಹದಿಂ ಬಿದ್ದಿಹ ಜಟಾಯುವಂ
ಕಂಡು ಪೊಲಬಂ ಕೇಳ್ದು ಸೌಮಿತ್ರಿಸಹಿತ ನಡೆದಂ ಮುಂದೆ ರಘುನಾಥನು || ೪ ||

*

ಪಥದೊಳ್ಕಬಂಧನಂ ಕೊಂದು ಶಬರಿಯ ಮನೋ
ರಥಮಂ ಸಲಿಸಿ ಕರುಣದಿಂದಾಂಜನೇಯನಂ
ಪ್ರಥಮದೊಳ್ಕಂಡು ಸುಗ್ರೀವಂಗೆ ಕೈಗೊಟ್ಟು ವಾಲಿಯಂ ಬಾಣದಿಂದೆ ।
ಮಥಿಸಿ ರಾವಣನ ಮೇಲಣ ರಾಜಕಾರಿಯದ
ಕಥನಕಾಳೋಚಿಸಿ ಕರಡಿಕಪಿಗಳಂ ನೆರಪಿ
ಪೃಥಿವಿಜೆಯನರಸಲ್ಕೆ ವೀರಹನುಮಂತನಂ ಕಳುಹಿದಂ ಕಾಕುತ್ಸ್ಥನು ॥ ೫ ॥

ಧೀಂಕಿಟ್ಟು ಶರಧಿಯಂ ದಾಂಟಿ ಮೇದಿನಿಯ ಸುತೆ
ಗಂಕಿತದ ಮುದ್ರಿಕೆಯನಿತ್ತು ಬೀಳ್ಕೊಂಡು ನಿ
ಶ್ಯಂಕೆಯೊಳಶೋಕವನವಂ ಕಿತ್ತು ದನುಜರಂ ಸದೆದಕ್ಷನಂ ಮರ್ದಿಸಿ ।
ಅಂಕದೊಳ್ಬಳಿಕಿಂದ್ರಜಿತುವಿನುರು ಬ್ರಹ್ಮಾಸ್ತ್ರ
ದಂಕೆಯಿಂ ನಿಂದು ವಾಲಧಿಗಿಕ್ಕಿದುರಿಯಿಂದ
ಲಂಕೆಯಂ ಸುಟ್ಟು ಬಂದೊಸಗೆವೇಳ್ದನಿಲಜನನಸುರಾರಿ ಮನ್ನಿಸಿದನು ॥ ೬ ॥

ಗಣನೆಯಿಲ್ಲದ ಕಪಿಗಳಂ ಕೂಡಿಕೊಂಡು ತೆಂ
ಕಣಕಡಲ ತೀರದೊಳ್ಬಿಟ್ಟು ಬಂದೊಡೆ ವಿಭೀ
ಷಣನಂ ಪರಿಗ್ರಹಿಸಿ ಲಂಕಾಧಿಪತ್ಯಮಂ ಕೊಟ್ಟು ಜಲಧಿಯನೆ ಕಟ್ಟಿ ।
ರಣದೊಳಸುರರ ಕುಲದ ಹೆಸರುಳಿಯದಂತೆ ರಾ
ವಣ ಕುಂಭಕರ್ಣ ಮೊದಲಾದ ರಕ್ಕಸರನುರೆ
ಹಣಿದವಾಡಿದನುರವಣಿಸಿ ಧೂಳಿಗೋಟೆಯಂ ಕೊಂಡನಾ ರಘುವೀರನು ॥ ೭ ॥

ರಾವಣನ ಪದವಂ ವಿಭೀಷಣಂಗೊಲಿದಿತ್ತು
ದೇವರ್ಕಳಂ ಪೊರೆದು ಸೆರೆಯಿರ್ದ ಸೀತೆಯಂ
ಪಾವಕನ ಮುಖದಿಂ ಪರಿಗ್ರಹಿಸಿ ಮೂಜಗಂ ಮೆಚ್ಚೆ ವಿಜಯೋತ್ಸವದೊಳು ।
ಭೂವರಂ ಸೌಮಿತ್ರಿ ದಶಮುಖಾವರಜ ಸು
ಗ್ರೀವಾದಿಗಳ ಗಡಣದಿಂದಯೋಧ್ಯಾಪುರಿಗೆ
ದೂವಾಳಿಸಿದನಮಲ ಮಣಿಪುಷ್ಪಕದ ಮೇಲೆ ಭರತನಂ ಪಾಲಿಸಲ್ಕೆ ॥ ೮ ॥

ವರಪುಷ್ಪಕವನಿಳಿದು ಭರತಶತ್ರುಘ್ನರಂ
ಕರುಣದಿಂ ತೆಗೆದಪ್ಪಿ ಕೌಶಿಕವಸಿಷ್ಠಾದಿ
ಗುರುಗಳಂ ಸತ್ಕರಿಸಿ ಕೈಕೆ ಮೊದಲಾಗಿರ್ದ ಮಾತೃಜನಕ್ಕೆರೆದೆ ನಮಿಸಿ ।
ಅರಮನೆಯ ಸತಿಯರಂ ಸಚಿವರಂ ಪ್ರಜೆಗಳಂ
ಪರಿಜನ ಪ್ರಕೃತಿಗಳನಿರದೆ ಕಾಣಿಸಿಕೊಂಡು
ಬರವನೇ ಹಾರೈಸಿ ಕೃಶೆಯಾದ ಕೌಸಲೆಗೆ ರಾಮನಭಿವಂದಿಸಿದನು ॥ ೯ ॥

ಕಯ್ದೊಳದೊಳೊಯ್ಯನೊಯ್ಯನೆ ಘನಸ್ನೇಹದಿಂ
ಮೈಯ್ದಡವಿ ತನಯನಂ ತಕ್ಕೈಸಿ ಮುಂಡಾಡಿ
ಕಯ್ದುಗಳ ಗಾಯಮಂ ಕಂಡು ಕರಗುತೆ ಮಗನೆ ನಿನ್ನ ಕೋಮಲತನುವನು ।
ಪೊಯ್ದವರದಾರಕಟ ಬೆಂದುದೆನ್ನೊಡಲೆಂದು
ಸುಯ್ದು ಮುಗ್ಧಾಭಾವದಿಂ ತನ್ನ ಸವತಿಯಂ
ಬಯ್ದು ಮರುಗುವ ಮಾತೆಯಂ ನೋಡಿ ನಗುತ ಸಂತೈಸಿದಂ ರಾವಣಾರಿ ॥ ೧೦ ॥

ಮೇಲೆ ತಾಳ್ದಂ ಶುಭಮುಹೂರ್ತದೋಳ್ವಾರಿನಿಧಿ
ಮೇರೆಯಾದವನಿಯಂ ಪಟ್ಟಾಭಿಷೇಚನದ
ಕಾಲದೊಳ್ಕಂಡರು ಸಮಸ್ತಮುನಿ ಗೀರ್ವಾಣ ವಾನರ ದನುಜ ಮನುಜರು ।
ಮೂಲೋಕಮೈದೆ ಕೊಂಡಾಡೆ ಬಳಿಕುರ್ವಿಯಂ
ಪಾಲಿಸುತ್ತಿರ್ದನೊಂಭತ್ತು ಸಾಸಿರವರುಷ
ಮೋಲೈಸಿದುದು ರಾಘವೇಂದ್ರನಂ ನಿಖಿಳ ಭೂಪತಿಚಯಂ ಪ್ರೀತಿಯಿಂದ ॥ ೧೧ ॥

ಯೂಪಮಯಮಾಯ್ತು ಧರೆಯೆಲ್ಲಮುಂ ವರಜಾತ
ರೂಪಮಯಮಾಯ್ತು ಮನೆಯೆಲ್ಲಮುಂ ಶುಕಪಿಕಾ
ಲಾಪಮಯಮಾಯ್ತು ವನಮೆಲ್ಲಮುಂ ವರ್ಧಿಪ ಪ್ರಜೆಗಳಿಂ ಸಂಚರಿಸುವ ।
ಗೋಪಮಯಮಾಯ್ತು ಗಿರಿಯೆಲ್ಲಮುಂ ರತ್ನಪ್ರ
ದೀಪಮಯಮಾಯ್ತು ತಮಮೆಲ್ಲಮುಂ ರಘುಜ ಪ್ರ
ತಾಪಮಯಮಾಯ್ತು ಮೂಜಗಮೆಲ್ಲಮುಂ ದಾಶರಥಿ ರಾಜ್ಯಮಂ ಪಾಲಿಸೆ ॥೧೨॥

ಶ್ರೀರಾಮನಾಮ ಸ್ಮರಣೆ

(ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು,
ಹೊಳೆನರಸೀಪುರ)

ರಾಮ ರಾಮ, ರಾಮ ರಾಮ, ರಾಮ ರಾಮ ಎನ್ನಿರಿ ।
ಕ್ಷೇಮವಿತ್ತು ಪೊರೆವ ರಾಮನಾಮವನ್ನು ಬಿಡದಿರಿ ॥ ಪ ॥

ಜಾತಿವರ್ಣಕುಲಗಳೆಂಬ ಹೆಮ್ಮೆಯನ್ನು ಕಳೆಯಿರಿ ।
ಪ್ರೀತಿಯಿಂದಲೆಲ್ಲರನ್ನು ಕಾಂಬುದೊಂದ ಕಲಿಯಿರಿ ॥
ಮಾತುಮಾತಿಗೊಮ್ಮೆ ರಾಮನಾಮವುಚ್ಚರಿಸಿರಿ ।
ಭೀತಿಯಿಲ್ಲವಿನ್ನುಮೇಲೆ ಪೂತರಾದೆವೆನ್ನಿರಿ ॥ ೧ ॥

ಧ್ಯಾನಮೌನವರಿಯದಿದ್ದರೇನು ? ಚಿಂತೆಪಡದಿರಿ ।
ನಾನು, ನೀನು—ಎಂಬ ಭೇದಬುದ್ಧಿಯನ್ನು ತೊಡೆಯಿರಿ ॥
ದೀನಬಂಧು ರಾಮನವನ ನಾಮವುಚ್ಚರಿಸಿರಿ ।
ಹಾನಿವೃದ್ಧಿಯಿಲ್ಲದಿರುವ ತಾಣವನ್ನೆ ಪಡೆಯಿರಿ ॥ ೨ ॥

ಹಣವು ವಿದ್ಯೆ, ಹರೆಯ ಬಲವು ಹೊಣೆಯೆ ? ನೀವೆ ನೋಡಿರಿ ।
ಕ್ಷಣದಿ ಮಾಯವಾಯ್ತು ರಾವಣನ ಸಿರಿಯದಾಪರಿ ॥
ಗುಣದ ಗನಿಯು ರಾಮನವನ ನಾಮವುಚ್ಚರಿಸಿರಿ ।
ಎಣಿಕೆಯಿಲ್ಲದನಿತು ಕಾಲ ಸುಖದಿ ಸಂಚರಿಸಿರಿ ॥ ೩ ॥

ಹಿಂದೆಗೈದ ಪಾಪಕಾಗಿ ಮನದೆ ಬೆದರಬೇಡಿರಿ ।
ಕುಂದುಕೊರತೆಯೆಲ್ಲ ಮನ್ನಿಸೆಂದು ಬಾಗಿ ಬೇಡಿರಿ ॥
ಒಂದೆ ಮನದೆ ಬಿಡದೆ ರಾಮನಾಮವುಚ್ಚರಿಸಿರಿ ।
ಅಂದು ಬೇಡ ಮೌನಿಯೆನಿಸಿದಂದವನ್ನೆ ಸ್ಮರಿಸಿರಿ ॥ ೪ ॥

ಪತಿತಪಾವನವು ರಾಮನಾಮವೆಂದು ನಂಬಿರಿ ।
ಸತತ ನಾಮಭಕುತಿಯನ್ನು ಹೃದಯದೊಳಗೆ ತುಂಬಿರಿ ॥
ಗತಿಯು ರಾಮನಾಮವೊಂದೆ ಬಿಡದೆ ಉಚ್ಚರಿಸಿರಿ ।
ವ್ರತವಿದೊಂದ ಹಿಡಿದು ಶಂಕರಸಮಾನರೆನಿಸಿರಿ ॥ ೫ ॥

ಶ್ರೀರಾಮಮಂತ್ರ ಮಹಿಮೆ

ಜಗತಿ ವಿಶದಮಂತ್ರಂ ಜಾನಕೀಪ್ರಾಣಮಂತ್ರಂ
ವಿಬುಧವಿನುತಮಂತ್ರಂ ವಿಶ್ವವಿಖ್ಯಾತಮಂತ್ರಮ್ ।
ದಶರಥಸುತಮಂತ್ರಂ ದೈತ್ಯಸಂಹಾರಮಂತ್ರಂ
ರಘುಪತಿನಿಜಮಂತ್ರಂ ರಾಮರಾಮೇತಿ ಮಂತ್ರಮ್ ॥ ೧ ॥

ಜಯತು ಜಯತು ಮಂತ್ರಂ ಜನ್ಮಸಾಫಲ್ಯಮಂತ್ರಂ
ಜನನಮರಣಭೇದಕ್ಲೇಶವಿಚ್ಛೇದಮಂತ್ರಮ್ ।
ಸಕಲನಿಗಮಮಂತ್ರಂ ಸರ್ವಶಾಸ್ತ್ರೈಕಮಂತ್ರಂ
ರಘುಪತಿನಿಜಮಂತ್ರಂ ರಾಮರಾಮೇತಿ ಮಂತ್ರಮ್ ॥ ೨ ॥

ನಿಖಿಲನಿಲಯಮಂತ್ರಂ ನಿತ್ಯತತ್ತ್ವಾಖ್ಯಮಂತ್ರಂ
ಭವಕುಲಹರಮಂತ್ರಂ ಭೂಮಿಜಾಪ್ರಾಣಮಂತ್ರಮ್ ।
ಪವನಜನುತಮಂತ್ರಂ ಪಾರ್ವತೀಮೋಕ್ಷಮಂತ್ರಂ
ಪಶುಪತಿನಿಜಮಂತ್ರಂ ಪಾತು ಮಾಂ ರಾಮಮಂತ್ರಮ್ ॥ ೩ ॥

ಬ್ರಹ್ಮಾದಿಯೋಗಿ ಮುನಿಪೂಜಿತ ಸಿದ್ಧಮಂತ್ರಂ
ದಾರಿದ್ರ್ಯದುಃಖಭವರೋಗವಿನಾಶಮಂತ್ರಮ್ ॥
ಸಂಸಾರಸಾಗರಸಮುತ್ತರಣೈಕಮಂತ್ರಂ
ವಂದೇ ಮಹಾಭಯಹರಂ ರಘುರಾಮಮಂತ್ರಮ್ ॥ ೪ ॥

ಸಂಸಾರಸಾಗರಭಯಾಪಹವಿಶ್ವಮಂತ್ರಂ
ಸಾಕ್ಷಾನ್ಮುಮುಕ್ಷುಜನಸೇವಿತ ಸಿದ್ಧಮಂತ್ರಮ್ ।
ಸಾರಂಗಹಸ್ತಮುಖಹಸ್ತನಿವಾಸಮಂತ್ರಂ
ಕೈವಲ್ಯಮಂತ್ರಮನಿಶಂ ಭಜ ರಾಮಮಂತ್ರಮ್ ॥ ೫ ॥

ಶ್ರೀರಾಮ ಜಯರಾಮ ಜಯಜಯರಾಮ

ಶ್ರೀರಾಮನಾಮ ಲೇಖನ ಮಹಿಮೆ

(ಪರಶಿವನು ಪಾರ್ವತಿಗೆ ಹೇಳಿದ್ದು)

ಶೃಣು ದೇವಿ ಪ್ರವಕ್ಷ್ಯಾಮಿ ಗುಹ್ಯಾದ್ಗುಹ್ಯತರಂ ಮಹತ್ ।
ಪ್ರಾಪ್ನೋತಿ ಪರಮಾಂ ಸಿದ್ಧಿಂ ದೀರ್ಘಾಯುಃ ಪುತ್ರಸಂಪದಮ್ ॥ ೧ ॥

ರಾಮನಾಮ ಲಿಖೇದ್ಯಸ್ತು
ಲಕ್ಷ ಕೋಟಿ ಶತಾವಧಿ ।
ಏಕೈಕಮಕ್ಷರಂ ಪುಂಸಾಂ
ಮಹಾಪಾತಕ ನಾಶನಮ್ ॥ ೨ ॥

ಸಕಾಮೋಽಪಿ ಲಭೇದ್ಯತ್ತು
ನಿಷ್ಕಾಮೇನ ತು ಕಿಂ ಪುನಃ ।
ಇಹೈವ ಸುಖಮಾಪ್ನೋತಿ
ಅಂತೇ ಚ ಪರಮಂ ಪದಮ್ ॥ ೩ ॥

ಬ್ರಹ್ಮಾದಿಭಿಸ್ತು ತತ್ಪುಣ್ಯಂ
ವಕ್ತುಂ ಶಕ್ತಿರ್ನ ಕಾಚನ ।
ಅಶ್ವಮೇಧ ಸಹಸ್ರಾಣಿ
ವಾಜಪೇಯ ಶತಾನಿ ಚ ।
ಏಕೇನ ರಾಮನಾಮ್ನಾ ತು
ತತ್ಫಲಂ ಲಭತೇ ನರಃ ॥ ೪ ॥

ನಾರೀ ವಾ ಪುರುಷೋ ವಾಪಿ
ಶ್ರೇಷ್ಠೋಽವಾಪ್ಯಧಮೋ ನರಃ ।
ರಾಮನಾಮ್ನಾ ತು ಮುಕ್ತಾಸ್ತೇ
ಸತ್ಯಂ ಸತ್ಯಂ ವರಾನನೇ ॥ ೫ ॥

ಶ್ರೀರಾಮಚಂದ್ರ ಸ್ತೋತ್ರಮ್

ಸಕಲಭುವನರತ್ನಂ ಸಚ್ಚಿದಾನಂದರತ್ನಂ
ಸಕಲಹೃದಯರತ್ನಂ ಸೂರ್ಯಬಿಂಬಾಂತರತ್ನಮ್ ।
ವಿಮಲಸುಕೃತರತ್ನಂ ವೇದವೇದಾಂತರತ್ನಂ
ಪುರಹರಜಪರತ್ನಂ ಪಾತು ಮಾಂ ರಾಮರತ್ನಮ್ ॥ ೧ ॥

ಇಕ್ಷ್ವಾಕುವಂಶಾರ್ಣವಜಾತರತ್ನಂ
ಸೀತಾಂಗನಾಯೌವನಭಾಗ್ಯರತ್ನಮ್ ।
ವೈಕುಂಠರತ್ನಂ ಮಮ ಭಾಗ್ಯರತ್ನಂ
ಶ್ರೀರಾಮರತ್ನಂ ಶಿರಸಾ ನಮಾಮಿ ॥ ೨ ॥

ನಿಗಮಶಿಶಿರರತ್ನಂ ನಿರ್ಮಲಾನಂದರತ್ನಂ
ನಿರುಪಮಗುಣರತ್ನಂ ನಾದನಾದಾಂತರತ್ನಮ್ ।
ದಶರಥಕುಲರತ್ನಂ ದ್ವಾದಶಾಂತಸ್ಸ್ಥರತ್ನಂ
ಪಶುಪತಿಜಪರತ್ನಂ ಪಾತು ಮಾಂ ರಾಮರತ್ನಮ್ ॥ ೩ ॥

ಸಕಲಸುಕೃತರತ್ನಂ ಸತ್ಯವಾಕ್ಯಾರ್ಥರತ್ನಂ
ಶಮದಮಗುಣರತ್ನಂ ಪಾತು ಮಾಂ ರಾಮರತ್ನಮ್ ।
ಪ್ರಣವನಿಲಯರತ್ನಂ ಪ್ರಸ್ಫುಟದ್ಯೋತಿರತ್ನಂ
ಪರಮಪದವಿರತ್ನಂ ಪಾತು ಮಾಂ ರಾಮರತ್ನಮ್ ॥ ೪ ॥

ವದತು ವದತು ವಾಣೀ ರಾಮ ರಾಮೇತಿ ನಿತ್ಯಂ
ಜಯತು ಜಯತು ಚಿತ್ತಂ ರಾಮಪಾದಾರವಿಂದಮ್ ।
ನಮತು ನಮತು ದೇಹಃ ಸಂತತಂ ರಾಮಚಂದ್ರಂ
ನ ಭವತು ಮಮ ಪಾಪಂ ಜನ್ಮಜನ್ಮಾಂತರೇಷು ॥ ೫ ॥

ರಾಮಂ ರಾಕ್ಷಸಮರ್ದನಂ ರಘುಪತಿಂ ಶಕ್ರಾರಿವಿಧ್ವಂಸಿನಂ
ಸುಗ್ರೀವೇಪ್ಸಿತರಾಜ್ಯದಂ ಸುರಪತೇಃ ಪುತ್ರಾಂತಕಂ ಶಾರ್ಙ್ಗಿಣಮ್ ।
ಭಕ್ತಾನಾಮಭಯಪ್ರದಂ ಭಯಹರಂ ಪಾಪೌಘ ವಿಧ್ವಂಸಿನಂ
ಸೀತಾಸೇವಿತ ಪಾದಪದ್ಮಯುಗಲಂ ರಾಮಂ ಭಜೇ ಶ್ಯಾಮಲಮ್ ॥ ೬ ॥

ಕೋದಂಡದೀಕ್ಷಾಗುರುಮಪ್ರಮೇಯಂ
ಸಲಕ್ಷ್ಮಣಂ ದಾಶರಥಿಂ ದಯಾಲುಮ್ ।
ಆಜಾನುಬಾಹುಂ ಜಗದೇಕವೀರಂ
ಅನಾಥನಾಥಂ ರಘುನಾಥಮೀಡೇ ॥ ೭ ॥

ಸಾಕೇತೇ ನಗರೇ ಸಮಸ್ತಮಹಿಮಾಧಾರೇ ಜಗನ್ಮೋಹನಂ
ರತ್ನಸ್ತಂಭಸಹಸ್ರಮಂಟಪಮಹಾಸಿಂಹಾಸನೇ ಸಾಂಬುಜೇ ।
ವಿಶ್ವಾಮಿತ್ರವಸಿಷ್ಠಗೌತಮಶುಕವ್ಯಾಸಾದಿಭಿರ್ಮಾನಿಭಿಃ
ಧ್ಯೇಯಂ ಲಕ್ಷ್ಮಣಲೋಕಪಾಲಸಹಿತಂ ಸೀತಾಸಮೇತಂ ಭಜೇ ॥ ೮ ॥

ರಾಜೀವನೇತ್ರ ರಘುಪುಂಗವ ರಾಮಭದ್ರ
ರಾಕೇಂದುಬಿಂಬಸದೃಶಾನನ ನೀಲಗಾತ್ರ ।
ರಾಮಾಭಿರಾಮ ರಘುವಂಶಸಮುದ್ರರತ್ನ
ಶ್ರೀರಾಮಚಂದ್ರ ಮಮ ದೇಹಿ ಕರಾವಲಂಬಮ್ ॥ ೯ ॥

ಅಗಣಿತಗುಣಮಪ್ರಮೇಯಮಾದ್ಯಂ
ಸಕಲಜಗತ್ಸ್ಥಿತಿಸಂಯಮಾದಿಹೇತುಮ್ ।
ಉಪರಮಪರಮಂ ಪರಾತ್ಮಭೂತಂ
ಸತತಮಹಂ ಪ್ರಣತೋಽಸ್ಮಿ ರಾಮಚಂದ್ರಮ್ ॥ ೧೦ ॥

ಸಪ್ತರ್ಷಿ ರಾಮಾಯಣಮ್

ಕಶ್ಯಪಮಹರ್ಷಿರಚಿತಃ-ಶ್ಲೋಕ ೧

(ಬಾಲಕಾಂಡಃ)

ಜಾತಃ ಶ್ರೀ ರಘುನಾಯಕೋ ದಶರಥಾ-
ನ್ಮುನ್ಯಾಶ್ರಯಾತ್ ತಾಟಕಾಂ
ಹತ್ವಾ ರಕ್ಷಿತ ಕೌಶಿಕ ಕ್ರತುವರಃ
ಕೃತ್ವಾಪ್ಯಹಲ್ಯಾಂ ಶುಭಾಮ್ ।
ಭಂಕ್ತ್ವಾ ರುದ್ರಶರಾಸನಂ ಜನಕಜಾಂ
ಪಾಣೌ ಗೃಹೀತ್ವಾ ತತೋ
ಜಿತ್ವಾರ್ಧಾಧ್ವನಿ ಭಾರ್ಗವಂ
ಪುನರಗಾತ್ ಸೀತಾಸಮೇತಃ ಪುರೀಮ್ ॥

ಶ್ರೀಮನ್ನಾರಾಯಣನು ಶ್ರೀರಾಮಚಂದ್ರನ ರೂಪದಲ್ಲಿ ದಶರಥ ಮಹಾರಾಜನಿಗೆ ಪುತ್ರನಾಗಿ ಜನಿಸಿದನು. ವಿಶ್ವಾಮಿತ್ರ ಮಹಾ ಮುನಿಯನ್ನು ಆಶ್ರಯಿಸಿದವನಾಗಿ ತಾಟಕೆಯೆಂಬ ರಕ್ಕಸಿಯನ್ನು ಸಂಹರಿಸಿದನು — ಮತ್ತು ಕೌಶಿಕಮುನೀಂದ್ರನ ಯಜ್ಞ ರಕ್ಷಣೆ ಮಾಡಿದನು. ದಾರಿಯಲ್ಲಿ ಅಹಲ್ಯೆಯನ್ನು ಉದ್ಧರಿಸಿ, ಮಿಥಿಲಾಪುರಿಗೆ ಹೋಗಿ ಅಲ್ಲಿ ಶಿವಧನುಸ್ಸನ್ನು ಮುರಿದು ಜನಕನ ಮಗಳಾದ ಸೀತಾದೇವಿಯನ್ನು ವಿವಾಹವಾದನು. ವಾಪಸ್ಸು ಬರುವ ದಾರಿಯಲ್ಲಿ ಭಾರ್ಗವ ರಾಮನನ್ನು ಪರಾಭವಗೊಳಿಸಿ ಸೀತಾಸಮೇತನಾಗಿ ಅಯೋಧ್ಯಾನಗರವನ್ನು ಪ್ರವೇಶಿಸಿ ಸುಖವಾಗಿದ್ದನು.

ಅತ್ರಿಮಹರ್ಷಿರಚಿತಃ-ಶ್ಲೋಕ ೨

(ಅಯೋಧ್ಯಾಕಾಂಡಃ)

ದಾಸ್ಯಾ ಮಂಥರಯಾ ದಯಾರಹಿತಯಾ
ದುರ್ಬೋಧಿತಾ ಕೈಕಯೀ
ಶ್ರೀರಾಮಪ್ರಥಮಾಭಿಷೇಕಸಮಯೇ
ಮಾತಾಪ್ಯಯಾಚದ್ವರೌ ।
ಭರ್ತ್ತಾರಂ 'ಭರತಃ ಪ್ರಶಾಸ್ತು ಧರಣೀಂ'
'ರಾಮೋ ವನಂ ಗಚ್ಛತಾ'-
ದಿತ್ಯಾಕರ್ಣ್ಯ ಸ ಚೋತ್ತರಂ ನ ಹಿ
ದದೌ ದುಃಖೇನ ಮೂರ್ಛಾಂ ಗತಃ ॥

ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕವನ್ನು ಮಾಡಬೇಕೆಂದು ದಶರಥಮಹಾರಾಜನು ಏರ್ಪಡಿಸಿದಾಗ, ನಿರ್ದಯಳಾದ ಮಂಥರೆ ಯೆಂಬ ದಾಸಿಯು ಕೈಕೇಯಿಗೆ ದುರ್ಬೋಧೆ ಮಾಡಿದಳು. ಕೈಕೇಯಿಯು ಪತಿಯಲ್ಲಿ 'ಭರತನು ಧರಣೀಪಾಲನಾಗಬೇಕು' 'ರಾಮನು ಕಾಡಿಗೆ ಹೋಗಬೇಕು' ಎಂದು ಎರಡು ವರಗಳನ್ನು ಬೇಡಿದಳು. ಇದನ್ನು ಕೇಳಿದ ರಾಜನ ಬಾಯಿಯಿಂದ ಮಾತು ಗಳೇ ಹೊರಡಲಿಲ್ಲ; ಅವನು ದುಃಖಾತಿಶಯದಿಂದ ಮೂರ್ಛಿತ ನಾದನು.

ಭರದ್ವಾಜಮಹರ್ಷಿರಚಿತಃ-ಶ್ಲೋಕ ೩

(ಅರಣ್ಯಕಾಂಡಃ)

ಶ್ರೀರಾಮಃ ಪಿತೃಶಾಸನಾದ್ವನಮಗಾತ್
ಸೌಮಿತ್ರಿಸೀತಾನ್ವಿತೋ
ಗಂಗಾಂ ಪ್ರಾಪ್ಯ ಜಟಾಂ ನಿಬಧ್ಯ ಸ ಗುಹಃ
ಸಚ್ಚಿತ್ರಕೂಟೇ ವಸನ್ ।
ಕೃತ್ವಾ ತತ್ರ ಪಿತೃಕ್ರಿಯಾಂ ಸ ಭರತೋ
ದತ್ವಾಽಭಯಂ ದಂಡಕೇ
ಪ್ರಾಪ್ಯಾಗಸ್ತ್ಯಮುನೀಶ್ವರಂ ತದುದಿತಂ
ಧೃತ್ವಾ ಧನುಶ್ಚಾಕ್ಷಯಮ್ ॥

ಶ್ರೀರಾಮನು ತಂದೆಯ ಆಜ್ಞೆಯಂತೆ ಸೀತಾಲಕ್ಷ್ಮಣ ಸಮೇತನಾಗಿ ಕಾಡಿಗೆ ಹೊರಟನು. ಗಂಗಾನದೀತೀರದಲ್ಲಿ ಗುಹನೊಡಗೂಡಿ ಜಟಾಧಾರಣೆಯನ್ನು ಮಾಡಿ ಚಿತ್ರಕೂಟದಲ್ಲಿ ವಾಸವಾಗಿದ್ದನು. ಅಲ್ಲಿಗೆ ಬಂದ ಭರತನೊಡಗೂಡಿ ತಂದೆಗೆ ಅಪರಕ್ರಿಯೆಗಳನ್ನಾಚರಿಸಿದನು. ದಂಡಕಾರಣ್ಯವಾಸಿಗಳಾದ ಋಷಿಗಳಿಗೆ ಅಭಯವನ್ನಿತ್ತು, ಅಗಸ್ತ್ಯಮಹರ್ಷಿಗಳನ್ನು ಭೇಟಿ ಮಾಡಿ, ಅವರು ಅನುಗ್ರಹಿಸಿದ ಅಕ್ಷಯಧನುಸ್ಸನ್ನು ಸ್ವೀಕರಿಸಿದನು.

ವಿಶ್ವಾಮಿತ್ರಮಹರ್ಷಿರಚಿತಃ-ಶ್ಲೋಕ ೪

(ಕಿಷ್ಕಿಂಧಾಕಾಂಡಃ)

ಗತ್ವಾ ಪಂಚವಟೀಮಗಸ್ತ್ಯವಚನಾತ್
ದತ್ವಾಽಭಯಂ ಮೌನಿನಾಂ
ಛಿತ್ವಾ ಶೂರ್ಪಣಖಾಸ್ಯಕರ್ಣಯುಗಲಂ
ತ್ರಾತುಂ ಸಮಸ್ತಾನ್ ಮುನೀನ್ ।
ಹತ್ವಾ ತಂ ಚ ಖರಂ ಸುವರ್ಣಹರಿಣಂ
ಭಿತ್ತ್ವಾ ತಥಾ ವಾಲಿನಂ
ತಾರಾರತ್ನಮವೈರಿರಾಜ್ಯಮಕರೋತ್
ಸರ್ವಂ ಚ ಸುಗ್ರೀವಸಾತ್ ॥

ಅಗಸ್ತ್ಯಋಷಿಗಳ ವಚನಪ್ರಕಾರ ಶ್ರೀ ರಾಮನು ಪಂಚವಟಿಗೆ ತೆರಳಿದನು. ಮತ್ತು ಮುನಿಗಳಿಗೆ ಅಭಯಪ್ರದಾನ (ರಾಕ್ಷಸರನ್ನು ದಂಡಿಸುವುದಾಗಿ) ಮಾಡಿ ಶೂರ್ಪಣಖೆಯ ಕಿವಿ ಮೂಗುಗಳನ್ನು (ಲಕ್ಷ್ಮಣನಿಂದ) ಕುಯ್ಯಿಸಿದನು. ಖರಾದಿ ರಾಕ್ಷಸರನ್ನು ಸಂಹರಿಸಿ, ಚಿನ್ನದ ಮಾಯಾಜಿಂಕೆಯನ್ನು ಕೊಂದುಹಾಕಿದನು. ಅನಂತರ ವಾಲಿಸಂಹಾರಮಾಡಿ ನಿಷ್ಕಂಟಕವಾದ ವಾನರರಾಜ್ಯವನ್ನೂ ಮತ್ತು ರಮಣೀಯಳಾದ ತಾರಾದೇವಿಯನ್ನೂ ಮಿತ್ರನಾದ ಸುಗ್ರೀವನಿಗೆ ದೊರಕಿಸಿದನು.

ಗೌತಮಮಹರ್ಷಿರಚಿತಃ-ಶ್ಲೋಕ ೫

(ಸುಂದರಕಾಂಡಃ)

ದೂತೋ ದಾಶರಥೇಸ್ಸಲೀಲಮುದಧಿಂ
ತೀರ್ತ್ವಾ ಹನುಮಾನ್ ಮಹಾನ್
ದೃಷ್ಟ್ವಾಽಶೋಕವನೇ ಸ್ಥಿತಾಂ ಜನಕಜಾಂ
ದತ್ವಾಂಗುಲೀಮುದ್ರಿಕಾಂ ।
ಅಕ್ಷಾದೀನಸುರಾನ್ ನಿಹತ್ಯ ಮಹತೀಂ
ಲಂಕಾಂ ಚ ದಗ್ಧ್ವಾ ಪುನಃ
ಶ್ರೀರಾಮಂ ಚ ಸಮೇತ್ಯ 'ದೇವ !
ಜನನೀ ದೃಷ್ಟಾ ಮಯೇ'ತ್ಯಬ್ರವೀತ್ ॥

ದಾಶರಥಿಯ ದೂತನಾದ ಹನುಮಂತನು ಅಪಾರವಾದ ಸಮುದ್ರವನ್ನು ಲೀಲಾಜಾಲವಾಗಿ ದಾಟಿ, ಅಶೋಕವನದಲ್ಲಿ ಜಾನಕಿಯನ್ನು ಸಂದರ್ಶಿಸಿ, ಅವಳಿಗೆ ರಾಮನಾಮಾಂಕಿತ ಉಂಗುರವನ್ನು ಸಮರ್ಪಿಸಿದನು. ಅಕ್ಷಾದಿ ರಾಕ್ಷಸರನ್ನು ಕೊಂದು ಲಂಕಾನಗರಿಯನ್ನು ದಹಿಸಿ, ಹಿಂತಿರುಗಿ ಬಂದು ಶ್ರೀರಾಮನನ್ನು ಸೇರಿ 'ದೇವಾ, ನಾನು ಸೀತಾಮಾತೆಯನ್ನು ಸಂದರ್ಶಿಸಿದೆನು' ಎಂದು ತಿಳಿಸಿದನು.

ಜಮದಗ್ನಿಮಹರ್ಷಿರಚಿತಃ-ಶ್ಲೋಕ ೬

(ಯುದ್ಧಕಾಂಡಃ)

ರಾಮೋ ಬದ್ಧಪಯೋನಿಧಿಃ ಕಪಿವರೈ-
ರ್ವೀರೈರ್ನಲಾದ್ಯೈರ್ವೃತೋ
ಲಂಕಾಂ ಪ್ರಾಪ್ಯ ಸಕುಂಭಕರ್ಣತನುಜಂ
ಹತ್ವಾ ರಣೇ ರಾವಣಂ ।
ತಸ್ಯಾಂ ನ್ಯಸ್ಯ ವಿಭೀಷಣಂ ಪುನರಸೌ
ಸೀತಾಪತಿಃ ಪುಷ್ಪಕಾ-
ರೂಢಸ್ಸನ್ ಪುರಮಾಗತಃ ಸಭರತಃ
ಸಿಂಹಾಸನಸ್ಥೋ ಬಭೌ ॥

ಶ್ರೀರಾಮನು ನಲ ಮೊದಲಾದ ಕಪಿವೀರರೊಡಗೂಡಿ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ, ಲಂಕೆಗೆ ಹೋಗಿ, ಕುಂಭಕರ್ಣ, ರಾವಣಾದಿ ರಾಕ್ಷಸರನ್ನು ಯುದ್ಧದಲ್ಲಿ ಕೊಂದು, ಲಂಕಾರಾಜ್ಯವನ್ನು ವಿಭೀಷಣನಿಗೆ ವಹಿಸಿಕೊಟ್ಟನು.

ಶ್ರೀರಾಮನು ಸೀತಾಸಮೇತನಾಗಿ ಎಲ್ಲರೊಡನೆ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಹಿಂತಿರುಗಿ, ತನ್ನ ಸೋದರ ಭರತನೊಡಗೂಡಿ, ಸಿಂಹಾಸನಾರೂಢನಾಗಿ ಪ್ರಕಾಶಿಸಿದನು.

ವಸಿಷ್ಠಮಹರ್ಷಿರಚಿತಃ-ಶ್ಲೋಕ ೭

(ಉತ್ತರಕಾಂಡಃ)

ಶ್ರೀರಾಮೋ ಹಯಮೇಧಮುಖ್ಯಮಖಕೃತ್
ಸಮ್ಯಕ್ ಪ್ರಜಾಃ ಪಾಲಯನ್
ಕೃತ್ವಾ ರಾಜ್ಯಮಥಾನುಜೈಶ್ಚ ಸುಚಿರಂ
ಭೂರಿಸ್ವಧರ್ಮಾನ್ವಿತೌ ।
ಪುತ್ರೌ ಭ್ರಾತೃಸುತಾನ್ವಿತೌ ಕುಶಲವೌ
ಸಂಸ್ಥಾಪ್ಯ ಭೂಮಂಡಲೇ
ಸೋಽಯೋಧ್ಯಾಪುರವಾಸಿಭಿಶ್ಚ
ಸರಯೂಸ್ನಾತಃ ಪ್ರಪೇದೇ ದಿವಮ್ ॥

ಶ್ರೀರಾಮನು ಅಶ್ವಮೇಧಾದಿ ಯಜ್ಞಗಳನ್ನು ಯಥಾವಿಧಿಯಾಗಿ ಆಚರಿಸಿ, ತನ್ನ ತಮ್ಮಂದಿರೊಡಗೂಡಿ ಚಿರಕಾಲ ರಾಜ್ಯವನ್ನಾಳಿದನು. ಅನಂತರ ತಮ್ಮ ಸ್ವಧರ್ಮವನ್ನು ಪಾಲಿಸುವವರೂ, ತನ್ನ ಸಹೋದರರ ಪುತ್ರರಿಂದೊಡಗೂಡಿದವರೂ, ತನ್ನ ಕುಮಾರರೂ ಆದ ಲವಕುಶರನ್ನು ಭೂಮಂಡಲಕ್ಕೆ ರಾಜರನ್ನಾಗಿ ಮಾಡಿದನು. ಕೊನೆಯಲ್ಲಿ ತನ್ನ ಆತ್ಮೀಯರಾದ ಅಯೋಧ್ಯಾಪುರವಾಸಿಗಳೊಡಗೂಡಿ ಸರಯೂನದಿಯಲ್ಲಿ ಸ್ನಾನಮಾಡಿ, ಪರಮಪದವಿಯನ್ನಲಂಕರಿಸಿದನು.

ಫಲಶ್ರುತಿಃ

ಶ್ರೀರಾಮಸ್ಯ ಕಥಾಸುಧಾತಿಮಧುರಾನ್
ಶ್ಲೋಕಾನಿಮಾನ್ ಯೇ ಜನಾಃ
ಶೃಣ್ವಂತಿ ಪ್ರಪಠಂತಿ ಚ ಪ್ರತಿದಿನಂ
ತೇಽಘೌಘವಿಧ್ವಂಸಿನಃ ।
ಶ್ರೀಮಂತೋ ಬಹುಪುತ್ರಪೌತ್ರಸಹಿತಾ
ಭುಕ್ತ್ವೇಹ ಭೋಗಾಂಶ್ಚಿರಂ
ಭೋಗಾಂತೇ ತು ಸದಾರ್ಚಿತಂ
ಸುರಗಣೈರ್ವಿಷ್ಣೋರ್ಲಭಂತೇ ಪದಮ್ ॥

ಶ್ರೀರಾಮಚಂದ್ರ ಕಥಾಸುಧಾರಸದಿಂದ ಮಧುರಾತಿಮಧುರವಾದ ಈ ಶ್ಲೋಕಗಳನ್ನು ಯಾರು ನಿತ್ಯವೂ ಕೇಳುತ್ತಾರೋ ಅಥವಾ ಪಾರಾಯಣವನ್ನು ಮಾಡುತ್ತಾರೋ ಅವರು ಸಮಸ್ತಪಾಪಸಮೂಹಗಳಿಗೂ ದೂರವಾಗುತ್ತಾರೆ; ಬಹು ಪುತ್ರ ಪೌತ್ರ ಸಂಪನ್ನರಾಗುತ್ತಾರೆ. ಭೂಲೋಕದಲ್ಲಿ ಚಿರಕಾಲ ಭೋಗಗಳನ್ನು ಅನುಭವಿಸಿ, ಭೋಗಾಂತದಲ್ಲಿ, ಸರ್ವದಾ ಸುರಗಣಸಂಸೇವಿತನಾದ ಶ್ರೀಮಹಾವಿಷ್ಣುಪದವನ್ನು ಹೊಂದುತ್ತಾರೆ.

ಶ್ರೀರಾಮಚಂದ್ರಃ ಶ್ರಿತಪಾರಿಜಾತಃ
ಸಮಸ್ತಕಲ್ಯಾಣಗುಣಾಭಿರಾಮಃ ।
ಸೀತಾಮುಖಾಂಭೋರುಹಚಂಚರೀಕಃ
ನಿರಂತರಂ ಮಂಗಲಮಾತನೋತು ॥

ಆಶ್ರಿತರಿಗೆ ಪಾರಿಜಾತ ವೃಕ್ಷದಂತಿರುವ, ಸಕಲ ಕಲ್ಯಾಣಗುಣಗಳಿಂದಲೂ ಎಲ್ಲರ ಮನಸ್ಸನ್ನು ಸೆಳೆದಿರುವ, ಸೀತಾದೇವಿಯ ಮುಖವೆಂಬ ತಾವರೆಯ ಮಧುವನ್ನು ಹೀರುವ ದುಂಬಿಯಂತಿರುವ, ಶ್ರೀರಾಮಚಂದ್ರನು ಎಲ್ಲರಿಗೂ ಯಾವಾಗಲೂ ಮಂಗಳವನ್ನುಂಟುಮಾಡಲಿ.

ಮಾರುತಿ ಮಹಿಮೆ

(ಶ್ರೀ ಡಿ. ಆರ್. ವೆಂಕಟರಮಣನ್ ಅವರ ಶ್ರೀಮಾನ್ ಡಿ.ವಿ.ಜಿ. ಅವರು ಚಿತ್ರಿಸಿರುವ
'ಶ್ರೀಮದಾಂಜನೇಯಸ್ವಾಮಿ' ಗ್ರಂಥದಿಂದ)

ಶ್ರೀ ಹನುಮಂತಂ ನಿರವಧಿ- ।
ಸಾಹಸರತನಂತು ಸೂನೃತಶ್ರೀಮಂತಂ ॥
ಮೋಹವಿದೂರ ಸ್ವಾಂತಂ ।
ಸ್ವಾಹಂವರ್ಜಿತ ಮಹಾತ್ಮಸೇವೈಕಾಂತಂ ॥ ೧ ॥

ಸಂಪದ್ಯುಕ್ತನಾದ ಹನುಮಂತನು ಮೇರೆಯಿಲ್ಲದ ಸಾಹಸಗಳಲ್ಲಿ ಸಂತೋಷ ಪಡುವವನು. ಪ್ರಿಯವಾದ ಮತ್ತು ಪ್ರಾಮಾಣಿಕವಾದ ಮಾತೇ ಅವನ ಐಶ್ವರ್ಯ. ಮೋಹವನ್ನು ದೂರಮಾಡಿರುವ ಅವನು ತನ್ನನ್ನು ತಾನು ಸ್ವಾಧೀನದಲ್ಲಿಟ್ಟು ಕೊಂಡಿರುವವನು. ತಾನು ತನ್ನದು ಎಂಬ ಭಾವನೆಯನ್ನು ಕಳೆದುಕೊಂಡಿರುವ ಮಹಾತ್ಮನಾದ ರಾಮನ ಸೇವೆಯಲ್ಲಿಯೇ ತೊಡಗಿರುವವನು.

ಯೋಗಿಯವಂ ಸರ್ವಸ್ವ- ।
ತ್ಯಾಗಿಯವಂ ಧರ್ಮಪುರುಷಕೈಂಕರ್ಯೈಕೋ- ॥
ದ್ಯೋಗಿಯವಂ ಸ್ವಾತ್ಮಾರ್ಪಣ- ।
ಭೋಗಿಯವಂ ವಾಯುಸೂನು ಸಾರ್ಥಕಜೀವನ್ ॥೨॥

ವಾಯುದೇವನ ಮಗನಾದ ಅವನು ಯೋಗಿ. ತನ್ನದಾದದ್ದೆಲ್ಲವನ್ನೂ ತ್ಯಾಗಮಾಡಿದವನು. ಧರ್ಮಪುರುಷ ಶ್ರೀರಾಮನ ಕಿಂಕರನಾಗಿರುವ ಒಂದೇ ಒಂದು ಉದ್ಯೋಗವೇ ಅವನದು. ಅದಕ್ಕಾಗಿ ತನ್ನ ಆತ್ಮವನ್ನು ಅರ್ಪಣೆಮಾಡು ವುದರಲ್ಲೇ ಸಂತೋಷಪಟ್ಟವನು. ಹೀಗೆ ಸಾರ್ಥಕವಾದದ್ದು ವಾಯುಪುತ್ರನ ಜೀವ.

*

ಮರೆತಂ ತನ್ನನೆ ತಾನಾ ।
ಮರುತ್ಸುತಂ ರಾಮದಾಸ್ಯಸಂರಂಭಗಳೊಳ್ ॥
ಪರಿದುದು ಬಾಳ್ವೆಯ ಭಾರಂ ।
ಶಿರಕಾಯ್ತುದವಂಗೆ ದೇವಪದ ವರಕುಸುಮಂ ॥ ೩ ॥

ಆ ವಾಯುಸುತನಾದ ಹನುಮಂತನು ಶ್ರೀರಾಮನಿಗೆ ದಾಸನಾಗಿರುವ ಸಂರಂಭದಲ್ಲಿ ತನ್ನನ್ನು ತಾನೇ ಮರೆತುಕೊಂಡನು. ಅವನಿಗೆ ಬಾಳುವೆಯ ಭಾರ ಕಳೆದುಹೋಯಿತು. ದೇವರ ಪಾದದಿಂದ ಬಂದು ತಲೆಯ ಮೇಲೆ ಬಿದ್ದ ಶ್ರೇಷ್ಠವಾದ ಹೂವಿನ ಪ್ರಸಾದದಂತಾಯಿತು, ಅವನಿಗೆ ಆ ದಾಸತ್ವ.

ಜೀವವನದಾವುದೋ ಭೂ- ।
ತಾವೇಶಂ ಪಿಡಿದುದೆನಿಪವೋಲೊಂದು ಮಹ- ॥
ದ್ಭಾವಮದಾವನ ಪಿಡಿವುದೊ ।
ಪಾವಿತಮವನಾತ್ಮವಹುದು ಕಳೆವುದು ದುರಿತಂ ॥ ೪ ॥

ತನ್ನ ಜೀವವನ್ನು ಅದು ಯಾವುದೋ ಒಂದು ಭೂತದ ಚೇಷ್ಟೆ ಹಿಡಿದಿದೆಯೋ ಎನ್ನುವಂತೆ ಮಹತ್ತಾದ ಭಾವನೆಯೊಂದು ಯಾವನನ್ನು ಹಿಡಿಯುವುದೋ, ಅಂಥವನ ಆತ್ಮ ಪಾವನವಾಗುತ್ತದೆ, ಅವನ ಪಾಪಗಳೆಲ್ಲವೂ ನಿವಾರಣೆಯಾಗುತ್ತವೆ.

ಉತ್ಸಾಹಮೆ ಪುಣ್ಯಮದು ಮ- ।
ರುತ್ಸುತನೊಳ್ ಮರಸಿತೆಲ್ಲ ನಾನ್ ನನದುಗಳಂ ॥
ಕುತ್ಸಿತಗಳ ಮನದಿಂದೆ ಸ- ।
ಮುತ್ಸಾರಿಪ ಭಾವಗಂಗೆ ತಾರಕಮಲ್ತೇ ॥ ೫ ॥

ಅವನ ರಾಮೋತ್ಸಾಹವೆ ಪುಣ್ಯಮಯವಾದದ್ದು. ವಾಯುಸುತನಲ್ಲಿ ಅದು, "ನಾನು" "ನನ್ನದು" ಎಂಬ ಅಭಿಮಾನಗಳನ್ನೆಲ್ಲ ಮರೆಯಿಸಿ ಬಿಟ್ಟಿತು. ಮನಸ್ಸಿನಿಂದ ಕೆಟ್ಟ ಭಾವನೆಗಳನ್ನು ತೊಳೆಯುವ ಅಂಥ ಭಾವನೆಯೇ ಗಂಗೆಯಂತೆ ಉದ್ಧಾರಕವಲ್ಲವೆ ?

ಜೀವನ್ಮುಕ್ತಂ ಮಾರುತಿ ।
ಸೇವಾಸಂಭ್ರಮದೆ ಜಾರಿತಾತನ ಬಂಧಂ ॥
ಆವಗಮೆಲ್ಲೆಡೆಯುಂ ನಿಜ ।
ದೈವವನೇ ಕಾಣ್ಬ ಕಣ್ಣಿಗೆತ್ತಣ ಬಂಧಂ ॥ ೬ ॥

ಜೀವಂತನಾಗಿರುವಾಗಲೇ ಮುಕ್ತಿಯನ್ನು ಪಡೆದವನು ಆ ಮಾರುತಿ. ಸೇವೆಮಾಡುವ ಉತ್ಸಾಹದಲ್ಲಿ ಆತನ ಸಂಸಾರಬಂಧನ ಕಳಚಿ ಹೋಯಿತು. ಯಾವಾಗಲೂ ಎಲ್ಲ ಕಡೆಯಲ್ಲಿಯೂ ತಾನು ನಂಬಿದ ದೈವವನ್ನೇ ಕಾಣುವ ಕಣ್ಣಿಗೆ ಬಂಧನವೆಲ್ಲಿಯದು ?

ರಾಮನ ಕಣ್ಣುಂ ನಿನ್ನದು- ।
ಮೋ ಮಾರುತಿ ಸೇರ್ದ ಚಣದಿ ನಿನಗೇನಾಯ್ತ್ತೈ ? ॥
ಆ ಮಹಸಿನ ಕಳೆ ಸೋಂಕಲ್ ।
ರೋಮಾಂಚನವಾಯ್ತೆ ನಿನಗೆ ಜಗವಿರದಾಯ್ತೇಂ ? ॥ ೭ ॥

ಓ ಮಾರುತಿ ! ರಾಮನ ದೃಷ್ಟಿಯೂ ನಿನ್ನದೂ ಸೇರಿದ ಆ ಕ್ಷಣದಲ್ಲಿ ನಿನಗೇನಾಯಿತಯ್ಯ ? ಆ ಮಹಾತೇಜಸ್ಸಿನ ಕಾಂತಿ ನಿನ್ನನ್ನು ಸೋಕಲು ನಿನಗೆ ರೋಮಾಂಚನವಾಯಿತೆ ? ನಿನ್ನ ಪಾಲಿಗೆ ಈ ಜಗತ್ತು ಇಲ್ಲದಂತಾಯಿತೆ ?

ಶಿರವಂ ತಡವಿದನೇಂ ಮೃದು- ।
ಕರದಿಂ ರಘುನಾಥನಾಡಿದನೆ ನಲ್ವಾತಂ ॥
ಧರಿಸಿದೆಯೇನಾ ತೇಜವ- ।
ನುರದೊಳ್ ನೀನಂತುಗೆಯ್ಯದೆಂತೀ ಶೌರ್ಯಂ ॥ ೮ ॥

ರಘುನಾಥನು ತನ್ನ ಮೃದುವಾದ ಕೈಗಳಿಂದ ನಿನ್ನ ತಲೆಯನ್ನು ತಡವಿದನೇನು ? ಆತನು ಒಳ್ಳೆಯ ಮಾತುಗಳನ್ನಾಡಿದನೇನು ? ಶ್ರೀರಾಮನೆಂಬ ಆ ತೇಜಸ್ಸನ್ನು ನೀನು ನಿನ್ನ ಹೃದಯದಲ್ಲಿ ಹೊತ್ತೆಯೇನು ? ನೀನು ಹಾಗೆ ಮಾಡದಿದ್ದರೆ ನಿನಗೆ ಈ ಶೌರ್ಯ ಹೇಗೆ ಬಂತು ?

ಕುಲ ಸಂಬದ್ಧರಿನಿತ್ತುಮಲ್ತು ತನಗಾ ಶ್ರೀರಾಮನುಂ ಸೀತೆಯುಂ ।
ಸ್ಥಲಮುಂ ತನ್ನದಯೋಧ್ಯೆಯಲ್ತು ನಿಜ ಶಕ್ತ್ಯುದ್ಧಾಮ
ಕರ್ಮಂಗಳೊಳ್ ॥
ಫಲಭಾಗೇಚ್ಛೆಯುಮಿಲ್ತು ಮಾರುತಿಗೆ ನಿರ್ವ್ಯಾಜಾಸ್ಥೆಯಿಂ
ಧರ್ಮಮಂ- ।
ಗಲ ಮೂರ್ತಿ ದ್ವಯ ದೌತ್ಯದೊಳ್ ಪವನಜಂ ಕಂಡಂ
ಸ್ವತಾಪೂರ್ತಿಯಂ ॥ ೯ ॥

ರಾಮನೂ ಸೀತೆಯೂ ತನ್ನ ಕುಲಕ್ಕೆ ಸ್ವಲ್ಪವೂ ಸಂಬಂಧಪಟ್ಟವರಲ್ಲ. ತನ್ನ ಹುಟ್ಟೂರೂ ಅಯೋಧ್ಯೆಯಲ್ಲ. ತನ್ನ ಶಕ್ತಿಯಿಂದ ಸಾಧಿಸಿದ ಉತ್ತಮವಾದ ಕೆಲಸಗಳಿಂದ ಬಂದ ಫಲದಲ್ಲಿ ಭಾಗ ಬೇಕೆಂಬ ಆಸೆಯೂ ಇಲ್ಲ, ಆ ಮಾರುತಿಗೆ. ಯಾವ ಒಂದು ಕಾರಣವೂ ಇಲ್ಲದೆ ಹುಟ್ಟಿದ ಪ್ರೀತಿಯಿಂದ, ಧರ್ಮಮಂಗಳಮೂರ್ತಿಗಳಾದ ಆ ರಾಮಸೀತೆಯರ ಸೇವೆಯಲ್ಲಿ ಪವನಕುಮಾರ ತನ್ನ ಜೀವನದ ಪೂರ್ಣತೆಯನ್ನು ಕಂಡುಕೊಂಡನು.

ಪಾರಾವಾರವ ಪಾರ್ದ ಸಾಹಸಮೋ ಸೀತಾನ್ವೇಷಸಂದೇಹ ನಿ- ।
ರ್ಧಾರಪ್ರಜ್ಞೆಯೊ ಸಾಂತ್ವನೋಕ್ತಿಯ ನಯಾನುಕ್ರೋಶ
ಗಾಂಭೀರ್ಯಮೋ ॥
ಸ್ಮಾರಾರ್ಥಂ ಮಣಿ ತಂದುದೋ ಭಿಷಗುಪಾದೇಯಾದ್ರಿಯಂ
ಪೊತ್ತುದೋ ।
ಶ್ರೀರಾಮಂಗಿದರೊಳ್ ಬಹು ಪ್ರಿಯಮುದೇಂ
ಪೇಳಂಜನಾನಂದನಾ ॥ ೧೦ ॥

ಮಹಾಸಮುದ್ರವನ್ನು ಹಾರಿದ ಸಾಹಸವೋ, ಸೀತಾದೇವಿಯನ್ನು ಲಂಕೆಯಲ್ಲಿ ಹುಡುಕುತ್ತಿರುವಾಗ ಬಂದ ಸಂದೇಹವನ್ನು ನಿರ್ಧಾರ ಮಾಡಿಕೊಳ್ಳುವುದರಲ್ಲಿ ತೋರಿಸಿದ ಪ್ರಜ್ಞೆಯೋ, ಮೃದುವಾದ, ಸಹಾನುಭೂತಿಯಿಂದ ಕೂಡಿದ, ಸಮಾಧಾನದ ಮಾತುಗಳನ್ನಾಡಿದ ಗಾಂಭೀರ್ಯವೋ, ಸೀತಾದೇವಿಯ ಜ್ಞಾಪಕ ತರುವ ಚೂಡಾಮಣಿಯನ್ನು ರಾಮನೆಡೆಗೆ ತಂದದ್ದೋ, ವೈದ್ಯನಾದ ಸುಷೇಣನಿಗೆ ಬೇಕಾಗಿದ್ದ ಓಷಧಿ ಪರ್ವತವನ್ನು ಹೊತ್ತು ತಂದದ್ದೋ—ಇವುಗಳಲ್ಲಿ ಯಾವ ಕೆಲಸ ಶ್ರೀರಾಮನಿಗೆ ಬಹು ಪ್ರಿಯವಾಯಿತು, ಅಂಜನಾನಂದನಾ ಹೇಳು.

ದಾಸತ್ವಂ ದಾಸ್ಯಮಲ್ತಾ ರಘುವರಪದದೊಳ್ ತಾಂ
ಸ್ವತಂತ್ರಾತ್ಮತೋಷಂ ।
ಪಾಶಂ ಲೋಕಾಸ್ಥೆಯಲ್ಲಂ ಸುಮಸರಮದು
ಧರ್ಮಾತ್ಮಪೂಜಾಪ್ರಸಾದಂ ॥
ರೋಷಂ ದೋಷಾಂಕಮಲ್ಲಂ ಗುರು ಗಮನುಸರ ನ್ಯಾಯ
ಸಂತ್ರಾಣ ಶೌರ್ಯಂ ।
ಶ್ರೀ ಸೀತಾರಾಮಸಾನ್ನಿಧ್ಯದಿ ಭವಭರಣಂ ಮೋಕ್ಷಮೆಂದಂ
ಕಪೀಂದ್ರಂ ॥ ೧೧ ॥

ರಘುಕುಲದಲ್ಲಿ ಶ್ರೇಷ್ಠನಾದ ಆ ಶ್ರೀರಾಮನ ಪಾದದಲ್ಲಿ ಊಳಿಗ ಮಾಡುವುದು ದಾಸ್ಯವಲ್ಲ. ಆ ದಾಸತ್ವ, ಸಂತೋಷದಾಯಕ. ರಾಘವ ಪದದಲ್ಲಿ ಇರುವ ಪಾಶ ಲೋಕ ವಿಷಯಗಳಿಗಾಗಿ ತೋರುವ ಆಸೆ ಅಲ್ಲ. ಧರ್ಮಾತ್ಮನಾದವನೊಬ್ಬನನ್ನು ಪೂಜೆಮಾಡಿ ಬಂದ ಪ್ರಸಾದವಾದ ಹೂಮಾಲೆಗೆ ಸಮಾನವಾದದ್ದು. ಶ್ರೀರಾಮನ ಸೇವೆಯ ಸಂದರ್ಭದಲ್ಲಿ ತೋರಿಸುವ ಕೋಪವೂ ದೋಷಪೂರಿತವಾದದ್ದಲ್ಲ. ಅದು ನ್ಯಾಯವನ್ನು ಎತ್ತಿ ಹಿಡಿಯುವುದರಲ್ಲಿ ದೊಡ್ಡವರು ಅನುಸರಿಸುವ ಪರಾಕ್ರಮದ ದಾರಿ. ಹೀಗೆ ಸೀತಾರಾಮ ಸನ್ನಿಧಿಯಲ್ಲಿ ಲೋಕ ವ್ಯಾಪಾರವನ್ನು ನಡಸುವುದೂ ಮೋಕ್ಷವೇ ಎಂದ ಕಪೀಶ್ವರನಾದ ಹನುಮಂತ.

ರಾಮಸೀತೆಯರಂತೆ ದಂಪತಿಯೊಗಮಿರೆ ಭವ ಚಿಂತೆಯೇಂ ।
ರಾಮಲಕ್ಷ್ಮಣರಂತೆ ಸೋದರ ಯೋಗಮಿರೆ ವಿಧಿಭೀತಿಯೇಂ ॥
ರಾಮಭರತರ ಪೋಲ್ತು ರಾಜಕಯೋಗಮಿರೆ ಜನ ಭಾರವೇಂ ।
ರಾಮಹನುಮರ ಪೋಲ್ತು ವಿಭುಭಟಯೋಗಮಿರೆ
ಜಯ ದೂರಮೇಂ ॥ ೧೨ ॥

ಶ್ರೀರಾಮ ಸೀತೆಯರಂತೆ ದಂಪತಿಯರಿದ್ದರೆ ಸಂಸಾರದ ಚಿಂತೆಯೇಕೆ ? ಅಣ್ಣ ತಮ್ಮಂದಿರು ರಾಮ ಲಕ್ಷ್ಮಣರಂತೆ ಇದ್ದರೆ ವಿಧಿಯ ಭೀತಿ ಏಕೆ ? ರಾಮ ಭರತರಂತೆ ಅರಸರಿದ್ದರೆ ಪ್ರಜೆಗಳು ಭಾರವೆಂದು ತೋರುವರೇ ? ರಾಮ ಹನುಮಂತರಂತೆ ಒಡೆಯ ಸೇವಕ ಸಂಬಂಧವಿದ್ದರೆ ಜಯ ದೂರವೇ ?

ಲವಕುಶರು ರಾಮಾಯಣವನ್ನು ಹಾಡಿದುದು

ಪ್ರಾಪ್ತರಾಜ್ಯಸ್ಯ ರಾಮಸ್ಯ ವಾಲ್ಮೀಕಿರ್ಭಗವಾನೃಷಿಃ ।
ಚಕಾರ ಚರಿತಂ ಕೃತ್ಸ್ನಂ ವಿಚಿತ್ರಪದಮಾತ್ಮವಾನ್ ॥ ೧ ॥

ಚಿಂತಯಾಮಾಸ ಕೋ ನ್ವೇತತ್
ಪ್ರಯುಂಜೀಯಾದಿತಿ ಪ್ರಭುಃ ॥

ತಸ್ಯಚಿಂತಯಮಾನಸ್ಯ ಮಹರ್ಷೇರ್ಭಾವಿತಾತ್ಮನಃ ।
ಅಗೃಹ್ಣೀತಾಂ ತತಃ ಪಾದೌ ಮುನಿವೇಷೌ ಕುಶೀಲವೌ ॥ ೨ ॥

ಕುಶೀಲವೌ ತು ಧರ್ಮಜ್ಞೌ ರಾಜಪುತ್ರೌ ಯಶಸ್ವಿನೌ ।
ಭ್ರಾತರೌ ಸ್ವರಸಂಪನ್ನೌ ದದರ್ಶಾಶ್ರಮವಾಸಿನೌ ॥ ೩ ॥

ಸ ತು ಮೇಧಾವಿನೌ ದೃಷ್ಟ್ವಾ ವೇದೇಷು ಪರಿನಿಷ್ಠಿತೌ ।
ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ ॥ ೪ ॥

ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ ।
ಪೌಲಸ್ತ್ಯವಧಮಿತ್ಯೇವ ಚಕಾರ ಚರಿತವ್ರತಃ ॥ ೫ ॥

ಪಾಠ್ಯೇ ಗೇಯೇ ಚ ಮಧುರಂ ಪ್ರಮಾಣೈಸ್ತ್ರಿಭಿರನ್ವಿತಮ್ ।
ಜಾತಿಭಿಃ ಸಪ್ತಭಿರ್ಬದ್ಧಂ ತಂತ್ರೀಲಯಸಮನ್ವಿತಮ್ ॥ ೬ ॥

ರಸೈಃ ಶೃಂಗಾರ ಕರುಣ ಹಾಸ್ಯ ರೌದ್ರಭಯಾನಕೈಃ ।
ವೀರಾದಿಭಿಶ್ಚ ಸಂಯುಕ್ತಂ ಕಾವ್ಯಮೇತದಗಾಯತಾಮ್ ॥ ೭ ॥

ಶ್ರೀರಾಮನಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷೇಕವಾದ ಮೇಲೆ ವಾಲ್ಮೀಕಿ ಮುನಿಗಳು ವಿಸ್ಮಯಕರವಾದ ಮಧುರಪದಗಳಿಂದ ಶ್ರೀರಾಮಚರಿತೆಯನ್ನು ವಿರಚಿಸಿದರು. ಈ ಕಾವ್ಯವನ್ನು ಕಲಿತು ಯಾರು ಹಾಡಬಲ್ಲರು ಎಂದು ಆಲೋಚಿಸುತ್ತಿದ್ದರು. ॥ ೧ ॥

ಪರಿಶುದ್ಧಾತ್ಮರಾದ ವಾಲ್ಮೀಕಿಮುನಿಗಳು ಹೀಗೆ ಆಲೋಚಿಸುತ್ತಿರುವಾಗ ಮುನಿವೇಷವನ್ನು ಧರಿಸಿದ ಕುಶ, ಲವ ಎಂಬ ಕುಮಾರರು ಬಂದು ಪಾದಗಳನ್ನು ಮುಟ್ಟಿ ಅಭಿವಾದನೆ ಮಾಡಿದರು. ॥ ೨ ॥

ರಾಜಪುತ್ರರಾದ ಆ ಕುಶ, ಲವರು ಅಣ್ಣತಮ್ಮಂದಿರು. ಅವರು ಧರ್ಮಜ್ಞರೂ ವಿದ್ಯಾರ್ಜನೆ ಮಾಡಿ ಕೀರ್ತಿವಂತರೂ ಉತ್ತಮವಾದ ಕಂಠಧ್ವನಿಯುಳ್ಳವರೂ ಆಶ್ರಮವಾಸಿಗಳೂ ಆಗಿದ್ದರು. ॥ ೩ ॥

ಮೇಧಾವಿಗಳೂ ವೇದಪಾರಂಗತರೂ ಆದ ಆ ಕುಮಾರರನ್ನು ನೋಡಿ ವಾಲ್ಮೀಕಿಮುನಿಗಳು ವೇದಾರ್ಥಪ್ರತಿಪಾದಕವಾದ ರಾಮಾಯಣವನ್ನು ಅವರಿಗೆ ಕಲಿಸಿದರು. ॥ ೪ ॥

ರಾಮಾಯಣ ಕಾವ್ಯವಾದರೋ ಶ್ರೀರಾಮಚಂದ್ರನ ಸಮಗ್ರವೃತ್ತಾಂತದಿಂದಲೂ, ಸೀತಾದೇವಿಯ ಮಹತ್ವಪೂರ್ಣವಾದ ಚರಿತ್ರದಿಂದಲೂ, ರಾವಣನ ವಧೆಯ ಸಂದರ್ಭದಿಂದಲೂ ಉತ್ತಮವಾದ ಕಾವ್ಯವೆನಿಸಿದೆ. ॥ ೫ ॥

ಇದು ಓದುವುದಕ್ಕೂ ಹಾಡುವುದಕ್ಕೂ ಮಧುರವಾಗಿದೆ. ದ್ರುತ, ಮಧ್ಯಮ, ವಿಲಂಬಿತಗಳೆಂಬ ಮೂರು ವೃತ್ತಿಗಳಿಂದ ಷಡ್ಜಾದಿ ಸಪ್ತಸ್ವರಗಳಲ್ಲಿ ಹಾಡಲು ಯೋಗ್ಯವಾಗಿದೆ. ॥ ೬ ॥

ವೀಣೆಯಲ್ಲಿ ಲಯವಿಶಿಷ್ಟವಾಗಿ ನುಡಿಸಬಹುದಾಗಿದೆ. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತಗಳೆಂಬ ನವರಸಗಳಿಂದ ತುಂಬಿದೆ. ಇಂಥ ಈ ರಾಮಾಯಣ ಕಾವ್ಯವನ್ನು ಆ ಕುಮಾರರು ಕಲಿತು ಹಾಡುತ್ತಿದ್ದರು. ॥ ೭ ॥

ತೌ ತು ಗಾಂಧರ್ವತತ್ತ್ವಜ್ಞೌ ಮೂರ್ಛನಾಸ್ಥಾನಕೋವಿದೌ ।
ಭ್ರಾತರೌ ಸ್ವರಸಂಪನ್ನಾವಶ್ವಿನಾವಿವ ರೂಪಿಣೌ ॥ ೮ ॥

ರೂಪಲಕ್ಷಣಸಂಪನ್ನೌ ಮಧುರಸ್ವರಭಾಷಿಣೌ ।
ಬಿಂಬಾದಿವೋತ್ಥಿತೌ ಬಿಂಬೌ ರಾಮದೇಹಾತ್ತಥಾಪರೌ ॥ ೯ ॥

ತೌ ರಾಜಪುತ್ರೌ ಕಾರ್ತ್ಸ್ನ್ಯೇನ ಧರ್ಮ್ಯಮಾಖ್ಯಾನಮುತ್ತಮಮ್ ।
ವಾಚೋ ವಿಧೇಯಂ ತತ್ ಸರ್ವಂ ಕೃತ್ವಾ ಕಾವ್ಯಮನಿಂದಿತೌ ॥೧೦॥

ಋಷೀಣಾಂ ಚ ದ್ವಿಜಾತೀನಾಂ ಸಾಧೂನಾಂ ಚ ಸಮಾಗಮೇ ।
ಯಥೋಪದೇಶಂ ತತ್ತ್ವಜ್ಞೌ ಜಗತುಸ್ತೌ ಸಮಾಹಿತೌ ॥ ೧೧ ॥

ಮಹಾತ್ಮಾನೌ ಮಹಾಭಾಗೌ ಸರ್ವಲಕ್ಷಣಲಕ್ಷಿತೌ ।
ತೌ ಕದಾಚಿತ್ ಸಮೇತಾನಾಮೃಷೀಣಾಂ ಭಾವಿತಾತ್ಮನಾಮ್ ॥೧೨॥

ಆಸೀನಾನಾಂ ಸಮೀಪಸ್ಥಾವಿದಂ ಕಾವ್ಯಮಗಾಯತಾಮ್ ।
ತಚ್ಛ್ರುತ್ವಾ ಮುನಯಃ ಸರ್ವೇ ಬಾಷ್ಪಪರ್ಯಾಕುಲೇಕ್ಷಣಾಃ॥೧೩॥

ಸಾಧುಸಾಧ್ವಿತಿ ತಾವೂಚುಃ ಪರಂ ವಿಸ್ಮಯಮಾಗತಾಃ ।
ತೇ ಪ್ರೀತಮನಸಃ ಸರ್ವೇ ಮುನಯೋ ಧರ್ಮವತ್ಸಲಾಃ ॥೧೪॥

ಪ್ರಶಶಂಸುಃ ಪ್ರಶಸ್ತವ್ಯೌ ಗಾಯಂತೌ ತೌ ಕುಶೀಲವೌ ।
ಅಹೋ ಗೀತಸ್ಯ ಮಾಧುರ್ಯಂ ಶ್ಲೋಕಾನಾಂ ಚ ವಿಶೇಷತಃ ॥೧೫॥

ಚಿರನಿರ್ವೃತ್ತಮಪ್ಯೇತತ್ ಪ್ರತ್ಯಕ್ಷಮಿವ ದರ್ಶಿತಮ್ ।
ಪ್ರವಿಶ್ಯ ತಾವುಭೌ ಸುಷ್ಠು ತಥಾಭಾವಮಗಾಯತಾಮ್ ॥೧೬॥

ಸಹಿತೌ ಮಧುರಂ ರಕ್ತಂ ಸಂಪನ್ನಂ ಸ್ವರಸಂಪದಾ ।
ಏವಂ ಪ್ರಶಸ್ಯಮಾನೌ ತೈಸ್ತಪಃಶ್ಲಾಘ್ಯೈರ್ಮಹರ್ಷಿಭಿಃ ॥೧೭॥

ಸಂರಕ್ತತರಮತ್ಯರ್ಥಂ ಮಧುರಂ
ತಾವಗಾಯತಾಮ್ ॥

ಆ ಲವಕುಶರು ಸಂಗೀತಶಾಸ್ತ್ರದಲ್ಲಿ ವಿಶಾರದರೂ, ಸ್ವರೋತ್ಪತ್ತಿಸ್ಥಾನವನ್ನೂ ವೀಣಾದಿವಾದ್ಯಗಳನ್ನೂ ಬಲ್ಲವರೂ, ಉತ್ತಮವಾದ ಶಾರೀರವುಳ್ಳವರೂ ಆಗಿದ್ದರು. ॥ ೮ ॥

ಆ ಅಣ್ಣತಮ್ಮಂದಿರು ಗಂಧರ್ವರಂತೆ ರೂಪವಂತರು. ಸಾಮುದ್ರಿಕ ಶಾಸ್ತ್ರೋಕ್ತವಾದ ಲಕ್ಷಣವಂತರು. ಇಂಪಾಗಿ ಮಾತನಾಡತಕ್ಕವರು. ಶ್ರೀರಾಮನ ಪ್ರತಿಬಿಂಬಗಳಂತೆ ಇದ್ದರು. ಬುದ್ಧಿಶಾಲಿಗಳೂ ಗೌರವಾರ್ಹರೂ ಆದ ಆ ರಾಜಪುತ್ರರು ಈ ಧರ್ಮಕಾವ್ಯವನ್ನು ಪೂರ್ಣವಾಗಿ ಕಂಠಪಾಠಮಾಡಿ ಋಷಿಗಳೂ ಬ್ರಾಹ್ಮಣರೂ ಮಹಾಜನರೂ ಸೇರಿದ ಸ್ಥಳಗಳಲ್ಲಿ ಸಾವಧಾನವಾಗಿ ಗುರುಗಳು ಕಲಿಸಿದಂತೆ ಹಾಡುತ್ತಿದ್ದರು. ॥ ೯–೧೦ ॥

ಹೀಗಿರಲು ಒಂದುಸಲ ಮಹಾತ್ಮರಾದ ಋಷಿಗಳು ನೆರೆದಿದ್ದ ಸಭೆಯಲ್ಲಿ ಅವರಿಬ್ಬರೂ ಒಟ್ಟಾಗಿ ಶ್ರೀಮದ್ರಾಮಾಯಣವನ್ನು ಹಾಡಿದರು. ಅದನ್ನು ಕೇಳಿ ಋಷಿಗಳೆಲ್ಲರೂ ಆಶ್ಚರ್ಯಪಟ್ಟು ಆನಂದಬಾಷ್ಪಗಳನ್ನು ಸುರಿಸುತ್ತಾ " ಬಹಳ ಸೊಗಸಾಗಿದೆ. ಆಹಾ ! ಆಹಾ ! " ಎಂದು ಕೊಂಡಾಡಿದರು. ಧರ್ಮವತ್ಸಲರಾದ ಆ ಋಷಿಗಳು ಕುಶಲವರನ್ನು ಪ್ರಶಂಸೆ ಮಾಡಿದರು. " ಗಾನವು ಎಷ್ಟು ಇಂಪಾಗಿದೆ ! ಶ್ಲೋಕಗಳು ಎಷ್ಟು ಸುಂದವಾಗಿವೆ ! ಈ ರಾಮಚರಿತ್ರೆಯು ಬಹಳ ಹಿಂದೆ ನಡೆದಿದ್ದರೂ ಈಗ ನಮ್ಮ ಕಣ್ಣಿಗೆ ಕಟ್ಟಿದಂತಾಯಿತು. ಇವರಿಬ್ಬರೂ ಮಧುರವಾದ ಕಂಠದಿಂದ ಭಾವಪೂರ್ಣವಾಗಿ ಹಾಡುತ್ತಾರೆ." ಹೀಗೆ ಆ ತಪಸ್ವಿಗಳು ಹೊಗಳುತ್ತಿರಲು ಕುಶಲವರು ಇನ್ನೂ ಮಧುರವಾಗಿ ಹಾಡಲಾರಂಭಿಸಿದರು. ॥ ೧೧–೧೭ ॥

ಶ್ರೀರಾಮಕಥಾನಾಮಾವಳಿಃ

ಬಾಲಕಾಂಡಃ

ಶುದ್ಧಬ್ರಹ್ಮಪರಾತ್ಪರ ರಾಮ । ಕಾಲಾತ್ಮಕಪರಮೇಶ್ವರ ರಾಮ ॥
ಶೇಷತಲ್ಪಸುಖನಿದ್ರಿತ ರಾಮ । ಬ್ರಹ್ಮಾದ್ಯಮರಪ್ರಾರ್ಥಿತ ರಾಮ ॥
ಚಂಡಕಿರಣಕುಲಮಂಡನ ರಾಮ । ಶ್ರೀಮದ್ದಶರಥನಂದನ ರಾಮ ॥
ಕೌಸಲ್ಯಾಸುಖವರ್ಧನ ರಾಮ । ವಿಶ್ವಾಮಿತ್ರಪ್ರಿಯಧನ ರಾಮ ॥
ಘೋರತಾಟಕಾಘಾತಕ ರಾಮ । ಮಾರೀಚಾದಿನಿಪಾತಕ ರಾಮ ॥
ಕೌಶಿಕಮಖಸಂರಕ್ಷಕ ರಾಮ । ಶ್ರೀಮದಹಲ್ಯೋದ್ಧಾರಕ ರಾಮ ॥
ಗೌತಮಮುನಿಸಂಪೂಜಿತ ರಾಮ । ಸುರಮುನಿವರಗಣಸಂಸ್ತುತ ರಾಮ ॥
ನಾವಿಕಧಾವಿತಮೃದುಪದ ರಾಮ । ಮಿಥಿಲಾಪುರಜನಮೋದದ ರಾಮ ॥
ವಿದೇಹಮಾನಸರಂಜಕ ರಾಮ । ತ್ರ್ಯಂಬಕಕಾರ್ಮುಕಭಂಜಕ ರಾಮ ॥
ಸೀತಾರ್ಪಿತವರಮಾಲಿಕ ರಾಮ । ಕೃತವೈವಾಹಿಕಕೌತುಕ ರಾಮ ॥
ಭಾರ್ಗವದರ್ಪವಿನಾಶಕ ರಾಮ । ಶ್ರೀಮದಯೋಧ್ಯಾಪಾಲಕ ರಾಮ ॥

ಅಯೋಧ್ಯಾಕಾಂಡಃ

ಅಗಣಿತಗುಣಗಣಭೂಷಿತ ರಾಮ । ಅವನೀಕಾಮಿನಿಕಾಮಿತ ರಾಮ ॥
ರಾಕಾಚಂದ್ರಸಮಾನನ ರಾಮ । ಪಿತೃವಾಕ್ಯಾಶ್ರಿತಕಾನನ ರಾಮ ॥
ಪ್ರಿಯಗುಹವಿನಿವೇದಿತಪದ ರಾಮ । ತತ್ ಕ್ಷಾಲಿತನಿಜಮೃದುಪದ ರಾಮ ।
ಭರದ್ವಾಜಮುಖಾನಂದಕ ರಾಮ । ಚಿತ್ರಕೂಟಾದ್ರಿನಿಕೇತನ ರಾಮ ॥
ದಶರಥಸಂತತಚಿಂತಿತ ರಾಮ । ಕೈಕೇಯೀತನಯಾರ್ಥಿತ ರಾಮ ॥
ವಿರಚಿತನಿಜಪಿತೃಕರ್ಮಕ ರಾಮ । ಭರತಾರ್ಪಿತನಿಜಪಾದುಕ ರಾಮ ॥

ಅರಣ್ಯಕಾಂಡಃ

ದಂಡಕಾವನಜನಪಾವನ ರಾಮ । ದುಷ್ಟವಿರಾಧವಿನಾಶನ ರಾಮ ॥
ಶರಭಂಗಸುತೀಕ್ಷ್ಣಾರ್ಚಿತ ರಾಮ । ಅಗಸ್ತ್ಯಾನುಗ್ರಹವರ್ಧಿತ ರಾಮ ॥
ಗೃಧ್ರಾಧಿಪಸಂಸೇವಿತ ರಾಮ । ಪಂಚವಟೀತಟಸುಸ್ಥಿತ ರಾಮ ॥

ಶೂರ್ಪಣಖಾರ್ತಿವಿಧಾಯಕ ರಾಮ । ಖರದೂಷಣಮುಖಸೂದಕ ರಾಮ ॥
ಸೀತಾಪ್ರಿಯಹರಿಣಾನುಗ ರಾಮ । ಮಾರೀಚಾರ್ತಿಕೃದಾಶುಗ ರಾಮ ॥
ವಿನಷ್ಟಸೀತಾನ್ವೇಷಕ ರಾಮ । ಗೃಧ್ರಾಧಿಪಗತಿದಾಯಕ ರಾಮ ॥
ಶಬರೀದತ್ತಫಲಾಶನ ರಾಮ । ಕಬಂಧಬಾಹುಚ್ಛೇದಕ ರಾಮ ॥

ಕಿಷ್ಕಿಂಧಾಕಾಂಡಃ

ಹನುಮತ್ಸೇವಿತನಿಜಪದ ರಾಮ । ನತಸುಗ್ರೀವಾಭೀಷ್ಟದ ರಾಮ ॥
ಗರ್ವಿತವಾಲಿಸಂಹಾರಕ ರಾಮ । ವಾನರದೂತಪ್ರೇಷಕ ರಾಮ ॥
ಹಿತಕರಲಕ್ಷ್ಮಣಸಂಯುತ ರಾಮ ।

ಸುಂದರಕಾಂಡಃ

ಕಪಿವರಸಂತತಸಂಸ್ಮೃತ ರಾಮ । ತದ್ಗತಿವಿಘ್ನಧ್ವಂಸಕ ರಾಮ ॥
ಸೀತಾಪ್ರಾಣಾಧಾರಕ ರಾಮ । ದುಷ್ಟದಶಾನನದೂಷಿತ ರಾಮ ॥
ಶಿಷ್ಟಹನೂಮದ್ಭೂಷಿತ ರಾಮ । ಸೀತಾವೇದಿತಕಾಕಾವನ ರಾಮ ।
ಕೃತಚೂಡಾಮಣಿದರ್ಶನ ರಾಮ । ಕಪಿವರವಚನಾಶ್ವಾಸಿತ ರಾಮ ॥

ಯುದ್ಧಕಾಂಡಃ

ರಾವಣನಿಧನಪ್ರಸ್ಥಿತ ರಾಮ । ವಾನರಸೈನ್ಯಸಮಾವೃತ ರಾಮ ॥
ಶೋಷಿತಶರಧಿಪ್ರಾರ್ಥಿತ ರಾಮ । ವಿಭೀಷಣಾಭಯದಾಯಕ ರಾಮ ॥
ಪರ್ವತಸೇತುನಿಬಂಧಕ ರಾಮ । ಕುಂಭಕರ್ಣಶಿರಚ್ಛೇದಕ ರಾಮ ॥
ರಾಕ್ಷಸಸಂಘವಿಮರ್ದಕ ರಾಮ । ಅಹಿಮಹಿರಾವಣಮಾರಣ ರಾಮ ॥
ಸಂಹೃತದಶಮುಖರಾವಣ ರಾಮ । ವಿಧಿಭವಮುಖಸುರಸಂಸ್ತುತ ರಾಮ ॥
ಖಸ್ಥಿತದಶರಥವೀಕ್ಷಿತ ರಾಮ । ಸೀತಾದರ್ಶನಮೋದಿತ ರಾಮ ॥
ಅಭಿಷಿಕ್ತವಿಭೀಷಣನುತ ರಾಮ । ಪುಷ್ಪಕಯಾನಾರೋಹಣ ರಾಮ ॥
ಭರದ್ವಾಜಾದಿನಿಷೇವಣ ರಾಮ । ಭರತಪ್ರಾಣಪ್ರಿಯಕರ ರಾಮ ॥
ಸಾಕೇತಪುರೀಭೂಷಣ ರಾಮ । ಸಕಲಸ್ವೀಯಸಮಾವೃತ ರಾಮ ॥
ರತ್ನಲಸತ್ಪೀಠಸ್ಥಿತ ರಾಮ । ಪಟ್ಟಾಭಿಷೇಕಾಲಂಕೃತ ರಾಮ
ಪಾರ್ಥಿವಕುಲಸಂಮಾನಿತ ರಾಮ । ವಿಭೀಷಣಾರ್ಪಿತರಂಗಕ ರಾಮ ॥

ಕೀಶಕುಲಾನುಗ್ರಹಕರ ರಾಮ । ಸಕಲಜೀವಸಂರಕ್ಷಕ ರಾಮ ॥
ಸಮಸ್ತಲೋಕೋದ್ಧಾರಕ ರಾಮ ॥

ಉತ್ತರಕಾಂಡಃ

ಆಗತಮುನಿಗಣಸಂಸ್ತುತ ರಾಮ । ವಿಶ್ರುತದಶಕಂಠೋದ್ಭವ ರಾಮ ॥
ಸೀತಾಲಿಂಗನನಿರ್ವೃತ ರಾಮ । ನೀತಿಸುರಕ್ಷಿತಜನಪದ ರಾಮ ॥
ವಿಪಿನತ್ಯಾಜಿತಜನಕಜ ರಾಮ । ಕಾರಿತಲವಣಾಸುರವಧ ರಾಮ ॥
ಸ್ವರ್ಗದಶಂಬುಕಸಂಸ್ತುತ ರಾಮ । ಸ್ವತನಯಕುಶಲವನಂದಿತ ರಾಮ ॥
ಅಶ್ವಮೇಧಕ್ರತುದೀಕ್ಷಿತ ರಾಮ । ಕಾಲಾವೇದಿತಸುರಪದ ರಾಮ ॥
ಅಯೋಧ್ಯಕಾಜನಮುಕ್ತಿದ ರಾಮ । ವಿಧಿಮುಖವಿಬುಧಾನಂದಕ ರಾಮ ॥
ತೇಜೋಮಯನಿಜರೂಪಕ ರಾಮ । ಸಂಸೃತಿಬಂಧವಿಮೋಚಕ ರಾಮ ॥
ಧರ್ಮಸ್ಥಾಪನತತ್ಪರ ರಾಮ । ಭಕ್ತಿಪರಾಯಣಮುಕ್ತಿದ ರಾಮ
ಸರ್ವಚರಾಚರಪಾಲಕ ರಾಮ । ಸರ್ವಭವಾಮಯವಾರಕ ರಾಮ ॥
ವೈಕುಂಠಾಲಯಸಂಸ್ಥಿತ ರಾಮ । ನಿತ್ಯಾನಂದಪದಸ್ಥಿತ ರಾಮ
ರಾಮ ರಾಮ ಜಯ ರಾಜಾ ರಾಮ । ರಾಮ ರಾಮ ಜಯ ಸೀತಾ ರಾಮ ॥
ಭಯಹರ ಮಂಗಲ ದಶರಥ ರಾಮ । ಜಯ ಜಯ ಮಂಗಲ ಸೀತಾ ರಾಮ ॥
ಮಂಗಲಕರ ಜಯ ಮಂಗಲ ರಾಮ । ಸಂಗತ ಶುಭ ವಿಭವೋದಯ ರಾಮ ॥
ಆನಂದಾಮೃತ ವರ್ಷಕ ರಾಮ । ಆಶ್ರಿತವತ್ಸಲ ಜಯ ಜಯ ರಾಮ ॥
ರಘುಪತಿ ರಾಘವ ರಾಜಾರಾಮ । ಪತಿತಪಾವನ ಸೀತಾರಾಮ ॥

ಶ್ರೀರಾಮಮಂಗಲಾಶಾಸನಮ್

ಮಂಗಲಂ ಕೋಸಲೇಂದ್ರಾಯ ಮಹನೀಯಗುಣಾಬ್ಧಯೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಲಮ್ ॥ ೧ ॥

ವೇದವೇದಾಂತವೇದ್ಯಾಯ ಮೇಘಶ್ಯಾಮಲಮೂರ್ತಯೇ ।
ಪುಂಸಾಂ ಮೋಹನರೂಪಾಯ ಪುಣ್ಯಶ್ಲೋಕಾಯ ಮಂಗಲಮ್ ॥ ೨ ॥

ವಿಶ್ವಾಮಿತ್ರಾಂತರಂಗಾಯ ಮಿಥಿಲಾನಗರೀಪತೇಃ ।
ಭಾಗ್ಯಾನಾಂ ಪರಿಪಾಕಾಯ ಭವ್ಯರೂಪಾಯ ಮಂಗಲಮ್ ॥ ೩ ॥

ಪಿತೃಭಕ್ತಾಯ ಸತತಂ ಭ್ರಾತೃಭಿಃ ಸಹ ಸೀತಯಾ ।
ನಂದಿತಾಖಿಲಲೋಕಾಯ ರಾಮಭದ್ರಾಯ ಮಂಗಲಮ್ ॥ ೪ ॥

ತ್ಯಕ್ತಸಾಕೇತವಾಸಾಯ ಚಿತ್ರಕೂಟವಿಹಾರಿಣೇ ।
ಸೇವ್ಯಾಯ ಸರ್ವಯಮಿನಾಂ ಧೀರೋದಾರಾಯ ಮಂಗಲಮ್ ॥ ೫ ॥

ಸೌಮಿತ್ರಿಣಾ ಚ ಜಾನಕ್ಯಾ ಚಾಪಬಾಣಾಸಿಧಾರಿಣೇ ।
ಸಂಸೇವ್ಯಾಯ ಸದಾ ಭಕ್ತ್ಯಾ ಸ್ವಾಮಿನೇ ಮಮ ಮಂಗಲಮ್ ॥ ೬ ॥

ದಂಡಕಾರಣ್ಯವಾಸಾಯ ಖಂಡಿತಾಮರಶತ್ರವೇ ।
ಗೃಧ್ರರಾಜಾಯ ಭಕ್ತಾಯ ಮುಕ್ತಿದಾಯಾಸ್ತು ಮಂಗಲಮ್ ॥ ೭ ॥

ಸಾದರಂ ಶಬರೀದತ್ತಫಲಮೂಲಾಭಿಲಾಷಿಣೇ ।
ಸೌಲಭ್ಯಪರಿಪೂರ್ಣಾಯ ಸತ್ತ್ವೋದ್ರಿಕ್ತಾಯ ಮಂಗಲಮ್ ॥ ೮ ॥

ಹನುಮತ್ಸಮವೇತಾಯ ಹರೀಶಾಭೀಷ್ಟದಾಯಿನೇ ।
ವಾಲಿಪ್ರಮಥನಾಯಾಸ್ತು ಮಹಾಧೀರಾಯ ಮಂಗಲಮ್ ॥ ೯ ॥

ಶ್ರೀಮತೇ ರಘುವೀರಾಯ ಸೇತೂಲ್ಲಂಘಿತಸಿಂಧವೇ ।
ಜಿತರಾಕ್ಷಸರಾಜಾಯ ರಣಧೀರಾಯ ಮಂಗಲಮ್ ॥ ೧೦ ॥

ವಿಭೀಷಣಕೃತೇ ಪ್ರೀತ್ಯಾ ಲಂಕಾಭೀಷ್ಟಪ್ರದಾಯಿನೇ ।
ಸರ್ವಲೋಕಶರಣ್ಯಾಯ ಶ್ರೀರಾಘವಾಯ ಮಂಗಲಮ್ ॥ ೧೧ ॥

ಆಸಾದ್ಯ ನಗರೀಂ ದಿವ್ಯಾಮಭಿಷಿಕ್ತಾಯ ಸೀತಯಾ ।
ರಾಜಾಧಿರಾಜರಾಜಾಯ ರಾಮಭದ್ರಾಯ ಮಂಗಲಮ್ ॥ ೧೨ ॥

ಬ್ರಹ್ಮಾದಿದೇವಸೇವ್ಯಾಯ ಬ್ರಹ್ಮಣ್ಯಾಯ ಮಹಾತ್ಮನೇ ।
ಜಾನಕೀಪ್ರಾಣನಾಥಾಯ ರಘುನಾಥಾಯ ಮಂಗಲಮ್ ॥ ೧೩ ॥

ಖೇಲತಿ ಮಮ ಹೃದಯೇ, ರಾಮಃ ॥ ॥ ಪಲ್ಲವಿ ॥

ಮೋಹ ಮಹಾರ್ಣವ ತಾರಕಕಾರೀ ।
ರಾಗದ್ವೇಷ ಮುಖಾಸುರ ಮಾರೀ ॥ ೧ ॥

ಶಾಂತಿ ವಿದೇಹಸುತಾ ಸಹಚಾರೀ ।
ದಹರಾಯೋಧ್ಯಾನಗರ ವಿಹಾರೀ ॥ ೨ ॥

ಪರಮಹಂಸ ಸಾಮ್ರಾಜ್ಯೋದ್ಧಾರೀ ।
ಸತ್ಯಜ್ಞಾನಾನಂದ ಶರೀರೀ ॥ ॥ ೩ ॥

(ಸದಾಶಿವ ಬ್ರಹ್ಮೇಂದ್ರ ಕೃತಿ)

ರಾಮಲಕ್ಷ್ಮಣಜಾನಕೀ ।
ಜಯಬೋಲೋ ಹನುಮಾನಕೀ ॥